ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

01 ಅಕ್ಟೋಬರ್ 2014 ಪುಟ 20 ರೂ. 15/-

ಅನುರಣನ



ಬದುಕು ಬದಲಿಸಿದ ಬೆಳಗಿಗಳು



ಕಾರ್ತಿಕ್ ಗೌಡನ ಕಳ್ಳ ಆಸ್ತಿ ಜಾಲಿ!

...ಟ್ಟಿ: ಚಿನ್ನದ ಮಣ್ಣು ಬಿಡಿಗಾಸಿಗೆ ಮಾರಾಟ




ಹೊಣೆಗೇಡಿ ಶಾಸಕನಿಂದ ಹೊನ್ನಾಳಿ ಅನಾಥ



ಪೀಠ ತ್ಯಾಗ ಇಕ್ಕಟ್ಟಿನಲ್ಲಿ ರಾಘು

...ಸರಾ ವಿವಾದ: ಪಜ್ಞಾವಂತಿಕೆಗೆ ಬಡಿದಿರುವ ಗರ...

ದಸರಾ ವಿವಾದ: ಕನ್ನಡದ ಪ್ರಜ್ಞಾವಂತಿಕೆಗೆ ಬಡಿದಿರುವ ಗ



ಜೆ.ಎಚ್.ನಾಯಕರಿಗೆ ಪಂಪ ಪ್ರಶಸ್ತಿ ಪ್ರದಾನ ಮಾಡುವುದು ಅನಗತ್ಯವಾದ ವಿಳಂಬಕ್ಕೆ ಕಾರಣವಾದ ಸಂದರ್ಭದಲ್ಲಿ ಜೆ.ಪಿ.ಬಸವರಾಜು ಅವರು ನಾಯಕರ ಸಂದರ್ಶನ ಮಾಡಿದ್ದರು. ಸರ್ಕಾರ ದಸರಾ ನಡೆಸುವುದನ್ನು ನಾಯಕರು ಏಕೆ ವಿರೋಧಿಸುತ್ತಾರೆ ಎಂಬ ಪ್ರಶ್ನೆಗೆ ಅವರು ಈ ರೀತಿ ಉತ್ತರ ನೀಡಿದ್ದರು: "ನನ್ನ ಈ ವಿರೋಧ ಈಗಿನದಲ್ಲ, 1995ರಲ್ಲಿಯೇ ನಾನು ಈ ವಿರೋಧವನ್ನು ವ್ಯಕ್ತಪಡಿಸಿದ್ದೆ (ವಾಸ್ತವದಲ್ಲಿ ದಸರೆಗೆ ವಿರೋಧ ಇನ್ನೂ 3 ದಶಕಗಳಷ್ಟು ಹಳೆಯದು). ಮುಂದೆ 1997ರಲ್ಲಿ 'ದಸರಾ ಮಹೋತ್ಸವ ವಿಚಾರ ಸಂಕಿರಣ'ದಲ್ಲಿ ನನ್ನ ಈ ನಿಲುವನ್ನು ಪ್ರಕಟಿಸಿ ಒಂದು ಟಿಪ್ಪಣಿಯನ್ನೂ ಮಂಡಿಸಿದ್ದೆ. ಈ ಟಿಪ್ಪಣಿಯನ್ನೇ ಆಗಿನ ಮುಖ್ಯಮಂತ್ರಿ ಜೆ.ಎಚ್.ಪಟೇಲರಿಗೆ 1.08.1997ರಂದು ಪರಿಶೀಲನೆಗೆಂದು ಕಳುಹಿಸಿದ್ದೆ. ನಾನು ಸಂಸ್ಕೃತಿ/ಪರಂಪರೆ ವೈವಿಧ್ಯಗಳ ವಿರೋಧಿಯಲ್ಲ. ಪರಂಪರೆ ಎಂಬುದು ಎಂದೋ ಆಗಿ ಹೋಗಿರುವಂತದಲ್ಲ; ನಿರಂತರವಾಗಿ ಆಗುವ ಪ್ರಕ್ರಿಯೆ. ತನ್ನ ಇರುವಿಕೆಯ ಅರ್ಥಪೂರ್ಣತೆಯನ್ನು ಸಮರ್ಥಿಸಿಕೊಳ್ಳಲಾಗದ ಯಾವ ಒಂದು ಪರಂಪರೆಯೂ ಉಳಿಯಲಾರದು.

ನಮ್ಮ ದೇಶ ಸ್ವತಂತ್ರವಾಗಿ ನಾವು ಪ್ರಜಾಪ್ರಭುತ್ವವನ್ನು ಒಪ್ಪಿಕೊಂಡ ಮೇಲೆ ಮಹಾರಾಜರು ಜಂಬೂಸವಾರಿಯಲ್ಲಿ ಹೊರಡುವುದನ್ನು ಸರಕಾರ ನ್ಯಾಯವಾಗಿಯೇ ರದ್ದು ಮಾಡಿತು. ಆದರೆ ಮಹಾರಾಜರ ಬದಲು ಹಿಂದೆ (ಅಂದರೆ ರಾಜರ ಕಾಲದಲ್ಲಿ) ಇರದಿದ್ದ ಚಾಮುಂಡೇಶ್ವರಿಯ ಜಂಬೂಸವಾರಿಯನ್ನು ಸರಕಾರ ಹೊಸದಾಗಿ ಹುಟ್ಟುಹಾಕಿತು. ದಸರೆ ಖಾಸಗಿ ವ್ಯಕ್ತಿಗಳ ಅಥವಾ ಒಂದು ಜನಸಮುದಾಯದವರ ಖರ್ಚುವೆಚ್ಚದಲ್ಲಿ ನಡೆಯುವ ಹಬ್ಬವಾಗಿಲ್ಲ. ಸರಕಾರವೇ ಯಜಮಾನಿಕೆ ವಹಿಸಿ ದಸರಾವನ್ನು ನಾಡಿನ ಎಲ್ಲ ಜನತೆಯ 'ನಾಡಹಬ್ಬ' ಎಂದು ಘೋಷಿಸಿ ಆಚರಿಸುತ್ತಿದೆ; ಇದು ಯಾವ ದೈವದ ಹಬ್ಬವೂ ಅಲ್ಲ, ಎಲ್ಲ ನಾಡವರ ನಾಡಹಬ್ಬ. ನಮ್ಮ ಸಂವಿಧಾನದ ಪ್ರಕಾರ ಸರಕಾರ ಯಾವ ಜಾತಿ ಮತಕ್ಕೂ ಸೇರಿದ್ದಲ್ಲ; ಸೇರಿದ್ದಾಗಬಾರದು. ಮತಧರ್ಮ ನಿರಪೇಕ್ಷವಾದ ಸಮಾಜವಾದೀ ಸಮಾಜ ನಿರ್ಮಾಣವು ಧ್ಯೇಯೋದ್ದೇಶವಾಗಿರುವ ಸಂವಿಧಾನದ ವಿಧಿ ವಿಧಾನಗಳಂತೆ ಆಡಳಿತ ನಡೆಸುವುದಾಗಿ ಪ್ರಮಾಣವಚನ ಸ್ವೀಕರಿಸಿ ಅಧಿಕಾರ ವಹಿಸಿಕೊಂಡವರು ಯಾವುದೇ ಮತಧರ್ಮದವರ ನಂಬಿಕೆಯ ದೈವವನ್ನು ಮೆರವಣಿಗೆಯಲ್ಲಿ ಮೆರೆಸುವುದು ಸಂವಿಧಾನ ಸಮ್ಮತವಾಗುವುದಿಲ್ಲ; ಜನತೆಗೆ ನೀಡಿದ ವಚನವನ್ನು ಪಾಲಿಸಿದಂತೆಯೂ ಆಗುವುದಿಲ್ಲ.


ಸರಕಾರವೇ ಹುಟ್ಟುಹಾಕಿದ, ಚಾಮುಂಡೇಶ್ವರಿಯನ್ನು ಮೆರವಣಿಗೆಯಲ್ಲಿ ಒಯ್ಯುವ ಈ ಹೊಸ ಸಂಪ್ರದಾಯ ಬಹುಸಂಖ್ಯಾತರ ದೈವವನ್ನು ಮೆರೆಸುವುದಾದ್ದರಿಂದ ಚರ್ಚೆಗೆ, ವಿರೋಧಕ್ಕೆ ಬಹಿರಂಗವಾಗಿ ಗುರಿಯಾಗಿಲ್ಲದಿರಬಹುದು. ಇದರ ಬದಲು ಅಥವಾ ಇದರ ಜೊತೆಗೆ ಅಲ್ಪಸಂಖ್ಯಾತರ ದೈವಗಳನ್ನೂ ಜಂಬೂಸವಾರಿಯಲ್ಲಿ ಕೊಂಡೊಯ್ದರೆ ಬಹುಸಂಖ್ಯಾತ ಧರ್ಮದ ಸಂಪ್ರದಾಯವಾದಿಗಳ ಪ್ರತಿಕ್ರಿಯೆ ಏನಾಗಿರುತ್ತಿತ್ತು? ಈ ಪ್ರಶ್ನೆಯನ್ನೂ ತೆರೆದ ಮನಸ್ಸಿನಿಂದ ಕೇಳಿಕೊಳ್ಳುವ ಅಗತ್ಯವಿತ್ತು; ಈಗಲೂ ಇದೆ."

ಮೈಸೂರು ದಸರಾ ಕುರಿತು ಈ ನಾಡಿನಲ್ಲಿ ವಿರೋಧ ಸುಮಾರು 30-40 ವರ್ಷಗಳ ಹಿಂದೆಯೇ ಕೇಳಿಬಂದಿದೆ. ಅದಕ್ಕೂ ಹಿಂದೆ ರಾಜತ್ವವನ್ನು ಕಳೆದುಕೊಂಡು, (ಪ್ರಜಾಪ್ರತಿನಿಧಿಗಳ ರಾಜಿ ಕಬೂಲಿಯ ಕಾರಣಕ್ಕೆ) ಗವರ್ನರ್ ಪದವಿಯಲ್ಲಿ ಉಳಿದುಕೊಂಡಿದ್ದ ಜಯಚಾಮರಾಜೇಂದ್ರ ಒಡೆಯರ್ ಅವರು ಅಂಬಾರಿಯ ಮೇಲೆ ಕೂತು ಸಾಗುತ್ತಿದ್ದಾಗಲೂ ವಿರೋಧ ವ್ಯಕ್ತವಾಗಿತ್ತು. ಆನಂತರ ಸರ್ಕಾರವು ಒಡೆಯರ್ ಎಂಬ ಖಾಸಗಿ ವ್ಯಕ್ತಿ ಅಂಬಾರಿಯ ಮೇಲೆ ಕೂರುವುದನ್ನು ನಿಷೇಧಿಸಿತು. ಅಲ್ಲಿಂದ ಮುಂದೆ ಚಾಮುಂಡೇಶ್ವರಿ ಪ್ರತಿಮೆಯನ್ನು ಕೂರಿಸುವುದು ಆರಂಭವಾಯಿತು. ನಿನ್ನೆ ದಿನ ಅದನ್ನು ಟಿವಿ ಚಾನೆಲ್‌ವೊಂದರಲ್ಲಿ ನಿರೂಪಿಸುತ್ತಿದ್ದ ವ್ಯಕ್ತಿಯು 'ನಾಡದೇವತೆ ಚಾಮುಂಡೇಶ್ವರಿ' ಎಂದು ಹೇಳುತ್ತಿದ್ದ. ಚಾಮುಂಡೇಶ್ವರಿ ಯಾವ ನಾಡಿನ ದೇವತೆ? ಅಧಿಕೃತವಾಗಿ ಅದನ್ನು ತೀರ್ಮಾನಿಸಿದವರು ಯಾರು?

ಈ ಮಾತನ್ನು ಬರೆಯುವಾಗ ಚಿಕ್ಕಮಗಳೂರಿನಲ್ಲಿ ಸಂಘಪರಿವಾರವು ಹುಟ್ಟುಹಾಕಿದ ಹುಸಿ ಆಚರಣೆ ದತ್ತಜಯಂತಿಯ ಆಟೋ ಪ್ರಚಾರದ ನಿರೂಪಕನ ಮಾತುಗಳು ನೆನಪಾಗುತ್ತವೆ. (ಇದನ್ನು ಪೆಡೆಸ್ಟ್ರಿಯನ್ ಪಿಕ್ಚರ್ಸ್‌ನವರು ನಿರ್ಮಿಸಿರುವ ವಿಜಯ್ ನಿರ್ದೇಶಿಸಿರುವ 'ಗಿರಿಗಿಡಿದ ಗ್ರಹಣ' ಸಾಕ್ಷ್ಯಚಿತ್ರದಲ್ಲೂ ನೋಡಬಹುದು) 'ಇದು ನಾಡಹಬ್ಬ. ಅಲಹಾಬಾದ್‌ನಲ್ಲಿ ಕುಂಭಮೇಳ, ಮೈಸೂರಿನಲ್ಲಿ ದಸರಾ, ಚಿಕ್ಕಮಗಳೂರಿನಲ್ಲಿ ದತ್ತಜಯಂತಿ!' ಸರ್ಕಾರವೂ ಅಧಿಕೃತವಾಗಿ ನಾಡಹಬ್ಬವೆಂದು ಘೋಷಿಸಿ ಮಾನ್ಯತೆ ತಂದುಕೊಟ್ಟಿರುವ ಒಂದು ಊಳಿಗಮಾನ್ಯ ಆಚರಣೆಗೆ ಇನ್ನೊಂದು ಧಾರ್ಮಿಕ ಆಚರಣೆ ಹಾಗೂ ಮಗದೊಂದು ಕೋಮುವಾದಿ ಆಚರಣೆಯನ್ನು ತಳಕು ಹಾಕುವುದು ಇಷ್ಟೊಂದು ಸುಲಭ ಹೇಗಾಯಿತು?

ಇಂದಿಗೂ ಬಾಬಾಬುಡನ್‌ಗಿರಿಯ ಸುತ್ತ ಸಂಘಪರಿವಾರವು ಹಬ್ಬಿಸಿರುವ ಸುಳ್ಳುಗಳನ್ನು ಸಂಪೂರ್ಣವಾಗಿ ತೊಡೆದು ಹಾಕಲಾಗಿಲ್ಲ. ಆದರೆ ಕೋಮು ಸೌಹಾರ್ದ ವೇದಿಕೆಯ ಸತತ ಹಾಗೂ ಸಮಗ್ರ ಪ್ರಯತ್ನದ ಕಾರಣದಿಂದಾಗಿ ದತ್ತಜಯಂತಿಯನ್ನು ಸರ್ವ ಮಾನ್ಯ ಸಾರ್ವಜನಿಕ ಆಚರಣೆಯ ಸ್ಥಾನಕ್ಕೇರಿಸುವುದನ್ನು ತಡೆಯಲಾಗಿದೆ.

ಒಂದು ಸಮುದಾಯದ ಆಚರಣೆಗಳಿಗೆ, ಹಳೆಯ ಊಳಿಗಮಾನ್ಯ ಆಚರಣೆಗಳಿಗೆ ಮಾನ್ಯತೆ ತಂದುಕೊಡುವಲ್ಲಿ ಸರ್ಕಾರ ಮಾತ್ರವಲ್ಲದೇ ಪ್ರಜ್ಞಾವಂತ ಜನರದ್ದೂ ಒಂದು ಪಾತ್ರವಿದೆ. ಜೆ.ಎಚ್.ನಾಯಕರು ಅದಕ್ಕಿಂತ ಭಿನ್ನವಾದ ನಿಲುವನ್ನು ತೆಗೆದುಕೊಂಡರು. ಪಂಪ ಪ್ರಶಸ್ತಿಯನ್ನು ವೈಭವೋಪೇತ ದಸರಾ ಕಾರ್ಯಕ್ರಮದಲ್ಲೇ ನೀಡುತ್ತೇವೆನ್ನುವುದನ್ನು ನಾಯಕರು ಒಪ್ಪಲಿಲ್ಲ. ಆದರೆ ಜೀವನದುದ್ದಕ್ಕೂ ವೈಚಾರಿಕತೆಯನ್ನು ಪ್ರತಿಪಾದಿಸಿದ ಡಾ.ಎಚ್.ನರಸಿಂಹಯ್ಯನವರು, ನಂತರ ಯು.ಆರ್.ಅನಂತಮೂರ್ತಿಯವರು, ಬರಗೂರು ರಾಮಚಂದ್ರಪ್ಪನವರು, ಚಂದ್ರಶೇಖರ ಕಂಬಾರರು ಸರ್ಕಾರದ ದಸರಾ ಕಾರ್ಯಕ್ರಮವನ್ನು ಉದ್ಘಾಟಿಸಿದರು.



ಈ ವರ್ಷ ಗಿರೀಶ್ ಕಾರ್ನಾಡರು ಇದನ್ನು ಉದ್ಘಾಟಿಸಲಿದ್ದಾರೆ. ಅದೇ ರೀತಿ ಪೇಜಾವರ ಮಠಾಧೀಶ ವಿಶ್ವೇಶತೀರ್ಥರೂ ಉದ್ಘಾಟಿಸಿ ದ್ದಾರೆ. ಕಾರ್ನಾಡರ ಬದಲಿಗೆ ಎಸ್.ಎಲ್.ಭೈರಪ್ಪನವರು ಉದ್ಘಾಟಿಸಲಿ ಎಂದು ಮೈಸೂರಿನ ಸಂಸದ ಪ್ರತಾಪ್ ಸಿಂಹ ಹೇಳಿದ್ದಕ್ಕೆ 'ಈ ವರ್ಷ ಬೇಡ, ಮುಂದಿನ ವರ್ಷ ಅವರಿಗೆ ಅವಕಾಶ ನೀಡೋಣ' ಎಂದು ಹೇಳಲಾಗಿದೆಯೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ.

ದಸರಾದ ಉದ್ಘಾಟನೆಗೆ ಮುಸ್ಲಿಂ, ಕ್ರಿಶ್ಚಿಯನ್ ಹಾಗೂ ಇನ್ನಿತರ ಧರ್ಮದವರನ್ನು ಕರೆದಿದ್ದಾರೋ ಇಲ್ಲವೋ ಗೊತ್ತಿಲ್ಲ. ಬಹುಶಃ ಕರೆದಿರಲಿಕ್ಕಿಲ್ಲ. ಈಗ ಇಂತಹದೊಂದು ಚರ್ಚೆ ಆರಂಭವಾದರೆ, ಅದನ್ನೂ ಮಾಡಿಯಾರು. ಕಾಂಗ್ರೆಸ್‌ನವರು ತಮಗೆ ಬೇಕಾದ ರೀತಿಯ ಮುಸ್ಲಿಮರನ್ನು, ಬಿಜೆಪಿಯವರು ಅಬ್ದುಲ್ ಕಲಾಂ ಥರದ ತಮಗೆ ಬೇಕಾದ ರೀತಿಯ ಮುಸ್ಲಿಮರನ್ನು ಕರೆಯುವ ಸಾಧ್ಯತೆಯೂ ಇದೆ. ಅಲ್ಲಿಗೆ ಈ ದಸರೆಗೆ ಎಲ್ಲರೂ ಮಾನ್ಯತೆಯನ್ನು ಕೊಟ್ಟಂತಾಗಿ ಬಿಡುತ್ತದೆ. ಈ ದೇಶದ ಎಲ್ಲರೂ ಹಿಂದೂಗಳೇ ಎಂಬ ರೀತಿಯ ಬಿಜೆಪಿಯ ವಾದವನ್ನು ಆ ಮೂಲಕ ನಾವೂ, ಉದ್ಘಾಟಿಸುವ ಮುಸ್ಲಿಮರೂ, ಹಾಗೂ ಸುಮ್ಮನಿರಲೇಬೇಕಾಗಿ ಬರುವ ಇತರ ಮುಸ್ಲಿಮರೂ ಒಪ್ಪಿಕೊಂಡಂತೆಯೇ ಆಗುತ್ತದೆ.

ಈ ಸಾರಿ ಮೈಸೂರು ದಸರಾ ಉಪಸಮಿತಿಯೊಂದರ ಮುಖ್ಯಸ್ಥರಾಗಿ ನಮ್ಮ ಬಾದಲ್ ಆಯ್ಕೆಯಾಗಿದ್ದಾರೆ. ಇದಕ್ಕೆ ಖುಷಿ ಪಡಬೇಕೋ, ವಿಷಾದ ಪಟ್ಟುಕೊಳ್ಳಬೇಕೋ? ಒಂದು ವೇಳೆ ಅದನ್ನು ಬಾದಲ್ ನಿರಾಕರಿಸಿದರೆ ಅದರ ಪರಿಣಾಮ ಒಳ್ಳೆಯದೋ ಕೆಟ್ಟದೋ ಎಂಬ ಪ್ರಶ್ನೆ ನಂತರ ಬರುತ್ತದೆ. ಇವರಿದ್ದರೆ, ಕನಿಷ್ಠ ಜನಪರವಾದ, ಜೀವಪರವಾದ ಕೆಲವು ಸಂಗತಿಗಳು ಅಲ್ಲಿ ಕಾಣಿಸಿಕೊಳ್ಳಬಹುದು ಎಂಬುದೂ ಒಂದು ವಾದ. ನಾವು 'ಒಳಗೆ ಸೇರಿಕೊಂಡು' ಬದಲಾಯಿಸಬೇಕು ಎನ್ನುವ ವಾದ ಅದರ ಜೊತೆಜೊತೆಗೇ ಬರುತ್ತದೆ. 'ಸೆಕ್ಯುಲರ್' ಎಂದರೆ, ಜನರ ಬದುಕಿನ ಆಚರಣೆಗಳನ್ನು ನಿರಾಕರಿಸುವುದು ಎಂದೆಲ್ಲ ಇತ್ಯಾದಿ ಇತ್ಯಾದಿ ವಾದಗಳನ್ನು ಸಾಕಷ್ಟು ಮುಂದಿಡಲಾಗುತ್ತದೆ. ಸೆಕ್ಯುಲರ್ ಎಂದರೆ ಏನು ಎಂಬುದರ ಸರಿಯಾದ ನಿರ್ವಚನ ಆಗದೇ, 'ಬಹುಸಂಖ್ಯಾತತೆ'ಯನ್ನು ಒಪ್ಪಿಸುವ ಆಚರಣೆಗಳು ಧಾಳಾಗಿ ನಡೆಯುತ್ತಲೇ ಇರುವಾಗ ಇನ್ನೂ ಏನೇನು ಆಗಬಹುದು ಎಂಬುದನ್ನು ನಾವು ಯೋಚಿಸಬೇಕಿದೆ.

ಇಂತಹ ದಸರೆ ಏಕೆ ಎಂಬ ಪ್ರಶ್ನೆ ಎತ್ತದೇ, ಉತ್ತರಾಧಿಕಾರತ್ವದ ಪ್ರಶ್ನೆ ಏಕೆ ಬೇಕು ಎಂದು ಕೇಳದೇ, ಒಂದು ವೇಳೆ ತಮ್ಮ ಆಸ್ತಿಗೆ ಯಾರನ್ನೋ ಉತ್ತರಾಧಿಕಾರಿ ಮಾಡಿಕೊಳ್ಳಬೇಕೆಂದು ಪ್ರಮೋದಾದೇವಿ ಬಯಸಿದರೆ



ಅದಕ್ಕೂ ನಮಗೂ ಏನು ಸಂಬಂಧ ಎಂಬ ಪ್ರಶ್ನೆ ಕೇಳಿಕೊಳ್ಳದೇ ಹೋದರೆ ನಾವು ಎಲ್ಲಕ್ಕೂ ಮಾನ್ಯತೆ ಕೊಟ್ಟಂತೆಯೇ ಆಗುತ್ತದೆ. ನಮ್ಮ ಗೆಳೆಯರು ಕೆಲವರು 'ಸ್ವತಃ ಪ್ರಮೋದಾದೇವಿಯೇ ಇರುವಾಗ ಗಂಡು ಉತ್ತರಾಧಿಕಾರಿಯನ್ನು ಹುಡುಕುತ್ತಿರುವುದು ಸರಿಯಲ್ಲ' ಎಂದು ಚರ್ಚೆ ಎತ್ತಬೇಕೆಂದು ಬಯಸಿದರು. ಆ ರೀತಿ ಬಯಸಿದವರು ವಿಚಾರವಾದಿಗಳೇ, ಪ್ರಜಾತಂತ್ರವಾದಿಗಳೇ. ಅಂದರೆ ಉತ್ತರಾಧಿಕಾರತ್ವದ ಕುರಿತು ಚರ್ಚೆಯನ್ನೆತ್ತದೆ, ಅದನ್ನು ಗಂಡು-ಹೆಣ್ಣಿನ ನಡುವಿನ ಅಸಮಾನತೆಯ ಪ್ರಶ್ನೆಯನ್ನಾಗಿ ಮಾತ್ರ ನಾವು ಚರ್ಚೆ ಮಾಡಬಹುದೇ? ನಾವು ಎಲ್ಲಿಗೆ ಬಂದು ನಿಂತಿದ್ದೇವೆ? ಕರ್ನಾಟಕದ ವಿಚಾರವಾದ, ಪ್ರಜಾತಂತ್ರವಾದ ದಿನೇದಿನೇ ಕುಗ್ಗುತ್ತಿರುವ ಸಂದರ್ಭದಲ್ಲಿ ನಾವು ಇದ್ದೇವೆ ಎನ್ನುವುದರ ಸೂಚಕ ಇದಾಗಿದೆ.

ಬದಲಿಗೆ ನಾವು ಮತ್ತೆ ಮತ್ತೆ ಅಂಬಾರಿಯ ಮೇಲೆ ಮಹಾರಾಜರು ಕೂರಬಾರದು ಎಂದು ತೆಗೆದುಹಾಕಿದ್ದು ಏಕಾಗಿ ಎಂಬುದನ್ನು ಪ್ರಜಾತಂತ್ರದ ನೆಲೆಗಟ್ಟಿನಲ್ಲಿ ನೆನಪಿಸುವ ಕೆಲಸ ಮಾಡಬೇಕು. ಅದನ್ನು ಮಾಡಿದ್ದು ಸರಿ ಎಂದಾದರೆ, ಅಂಬಾರಿಯ ಒಡೆತನದ ಪ್ರಶ್ನೆ, ಅರಮನೆಯ ಒಡೆತನದ ಪ್ರಶ್ನೆ, ಉತ್ತರಾಧಿಕಾರತ್ವದ ಪ್ರಶ್ನೆ ಎಲ್ಲವೂ ಅಸಂಗತವಾಗುತ್ತದೆ. ನಂತರ ಖಾಸಗಿ ದರ್ಬಾರ್ ಎಂಬುದೇ ಪ್ರಜಾತಂತ್ರದ ಅಣಕ ಎಂಬಂತಾಗುತ್ತದೆ. ಜನರ ತೆರಿಗೆಯ ಹಣದಿಂದಲೇ ಅರಮನೆ, ಅಂಬಾರಿ, ಸಿಂಹಾಸನ ಎಲ್ಲವೂ ಅವರಿಗೆ ದಕ್ಕಿದ್ದು ಎಂಬುದನ್ನು ಮರೆಯಲಾಗದು; ಅರಸೊತ್ತಿಗೆಯೇ ಪ್ರಜಾತಂತ್ರದ ಅಣಕ. ನಾಲ್ವಡಿ ಕೃಷ್ಣರಾಜ ಒಡೆಯರ್ ಮತ್ತು ಅವರ ಸಮಕಾಲೀನ ಸಂದರ್ಭದಲ್ಲಿ ಭಾರತದ ಹಲವಾರು ಅರಸರು 'ಪ್ರಗತಿ'ಪರವಾಗಿ ಆಲೋಚನೆ ನಡೆಸಿದರು; ಹಿಂದುಳಿದ ವರ್ಗಗಳ ಏಳಿಗೆಗೆ ಕೆಲವು ಕ್ರಮಗಳನ್ನು ಕೈಗೊಂಡರು ಎಂಬುದು ನಿಜ. ಅದಕ್ಕೆ ಆ ಹೊತ್ತಿನ ಹಿಂದುಳಿದ ವರ್ಗಗಳ ಕೆಲವು ಸಮುದಾಯಗಳು ಚಳವಳಿ ನಡೆಸಿದ್ದೂ ಕಾರಣ ಎಂಬುದನ್ನೂ ಮರೆಯಲಾಗದು. ಆದರೆ ಈ ಹೊತ್ತಿನ 'ಐಡೆಂಟಿಟಿ ರಾಜಕಾರಣ'ವು ಜಾತಿಯಿಂದ ಹಿಂದುಳಿದವರಾಗಿದ್ದ ಇಂತಹ ಅರಸರಿಗೆ 'ಪ್ರಜಾಪ್ರಭುತ್ವದ ಮೌಲ್ಯ'ಗಳಾಚೆಗಿನ ಮಾನ್ಯತೆಯನ್ನು ತಂದುಕೊಡುತ್ತಿರುವುದೂ ಅಷ್ಟೇ ಸತ್ಯ. ಮುಸ್ಲಿಮರಲ್ಲಿ ಹೆಚ್ಚಿನವರು ಟಿಪ್ಪುವನ್ನು ನೆನೆಸಿಕೊಳ್ಳುವುದೂ ಸಹ ಈ ಬಗೆಯ ಐಡೆಂಟಿಟಿ ರಾಜಕಾರಣದಿಂದಾಗಿಯೇ ಹೊರತು, ಟಿಪ್ಪುವಿನಲ್ಲಿದ್ದ ಪ್ರಜಾತಾಂತ್ರಿಕ ಗುಣಗಳಿಗಾಗಿಯಲ್ಲ.

ಸಾರ್ವಜನಿಕ ಅಭಿಪ್ರಾಯ ರೂಪಿಸಲು ನಮಗಿರುವ ಸೀಮಿತ ಶಕ್ತಿಯನ್ನು ಯಾವ ರೀತಿ ವ್ಯಯ ಮಾಡಬೇಕ ಸಹ ಚಿಂತಿಸಬೇಕು. ಇಲ್ಲದಿದ್ದರೆ ಇಂದಿನ 'ಮ ವಾಹಿನಿ'ಯ ಅಂದರೆ, ಟಿವಿ ವಾಹಿನಿ ಹಾಗೂ ಸಾಮ ಜಾಲತಾಣಗಳೇ ಅಭಿಪ್ರಾಯ ರೂಪಿಸುತ್ತಿರುತ್ತವೆ. ಅ ಪ್ರಕಾರ ಶ್ರೀಕಂಠದತ್ತರ ಖಾಸಗಿ ದರ್ಬಾರ್ ಇಲ್ಲದೇ ಸಾರಿ ದಸರಾ ಸೊರಗಿದೆ. ಅಂದಿನ ವೈಭವ ಇಂ ಎಂದು ಹೇಳುತ್ತಿರುವಾಗ, ಇದಕ್ಕೆ ನಮ್ಮ ಅಧ ಪ್ರಜಾಪ್ರಭುತ್ವವೇ ಕಾರಣ ಎಂದು ಮಾತ್ರ ಅವರು ಹೇಳ ಅಷ್ಟೇ. ಕನ್ನಡ ವಿಕಿಪೀಡಿಯದಲ್ಲಿ ದಸರಾ ಬಗ್ಗೆ ಇ ಪುಟದಲ್ಲಿ 'ಮೈಸೂರು ಪ್ರಜೆಗಳ ಕಣ್ಣಲ್ಲಿ' ಎಂಬ ಒ ವಿಭಾಗವಿದೆ. ಅದರಲ್ಲಿ ಸುಮಾರು 10 ಸಾಮಾನ್ಯ ಹೇಳಿಕೆಗಳನ್ನು ಹಾಕಲಾಗಿದೆ. ಎಲ್ಲರದ್ದೂ ಒಂದೇ ಅಭಿಪ 'ಮಹಾರಾಜರ ಕಾಲದ ವೈಭವ ಈಗಿಲ್ಲ, ಆಗ ಸೊಗಸಿತ್ತು, ಏನು ಕಥೆ?'

ಇಂತಹ ಸಂಗತಿಗಳ ಬಗ್ಗೆ ನಾವು ಸುಮ್ಮನಿ ದರಿಂದಲೇ ಪ್ರಮೋದಾದೇವಿಯ ಪರ ಅಭಿಪ ರೂಪಿಸುವ ಒಂದು ವ್ಯವಸ್ಥಿತ ಸಂಚು ಇಂದು ನಡೆಯು ಮೈಸೂರಿನ ಮಾರಮ್ಮನ ದೇವಸ್ಥಾನದ ಹತ್ತಿರ ಬಿತ್ತು, ಇದು ಅಪಶಕುನ, ಈ ಸರ್ಕಾರಕ್ಕೇನೋ ಕಾದಿದೆ ಎಂಬಂತೆ ಒಂದಿಡೀ ದಿನ ಟಿವಿವಾಹಿನಿ ಬೊಬ್ಬೆ ಇಟ್ಟವು. ಇದು ಕೇವಲ ದಸರಾಕ್ಕೆ ಸೀಮಿತವಾಗಿರುವುದಲ್ಲ. ಸರಳ ಮದುವೆ ಕಾನ ಮೌಢ್ಯಾಚರಣೆ ವಿರೋಧಿ ಕಾನೂನು ತ ಹೊರಟಾಗಲೂ ಇಂತಹುದೇ ಬೊಬ್ಬೆ ಕಂ ಆದ್ದರಿಂದಲೇ ಈ ಎಲ್ಲಾ ಚಾನೆಲ್‌ಗಳಲ್ಲಿ ಹೆಚ್ಚಿನ ಸಂಖ್ಯೆ ಬ್ರಾಹ್ಮಣರು ಇರುವುದೇ ಇದಕ್ಕೆ ಕಾರಣ ಎ ಯಾರಾದರೂ ಹೇಳಿದರೆ ಅದು ತಪ್ಪು ಎಂದೆನಿಸುವ ಒಬ್ಬ ಅಬ್ರಾಹ್ಮಣ ಮುಖ್ಯಸ್ಥನನ್ನು ಹೊಂದಿರುವ ಚಾ ಮಿಕ್ಕೆಲ್ಲರಿಗೆ ಪೈಪೋಟಿ ನೀಡುವಷ್ಟರ ಮ 'ಹಿಂದೂಪರ', 'ವೈದಿಕಪರ' ನಿಂತಿರುತ್ತದೆ. ತ 'ಅನ್ಯಮತೀಯ'ನೆಂದು ನೋಡದಿರಲಿ ಎಂಬ ಲೆಕ್ಕ ಅದರ ಮುಖ್ಯಸ್ಥರಿಗೆ ಇರಬಹುದು. ಒಂದು ವ ಭಾರತಿಯನ್ನು ಹೊರತುಪಡಿಸಿ ಮಿಕ್ಕ ಯಾರೂ ಇದ ಭಿನ್ನವಾದ ನಿಲುವನ್ನು ಮುಂದಿಡುತ್ತಿಲ್ಲ ಎಂದರೆ, ಮುಂದಿರುವ ಆಯ್ಕೆಗಳ ಕುರಿತು ಗಂಭೀರ ಯೋಚಿಸಬೇಕಿದೆ.

ದಸರಾದ ಚೌಕಟ್ಟನ್ನು ಬದಲಿಸದೇ ನಾವು 'ಅದರ ತೂರಿಕೊಂಡು' ಮಾಡುವ ಕೆಲಸಗಳು ಅಂತಿಮ ಯಾರಿಗೆ ಉಪಯೋಗವಾಗುತ್ತವೆ? ದಸರಾ ಸೇರಿ ಈ ನಾಡಿನ ನೂರೆಂಟು ಸಂಸ್ಥೆ, ಮಾಧ್ಯಮ ಆಚರಣೆಗಳಲ್ಲಿ ಈಗಾಗಲೇ ತೂರಿಕೊಂಡಿ ಬಲಪಂಥೀಯರಿಗೆ ಮತ್ತು ಅವರ ಅಣ್ಣಂದಿ ಕಾರ್ಪೋರೇಟ್‌ಶಾಹಿಗಳಿಗೆ ಅನುಕೂಲ ಮಾಡಿಕೊಡ 'ಒಳಗೆ ಸೇರಿಕೊಳ್ಳಬೇಕು', 'ಹಬ್ಬ ಆಚರಣೆಗಳಿಲ್ಲದೆ ಸಂಸ್ಕೃತಿಯೂ, ಸಮುದಾಯವೂ ಇಲ್ಲ. ಅ ಪ್ರಜಾತಾಂತ್ರಿಕಗೊಳಿಸುವುದು ಮತ್ತು ಮ ಸೃಜನಾತ್ಮಕತೆಯಿಂದ ಇನ್ನಷ್ಟು ಸಂಭ್ರಮ ಹ ಕ್ರಿಯಾತ್ಮಕತೆಯನ್ನು ತಂದುಕೊಡುವುದು ನಮ್ಮ ಇವೆಲ್ಲವೂ ಸರಿ. ಆದರೆ ಚೌಕಟ್ಟಿನ ಕುರಿತ ಪ್ರಶ್ನೆ ತ ಚೌಕಟ್ಟಿನ ಬದಲಾವಣೆ ಮತ್ತು ಒಳಗೆ ಸೇರಿಕೆ ಮಾಡಬೇಕಾದ ಕೆಲಸಗಳೆರಡೂ ಒಟ್ಟೊಟ್ಟಿಗೆ ನಡೆ ಇದ್ದಲ್ಲಿ ಏನಾಗುತ್ತದೋ ಅದು ಇವತ್ತು ನಡೆಯ ಇದು ಈ ನಾಡಿನ ಒಟ್ಟು ಪ್ರಜಾತಂತ್ರವಾದಿ ಪ್ರಜ್ಞಾ ಒಟ್ಟಾಗಿ ಸೇರಿ ನಡೆಸಬೇಕಾದ ಕೆಲಸವೆಂದು ತೋ ಈ ಬೆಕ್ಕಿಗೆ ಗಂಟೆ ಕಟ್ಟುವವರು ಯಾರು?

ಬಿಜೆಪಿಗೆ ಕಪಾಳಮೋಕ್ಷ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಕೇವಲ ನಾಲ್ಕು ತಿಂಗಳುಗಳ ಹಿಂದೆ ಭರ್ಜರಿ ...ತ್ತು ಕಂಡಿದ್ದ ಭಾರತೀಯ ಜನತಾ ಪಕ್ಷಕ್ಕೆ ಈಗ ...ಸ್ರ ಕ್ಷೇತ್ರಗಳ ಮತದಾರರು ಭರ್ಜರಿಯಾಗಿಯೇ ...ಪಾಮೋಕ್ಷ ಮಾಡಿದ್ದಾರೆ. "ಲೋಕಸಭಾ ಚುನಾವಣೆಯ ...ರ್ಭದಲ್ಲಿ ಸ್ವಚ್ಛ ಆಡಳಿತವನ್ನು ಮತ್ತು ಅಭಿವೃದ್ಧಿಯನ್ನು ...ಸಿ ನೀಡುತ್ತೇವೆ ಎಂದು ಕೊಟ್ಟಿದ್ದ ಭರವಸೆಯನ್ನು ...ಸಲು ಈಡೇರಿಸಿ. ಅದು ಬಿಟ್ಟು ನಿಮ್ಮ ಎಂದಿನ ...ಮು ಕಿತಾಪತಿಯೆಲ್ಲ ನಮಗೆ ಬೇಡ" ಎಂದು ಮೋದಿ ...ತನ ಚೆಡ್ಡಿ ಬಳಗಕ್ಕೆ ಮತದಾರರು ಎಚ್ಚರಿಕೆ ನೀಡಿದ್ದಾರೆ. ...ನಾನು ಹೇಳುತ್ತಿರುವುದು ನಿನ್ನೆ ಹೊರಬಿದ್ದ ಉಪ ...ನಾವಣೆಗಳಿಗೆ ಸಂಬಂಧಿಸಿದ್ದು ಎಂಬುದು ನಿಮಗೀ ...ಗಲೇ ಅರ್ಥವಾಗಿರುತ್ತದೆ. ಉತ್ತರ ಪ್ರದೇಶದ ಹನ್ನೊಂದು ...ನಸಭಾ ಕ್ಷೇತ್ರಗಳಲ್ಲಿ ನಡೆದ ಉಪಚುನಾವಣೆಯಲ್ಲಿ ... ಮೂರು ಕಡೆ ಮಾತ್ರ ಗೆದ್ದಿದೆ. ಅದಕ್ಕಿಂತ ...ವಾಗಿ ಸ್ವತಃ ನರೇಂದ್ರ ಮೋದಿ ಸಂಸತ್ತಿನಲ್ಲಿ ...ಧಿಸುವ ವಾರಣಾಸಿ ಕ್ಷೇತ್ರದಡಿ ಬರುವ ರೋಹಾನಿಯಾ ...ನಸಭಾ ಕ್ಷೇತ್ರದಲ್ಲೇ ಬಿಜೆಪಿ ಮಣ್ಣು ಮುಕ್ಕಿದೆ.

...ಹಾಗೆಯೇ ಗುಜರಾತಿನಲ್ಲಿ ಲೋಕಸಭಾ ...ನಾವಣೆಯಲ್ಲಿ ನಾಮಾವಶೇಷಗೊಂಡಿದ್ದ ಕಾಂಗ್ರೆಸ್ ...ಕ್ಷ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ವಿಶೇಷ ...ಪ್ರಯತ್ನವನ್ನು ಮಾಡದಿದ್ದರೂ ಅಲ್ಲೂ ಮೂರು ಕ್ಷೇತ್ರಗಳಲ್ಲಿ ...ದೆ. ಹಾಗೆಯೇ ರಾಜಸ್ಥಾನದಲ್ಲೂ ...ರ್ಣವಾಗಿ ಸೋತಿದ್ದ ಕಾಂಗ್ರೆಸ್ ಈ ಬಾರಿ ... ಉಪಚುನಾವಣೆಯಲ್ಲಿ ನಾಲ್ಕು ಸ್ಥಾನಗಳ ...ಮೂರನ್ನು ಗೆದ್ದಿದೆ.


...ದಕ್ಕೂ ಮುನ್ನ ಕಳೆದ ತಿಂಗಳು ಕರ್ನಾಟಕ, ...ರ ಮತ್ತು ಉತ್ತರಖಂಡ್ ರಾಜ್ಯಗಳಲ್ಲಿ ನಡೆದ ...ಚುನಾವಣೆಗಳಲ್ಲೂ ಬಿಜೆಪಿ ...ಕೊಳ್ಳುವಂತಹ ಸಾಧನೆಯನ್ನೇನು ಮಾಡಲಿಲ್ಲ. ... ರಾಜ್ಯದಲ್ಲಿ ನಡೆದ ಉಪಚುನಾವಣೆಯಲ್ಲಿ ...ಸ್ ಎರಡು ಕಡೆ ಗೆದ್ದು ಶಿಕಾರಿಪುರದಲ್ಲಿ ... ಆರೂವರೆ ಸಾವಿರ ಮತಗಳ ಅಂತರದಿಂದ ...ಗೆ ಸೋತಿತ್ತು, ಬಿಹಾರದಲ್ಲಿ ಹತ್ತು ಸ್ಥಾನಗಳಿಗೆ ... ಉಪಚುನಾವಣೆಯಲ್ಲಿ ಬಿಜೆಪಿ ನಾಲ್ಕರಲ್ಲಿ ... ಗೆದ್ದಿತು. ಉಳಿದ ಆರು ಸ್ಥಾನಗಳಲ್ಲಿ ನಿತೀಶ್ ...ರ್ ಮತ್ತು ಲಲ್ಲೂ ಪ್ರಸಾದ್ ಯಾದವ್ ... ಜಾತ್ಯತೀತ ಮೈತ್ರಿಕೂಟವೇ ಜಯ ಸಾಧಿಸಿತ್ತು. ...ಖಂಡದಲ್ಲೂ ಬಿಜೆಪಿಗೆ ಮುಖಭಂಗವಾಗಿತ್ತು.

...ಷ್ಟೇ ಮುಖ್ಯವಾಗಿ ಗಮನಿಸಬೇಕಾದ ಅಂಶ ...ವೆಂದರೆ ಉತ್ತರ ಪ್ರದೇಶ, ರಾಜಸ್ಥಾನ ಮತ್ತು ...ರಾತಿನಲ್ಲಿ ಬಿಜೆಪಿ ಕಳೆದ ಮೇ ತಿಂಗಳಲ್ಲಿ ಪಡೆದ ...ಲವಾರು ಮತಗಳಿಗಿಂತ ಈ ಬಾರಿ ಬಹಳ ಕಡಿಮೆ ...ದೆ. ಬಿಹಾರದಲ್ಲೂ ಬಿಜೆಪಿ ಮತ್ತು ಎಲ್‌ಜೆಪಿ ...ಕೂಟದ ಶೇಕಡಾವಾರು ಮತಗಳು ಲೋಕಸಭೆ ...ವಣೆಯಲ್ಲಿ 45.3 ಆಗಿದ್ದರೆ, ಕಳೆದ ತಿಂಗಳು ಅದು ... ಶೇ 37.3 ಆಗಿತ್ತು. ಅಂದರೆ ಕೇವಲ ಮೂರು ...ಳಲ್ಲಿ ಬಿಜೆಪಿ- ಎಲ್‌ಜೆಪಿಯ ಜನಪ್ರಿಯತೆ ಶೇ. ... ಕುಸಿದಿದೆ.

...ದರೆ ಬೇರೆ ಎಲ್ಲ ರಾಜ್ಯಗಳಲ್ಲಿ ನಡೆದ ಉಪಚುನಾವಣೆ ...ತ ಈಗ ಉತ್ತರ ಪ್ರದೇಶದ ಮತದಾರರು ನೀಡಿರುವ ...ರ್ಣಾಯ ಮುಖ್ಯವಾಗುತ್ತದೆ. ಯಾಕೆಂದರೆ ಇದೇ ಉತ್ತರ ಪ್ರದೇಶದಲ್ಲಿ ನಾಲ್ಕು ತಿಂಗಳ ಹಿಂದೆ ಬಿಜೆಪಿ ದೊಡ್ಡ ಮೊತ್ತದ ಗೆಲುವನ್ನು ಸಾಧಿಸಿ ದೆಹಲಿಯಲ್ಲಿ ಅಧಿಕಾರದ ಗದ್ದುಗೆಯನ್ನೇರಿತ್ತು.

ಆಗ ಉತ್ತರ ಪ್ರದೇಶದಲ್ಲಿ ಭರ್ಜರಿ ಜಯ ಸಾಧಿಸಿದ್ದಕ್ಕೆ ಮತ್ತು ಈಗ ಮಣ್ಣುಮುಕ್ಕಿರುವುದಕ್ಕೆ ಕಾರಣಗಳೇನು ಎಂದು ನೋಡಿದರೆ ನಮ್ಮ ದೇಶದ ಜನರ ಮೂಲಭೂತ ಜಾತ್ಯತೀತ ಧೋರಣೆ ಅರ್ಥವಾಗುತ್ತದೆ.

ಯುಪಿಎ-2 ಅಧಿಕಾರಾವಧಿಯಲ್ಲಿ ದೇಶದ ಆರ್ಥಿಕ ಸ್ಥಿತಿ ಹದಗೆಟ್ಟಿತು. ಜೊತೆಗೆ ಅದೇ ಅವಧಿಯಲ್ಲಿ ನಡೆದ ಹಲವಾರು ಹಗರಣಗಳು ಜನರಲ್ಲಿ ಅಸಹ್ಯ ಮೂಡಿಸಿದ್ದವು. ಉದ್ಯೋಗದ ಅವಕಾಶಗಳಿಗಾಗಿ ಹಪಹಪಿಸುತಿದ್ದ ಹೊಸ ತಲೆಮಾರೊಂದು ದೊಡ್ಡ ಸಂಖ್ಯೆಯಲ್ಲಿ ಮತಪಟ್ಟಿಯಲ್ಲಿ ಸ್ಥಾನ ಪಡೆದಿತ್ತು. ಇದನ್ನೆಲ್ಲ ಬಂಡವಾಳ ಮಾಡಿಕೊಂಡ ಮೋದಿ ತಾನು ಅಭಿವೃದ್ಧಿಯ ಹರಿಕಾರನೆಂಬಂತೆ ಪೋಸು ಕೊಟ್ಟ, ಮುಖ್ಯಮಂತ್ರಿಯಾಗಿ ಗುಜರಾತಿಯಲ್ಲಿ ಪವಾಡ ಮಾಡಿದ್ದೇನೆಂದು ಸುಳ್ಳು ಬೊಗಳಿದ. ಅಷ್ಟೇ ಮುಖ್ಯವಾಗಿ ಬಿಜೆಪಿಯ ಕೋಮುವಾದಿ ಮುಖವನ್ನು ತನ್ನದೊಂದು



ಮುಖವಾಡದೊಂದಿಗೆ ಮುಚ್ಚಿದ. ಮೋದಿಯ ನೇತೃತ್ವದಲ್ಲಿ ಭಾರತ ಅಭಿವೃದ್ಧಿಯಾಗುತ್ತದೆಂದೂ, ಬಿಜೆಪಿ ಮುಂದಿನ ದಿನಗಳಲ್ಲಿ ತನ್ನ ಕೋಮು ಕಿತಾಪತಿಗಳಿಂದ ದೂರ ಉಳಿಯುತ್ತದೆಂದೂ ಮಾರುಹೋದ ಉತ್ತರ ಪ್ರದೇಶದ ಜನ ಆತನ ಪಕ್ಷಕ್ಕೆ ಅಪಾರ ಬೆಂಬಲವನ್ನು ನೀಡಿ ಗೆಲ್ಲಿಸಿದರು.

ಆದರೆ ಅಧಿಕಾರಕ್ಕೆ ಬಂದ ನಂತರ ಮೋದಿ ಮಾಡಿದ್ದೇನು? ಕಾಲಿಗೆ ಚಕ್ರ ಕಟ್ಟಿಕೊಂಡಿರುವವನಂತೆ ಫಾರಿನ್ ಟೂರ್ ಹೊಡೆಯುತ್ತಿರುವ ಮೋದಿ ಭಾರತದಲ್ಲಿ ದ್ದಾಗ ತನ್ನ ಸಚಿವ ಸಂಪುಟದಲ್ಲಿ ಯಾರು ತನ್ನ ಹದ್ದುಮೀರಿ ನಡೆದುಕೊಳ್ಳುತ್ತಿದ್ದಾರೆ ಎಂದು ನೋಡಿಕೊಳ್ಳುವುದರಲ್ಲೇ ಎಲ್ಲ ಸಮಯ ಪೋಲಾಗುತ್ತಿದೆ. ಆದ್ದರಿಂದ ಪಾಪ ಆತನಿಗೆ ತಾನು ಚುನಾವಣೆಯಲ್ಲಿ ಭಾರತೀಯರಿಗೆ ಕೊಟ್ಟಿದ್ದ ಭರವಸೆಗಳನ್ನು ಈಡೇರಿಸಲು ಪುರುಸೊತ್ತೆ ಸಿಗುತ್ತಿಲ್ಲ. ಅದಕ್ಕೆ ಆತ ಮತ್ತದೇ ಕಾಂಗ್ರೆಸ್‌ನ ಹಳೇ ಯೋಜನೆಗಳಿಗೆ ಅಲ್ಲಲ್ಲಿ ಹೊಸ ಟಚ್ ಕೊಟ್ಟು ಅದೇ ತಾನು ಮಾಡುತ್ತಿರುವ ಅಭಿವೃದ್ಧಿ ಎಂದು ತೋರಿಸಲು ಹೆಣಗುತ್ತಿದ್ದಾನೆ.

ಪರಿಸ್ಥಿತಿ ಹೀಗಿರುವಾಗ ಉತ್ತರ ಪ್ರದೇಶದ ಉಪಚುನಾವಣೆಗಳನ್ನು ಗೆಲ್ಲುವುದು ಹೇಗೆ ಎಂಬುದೇ ಮೋದಿಯ ಬಿಜೆಪಿ ಪಕ್ಷಕ್ಕೆ ಯಕ್ಷಪ್ರಶ್ನೆಯಾಯಿತು. ಆಗ ಅದು ತನ್ನ ಜಾಯಮಾನಕ್ಕೆ ಸರಿಯಾಗಿ ಮತ್ತದೇ ಕೋಮುದ್ವೇಷವನ್ನು ಬಿತ್ತಿ ಚುನಾವಣೆಯಲ್ಲಿ ಗೆಲ್ಲಲು ಮುಂದಾಯಿತು. ಈ ಕೆಲಸಕ್ಕೆ ಬಿಜೆಪಿ ಆಯ್ಕೆ ಮಾಡಿಕೊಂಡಿದ್ದು ಯೋಗಿ ಆದಿತ್ಯನಾಥ್ ಎಂಬ ಕಾವಿಧಾರಿ ಸಂಸದನನ್ನು. ಬಾಯಿ ತೆರೆದರೆ ಮುಸಲ್ಮಾನರ ವಿರುದ್ಧ ಕೆಂಡ ಕಾರುವ ಯೋಗಿ ಆದಿತ್ಯನಾಥ 'ಲವ್ ಜೆಹಾದ್' ಎಂಬ ಕಪೋಲಕಲ್ಪಿತ ಯೋಜನೆಯನ್ನು 'ಜಾರಿ'ಗೆ ತರಲು ಯತ್ನಿಸಿದ. ಇದರಲ್ಲಿ ಅವನಿಗೆ ಸಾಥ್ ನೀಡಿದವರು ಕಲ್ರಾಜ್ ಮಿಶ್ರಾ, ಲಕ್ಷ್ಮಿಕಾಂತ್ ಬಾಜಪೆಯ್, ಸಾಕ್ಷಿ ಮಹಾರಾಜ್ ಮತ್ತು ಸ್ವತಃ ಬಿಜೆಪಿಯ ಅಧ್ಯಕ್ಷ ಅಮಿತ್ ಶಾ. ಇವರೆಲ್ಲರೂ ಉತ್ತರ ಪ್ರದೇಶದಲ್ಲಿ ಮುಸಲ್ಮಾನ ಯುವಕರು ಹಿಂದೂ ಹುಡುಗಿಯರನ್ನು 'ಲವ್ ಜೆಹಾದ್' ಎಂಬ ಕಾರ್ಯಯೋಜನೆಯಡಿ ಲಪಟಾಯಿಸಿ ಮತಾಂತರ ಮಾಡುತ್ತಿದ್ದಾರೆಂದು, ರಾಜ್ಯದಲ್ಲಿ ಅಧಿಕಾರದಲ್ಲಿರುವ ಸಮಾಜವಾದಿ ಪಕ್ಷದ ಅಖಿಲೇಶ್ ಯಾದವ್ ಅವರ ಸರ್ಕಾರ ಮುಸಲ್ಮಾನರ ಪರ ಇದೆ ಎಂದೂ ಬೊಬ್ಬೆ ಹೊಡೆಯಲಾರಂಭಿಸಿದರು. ಅವರ ಲೆಕ್ಕಾಚಾರ ಸಿಂಪಲ್ ಆಗಿತ್ತು. ಅದೇನೆಂದರೆ ನೂರು ದಿನಗಳ ಹಿಂದೆ ಬೀಸಿದ್ದ 'ಮೋದಿ ಅಲೆ' ಇನ್ನೂ ಪ್ರಭಾವ ಹೊಂದಿದೆ, ಅಖಿಲೇಶ್ ಯಾದವ್ ಸರ್ಕಾರದ ಜನಪ್ರಿಯತೆ ಪಾತಾಳ ಮುಟ್ಟಿದೆ, ತಮ್ಮ ಪಕ್ಷಕ್ಕೆ ಮುಸಲ್ಮಾನರ ಮತಗಳ ಅಗತ್ಯತೆ ಇಲ್ಲವಾದ್ದರಿಂದ 'ಲವ್ ಜೆಹಾದ್' ಕುರಿತ ಬೊಬ್ಬೆ ಹಿಂದೂಗಳ ಮತಗಳನ್ನು ಇಡೀಯಾಗಿ ಬಿಜೆಪಿಗೆ ತಂದು ಕೊಡುತ್ತದೆ.

ಚೆಡ್ಡಿಗಳು "ನಮ್ಮ ದೇಶದಲ್ಲಿ ಹಿಂದೂಗಳು ಬಹುಸಂಖ್ಯಾತರು, ಮುಸಲ್ಮಾನರು ಅಲ್ಪಸಂಖ್ಯಾತರು" ಎಂದೇ ಈಗಲೂ ನಂಬಿದ್ದಾರೆ ಮಾತ್ರವಲ್ಲ ಆ ಕಾರಣಕ್ಕೇ ನಾಲ್ಕು ತಿಂಗಳ ಹಿಂದೆ ತಾವು ಅಷ್ಟು ದೊಡ್ಡ ಗೆಲುವು ಸಾಧಿಸಿದ್ದು ಎಂಬ ಭ್ರಮೆಯಲ್ಲಿ ಇದ್ದಾರೆ. ಆದರೆ ವಾಸ್ತವವಾಗಿ ನಮ್ಮ ದೇಶದಲ್ಲಿ ಜಾತ್ಯತೀತರು ಬಹುಸಂಖ್ಯಾತರು, ಕೋಮುವಾದಿಗಳು ಅಲ್ಪಸಂಖ್ಯಾತರು ಎಂಬುದನ್ನು ಅವರಿನ್ನೂ ಅರಿತಿಲ್ಲ.

ಅಲ್ಪಸಂಖ್ಯಾತರ ವಿರುದ್ಧದ ಬಿಜೆಪಿಗಳ ಬೊಬ್ಬೆಗೂ ಜನರ ಅಭಿವೃದ್ಧಿಗೂ ಯಾವ ಸಂಬಂಧವೂ ಇಲ್ಲ; ಬದಲಾಗಿ ತಮ್ಮ ಲೋಪದೋಷಗಳಲ್ಲಿ ಮುಚ್ಚಿಕೊಳ್ಳಲು ಚೆಡ್ಡಿಗಳು ಮತ್ತೊಮ್ಮೆ ಸಮುದಾಯಗಳ ನಡುವೆ ಬಿರುಕನ್ನು ಮೂಡಿಸಿ, ಗಲಭೆಗಳನ್ನು ಸೃಷ್ಟಿಸಿ ಗೆಲ್ಲಲು ಹವಣಿಸುತ್ತಿದ್ದಾರೆ; ಯೋಗಿ ಆದಿತ್ಯನಾಥ ಮತ್ತು ಸಂಗಡಿಗರ ಕೋಮು ಕಿತಾಪತಿಯ ಬಗ್ಗೆ ಮೋದಿ ತುಟಿಪಿಟಕ್ ಎನ್ನದೆ ಮನಮೋಹನ್ ಸಿಂಗ್ ತರಹ 'ಮೌನಿ'ಯಾಗಿದ್ದದ್ದು ಇದಕ್ಕೆ ಮೋದಿಯ ಸಮ್ಮತಿಯೂ ಇದೆ ಎಂದೂ ಉತ್ತರ ಪ್ರದೇಶದ ಮತದಾರರಿಗೆ ಅರ್ಥವಾಯಿತು. ಅದಕ್ಕೆ ಅವರು ಮೋದಿ ಮತ್ತಾತನ ಬಿಜೆಪಿಯ ಮುಖಕ್ಕೆ ಕಪಾಳಮೋಕ್ಷ ಮಾಡಿದ್ದಾರೆ.

ನಿನ್ನೆ ಫಲಿತಾಂಶಗಳು ಹೊರಬಿದ್ದ ನಂತರ ಬಿಜೆಪಿಯ ವಕ್ತಾರ ರವೀಂದ್ರ ಪ್ರತಾಪ್ ರೂಡಿ "ಇದು ವಿಧಾನಸಭಾ ಚುನಾವಣೆಗಳು. ಇದಕ್ಕೂ ದೆಹಲಿ ಸರ್ಕಾರಕ್ಕೂ ಸಂಬಂಧವಿಲ್ಲ" ಎಂದಿದ್ದಾನೆ.

ಹಾಗಾದರೆ ನಾವು ಈ ಫಲಿತಾಂಶಗಳನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು? ಅಖಿಲೇಶ್ ಯಾದವ್ ನೇತೃತ್ವದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದೆ ನಿಜ. ಆತನೂ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕೊಟ್ಟ ಹಲವಾರು ಭರವಸೆಗಳನ್ನು ಈಡೇರಿಸಿಲ್ಲ ಎಂಬುದೂ ಅಷ್ಟೇ ಸತ್ಯ. ಆದರೂ ಆತನ ಪಕ್ಷವನ್ನೇ ಜನ ಬೆಂಬಲಿಸು ತ್ತಾರೆಂದರೆ ಅದಕ್ಕೂ ಒಂದು ತರ್ಕ ಇದ್ದೇ ಇರುತ್ತದೆ. ಅದನ್ನು ನಾವು ಹೀಗೆ ಅರ್ಥಮಾಡಿಕೊಳ್ಳಬಹುದು:

ಹೌದು, ನಮ್ಮ ದೇಶ ಅಭಿವೃದ್ಧಿ ಆಗಬೇಕು, ನಮ್ಮ ಯುವಜನತೆಗೆ ಉದ್ಯೋಗಗಳು ಸಿಗಬೇಕು, ಶಾಲೆಗಳಲ್ಲಿ ಮತ್ತು ಹಳ್ಳಿಗಳಲ್ಲಿ ಶೌಚಾಲಯಗಳು ಇರಬೇಕು... ಆದರೆ ಅದನ್ನೆಲ್ಲ ಕೊಡುತ್ತೇನೆಂದು ಹೇಳಿ ಗೆದ್ದ ನಂತರ ತೆಪ್ಪಗಿರುವವರ ಬದಲಾಗಿ ಅಭಿವೃದ್ಧಿ, ಉದ್ಯೋಗ, ಶೌಚಾಲಯಗಳನ್ನು ಕೊಡದಿದ್ದರೂ, ಕೋಮುಕಿತಾಪತಿ ಮಾಡದೆ. ಜನರನ್ನು ಒಂದಿಷ್ಟು ನೆಮ್ಮದಿಯಿಂದ, ಸಹಬಾಳ್ವೆಯಿಂದ ಬದುಕಲು ಬಿಡುವವರೇ ಅದೆಷ್ಟೋ ವಾಸಿ, ಅಲ್ಲವೇ?

ಇನ್ನೊಂದು ಅಂಶವನ್ನು ಗಮನಿಸಬೇಕು. ಅದೇನೆಂದರೆ ಬಿಹಾರದಲ್ಲಿ ನಿತೀಶ್ ಮತ್ತು ಲಲ್ಲೂ ಜೊತೆಗೂಡಿದ್ದರಿಂದ ಮತ್ತು ಉತ್ತರ ಪ್ರದೇಶದಲ್ಲಿ ಮಾಯಾವತಿಯ ಬಿಎಸ್‌ಪಿ ಸ್ಪರ್ಧಿಸದಿದ್ದರಿಂದ ಜಾತ್ಯತೀತ ಮತಗಳು ವಿಭಜನೆಗೊಳ್ಳಲಿಲ್ಲ. ಇದರ ಅರ್ಥ ಇಷ್ಟೇ: ಜಾತ್ಯತೀತ ಶಕ್ತಿಗಳು ಒಂದಾದಾಗ ಕೋಮುವಾದಿ ಬಿಜೆಪಿಗೆ ಸೋಲು ಕಟ್ಟಿಟ್ಟ ಬುತ್ತಿ.

ಇದನ್ನು ಸದ್ಯದಲ್ಲೇ ಚುನಾವಣೆಗೆ ಹೋಗುತ್ತಿರುವ ಮಹಾರಾಷ್ಟ್ರ ಮತ್ತು ಹರಿಯಾಣದ ಜಾತ್ಯತೀತ ಪಕ್ಷಗಳು ಗಮನದಲ್ಲಿಟ್ಟುಕೊಳ್ಳಲಿ. ■

ಈ ಪೆದ್ದಿಯರಿಗೆ ಬುದ್ಧಿ ಬರುವುದೆಂದು?

...ನ್ನ ಪ್ರಕಾರ ಮಕ್ಕಳನ್ನು ಹೊತ್ತು, ಹೆತ್ತು ಇಡೀ ...ಬವನ್ನು ಸಂಭಾಳಿಸುವ ಮಹಿಳೆ ಮೂಲಭೂತ ...ಜೀವಪರಳು. ಆಕೆಗೆ ಮಾತ್ರ ಜನ್ಮ ಕೊಡುವ ಶಕ್ತಿ ...ವುದರಿಂದ ಆಕೆ ಎಂದೂ ಇತರರ ನಾಶಕ್ಕೆ ಸಮ್ಮತಿಸ ... ತನ್ನ ಬದುಕಿನುದ್ದಕ್ಕೂ ಹಲವಾರು ಸ್ತರಗಳಲ್ಲಿ ...ರು ತರಹದ ಅನ್ಯಾಯಗಳಿಗೆ ತುತ್ತಾಗುವ ಮಹಿಳೆ ...ಸ್ವಂತ ಅನುಭವದಿಂದಾಗಿಯೇ ಸಮಾನತೆ ಮತ್ತು ...ದ ಪರ ನಿಲ್ಲುವವಳು. ಈ ಎಲ್ಲ ಕಾರಣಗಳಿಂದಾ ... ಮಹಿಳೆಯರಿಗೆ ಗೌರವ ಮತ್ತು ಸ್ಥಾನಮಾನ ...ವವರೊಂದಿಗೆ ಗುರುತಿಸಿಕೊಳ್ಳಲು ಆಶಿಸುವವಳು ... ನನ್ನ ಈ ನಂಬಿಕೆಯಿಂದಾಗಿಯೇ ಜೀವ ವಿರೋಧಿ ... ಆರೆಸ್ಸೆಸ್ ಮತ್ತು ಬಿಜೆಪಿಯನ್ನು ಬೆಂಬಲಿಸುವ ...ಳೆಯರು ಎಂದೂ ನನಗೆ ಅರ್ಥವೇ ಆಗಿಲ್ಲ. ...ನಿಯಾ ಗಾಂಧಿ ಪ್ರಧಾನಿ ಆದರೆ ತಾನು ತಲೆ ...ಸಿಕೊಂಡು ವಿಧವೆ ತರಹ ಜೀವಿಸುತ್ತೇನೆ ಎಂದು ... ಸ್ವರಾಜ್ ಘೋಷಿಸಿದಾಗ ಈಕೆ ನಿಜವಾಗಿಯೋ ... ಮಹಿಳೆಯೇ ಎಂದು ನನಗೆ ಅಚ್ಚರಿಯಾಗಿತ್ತು. ...ತದಲ್ಲಿ ಅತ್ಯಾಚಾರಗಳು ನಡೆಯುವುದಿಲ್ಲ ಬದಲಾಗಿ ...ಯಾದಲ್ಲಿ ನಡೆಯುತ್ತದೆ' ಎಂದು ಆರೆಸ್ಸೆಸ್ ಮುಖ್ಯಸ್ಥ ...ನ್ ಭಾಗವತ್ ಹೇಳಿದಾಗ ನಿರ್ಮಲಾ ಸೀತಾರಾಮ್ ...ವ ವಿದ್ಯಾವಂತರು ಇಂತಹ ನಿಲುವನ್ನು ಹೇಗೆ ...ಕೊಳ್ಳುತ್ತಾರೆಂದು ಯೋಚಿಸಿದ್ದೆ. ಇಷ್ಟು ಮನುವಾದದ ... ಮಹಿಳೆಯರು ಮನೆಯ ನಾಲ್ಕು ಗೋಡೆಗಳ ... ಇರಬೇಕು ಎನ್ನುವ ಚೆಡ್ಡಿಗಳ ನಡುವೆ ಶೋಭಾ ...ಜೆ ತರಹದವರು ಯಾಕಿದ್ದಾರೆ ಎನಿಸುತ್ತಿತ್ತು. ...ನಲ್ಲಿ ಮಹಿಳೆಯರಿಗೆ ಸ್ಥಾನಮಾನವಿರಲಿ, ಪ್ರವೇಶವೂ ...ಸಿಗದಿರುವಾಗ ಅದರ ಆದರ್ಶ ಮತ್ತು ಆದೇಶಗಳ ... ನಡೆಯುವ ಬಿಜೆಪಿಯಲ್ಲಿ ಯಾವ ಸಂವೇದನಾ ... ಮಹಿಳೆಯರು ಇರುವುದಕ್ಕಾಗುತ್ತದೆ ಎಂದೆನಿಸುತ್ತಿತ್ತು.

ಈ ನನ್ನ ಪ್ರಶ್ನೆಗಳಿಗೆ ಈ ವಾರ ಒಂದು ಸ್ಪಷ್ಟವಾದ ಉತ್ತರ ಸಿಕ್ಕಿದೆ. ಅದೇನೆಂದರೆ ಆರೆಸ್ಸೆಸ್ ಅನ್ನು ಬೆಂಬಲಿಸುವ, ಬಿಜೆಪಿಯಲ್ಲಿರುವ ಮಹಿಳೆಯರು ಸಂವೇದನಾರಹಿತ ಪೆದ್ದಿಯರು ಎಂಬುದು!

ಅದಕ್ಕೆ ಸಾಕ್ಷಿ ಬಿಜೆಪಿಯ ಮೂವರು ಮಹಿಳಾ ಸಂಸದೆಯರು ಇತ್ತೀಚೆಗೆ ವ್ಯಕ್ತಪಡಿಸಿರುವ ಅಭಿಪ್ರಾಯಗಳು. ಮೊದಲನೆಯದು ಉಮಾ ಭಾರತಿ ಎಂಬ ಸಚಿವೆಗೆ ಸಂಬಂಧಿಸಿದ್ದು. ಈಕೆ ಕಳೆದವಾರ ಡೆಹರಾಡೂನ್‌ನಲ್ಲಿರುವ ಹಿಮಾಲಯನ್ ಇನ್‌ಸ್ಟಿಟ್ಯೂಟ್ ಆಫ್ ಗ್ಲೇಸಿಯಾಲ್ ಅಂಡ್ ಫಾರೆಸ್ಟ್ ರಿಸರ್ಚ್ ಸಂಸ್ಥೆಗೆ ಭೇಟಿ ಕೊಟ್ಟಿದ್ದಳು. ಅಲ್ಲಿ ವಿಜ್ಞಾನಿಗಳು ಹೋದ ವರ್ಷ ಕೇದಾರ್‌ನಾಥ್‌ನಲ್ಲಿ ಸಂಭವಿಸಿದ ಅತಿವೃಷ್ಟಿಗೆ ವೈಜ್ಞಾನಿಕ ಕಾರಣಗಳನ್ನು ಚರ್ಚಿಸುತ್ತಿದ್ದರು. ಆಗ ಈ ಉಮಾ ಭಾರತಿ ಎಂಬ ಮಹಿಳೆ ಹೀಗೆ ಹೇಳಿದ್ದಾಳೆ: "1882ರ ತನಕ ಕೇದಾರ್‌ನಾಥ್ ಸುತ್ತಮುತ್ತ ಯಾವ ಯಾತ್ರಿಕನೂ ಮಲ ವಿಸರ್ಜಿಸುತ್ತಿರಲಿಲ್ಲ. ಆದರೆ ಆನಂತರ ಇಲ್ಲಿ ವ್ಯಾಪಾರ ಮಾಡಲು ಬಂದ ನಾಸ್ತಿಕರು ಮಲ ವಿಸರ್ಜನೆ ಮಾಡಲಾರಂಭಿಸಿದರು. ಆ ಮೂಲಕ ಈ ಪ್ರದೇಶವನ್ನು ಮಲಿನಗೊಳಿಸಿದರು. ಅದರಿಂದಾಗಿ ಕೋಪಗೊಂಡ ಪ್ರಕೃತಿ ಹೋದವರ್ಷ ಅತಿವೃಷ್ಟಿ ಸುರಿಸಿತು." ಈಕೆಯನ್ನು ಪೆದ್ದಿ ಅನ್ನದೆ ಬೇರೆ ಯಾವ ದಾರಿ ಇದೆ ಹೇಳಿ?

ಎರಡನೆಯದ್ದು ಹೇಮಾ ಮಾಲಿನಿ ಎಂಬ ಚಿತ್ರ ನಟಿಗೆ ಸಂಬಂಧಿಸಿದ್ದು. ಧರ್ಮೇಂದ್ರ ಎಂಬ ವಿವಾಹಿತನನ್ನು ಅಕ್ರಮವಾಗಿ ಮದುವೆಯಾಗಲು ನೆಪಮಾತ್ರಕ್ಕೆ ಇಸ್ಲಾಮ್ ಧರ್ಮಕ್ಕೆ ಮತಾಂತರಗೊಂಡಿದ್ದ ಈ ನಟಿ ಈಗ ಅದೇ ಧರ್ಮದ ಜನರನ್ನು ದ್ವೇಷಿಸುವ ಬಿಜೆಪಿಯ ಸಂಸದೆ. ಅದಿರಲಿ, ಮೊನ್ನೆ ಈಕೆಯ ಮತಕ್ಷೇತ್ರ ಬೃಂದಾವನದಲ್ಲಿ ಈಕೆ ಒಂದು ಹೇಳಿಕೆಯನ್ನು ನೀಡಿದ್ದಾಳೆ.

ನೆನಪಿಡಿ, 'ಹಿಂದೂ ಧರ್ಮ'ದ 'ಮೇಲುಜಾತಿ'ಗಳಲ್ಲಿ ವಿಧವೆಯರಿಗೆ ಸ್ಥಾನಮಾನ, ಮರ್ಯಾದೆ ಯಾವುದೂ ಇರುವುದಿಲ್ಲ. ಬದಲಾಗಿ ವಿಧವೆಯರನ್ನು ಯಾವ ಉಪಯೋಗಕ್ಕೂ ಬಾರದ ಹೊರೆಯಾಗಿ ಪರಿಗಣಿಸ ಲಾಗುತ್ತದೆ. ಅಮಾನವೀಯ ಕುಟುಂಬಗಳು ಅಂಥವರನ್ನು ಮನೆಯಿಂದ ಹೊರಗೆ ದಬ್ಬುತ್ತವೆ. ಆಗ ವಿಧಿ ಇಲ್ಲದೆ ವಿಧವೆಯರು ಬೃಂದಾವನಕ್ಕೆ ಹೋಗಿ, ರಸ್ತೆಬದಿಯಲ್ಲಿ ಬದುಕುತ್ತಾ, ದೇವಸ್ಥಾನಗಳ ಮುಂದೆ ಭಿಕ್ಷೆ ಬೇಡುತ್ತಾ ಸಾವಿಗಾಗಿ ಕಾಯುತ್ತಿರುತ್ತಾರೆ. ಅಂತಹ ಸಾವಿರಾರು ವಿಧವೆಯರು ಇಂದಿಗೂ ಬೃಂದಾವನದಲ್ಲಿದ್ದಾರೆ. ಅವರ ದಯನೀಯ ಸ್ಥಿತಿಯನ್ನು ಕಂಡು ಸುಪ್ರೀಂಕೋರ್ಟ್ ಅವರಿಗೆಂದು ಆಶ್ರಮಗಳನ್ನು ಸ್ಥಾಪಿಸಲು ಆದೇಶಿಸಿತ್ತು. ಅಂತಹ ಒಂದು ಆಶ್ರಮದಲ್ಲಿ ಅಸಹಾಯಕ ವಿಧವೆಯರಿಗೆ ಸೂಕ್ತ ಸೌಲಭ್ಯಗಳಿವೆಯೇ ಎಂದು ನೋಡಲು ಹೇಮಾ ಮಾಲಿನಿ ಎಂಬ ಈ ಪೆದ್ದು ಹೆಂಗಸು ಮೊನ್ನೆ ಹೋಗಿತ್ತು.

ಆಶ್ರಮವನ್ನು ಪರಿಶೀಲಿಸಿದ ನಂತರ ಈಕೆ ಕೊಟ್ಟಿರುವ ಹೇಳಿಕೆ ಎಂತಹದ್ದು ಗೊತ್ತೆ? "ಬೃಂದಾವನದಲ್ಲಿರುವ ವಿಧವೆಯರ ಹೆಸರಲ್ಲಿ ಬ್ಯಾಂಕ್ ಖಾತೆಗಳಿವೆ. ಅವರಿಗೆ ಸಾಕಷ್ಟು ಆದಾಯವೂ ಇದೆ. ಅವರಿಗೆ ಚೆನ್ನಾಗಿರುವ ಸೌಲಭ್ಯಗಳೂ ಇವೆ. ಆದರೂ ಇವರೆಲ್ಲ ಚಟಕ್ಕೆ ಭಿಕ್ಷೆ ಬೇಡುತ್ತಾರೆ."


ಅಷ್ಟು ಸಾಲದೆಂಬಂತೆ ಈ ನಟನಾಮಣಿಯು "ಬೃಂದಾವನದಲ್ಲಿ 40,000 ವಿಧವೆಯರಿದ್ದಾರೆ. ಇದರಿಂದಾಗಿ ಈ ನಗರದಲ್ಲಿ ವಾಸಿಸಲು ಜಾಗವೇ ಇಲ್ಲದಂತಾಗಿದೆ. ಇವರಲ್ಲಿ ಹೆಚ್ಚಿನವರು ಬಂಗಾಳದಿಂದ ಬಂದಿದ್ದಾರೆ. ಬಿಹಾರದಿಂದಲೂ ಬಂದವರಿದ್ದಾರೆ. ಅವರ ರಾಜ್ಯಗಳಲ್ಲೂ ಚೆನ್ನಾಗಿರುವ ದೇವಸ್ಥಾನಗಳಿವೆ. ಇವರಿಗೆಲ್ಲ ಅಲ್ಲೇ ಇರುವುದಕ್ಕೆ ಏನು ಧಾಡಿ? ಅವರು ಯಾಕೆ ಬೃಂದಾವನಕ್ಕೆ ಬರಬೇಕು?" ಎಂದೂ ಪ್ರಶ್ನಿಸಿದ್ದಾಳೆ.

ಇದು ಅಸಹಾಯಕ ವಿಧವೆಯರ ಬಗ್ಗೆ ಹೇಮಾ ಮಾಲಿನಿ ತೋರಿರುವ ಅಸೂಕ್ಷ್ಮತೆ ಮಾತ್ರವಲ್ಲ, ಜೊತೆಗೆ 'ಹೊರಗಿನವರ' ವಿರುದ್ಧ 'ಸ್ಥಳೀಯರನ್ನು' ಎತ್ತಿಕಟ್ಟುವ ಕಿರಾತಕ ಬುದ್ಧಿಯನ್ನೂ ಪ್ರದರ್ಶಿಸಿದ್ದಾಳೆ. ಈಕೆಯನ್ನು ಯಾವ ನಿಟ್ಟಿನಲ್ಲಿ ಮಹಿಳೆ ಎಂದು ಭಾವಿಸಬೇಕು?

ಮೂರನೆಯದು ಮನೇಕಾ ಗಾಂಧಿಗೆ ಸಂಬಂಧಿಸಿದ್ದು. ಪ್ರಾಣಿಗಳ ಬಗ್ಗೆ ಮತ್ತು ಪರಿಸರದ ಬಗ್ಗೆ ಅಪಾರ ಕಾಳಜಿ ವ್ಯಕ್ತಪಡಿಸುವ ಮನೇಕಾ ಮನುಷ್ಯರ ಬದುಕಿನ ಬಗ್ಗೆ ಮಾತ್ರ ಕಠೋರ ಅಭಿಪ್ರಾಯವನ್ನು ಹೊಂದಿರುವಾಕೆ. ಈ ಕಾರಣಕ್ಕೋ ಏನೋ ಆಕೆಯ ಏಕೈಕ ಪುತ್ರ ವರುಣ್ ಕಡಿ, ಬಡಿ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿದ್ದಾನೆ. ಇತ್ತೀಚೆಗೆ ಉತ್ತರ ಪ್ರದೇಶದ ಉಪಚುನಾವಣೆಯ ಪ್ರಚಾರದಲ್ಲಿ ತೊಡಗಿದ್ದಾಗ "ಗೋಮಾಂಸವನ್ನು ಅಕ್ರಮವಾಗಿ ರಫ್ತು ಮಾಡಲಾಗುತ್ತಿದೆಯಲ್ಲದೆ ಅದರಿಂದ ಬಂದ ಹಣವನ್ನು ಭಯೋತ್ಪಾದನೆಗೆ ಬಳಸಲಾಗುತ್ತಿದೆ" ಎಂದು ಮನೇಕಾ ಹೇಳಿದ್ದಳು. ಆ ಮೂಲಕ ಮುಸಲ್ಮಾನರು ಗೋಮಾಂಸ ತಿನ್ನುತ್ತಾರಲ್ಲದೆ ಭಯೋತ್ಪಾದನೆಯಲ್ಲೂ ತೊಡಗಿದ್ದಾರೆ ಎಂಬ ಕುತಂತ್ರವನ್ನು ಹಬ್ಬಿಸಲು ಯತ್ನಿಸಿದ್ದಳು. ಆದರೆ ವಾಸ್ತವವಾಗಿ ನಮ್ಮ ದೇಶದಲ್ಲಿ ದನದ ಮಾಂಸ ತಿನ್ನುವವರು ಹೆಚ್ಚಾಗಿ ದಲಿತರು ಮತ್ತು ಕ್ರಿಶ್ಚಿಯನ್ನರು. ಈಗ 'ಮೇಲುಜಾತಿ' ಯವರೂ ತಿನ್ನಲಾರಂಭಿಸಿದ್ದಾರೆ ಎಂಬುದು ಬೇರೆ ಮಾತು.

ಬಿಜೆಪಿಯ ಈ ಪೆದ್ದು ಮಹಿಳೆಯರಿಗೆ ಬುದ್ಧಿ ಬರುವುದೆಂದು? ಅವರು ಸೂಕ್ಷ್ಮ ಸಂವೇದನೆಯನ್ನು ಬೆಳೆಸಿಕೊಳ್ಳುವುದು ಎಂದು? ■

ಪೀಠತ್ಯಾಗ ಪರಿತಾಪದಲ್ಲಿ 'ರಂಗೀಲಾ' ರಾಘವ ಸ್ವಾಮಿ



ಹವ್ಯಕರ ಪ್ರತಿಷ್ಠಿತ ರಾಮಚಂದ್ರಾಪುರ ಮಠದ ನಡತೆಗೆಟ್ಟ ಸ್ವಾಮಿ ರಾಘು ಪೀಠತ್ಯಾಗದ ಪೀಕಲಾಟಕ್ಕೇನಾದರೂ ಬಿದ್ದಿದ್ದಾನಾ? ಅಧಿಕಾರಸ್ಥರು-ಪತ್ರಕರ್ತರು ಮತ್ತು ಪೊಲೀಸರ ಹಿತೈಷಿ ಪಡೆ ಅದೆಷ್ಟೇ ಲಾಬಿ ಮಾಡಿದರೂ ಬಚಾವಾಗಲಾರೆನೆಂದು ಭಯಗೊಂಡಿದ್ದಾನಾ? ಇಂಥದೊಂದು ಚರ್ಚೆ ಕರಾವಳಿ-ಮಲೆನಾಡಿನ ಹವ್ಯಕರ ಪಡಸಾಲೆಯಲ್ಲಿ ರಸಗವಳದಂತಾಗಿದೆ. ಸಿಐಡಿ ವಿಚಾರಣೆಯೇನಾದರೂ ಪ್ರಾಮಾಣಿಕವಾಗಿ ನಡೆದರೆ ರಾಘುಶ್ರೀ ಕಾವಿ ಕಳಚಿ ಸಂಸಾರಿಯಾಗೋದು ಅನಿವಾರ್ಯ ಎಂಬ ತೀರ್ಮಾನಕ್ಕೆ ಮಠ ಪರಿವಾರಿಗಳು ಮತ್ತವರ ಬೆನ್ನಿಗಿರುವ ದೋ ನಂಬರ್ ದುಡ್ಡಿನ ಪಾರುಪತ್ಯಗಾರರು ಬಂದುಬಿಟ್ಟಿದ್ದಾರೆ.

ಕಂಗಾಲಾಗಿರುವ ರಾಘು ಸಹ ಸಿಐಡಿಗಳು ಈ ನೆಲದ ಕಾನೂನಿಗೆ ನಿಷ್ಠರಾಗಿ ತನಗೆ ನೀರು ಕುಡಿಸುವುದು ಖಾತ್ರಿಯಾದರೆ ತಕ್ಷಣ ಏಕಾಂತ ತಪಸ್ಸಿನ ನೆಪದಿಂದ ಹಿಮಾಲಯಕ್ಕೆ ಹಾರುವ ಸ್ಕೆಚ್ ಹೆಣೆದಿದ್ದಾನೆ. ಅಲ್ಲಿಂದಲೇ ಒಂದು ಶುಭ ಸೂರ್ಯೋದಯದಂದು ಹವ್ಯಕ ಸಮುದಾಯಕ್ಕೆ "ನೀವು ಬೇರೆ ಸ್ವಾಮಿಯನ್ನು ಹುಡುಕಿಕೊಳ್ಳಿ..." ಎಂಬ ಸಂದೇಶ ರವಾನಿಸುವ ದೂ(ದು)ರಾ ಲೋಚನೆ ಈ ಸೋಗಲಾಡಿ ಸಂತನದು. ಈ ಸರ್ವಸಂಘ ಸಹವಾಸಿ ಗುರುವನ್ನು ಮುಂದಿಟ್ಟುಕೊಂಡು ದಗಲುಬಾಜಿ ದಂಧೆಯ ಗುರಿ ಹಿಂದಿಟ್ಟುಕೊಂಡಿರುವ ಮಠ ನಿಷ್ಠರ ಈ ಗುಸುಗುಸು ಈಗ ಗೋಕರ್ಣ ಮಂಡಲ ದಾಟಿ ಶಿವಮೊಗ್ಗ ಜಿಲ್ಲೆಯ ರಾಮಚಂದ್ರಾಪುರ ಮಠದ ಮೂಲಕ ಬೆಂಗಳೂರಿನ ಶಾಖಾ ಮಠದವರೆಗೆ ತಲುಪಿಬಿಟ್ಟಿದೆ!

ಆರೆಸ್ಸೆಸ್ ಮತ್ತು ಪೀಠೋಚ್ಚಾಟನೆ!

ರಾಮಕಥಾದ ಮೇನಿಯಾ ಹಿಡಿಸಿ ಮುಗ್ಧ ಹೈಗರ ಹೆಂಗಸರನ್ನು ಉನ್ಮಾದದಿಂದ ಕುಣಿಸುವ ರಾಘುಶ್ರೀಯ ರತಿಲೀಲೆ ಮತ್ತು ಅಯ್ದು ಮುತ್ತೈದೆಯರೊಂದಿಗಿನ ಬಹಿರಂಗ ರಹಸ್ಯ ಸಂಬಂಧ-ಸಲುಗೆಯಿಂದ ರೋಸತ್ತುಹೋಗಿದ್ದ ಬ್ರಾಹ್ಮಣ ಸಮುದಾಯ ಎರಡಾಗಿ ಒಡೆದು ಅದ್ಯಾವುದೋ ಕಾಲವಾಗಿತ್ತು. ಇದಕ್ಕೊಂದು ತಾರ್ಕಿಕ-ಸ್ಫೋಟಕ ಅಂತ್ಯ ಬಂದಿದ್ದು ಮಾತ್ರ ರಾಘುನ ಕಾಮಕಥಾದ ಬಲಿಪಶು ಪ್ರೇಮಲತಾ ಶಾಸ್ತ್ರಿ ಫ್ಯಾಮಿಲಿ ಒಟ್ಟಾಗಿಯೇ ತಿರುಗಿ ಬಿದ್ದಾಗ. ಎರಡು ವರ್ಷದಿಂದ ಪ್ರೇಮಲತಾರ ಭಾವುಕತೆ, ಪೀಠ ಭಯ, ಗುರುನಿಷ್ಠೆ ಹಾಗು ಸ್ತ್ರೀಯರ ಮಂಕುಗೊಳಿಸುವ 'ರಾಮ ಪ್ರಸಾದ' ಬಳಸಿಕೊಂಡು ಅತ್ಯಾಚಾರ ಮಾಡುತ್ತ ಬಂದ ರಾಘುಶ್ರೀನ ಕಪಟ ಸಂನ್ಯಾಸತ್ವಕ್ಕೆ ಇತಿಶ್ರೀ ಹಾಡಲು ಕಳೆದ ಜೂನ್‌ನಲ್ಲೇ ಸಿದ್ಧವಾಗಿತ್ತು; ರಾಘುನ ಕಾವಿ ಕಳಚಿ ಮಠದಿಂದ ಹೊರದಬ್ಬುವ ಹಠಕ್ಕೆ ಬಿದ್ದಿತ್ತು!

ಆಳುವ ಖೂಳರು, ಮಾಧ್ಯಮ ಮುತ್ಸಾಳರು, ಕಪ್ಪು ಹಣದ ಕಳ್ಳರು ಮತ್ತು ಮಠಕ್ಕೆ ನಿಷ್ಠರಾದ ಬ್ರಾಹ್ಮಣರ ಒಂದು ವರ್ಗದ ಅಮಾಯಕರ ಗ್ಯಾಂಗ್ ಕಟ್ಟಿಕೊಂಡಿದ್ದ ರಾಘುವ ಪೀಠದಿಂದ ಉಚ್ಚಾಟಿಸುವುದು ಅಷ್ಟು ಸುಲಭವಲ್ಲ ಎಂಬ ವಾಸ್ತವದ ಅರಿವೂ ಆ ಕುಟುಂಬಕ್ಕಿತ್ತು. ಹೀಗಾಗಿ ಮಠ ಪೀಠಗಳ ಮೇಲೆಲ್ಲ ಅಗೋಚರ ಪ್ರಭಾವ-ಹಿಡಿತ ಹೊಂದಿರುವ ಆರೆಸ್ಸೆಸ್ ಹೈಕಮಾಂಡಿನ ಮೊರೆಹೋಯ್ತು ಶಾಸ್ತ್ರಿ ಪರಿವಾರ. ಶಾಸ್ತ್ರಿ ಕುಟುಂಬದ ಹಿರಿಯಣ್ಣ ಚಾ.ಮಾ. ಕೃಷ್ಣಶಾಸ್ತ್ರಿ ದಿಲ್ಲಿ ನಾಗಪುರ ಸಂಘ ಸರದಾರರ ಅತ್ಯಾಪ್ತರು.

ಈತ ತನ್ನ ವಂಶದ ಗೃಹಿಣಿಗೆ ರಾಘು ಶ್ರೀ ಕಾವಿ ಹೊದ್ದುಕೊಂಡೇ 'ಪತಿತೆ' ಮಾಡಿದ್ದು ಆರೆಸ್ಸೆಸ್ ಹೈಕಮಾಂಡ್‌ಗೆ ಮನದಟ್ಟು ಮಾಡಿಕೊಟ್ಟರು. ಆರೆಸ್ಸೆಸ್‌ನ 'ಸಂಸ್ಕೃತ ಭಾರತಿ' ವಿಭಾಗದ ಅಖಿಲ ಭಾರತ ಮಟ್ಟದ ಸಂಯೋಜಕ ನಾತೆಯಿಂದ ಕೃಷ್ಣಶಾಸ್ತ್ರಿ ಸಂಘ ಪರಿವಾರದ ಮಹಾಮಹಿಮರಿಗೆ ರಾಘುಶ್ರೀ 'ಪೀಠ ಭ್ರಷ್ಟ'ನೆಂಬುದನ್ನು ಎಳೆಎಳೆಯಾಗಿ ವಿವರಿಸಿದರು.

ಇಂಥ ದಾರಿತಪ್ಪಿದ ಪೀಠಾಧಿಪತಿಯನ್ನು ಮಠದಿಂದ ಹೊರಹಾಕದಿದ್ದರೆ ಹಿಂದೂ ಸಮಾಜದ 'ಪವಿತ್ರ ಸ್ಥಾನದಲ್ಲಿರುವ ಬ್ರಾಹ್ಮಣ ಜಾತಿಗೆ ಕಳಂಕ ಖಂಡಿತ, ಎಂಬ ತೀರ್ಮಾನಕ್ಕೆ ಸಂಘ ಸರದಾರರು ಬಂದರು. ಕೃಷ್ಣಶಾಸ್ತ್ರಿ ಪ್ರೇಮಲತಾ, ಆಕೆಯ ಗಂಡ ದಿವಾಕರ್ ಜತೆಗೆ ಆರೆಸ್ಸೆಸ್, ಹೈಕಮಾಂಡಲ್ಲಿ ಮಹತ್ವದ ಸ್ಥಾನ-ಮಾನ ಪಡೆದಿರುವ ಶಿವಮೊಗ್ಗ ಮೂಲದ ದತ್ತಾತ್ರೇಯ ಹೊಸಬಾಳೆ ರಾಘುನ ಚಾತುರ್ಮಾಸ ನಡೆದಿದ್ದ ಹೊನ್ನಾವರದ ಕೆಕ್ಕಾರ ಶಾಖಾ ಮಠಕ್ಕೇ ಒಂದು ದಿನ ಬಂದಿಳಿದರು! ಮೊದಮೊದಲು ಇವರೊಂದಿಗೆ ಮಾತಾಡಲು ನಿರಾಕರಿಸಿದ ರಾಘುಸ್ವಾಮಿ ನಂತರ ಪ್ರೇಮಲತಾ ಅತ್ಯಾಚಾರ ಕೇಸ್ ಹಾಕ್ತಾರೆಂಬ ಸಂದೇಶ ಸಿಕ್ಕಿದಾಗ ಕಕ್ಕಾಬಿಕ್ಕಿಯಾಗಿ 'ಮಾತುಕತೆ'ಗೆ ಕುಳಿತುಕೊಳ್ಳಬೇಕಾಯ್ತು.

ಆರೆಸ್ಸೆಸ್ ಪಡೆ ರಾಘು ಮುಂದಿಟ್ಟ ಪ್ರಸ್ತಾಪ ಒಂದೇ. "ನೀನು ಅಮಾಯಕಿ-ಅಸಹಾಯಕಿ ಗೃಹಿಣಿಯನ್ನು ಮೋಸದಿಂದ ಕೂಡಿದ್ದೀಯಾ.... ಇಂಥ ಹಲವು ಹಾದರದ ಕತೆಗಳು ಮಠದ ಪೀಠದ ಸುತ್ತ ಹೆಣೆದುಕೊಂಡಿದೆ... ಹಾಗಾಗಿ ನಿಂಗೆ ಪೀಠದಲ್ಲಿ ಮುಂದುವರಿಯುವ ನೈತಿಕತೆ ಇಲ್ಲ... ತಕ್ಷಣ ಪೀಠ ತ್ಯಾಗ ಮಾಡು..." ಎಂದು ಸಂಘ ಪರಿವಾರ ಒಂಚೂರು ಬೆದರಿಸಿಯೇ ಹೇಳಿದೆ. ಇದಕ್ಕೆ ರಾಘು ಕೇರ್ ಮಾಡಲಿಲ್ಲ, ತನಗೂ ಬಲವಿದೆ ಎಂದು ಉದ್ಧಟವಾಗೇ ಹಾಡಾಡಿದ್ದಾನೆ. ಶಾಸ್ತ್ರಿ ಫ್ಯಾಮಿಲಿ ನಾರಾಯಣ-ದಿವಾಕರ ಮತ್ತು ಪ್ರೇಮಲತಾ ಜತೆಗೆ ತನಗಿರುವ ಹಣಕಾಸಿನ ವ್ಯಾವಹಾರಿಕ ನಂಟಿನ ಅಂಟು ರಾಘವ ಹೊರಚೆಲ್ಲಿದ್ದಾನೆ. ಮಠದಿಂದ ಲೂಟಿ ಮಾಡಿದ್ದಾರೆಂದೂ, ಅವರಿಗೆಲ್ಲ ಬುದ್ಧಿ ಕಲಿಸುವೆನೆಂದೂ ಅಬ್ಬರಿಸಿ ಬೊಬ್ಬಿರಿದಿದ್ದಾನೆ.


ವಿತಂಡವಾದ ಮಂಡಿಸುತ್ತಿದ್ದ ರಾಘವ ಪೀಠತ್ಯಾಗಕ್ಕೆ ಒಪ್ಪುವಂತೆ ಕಾಣಿಸದ ಆರೆಸ್ಸೆಸ್ ಬಳಗ ಪ್ರೇಮಲತಾರಿಂದ ಅತ್ಯಾಚಾರದ ಕೇಸ್ ಹಾಕಿಸಿ ಜೈಲಿಗಟ್ಟಿ ಅಲ್ಲೇ ಕಾವಿ ಕಳಚುವ ವ್ಯವಸ್ಥೆ ಮಾಡಬೇಕಾಗುತ್ತದೆಂದು ಎಚ್ಚರಿಕೆ ಕೊಟ್ಟದೆ! ಆಗ ಕಂಗಾಲಾದ ರಾಘವ ಚಾತುರ್ಮಾಸ್ಯ ಮುಗಿಯುವ ತನಕ ಟೈಮ್ ಕೇಳಿದ್ದಾನೆ. ಚಾತುರ್ಮಾಸ್ಯ ಮುಗಿದ ತಕ್ಷಣವೇ 'ಏಕಾಂತ'ದ ಹೆಸರಿನಲ್ಲಿ ಮಠ ಬಿಟ್ಟು ಹೋಗುತ್ತೇನೆ-ಮತ್ತೆ ಇತ್ತ ತಲೆ ಹಾಕುವುದಿಲ್ಲ ಎಂದು ಮಾತು ಕೊಟ್ಟಿದ್ದಾನೆ. ಇದನ್ನು ನಂಬಿದ ಕೃಷ್ಣಶಾಸ್ತ್ರಿ- ಹೊಸಬಾಳೆಗಳ ಚೆಡ್ಡಿ ಪಡೆ 'ಧರ್ಮ ಯುದ್ಧ' ಗೆದ್ದ ಧರತಿಯಲ್ಲಿ ಕೆಕ್ಕಾರ ರಘೋತ್ತಮ ಮಠದಿಂದ ಹೊರಹೋಗಿದ್ದಾರೆ.

ಡಾನ್ ಕಲ್ಲಡ್ಕ ಭಟ್ ಎಂಟ್ರಿ

ಹಲವು ಲೌಕಿಕ ದೌರ್ಬಲ್ಯದ ರಾಘು ಶಠ ಪೆದ್ದು. ಆದರೆ ಆತನ ಚಿಂತಕ ಚಾವಡಿಯವರಿದ್ದಾರಲ್ಲ, ಅವರೆಲ್ಲ ಮಹಾ ಪ್ರಳಯಾಂತಕರು. ಬೀಸೋ ದೊಣ್ಣೆ ತಪ್ಪಿದರೆ ಸಾವಿರ ವರ್ಷ ಆಯಸ್ಸು ಎಂಬ ತಂತ್ರಗಾರಿಕೆ ಈ ಅವ್ಯವಹಾರಿಗಳದು. ಇವರಿಗೆ ಗುರುವಿಗಿಂತ ಮಠದ ತಿಜೋರಿಯೇ ಮುಖ್ಯ. ರಾಘುನನ್ನು ಬಂಧಿಸಲೆಂದು ಮಠಕ್ಕೆ ಬಂದಿದ್ದ ಪೊಲೀಸರಿಗೆ ಚಾತುರ್ಮಾಸ್ಯದ ... ಶರಣಾಗುವ ಮುಚ್ಚಳಿಕೆ ಕೊಟ್ಟು ಹೇಗೆ ಯಾಮಾರಿಸಿ ದ್ದನೋ ಅದೇ ಪ್ರಕಾರ ಅ... ತಂಡಕ್ಕೂ ಪೀಠತ್ಯಾಗದ ಮಾತುಕೊಟ್ಟು ... ಮಾಡಲಾಗಿತ್ತು. ಇದು ಆತನ ಸಲಹೆ... ಟ್ರಿಕ್ಕು. ಚಾತುರ್ಮಾಸ್ಯ ಮುಗಿ... ಹೆಚ್ಚುಕಮ್ಮಿ ಒಂದೂವರೆ ತಿಂಗಳು ... ಈ ಅವಧಿಯಲ್ಲಿ ರಾಘು ಮತ್ತವನ ಬೆನ್ನಿ... ಅಧಿಕಾರಿ-ಪತ್ರಕರ್ತ-ಪೊಲೀಸ್ ಪಟಾ... ಪೀಠತ್ಯಾಗದಿಂದ ತಪ್ಪಿಸಿಕೊಳ್ಳಲು ಅ... ಹುಡುಕಾಟ ಮಾಡಬಹುದೆಂದು ... ಹಾಕಿತ್ತು.

ಪೀಠತ್ಯಾಗಕ್ಕೆ ಪೀಡಿಸುತ್ತಿರುವ ... ಪರಿವಾರಿಗಳನ್ನು ತಣ್ಣಗಾಗಿಸಲು ಆ... ಮತ್ತೊಂದು ಬಣವನ್ನು ಬುಕ್ ಮ... ಹಿಕಮತ್ತಿಗಿಳಿಯಿತು ರಾಘವ ಬಳಗ. ಪುತ್ತೂರಿನ ... ಮಠ (ಶಾಖಾ ಮಠ)ದ ಅನುಯಾಯಿ ಯೂ, ರ... ಆಪ್ತ ವಲಯದ ಸದಸ್ಯನೂ ಆಗಿರುವ ಕರಾವ... ಡಾನ್ ಕಲ್ಲಡ್ಕ ಪ್ರಭಾಕರ್ ಭಟ್‌ನನ್ನು ರಾಜಿಗೆ ಧ... ಕಳಿಸಲಾಯ್ತು. ಆದರೆ ನಾಗಪುರ ಹೆಡ್ಡಾಫೀಸಿನ ದೊ... ಈ ಕಲ್ಲಡ್ಕನ ಮಾತಿಗೆ ಮೂರು ಬಿಲ್ಲಿ ಕಿಮ್ಮತ್ತು ಕೊ... ಕಲ್ಲಡ್ಕ ರಾಘು ಪರ ವಾದಿಸಿದಂತೆಲ್ಲ ಹೊಸಬಾಳೆ-... ಮಠದ ಕಾಮಕಾಂಡ ಒಂದೊಂದಾಗಿ ಬಿಚ್ಚಿಟ್ಟು... ಬಾಯಿ ಮುಚ್ಚಿಸಿದರು.

ಆಗ ರಾಘು ಗ್ಯಾಂಗ್ ಪೊಲೀಸರನ್ನು ಛ... ಪ್ರೇಮಲತಾ-ದಿವಾಕರ್ ಶಾಸ್ತ್ರಿ ದಂಪತಿಗಳ ಪ... ಹೆಣೆಸಿತು. ಅದಕ್ಕೆ ಪ್ರೇಮಲತಾ-ದಿವಾಕರ್ ಮತ್ತು ... ಜಗ್ಗದಿದ್ದಾಗ ಬ್ಲಾಕ್‌ಮೇಲ್ ಕೇಸು ಹಾಕಲಾಯ್ತು. ಇ... ಕಡೆಯಿಂದ ಶಾಸ್ತ್ರಿ ಕುಟುಂಬ ಒಡೆದು ತಾವೇ ಸುಬ... ತೋರಿಸಿಕೊಳ್ಳಲು ದಿವಾಕರಶಾಸ್ತ್ರಿಯ ನಿಷ್ಪಾಪಿ ಸ... ಶ್ಯಾಮಶಾಸ್ತ್ರಿ ಮೇಲೆ ದಬ್ಬಾಳಿಕೆ ಶುರು ಹಚ್ಚಿಕೆ... ಮಠದ ರೌಡಿ ಪಡೆ. "ಪ್ರೇಮಲತಾಳೇ ಸರಿಯಿ... ನಡತೆಗೆಟ್ಟವಳು... ರಾಘವಶ್ರೀ ಪರಮ ಪವಿತ್ರ ಯತಿ... ಎಂದು ಹೇಳಿಕೆ ಕೊಡಲು ಆತನ ಮೇಲೆ ... ಕಲ್ಲಡ್ಕ ಭಟ್ಟನೇ ಒತ್ತಡ ಹೇರಲಾರಂಭಿಸಿದ. ... ಮೇಲೆ ಫೋನ್‌ಗಳು ಶ್ಯಾಮಶಾಸ್ತ್ರಿಗೆ ಬರಲಾರ... ರಾಘುಗೆ ಶರಣಾಗುವಂತೆ ಕೊನೆಯ ಗಡುವ... ಭಟ್ಟ ಕೊಟ್ಟಾಗ ಮಾನಸಿಕವಾಗಿ ಜರ್ಜರಿತನಾದ ಶ... ನಾಡಕೋವಿಯಿಂದ ಗುಂಡು ಹಾಕಿಕೊಂಡು ... ಪೀಠ-ಮಠಕ್ಕೆ ಆಹುತಿಯಾಗಿ ಹೋದರು! ರಾಘು ... ಮಠದ ಸಾಕಷ್ಟು ಸಗಣಿ ತಿಂದಿದ್ದ ಕಲ್ಲಡ್ಕ... ಬ್ಲಾಕ್‌ಮೇಲ್ ಬಂದಿಲ್ಲದಿದ್ದರೆ ಶ್ಯಾಮಶಾಸ್ತ್ರಿ ಸಾ... ಇರಲಿಲ್ಲ. ಗುರುವಿನ ಗುಲಾಮನಾಗಲು ಕಲ್ಲಡ್ಕ ... ಶ್ಯಾಮನ ಬಲಿ ಕೊಟ್ಟಿದ್ದು ಮಠದ ಅನುಯಾ... ಗೊತ್ತಿರುವ ಗುಟ್ಟು. ಈ ಗುಲ್ಲು ಪುತ್ತೂರು-ಮ... ಏರಿಯಾದಲ್ಲಿ ಜನಜನಿತ!




ಶ್ಯಾಮ್‌ಶಾಸ್ತ್ರಿ



ದಿವಾಕರ್



ಪ್ರೇಮಲತಾ



ಶೃಂಗೇರಿ ಸ್ವಾಮಿ ಭಾರತಿ ತೀರ್ಥ

ಕೆರಳಿಸುವ ಕರಾಮತ್ತು!

ಈ ಬ್ರಾಹ್ಮಣರ ರಾಮಚಂದ್ರಾಪುರ ಮಠಕ್ಕೆ ಸಾವಿರಾರು ವರ್ಷದ ಇತಿಹಾಸ ಇರಬಹುದು. ಭಾರತದ ಸಂವಿಧಾನಕ್ಕೆ ನೂರು ವರ್ಷದ ಚರಿತ್ರೆಯೂ ಇಲ್ಲ ನಿಜ. ಹಾಗಂತ ರಾಮಚಂದ್ರಾಪುರ ಮಠದ ರೇಪಿಸ್ಟ್ ಪೀಠಾಧಿಪತಿ ಸಂವಿಧಾನ-ಸರ್ಕಾರಕ್ಕೆ ಅತೀತನಾ? ಈ ಪ್ರಶ್ನೆ ಯಾಕೆಂದರೆ, ಅತ್ಯಾಚಾರದ ಆರೋಪದಿಂದ ತತ್ತರಿಸಿರುವ ರಾಘು ಸ್ವಾಮಿ ಕಾನೂನು ಕ್ರಮದಿಂದ ತಪ್ಪಿಸಿಕೊಳ್ಳಲು ಸಂವಿಧಾನ-ಸರ್ಕಾರಕ್ಕೆ 'ಕಾವಿ ಸವಾಲು' ಹಾಕುತ್ತಿರುವುದು.

ಚಾತುರ್ಮಾಸ್ಯ ಮುಗಿದಾಕ್ಷಣನೆ ವಿಚಾರಣೆಗೆ ಬರುತ್ತೇನೆಂದು ಬಂಧಿಸಲು ಬಂದ ಪೊಲೀಸರ ಕೈ-ಕಾಲು ಹಿಡಿದು ಯಾಮಾರಿಸಿದ ರಾಘು ಸ್ವಾಮಿ ಹೋಗಿದ್ದು ನ್ಯಾಯಾಲಯಕ್ಕೆ. ಅಲ್ಲಾತನಿಗೆ ಸೆಪ್ಟೆಂಬರ್ 19ರ ತನಕ ಬಂಧಿಸದಂತೆ ರಿಲೀಫ್ ಸಿಕ್ಕಿತು. ಈ 'ನೆಮ್ಮದಿ' ಸಿಕ್ಕಿದ್ದೇ ತಡ, ರಾಘು ಸ್ವಾಮಿ ಕೆರಳಿದ ಹುಲಿಯಂತಾಗಿ ಹೋದ. ತಾನೊಬ್ಬ ಕಾನೂನು-ಸಂವಿಧಾನ-ಸರ್ಕಾರ ಮೀರಿದ 'ಕಾವಿ ಡಾನ್' ಎಂಬಂತೆ ಮಾತಾಡತೊಡಗಿದ್ದಾನೆ. ಸರ್ಕಾರದ ವಿರುದ್ಧ ತನ್ನ ಮುಗ್ಧ ಅನುಯಾಯಿಗಳನ್ನು ಪ್ರಚೋದಿಸುವುದು ಈ ಪಾತಕ ಮಾತುಗಾರಿಕೆಯ ಗೂಢಾರ್ಥ ಎಂಬುದು ಎಂಥ ಪೆದ್ದನಿಗೂ ತಿಳಿಯುತ್ತದೆ.

ಚಾತುರ್ಮಾಸ್ಯ ವ್ರತ ಮುಗಿದ ದಿನ (10-09-14) ಈತ ಸೀಮೋಲ್ಲಂಘನ ಮಾಡುವುದಿತ್ತು. ಅದಕ್ಕೂ ಮೊದಲು ಆಶೀರ್ವಚನ ನೀಡಿದ ರಾಘು ಸ್ವಾಮಿ ಸಂವಿಧಾನ ಉಲ್ಲಂಘನೆ ಮಾಡಿದ್ದಾನೆ! "ನನ್ನ ಮಠಕ್ಕೆ ಸಾವಿರದ ಇನ್ನೂರು ವರ್ಷದ ಇತಿಹಾಸವಿದೆ... ನೀವು ಅಧಿಕಾರಕ್ಕೆ ಬಂದು ಹತ್ತಾರು ವರ್ಷ ಆಗಿರಬಹುದು... ನನ್ನನ್ನು ಬಂಧಿಸುತ್ತೀರಾ?... ನನ್ನ ಭಕ್ತರ ಭಾವನೆ ಬಂಧಿಸುವ ಜೈಲು ನಿಮ್ಮಲ್ಲಿದೆಯಾ?.... ನನ್ನ ಬಂಧಿಸಬಹುದು... ಭಕ್ತರ ಭಾವನೆ ಬಂಧಿಸ್ತೀರಾ?... ಯೋಗಿ ಮತ್ತು ಯೋಧನಿಗೆ ವ್ಯತ್ಯಾಸ ಅಷ್ಟಿಲ್ಲ... ನಾನು ಹೋರಾಡುತ್ತೇನೆ... ಅಂತಿಮ ವಿಜಯ ನನ್ನದೇ..." ಎಂದೆಲ್ಲ ಸಾವಿರಾರು ಬ್ರಾಹ್ಮಣ ಭಕ್ತರ ಮುಂದೆ ಬಡಬಡಿಸಿದ್ದಾನೆ. ಸಿದ್ದು ಸರ್ಕಾರಕ್ಕೆ 'ಡೋಂಟ್ ಕೇರ್' ಎಂದು ಪರೋಕ್ಷವಾಗಿ ಎಚ್ಚರಿಸಿದ್ದಾನೆ.

ಇದು ಮೇಲ್ನೋಟಕ್ಕೆ ಮೋಜೆನಿಸಿದರೂ ಕಾನೂನು-ಸುವ್ಯವಸ್ಥೆ ಕೆಡಿಸಿ ಬಚಾವಾಗಲು ಅನಾಹುತಕಾರಿ ಕಿತಾಪತಿ! ಹಿಂಬಾಲಕರ ಕೆರಳಿಸಿ ಗೊಂದಲ-ಗಲಾಟೆಯಾಗಿಸಿ ಬಂಧನದಿಂದ ತಪ್ಪಿಸಿಕೊಳ್ಳುವ ತಂತ್ರವಾಗಿತ್ತು. ಆದರೆ ತಣ್ಣನೆಯ ಸ್ವಭಾವ-ಯೋಚನಾಶಕ್ತಿಯ ಬ್ರಾಹ್ಮಣರು ಕೆರಳದೆ ಗುಳ್ಳು ಪೀಠದ ಕುತಂತ್ರಕ್ಕೆ ಕಡಿವಾಣ ಹಾಕಿದ್ದಾರೆ. ಇದು ದಾರಿ ತಪ್ಪಿದ ಕಾಮನೆಗಳ ಕಾವಿ ಜೀವಿ ರಾಘುಗೊಂದು ಪಾಠ.


ಭಾರತದಲ್ಲಿ ಮೊದಲ ಧರ್ಮ ಸಂವಿಧಾನ-ಪ್ರಜಾತಾಂತ್ರಿಕ ಸರ್ಕಾರ. ಸಂವಿಧಾನವೇ ಸರ್ವರೂ ಪಾಲಿಸಬೇಕಾದ, ಗೌರವಿಸಬೇಕಾದ 'ಧರ್ಮ ಗ್ರಂಥ!' ಆ ನಂತರ ಸ್ವಾಮಿ-ಮುಲ್ಲಾ-ಫಾದರ್... ಇತ್ಯಾದಿ. ಇದನ್ನು ಬುದ್ಧಿಪೂರ್ವಕವಾಗೇ ಕಡೆಗಣಿಸಿ ಭಯೋತ್ಪಾದಕನಂತೆ ಮಾತಾಡುವ ರಾಘು ಸ್ವಾಮಿಗೆ ಸಿದ್ದು ಸರ್ಕಾರ ಸುಮ್ಮನೇ ಬಿಟ್ಟಿರುವುದು ಏಕೆ?


ಯಾವ ಮುಲಾಜು?

ಶೃಂಗೇರಿ ಮಠ ಮಹಿಮೆ

ವೇಷಿಸ್ತ್ ರಾಘುಶ್ರೀ ಈ ಬಾರಿಯ ಅತ್ಯಾಚಾರ ...ನಿಂದ ಅಷ್ಟು ಸುಲಭಕ್ಕೆ ಮುಕ್ತನಾಗುವುದು ...ವಿಲ್ಲದಾಗಿದೆ. ಒಂದು ಕಡೆ ಈತನ ರಾಮಚಂದ್ರಾಪುರ ಪೀಠದಿಂದ ಎಳೆದುಹಾಕಲು ಪ್ರಯತ್ನಿಸುತ್ತಿದ್ದರೆ, ...ಒಂದೆಡೆಯಿಂದ ಬ್ರಾಹ್ಮಣ ಸಮುದಾಯದ ಹಲವು ...ಧೀಶರು ಅಖಾಡಕ್ಕೆ ಇಳಿದಿದ್ದಾರೆ. ಯಾವಾಗ ರಗಳೆ ...ವ ಗೋಕರ್ಣ ಮಹಾಬಲೇಶ್ವರ ದೇಗುಲವನ್ನು ತನ್ನ ...ಳಿಗೆಗೆ ಇಳಿಸಿಕೊಂಡಿದ್ದನೋ ಆಗ ಶಿರಸಿ ಸೀಮೆಯ ...ರ ಯತಿ ಸ್ವರ್ಣವಲ್ಲಿ ಸ್ವಾಮಿ ಗಂಗಾಧರೇಂದ್ರ ಸರಸ್ವತಿ ...ಯ ಹೇಳಿಕೆ ಕೊಟ್ಟಿದ್ದರು. "ಗೋಕರ್ಣಕ್ಕೆ ಕಲಿ ಪ್ರವೇಶ ..." ಎಂದಿದ್ದ ಸ್ವರ್ಣವಲ್ಲಿ ಸ್ವಾಮಿ ಮರು ಘಳಿಗೆಯೇ ...ಮಸದಲ್ಲಿ ಕಲ್ಲು ಬಂದಿದೆ" ಎಂದು ರಾಘವನ ...ಹುತಕಾರಿ ಸನ್ಯಾಸತ್ವದ ಬಗ್ಗೆ ಪರೋಕ್ಷ ಟಿಪ್ಪಣಿ ...ದಿದ್ದರು. ಹಾಗೆಯೇ ಕೇರಳ-ಮಂಗಳೂರು ...ಯಲ್ಲಿರುವ ಎಡನೀರು ಮಠದ ಕೇಶವಾನಂದ ಭಾರತಿ ...ಗೂ ಈ ರಾಘುನ ಧಾರ್ಮಿಕ ಮೇಲಾಟದ ಉಪಟಳ ...ವಾಗಿತ್ತು. ಆ ಮಠದ ಅನುಯಾಯಿಗಳನ್ನು ತನ್ನತ್ತ ... ರಾಘವನಿಗೆ ಬುದ್ಧಿ ಕಲಿಸಲು ಎಡನೀರು ಮಠಾಧೀಶ ...ಯ ಕಾಯುತ್ತಲೇ ಇದ್ದರು.

...ಇವರೆಲ್ಲರಿಗಿಂತ ಶೃಂಗೇರಿ ಮಠದ ಪೀಠಾಧಿಪತಿಯನ್ನು





...ದ್ದು ರಾಘುಗೆ ಈಗ ದೊಡ್ಡ ಗಂಡಾಂತರವಾಗಿ ...ವಾಗಿದೆ! ಈ ಶೃಂಗೇರಿ ಮಠಕ್ಕೆ ರಾಘುನ ಮಠಕ್ಕಿಂತಲೂ ಜಾಸ್ತಿ, ಶಿಷ್ಯರೂ ದೇಶದ ಮೂಲೆ-ಮೂಲೆಯಲ್ಲಿದ್ದಾರೆ.

ಮಠದ ಇಮೇಜು ಕಡಿಮೆ ಮಾಡಿ ಅದರ ...ಯಾಯಿಗಳ ಸೆಳೆಯಲು ರಾಘು ಸ್ಕೆಚು ಹಾಕಿ ...ರ್ಯಾಚರಣೆಗೆ ಇಳಿದಿದ್ದ. ಗೋಕರ್ಣ ದೇವಸ್ಥಾನ, ...ರ್ಣ ಹಣ, ಅಮೃತಮಹಲ್, ಹೆಕ್ಟೇರ್‌ಗಟ್ಟಲೆ ಭೂಮಿ, ... ಹಣ, ಸ್ವದೇಶಿ ಹೆಣ್ಣು... ಹೀಗೆ ಲೌಕಿಕ ದುರಾಸೆಗೆ ... ರಾಘುನ ದಾಳಿಗೆ ಶೃಂಗೇರಿ ಮಠ ಒಳಗೊಳಗೇ ...ಸತೊಡಗಿತ್ತು. ರಾಜಕೀಯ-ಆರ್ಥಿಕ-ಲಾಬಿ, ...ದಾಗಿರಿಯಿಂದ ಮಠ ಸಾಮ್ರಾಜ್ಯ ವಿಸ್ತರಿಸುತ್ತ ಸಾಗಿದ್ದ ... ಸಹಜವಾಗೇ ಶೃಂಗೇರಿ ಮಠಕ್ಕೆ ತೊಡರುಗಾಲಾಗಿದ್ದ. ...ಗಳೆ ರಾಘವನ ಅಧಾರ್ಮಿಕ ಕಿತಾಪತಿಯಿಂದ 'ಕಳೆ' ...ಕೊಳ್ಳುವಂತಾಗಿದ್ದ ಶೃಂಗೇರಿ ಮಠದ ಪಾರುಪತ್ಯಗಾರರು ...ಮಿಗಳು ಆತನಿಗೆ ಪಾಠ ಕಲಿಸಲು ಸಮಯ ...ಯುತ್ತಲೇ ಇದ್ದರು. ಈಗ ರಾಘುನ ಎದುರಾಳಿ ...ಜೀವಿಗಳಿಗೆಲ್ಲ 'ಕಾಮಕಥಾ' ಅಸ್ತ್ರ ಸಿಕ್ಕಿದೆ. ಆತನ ...ಕಳಚಿ ಸಂಸಾರ ದೀಕ್ಷೆ ಅಧಿಕೃತವಾಗೇ ಕೊಡಲು ...ರೋಧಿ ಸ್ವಾಮಿಗಳು ಒಳಗೊಳಗೇ ಸಾಧ್ಯವಿರುವುದನ್ನೆಲ್ಲ ...ನ' ಶುದ್ಧಿಯಿಂದ ಮಾಡುತ್ತಿದ್ದಾರೆ.

...ರಾಘುಗೆ ಶೃಂಗೇರಿ ಸ್ವಾಮಿ ಮತ್ತವರ ಅನುಯಾಯಿಗಳು ...ಬಿದ್ದಿರುವುದು ಖಾತ್ರಿಯಾಗಿ ಹೋಗಿದೆ. ಪ್ರೇಮಲತಾ ...ತೆಯ ಗಂಡ, ಗಂಡನ ಅಣ್ಣ ಪವರ್‌ಫುಲ್ ಕೃಷ್ಣಶಾಸ್ತ್ರಿ ...ದ ತಮ್ಮ ನಾರಾಯಣ ಶಾಸ್ತ್ರಿಗಳಿಗೆಲ್ಲ ಶೃಂಗೇರಿ ಮಠದ ...ರುವುದು ಗೊತ್ತಿದೆ. ನಾರಾಯಣ ಶಾಸ್ತ್ರಿಯನ್ನು ಸಾಗರದ ...ಗುಂದ ದೇವಸ್ಥಾನದ ಜೀರ್ಣೋದ್ಧಾರ ...ಕ್ರಮ"ದಿಂದ ವಜಾಗೊಳಿಸಿದಾಗ ಆತನಿಗೆ ಶೃಂಗೇರಿ ...ಯ ಅಭಯ ಸಿಕ್ಕಿತ್ತು. ಈ ಶಾಸ್ತ್ರಿ ಫ್ಯಾಮಿಲಿಯ ...ರಾದ ಚಕ್ರಕೋಡಿ ಶಾಸ್ತ್ರಿ ಶೃಂಗೇರಿ ಮಠದ ...ವಾರಿಯಲ್ಲಿದ್ದ ಘನ ವಿದ್ವಾಂಸರಾಗಿದ್ದರು. ಶೃಂಗೇರಿ ...ಲ್ಲಿ ಆತನಿಗೇ ದೊಡ್ಡ ಗೌರವವಿತ್ತು. ಹೀಗಾಗಿ ...ವಾಗೇ ಶೃಂಗೇರಿ ಪೀಠ "ಪ್ರೇಮಲತಾ ಪ್ರಕರಣ"ದಲ್ಲಿ ...ಮ ತೋರಿಸುತ್ತಿದೆ. ಹೀಗಾಗಿ ರಾಘುಮಾಣಿ ...ವಾಗಿ ಸಿಡ್ಡಿಗೆದ್ದುತ್ತಿದ್ದಾನೆ.

...ಳೆ ರಾಘವ ಅತ್ಯಾಪ್ತರು ಬಂದಾಗ ದೈನಂದಿಂದ ...ರಿ ಮಠದ ಕಿತಾಪತಿಯೇ ತನ್ನೆಲ್ಲ ಗ್ರಹಚಾರಕ್ಕೆ ..." ಎಂದು ಗೋಗರೆಯುತ್ತಿದ್ದಾನೆ. ರಾಘುನ ಈ ...ಯಕ ಆಕ್ರಂದನ ರಾಮಚಂದ್ರಾಪುರ ಮಠದ ಶಿಷ್ಯರನ್ನು ...ರಿ ಮಠದ ಅನುಯಾಯಿಗಳ ಮೇಲೆ ...ಸುತ್ತಿದೆ. ಈಗ ರಾಘು ಭೂಗತನಾಗಿರುವ ಕೆಕ್ಕಾರ ...ಸುತ್ತಮುತ್ತಲಲ್ಲಿ ಒಂದೇ ಮಾತು. "ನಂಗ್ಳ ಗುರುಗಳಿಗೆ ...ವಿಕೆ ಶೃಂಗೇರಿ ಸ್ವಾಮಿಯೇ ಕಾರಣವಡಾ... ನಂಗ್ಳ ...ಕಂಡ್ರೆ ಶೃಂಗೇರಿ ಮಠದವ್ರಿಗೆ ಆಗ್ತಿಲ್ಲ..." ಎಂಬ ...ಯಯ ಅಭಿಪ್ರಾಯಗಳು ರಾಘವನ ನಿಷ್ಠ ಹೈಗರ ...ಹರಿದಾಡುತ್ತಿದೆ. ಒಂದಂತೂ ಖರೆ. ರಾಘವ ...ರಿತ ಮಠ ಆಳ್ವಿಕೆ ಇತರ ಹಲವು ಕಾವಿ ಜೀವಿಗಳ

ಕಂಗೆಡಿಸಿತ್ತು. ಅವರಿಗೆಲ್ಲ ಈಗ ರಾಘವನ ಬೂಟಾಟಿಕೆ ಅಕ್ರಮ-ಅನೈತಿಕತೆ ಸಾಕ್ಷ್ಯಾಧಾರ ಸಮೇತ ತೋರಿಸಲು ಅಸ್ತ್ರಗಳು ಸಿಕ್ಕಂತಾಗಿವೆ.

ಕೆಕ್ಕಾರ ಅಡಗುದಾಣ!!

ಮಾಡಬಾರದ್ದು ಮಾಡಿ ಸಿಕ್ಕಿಹಾಕಿಕೊಂಡಿರುವ ರಾಘು ಸ್ವಾಮಿ ಹತಾಶನಾಗಿ ಬಾಯಿಗೆ ಬಂದದ್ದು ಬಡಬಡಿಸುತ್ತಿದ್ದಾನೆ. ಸಿಐಡಿ ಯಾವ ಘಳಿಗೆಯಲ್ಲಿ ಬಂಧಿಸುತ್ತದೋ ಎಂಬ ಆತಂಕದಲ್ಲಾತ ಸರ್ಕಾರ-ಸಂವಿಧಾನವನ್ನೆಲ್ಲ ಕಡೆಗಣಿಸಿ ತುಂಡುಗುಪ್ಪಳ ಹೊಡೆಯುತ್ತಿದ್ದಾನೆ! ಬ್ರಾಹ್ಮಣ ಸಮುದಾಯದಲ್ಲೇ ಬೆಂಬಲ ಕಡಿಮೆಯಾಗುತ್ತಿರುವುದು ಆತನ ಆತಂಕಕ್ಕೀಡುಮಾಡಿಬಿಟ್ಟಿದೆ. ಚಾತುರ್ಮಾಸ್ಯ ಮುಗಿಸಿರುವ ಆತ ಮಠದ ಸಂಪ್ರದಾಯದಂತೆ ಮೂಲ ಮಠವಿರುವ ಹೊಸನಗರ ಪೀಠಕ್ಕೆ ಹೋಗಬೇಕಿತ್ತು. ಆದರೆ ಅಲ್ಲಿಗೆ ಹೋಗಲು ಆತನಿಗೆ ಧೈರ್ಯವಿಲ್ಲ. ಅಲ್ಲಿ ತನ್ನನ್ನು ಕೆಕ್ಕಾರದಲ್ಲಿ ರಕ್ಷಿಸುವಂತೆ ಕಾಪಾಡುವ ಭಕ್ತರಿಲ್ಲ ಎಂಬುದಾತನಿಗೆ ಪಕ್ಕಾ ಆಗಿದೆ. ಈತನ ಢೋಂಗಿ ಮಾತಿಗೆ ಮರುಳಾಗಿ ಹಗಲಿರುಳು ಕಾವಲು ಕಾಯುವ ಪಾಪದ ಭಕ್ತ ಸಮೂಹ ಕೆಕ್ಕಾರು-ಚಂದಾವರ-ಕುಮಟಾ ಸೀಮೆಯಲ್ಲಿದ್ದಾರೆ. ಈ ಮುಗ್ಧ ಬ್ರಾಹ್ಮಣರು ತಮ್ಮ ಗುರು ಕಳಂಕಿತನೆಂಬ ಅನುಮಾನ ಇದ್ದರೂ 'ಬೆನಿಫಿಟ್ ಆಫ್ ಡೌಟ್' ರಿಯಾಯಿತಿ ಕೊಟ್ಟು ರಕ್ಷಿಸುತ್ತಿದ್ದಾರೆ! ಆದರೆ ಶಿವಮೊಗ್ಗ ಜಿಲ್ಲೆಯಲ್ಲಿ ಅಥವಾ ದಕ್ಷಿಣ ಕನ್ನಡದಲ್ಲಿ ಕುರುಡು ಅನುಯಾಯಿಗಳು ಕಡಿಮೆ. ಇಲ್ಲೆಲ್ಲ ರಾಘವನ "ಏಕಾಂತ ದರ್ಶನ" ಪ್ರಹಸನದ ಪ್ರತಿ ಆಖ್ಯಾನವೂ ಗೊತ್ತಿದೆ.

ಹೀಗಾಗಿ ಈಗ ರಾಘು ಕೆಕ್ಕಾರು ಬಿಟ್ಟು ಹೋಗದಿರಲು ದೃಢ ನಿರ್ಧಾರ ಮಾಡಿದ್ದಾನೆ! ಸಿಐಡಿ ಪೊಲೀಸರು ಎತ್ತಾಕಿಕೊಂಡು ಹೋಗಲು ಬಿಡದ ಭಕ್ತರು ಇಲ್ಲಾತನಿಗೆ ಸಿಕ್ಕಿದ್ದಾರೆ. ಪ್ರತಿದಿನ ಸುತ್ತಲಿನ ಒಂದೊಂದು ಹಳ್ಳಿಯ ಹೈಗರ ತಂಡ ರಾಘುನ "ಶಯ್ಯಾಗೃಹ"ದ ಸುತ್ತಲೂ ಹಗಲಿರುಳು ಕಾವಲು ಕಾಯುವ ಪಾಳಿ ಹಾಕಿಕೊಂಡಿದ್ದಾರೆ. ಈ ಸೈನಿಕರ ಕಾವಲಿನ ಜೊತೆಗೆ ಪ್ರಾಕೃತಿಕವಾಗೂ ಕೆಕ್ಕಾರು ಅಪರಾಧಿಗಳಿಗೆ ತಲೆ ಮರೆಸಿಕೊಳ್ಳಲು ಪ್ರಶಸ್ತ ಅಡಗುದಾಣದಂತಿದೆ. ಕೆಕ್ಕಾರ ಮಠದ ಸುತ್ತಲೂ ದುರ್ಗಮವಾದ-ಗುಡ್ಡ-ಬೆಟ್ಟ-ಕಣಿವೆ-ನದಿ ಇವೆ. ಅಷ್ಟು ಸುಲಭಕ್ಕೆ ಪೊಲೀಸರು ಇಲ್ಲಿಗೆ ಬರಲಾಗದು. ಬಂದ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿ ಪರಾರಿಯಾಗಲಿಕ್ಕೂ ಇಲ್ಲಿ ಅವಕಾಶ ಜಾಸ್ತಿ.

ಪ್ರೇಮಲತಾ-ದಿವಾಕರ-ಕೃಷ್ಣ ಶಾಸ್ತ್ರಿ ಫ್ಯಾಮಿಲಿಯ ಹಿಂದೆಯೂ ಬಲಾಢ್ಯ ಮಠ-ಪೀಠ ಹವಾಡ ಅಡಗಿದೆಯೆಂಬ ಆತಂಕದಲ್ಲಿರುವ ರಾಘು ಸ್ವಾಮಿಗೆ ಪೊಲೀಸರು ಎಳೆದೊಯ್ಯುವ ಭಯವಂತೂ ಇದ್ದೇ ಇದೆ. ತನ್ನ ಲಾಬಿ ರಹಸ್ಯ ಕಾರ್ಯಾಚರಣೆ ನಡೆಸುತ್ತಿದ್ದರೂ ಪಾಪಪ್ರಜ್ಞೆ ಆತನನ್ನು ಬಾಧಿಸುತ್ತಿದೆ. ಹೀಗಾಗಿ ಆತ ಸುರಕ್ಷಿತ ಕೆಕ್ಕಾರು ಗ್ರಾಮದ ರಘೋತ್ತಮ ಮಠದ ವಿದ್ಯಾಮಂದಿರದ ಖಾಸಗಿ ಕೋಣೆ ಬಿಟ್ಟು ಹೋಗಲು ತಯಾರಿಲ್ಲ! ರಾಘು ಪಾಲಿಗೆ ಕೆಕ್ಕಾರ ಗೋಕರ್ಣ, ಮಾಣಿ, ಮಠ, ಹೊಸನಗರಕ್ಕಿಂತಲೂ ಸೇಫ್!!

ಸನ್ಯಾಸ ಧರ್ಮ ಪಾಲಿಸುವ ಪ್ರತಿಜ್ಞೆ ಮಾಡಿ ಪೀಠ ಹತ್ತಿದ ರಾಘುಸ್ವಾಮಿ ಅದಕ್ಕೆ ತದ್ವಿರುದ್ಧವಾಗಿ ಅಮಾಯಕ ಮುತ್ತೈದೆಯರ ಸಂಗುಸುಖಕ್ಕೆ ಹಾತೊರೆದು ಕಳಂಕಿತನಾಗಿದ್ದಾನೆ. ಹಾಗಂತ ಆತನಿಗೆ ಎಲ್ಲ ಸುಖ-ಸಂತೋಷ ಕೊಡುವ ಕಾಮನೆಗಳ ಕೇಂದ್ರವಾದ ಮಠದ ಪೀಠ ತ್ಯಾಗಕ್ಕಂತೂ ಮನಸ್ಸಿಲ್ಲ. ಆದರೆ ಪೀಠ ಬಿಡುವಂತೆ ಬಲವಾದ ಒತ್ತಡ ಬರುತ್ತಿದೆ. ಆತನಿಗೂ ಒಮ್ಮೊಮ್ಮೆ ಪೀಠ ಬಿಟ್ಟೋಡುವ ಮನಸ್ಸಾಗುತ್ತಿದೆ. ಆ ಒಳ ಒತ್ತಡ ಆತನ ಮಾತುಗಳೇ ಬಿಂಬಿಸುತ್ತಿವೆ. "ನಾನು ಏಕಾಂತ ವಾಸಕ್ಕೆ-ತಪಸ್ಸಿಗೆ ಹೋಗ್ತೇನೆ...." ಎಂದು ಪೀಠ ವೈರಾಗ್ಯದ ಮಾತನ್ನಾತ ಪರೋಕ್ಷವಾಗಿ ಆಡುತ್ತಿದ್ದಾನೆ. ಆದರೆ ಪೀಠತ್ಯಾಗ ಈಗ ರಾಮನ ಕೈಯಲ್ಲಿಲ್ಲ; ಪೊಲೀಸರ ನಿಷ್ಠೂರ-ಪ್ರಾಮಾಣಿಕ ಕರ್ತವ್ಯ ನಿಭಾವಣೆಯಲ್ಲಿದೆ.

ಸಿಐಡಿ ಪೊಲೀಸರು ಕಾನೂನಿಗೆ ನಿಷ್ಠರಾಗಿ-ತಮ್ಮ ಖಾಕಿ ಸಮವಸ್ತ್ರಕ್ಕೆ ನಿಯತ್ತಾಗಿ ತನಿಖೆ ನಡೆಸಿದರೆ ರಾಘು ಸ್ವಾಮಿಗೆ ಪೀಠ ಬಿಡದೆ ಬೇರೆ ದಾರಿಯೇ ಇಲ್ಲ. ಕಂಬಿ ಹಿಂದೆ ಬಿದ್ದರೆ, ವೈದ್ಯಕೀಯ ಪರೀಕ್ಷೆಗೆ ಒಳಗಾಗುವಂತಾದರೆ ಅನುಯಾಯಿಗಳು ರಾಘವನ ಮಠ-ಪೀಠನಿಷ್ಠೆ ಆತ್ಮವಿಮರ್ಶೆಗೆ ಒಳಗಾಗೇ ಆಗುತ್ತದೆ. ಆಗ ರಾಘು ಅತ್ಯಾಚಾರಿ ಎಂಬ ಮೂದಲಿಕೆ ಹೆಚ್ಚಾಗುತ್ತದೆ. ಇಂಥ ಸಂದರ್ಭದಲ್ಲಿ ಆತ ಗುರುವೆಂದು ಸ್ವೀಕರಿಸೋರು ಯಾರು? ಹೀಗಾಗಿ ಸಿಐಡಿ ತನಿಖೆ ಸರಿಯಾಗಿ ಹಳಿ ಹತ್ತಿದರೆ ರಾಘುನ ಪೀಠದಿಂದ ಅದೇ ಇಳಿಸುತ್ತದೆ.

ಈಗ ರಾಘುಗೆ ಸಿಐಡಿ ಪೊಲೀಸರೇ ಶ್ರೀರಾಮಚಂದ್ರ! ಸಿಐಡಿಗಳ ತನಿಖೆಯ ಜಾಡು ನೋಡಿ ಪೀಠತ್ಯಾಗದ ನಿರ್ಧಾರಕ್ಕೆ ಬರುವ ಯೋಚನೆ ಈ ಕಳ್ಳ ಕಾವಿಯದು!!

■ ಶುದ್ಧೋಧನ

ಲಗ್ನ ಇಲ್ಲಾಗ ಮದುವೆಯಾದ್ರೆ ಸರ್ವನಾಶವಾಗ್ತಿರಿ

ಥೂತ್ತೇರಿ

▸ ಯಾಹೂ

ನಮ್ಮ ಸಿರಿಗೆರೆಯ ಶಿವಾಚಾರ್ಯ ಸ್ವಾಮಿಗಳು ಚೆಡ್ಡಿ ಪತ್ರಕರ್ತರೂ ನಾಚುವಂತಹ ಸುಳ್ಳೊಂದನ್ನು ಸರಾಗವಾಗಿ ದಾಖಲಿಸಿದ್ದಾರಲ್ಲಾ, ನಮ್ಮ ದುರ್ಗತಿ ನೋಡಿ, ಜಗದ್ಗುರುಗಳ ಸುಳ್ಳನ್ನು ಅಲ್ಲಗಳೆದು ಸತ್ಯವನ್ನು ದಾಖಲಿಸಬೇಕಿದೆ. ಪ್ರಕರಣವೇನೆಂದರೆ, ಲಂಕೇಶರು ತೀರಿಕೊಂಡಾಗ ಅವರ ಊರ ಕಡೆಯಿಂದ ಬಂದಿದ್ದ ಶರಣ ಸಂಸ್ಕಾರದ ಎಕ್ಸ್‌ಪರ್ಟ್‌ಗಳು, ಒಬ್ಬ ಸಣ್ಣ ಸಾಹಿತಿಯ ನೇತೃತ್ವದಲ್ಲಿ ಲಿಂಗಾಯತ ವಿಧಿವಿಧಾನಗಳಿಂದ ಸಂಸ್ಕಾರ ಮಾಡಲು ಸಜ್ಜಾಗಿದ್ದರು. ಆದರೆ ಅವರ ಮಗಳು ಇದಕ್ಕೆಲ್ಲಾ ಅಸ್ಪದ ಕೊಡದೆ ಸಹಜವಾಗಿ ಅಂತ್ಯಸಂಸ್ಕಾರ ನೆರವೇರಿಸಿದರು. ಇದಕ್ಕೆ ಸಾಕ್ಷಿಯಾಗಿ ಅಲ್ಲಿ ನಿಂತಿದ್ದವರು ವೀರಭದ್ರ ಚೆನ್ನಮಲ್ಲ ಸ್ವಾಮೀಜಿ ಮತ್ತು ಎಂ.ಪಿ. ಪ್ರಕಾಶರು. ಆದರೆ ನಮ್ಮ ಸಿರಿಗೆರೆಯ ಸುಳ್ಳಪ್ಪನವರು ತಾವೇ ಖುದ್ದು ಸಾಕ್ಷಿ ಎಂಬಂತೆ "ವಿಚಾರವಾದಿ ಪತ್ರಕರ್ತ ಲಂಕೇಶರ ಸಂಸ್ಕಾರ ಲಿಂಗಾಯತ ಸಂಸ್ಕಾರದ ವಿಧಿವಿಧಾನಗಳಂತೆ ನಡೆಯಿತು" ಎಂದು ಬರೆದುಕೊಂಡಿದ್ದಾರೆ. ಇದರ ಮರ್ಮವೇನೋ ತಿಳಿಯದಾಗಿದೆ.

ಒಂದಂತೂ ಸತ್ಯ, ಅಂತರಂಗ ಶುದ್ಧವಾಗಿದ್ದರೆ ಬಹಿರಂಗವೂ ಶುದ್ಧವಾಗಿರುತ್ತದಂತೆ. ಹಾಗೆ ಬರವಣಿಗೆಯೂ ಕೂಡ. ಇದೇ ಪೂಜ್ಯರು ಹಿಂದೊಮ್ಮೆ ತಮ್ಮ ತಾಯಿ ತೀರಿಕೊಂಡರಂತೆ ಎಂಬ ಸುದ್ದಿಯನ್ನು ಅತ್ಯಂತ ನಿರ್ಲಿಪ್ತವಾಗಿ ದಾಖಲಿಸಿ ನಮ್ಮೆಲ್ಲರ ಮೆಚ್ಚುಗೆ ಗಳಿಸಿದ್ದರು. ಇತ್ತೀಚೆಗಷ್ಟೆ ಸಿರಿಗೆರೆ ಪೀಠದಿಂದ ನಿವೃತ್ತರಾಗುವುದಾಗಿ ಘೋಷಿಸಿ ಅಚ್ಚರಿ ಹುಟ್ಟಿಸಿದ್ದರು. ಹಾಗೆಯೇ ಭಕ್ತರು "ನೀವೇ ಇರಿ" ಎಂದಾಗ ಅಳುತ್ತಲೇ ಒಪ್ಪಿಕೊಂಡು ಆಘಾತ ನೀಡಿದರಂತಲ್ಲಾ, ಥೂತ್ತೇರಿ!

* * *

ಅತ್ಯಂತ ಸುಖಕರವಾಗಿ ನಿವೃತ್ತ ಜೀವನವನ್ನು ಸವಿಯುತ್ತಿರುವ ನಮ್ಮ ಸಜ್ಜನ ರಾಜಕಾರಣಿ ಎಸ್ಸೆಂ ಕೃಷ್ಣ ತಮ್ಮ ಆಡಳಿತಾವಧಿಯಲ್ಲಿನ ಅಪೂರ್ವ ಘಟನೆಗಳನ್ನು ಮೆಲುಕು ಹಾಕಿದ್ದಾರಲ್ಲಾ, ಅಪೂರ್ವ ಘಟನೆಗಳೆಂದರೆ ಬರಗಾಲ, ಕಾವೇರಮ್ಮ ಮತ್ತು ವೀರಪ್ಪನ್. ಇವುಗಳ ಪೈಕಿ ಕಾವೇರಮ್ಮನ ಮಗಳಾದ ಜಯಲಲಿತಳನ್ನು ನೆನೆಸಿಕೊಂಡರೆ ನಿದ್ದೆಯೇ ಬರುತ್ತಿರಲಿಲ್ಲವಂತಲ್ಲಾ, ಅದೇ ನಮ್ಮ ದೇವೇಗೌಡರು ತಣ್ಣಗಿನ ಅಪ್ಪದನಿಯಲ್ಲಿ "ಜಯಾ ಸಿಸ್ಟರ್, ತಾವೇನು ಯೋಚನೆ ಮಾಡಬೇಡಿ. ನಿಮ್ಮ ಭತ್ತದ ಪೈರು ಒಣಗದಂತೆ ರಾತ್ರಿ ವೇಳೆ ಕಾವೇರಿ ತಟದ ಜನರಿಗೆ ಗೊತ್ತಾಗದಂತೆ ನೀರು ಬಿಡುತ್ತೇನೆ" ಎಂದು ಆಶ್ವಾಸನೆ ಕೊಡುತ್ತಲೇ ಕನ್ನಂಬಾಡಿ ನೀರು ತಮಿಳುನಾಡು ಸೇರುವಂತೆ ನೋಡಿಕೊಂಡಿದ್ದರಲ್ಲಾ. ಆದರೇನು ಎಸ್ಸೆಂ ಕೃಷ್ಣ ಬಿಡೋಣವೆಂದರೆ ನೀರೇ ಇಲ್ಲದೆ ರಾತ್ರಿಯೆಲ್ಲಾ ನಿದ್ದೆ ಬಾರದೆ ಒದ್ದಾಡಿದ್ದು ಈಗ ಇತಿಹಾಸ.

ಕೂಗುಮಾರಿಯಿಂದ ನಂಬರ್ ಒನ್ ಮುಖ್ಯಮಂತ್ರಿ ಎನ್ನಿಸಿಕೊಂಡಿದ್ದ ಕೃಷ್ಣ ಐವತ್ತಾರು ಅನ್ನ ದಂಡದ ಮಂತ್ರಿ ಮಾಡಿಕೊಂಡು, ಅಳಿಯ ಮತ್ತು ಡಿಕೆಶಿ ಸಾವಿರಾರು ಕೋಟಿ ಒಡೆಯರಾಗುವಂತೆ ನೋಡಿಕೊಂಡು, ಹಲ್ಲಿಲ್ಲದ ಸರಕಾರ ನಡೆಸಿದ್ದ ಕಾರಣಕ್ಕೆ ರಾಜ್ಯಪಾಲರಾಗಬೇಕಾಯ್ತು. ಈ ಕೃಷ್ಣನಿಗೆ ಕಾವೇರಿ, ವೀರಪ್ಪನ್ ಇಂದೂ ಕಾಡುತ್ತಿದ್ದರೆ, ನಮಗೆ ಮಾತ್ರ ಈತ ಸರಕಾರಿ ಬಂಗಲೆ ಒಡೆಸಿ ವಾಸ್ತುದೋಷಕ್ಕೆ ತಲೆ ಒಪ್ಪಿಸಿದ್ದು, ಹಾಗೆಯೇ ಬಿಜೆಪಿಯ ಪೂರ್ಣಾವಧಿ ಕಾರ್ಯಕರ್ತರಾದ ಪೇಜಾವರನಂತ ಪೇಜಾವರ ಸ್ವಾಮಿಯನ್ನು ಮನೆಗೆ ಕರೆಸಿ ಪಾದಪೂಜೆ ಮಾಡಿದ್ದ, ಎರಡೂ ಘೋರ ಕೃತ್ಯಗಳು ಪ್ರಜಾಪ್ರಭುತ್ವಕ್ಕೆ ಎಸಗಿದ ಪ್ರಮಾದಗಳಾಗಿ ಕಾಣುತ್ತಿವೆಯಲ್ಲಾ, ಥೂತ್ತೇರಿ!!

* * *

ನಮ್ಮ ದೇಶದ ಕಾನೂನುಗಳು ಎಲ್ಲರಿಗೂ ಒಂದೇ ರೀತಿಯಲಿ ಅಡಕಾಯಿಸಿಕೊಳ್ಳುತ್ತವೆಯೋ, ಇಲ್ಲ ಬೇರೆ ತರಹ ಏನಾದರೂ ವರ್ತಿಸುತ್ತವೆಯೋ ಎಂಬ ಗುಮಾನಿಯ ಚರ್ಚೆಯೊಂದು ಸಾರ್ವಜನಿಕ ವಲಯದಲ್ಲಿ ಹರಿದಾಡುತ್ತಿದೆಯಂತಲ್ಲಾ, ಏಕೆಂದರೆ ಹೆಣ್ಣು ಮಗಳೊಬ್ಬಳಿಗೆ ಲೈಂಗಿಕ ಕಿರುಕುಳ ನೀಡಿದ ಎಂಬ ಕಾರಣಕ್ಕೆ ತರುಣ್‌ತೇಜ್‌ಪಾಲನಿಗೆ ಆರು ತಿಂಗಳು ಬೇಲ್ ಸಿಗಲಿಲ್ಲ. ಅದೇ ಸಮಯಕ್ಕೆ ಕರ್ನಾಟಕದಲ್ಲಿ ಕಾರ್ಯಾಚರಣೆಯ ಸ್ಥಳದಲ್ಲೇ ಸಿಕ್ಕಿಬಿದ್ದ ಹರತಾಳು ಹಾಲಪ್ಪ ಬೇಲ್ ಪಡೆದುಕೊಂಡು ಈಜಿ ಚೇರಿನಲ್ಲಿ ಬಂದ. ಈಗ ಕಾರ್ತಿಕ್ ಗೌಡನೂ ಒಳಗೋಗುತ್ತನೆಂದು ಭಾವಿಸಿದರೆ ಆತ ಆರಾಮವಾಗಿ ತಿರುಗಾಡುತ್ತಿದ್ದಾನೆ. ಇನ್ನ ನಿತ್ಯಾನಂದನ ಜೊತೆ ಸ್ಪರ್ಧೆಗಿಳಿದಿದ್ದ ಸ್ವಾಮಿಯೊಬ್ಬನ ಪರವಾಗಿ ಇಡೀ ವ್ಯವಸ್ಥೆಯೇ ಹೋರಾಡತೊಡಗಿದೆ.

ಈ ಭೂ ಸುರೋತ್ತಮನ ಲೈಂಗಿಕ ಚಾಪಲ್ಯಕ್ಕೆ ತುತ್ತಾದ ಕನ್ನೆಯರು ಯಾರಿಗೂ ಹೇಳದಂತೆ ಕಾಲ ಹಾಕುತ್ತಿರುವಾಗ, ಗಾಯಕಿಯೊಬ್ಬಳು ಸ್ವಾಮಿ ವಿರುದ್ಧ ಕಾಂಬೋದಿ ರಾಗವನ್ನು ಹಾಡಿ ಜನ ಸೇರಿಸಿದರೆ, ಅವಳು ಮತ್ತು ಅವಳ ಪರಿವಾರವನ್ನೇ ಮುಗಿಸಲು ಹೊರಟಿದೆಯಂತಲ್ಲಾ, ಈ ಸ್ವಾಮಿ ಪರಿವಾರ!

ಇದೆಲ್ಲಕ್ಕಿಂತ ಮಜವಾದ ಸಂಗತಿ ಯಾವುದೆಂದರೆ, ನಮ್ಮ ನಡುವಿನ ಈ ಜಗದ್ಗುರುಗಳು ತಮಗೆ ಬೇಕಾದವರಿಗೆ ಪ್ರಸಾದ ತಯಾರಿಸಿಕೊಂಡು "ನೋಡಿ, ಇದು ಶ್ರೀರಾಮನ ಲಡ್ಡು. ಇದನ್ನ ತಿಂದರೆ ನೀವು ಭಕ್ತಿಯಿಂದ ಮೈ ಮರೆಯುತ್ತೀರಿ" ಎಂದು ತಿನ್ನಿಸಿ, ಆ ಅಫೀಮನ್ನ ತಿಂದ ನಂತರ ಭಕ್ತಿಯಿಂದ ಅಂಗಾತ ಮಲಗಿದ ಮಹಿಳೆಯರ ಮೇಲೆ ಮಕ್ಕಾಡೆ ಮಲಗಿ, ಮಾಡಿದ ಕೆಲಸವನ್ನ "ರಾಮ ಪೂಜೆ, ಸ್ವತಃ ರಾಮದೇವರೆ ಅಪರೂಪಕ್ಕೆ ಸೀತೆಗೆ ಮಾಡಿದಂತೆ ನಿಮಗೂ ಮಾಡಿ ಹೋದ. ಎಲ್ಲೂ ಹೇಳಬೇಡಿ, ಹೇಳಿದರೆ ನಿಮಗೆ ನಿರೀಕ್ಷಣಾ ಜಾಮೀನು ಕೂಡ ಸಿಗುವುದಿಲ್ಲ" ಎಂದು ಎಚ್ಚರಿಸುತ್ತಿದ್ದನಂತಲ್ಲಾ, ಥೂತ್ತೇರಿ!!!

* * *

ಸದ್ಯದ ನಮ್ಮ ಸಮಾಜ ಬ್ರಹ್ಮಾಂಡನ ನೇತೃತ್ವದಲ್ಲಿ, ಆತ್ಮ ಹತ್ಯಾತ್ಮಕ ದಾರಿಯಲ್ಲಿ, ಗಜಗಾಂಭೀರ್ಯದಲ್ಲಿ ಎಕ್ಕುಟ್ಟಿ ಹೋಗುವ ಮಾರ್ಗದಲ್ಲಿ ಚಲಿಸುವಂತೆ ಕಾಣುತ್ತಿರುವಾಗ,



ಈ ಬಗ್ಗೆ ಒಂದೆರಡು ಪ್ರಶ್ನೆ ಕೇಳಿ ಮನಸ್ಸನ್ನು ಹಗುರ ಮಾಡಿಕೊಳ್ಳಬೇಕೆನಿಸಿತಲ್ಲಾ, ಕೂಡಲೇ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್ ಟೋನ್: "ಕ್ಯಂಚಾಲೋ ಮಚ್ಚಾಲೊ ಯಂಗವ್ರುಲಾ ನಿನ್ ದವ್‌ಗಳು"

"ಹಲೋ ಯಾರ್ರೀ?"

"ನಾನು ಸ್ವಾಮೀಜಿ, ಯಾಹೂ ಅಂತ."

"ಯಾಹೂ ಅಂದ್ರೆ ಏನ್ರಿ? ಅದೂ ಒಂದೆಸರೇನ್ರಿ?"

"ಹೌದು ಸ್ವಾಮಿ, ಈಗ ನಿಮ್ಮನ್ನ ಬ್ರಹ್ಮಾಂಡ ಅನ್ನಲವ ಅಂಗೆ ಯಾಹು."

"ತಲಹರಟೆ ಸಾಕು, ಅದೇನೇಳ್ರಿ."

"ನನ್ನ ಮದುವೆಗೆ ಒಂದು ಲಗ್ನ ಕೂಡಿಸಿಕೊಡಿ ಸ್ವಾಮಿ."

"ಅಲ್ರೀ, ಟಿವಿಲಿ ಕುಕ್ಕುರಬಡದು ಅಷ್ಟೊಂದು ಬಡಕೊಂಡಿದ್ದಿನಿ. ಸೆಪ್ಟೆಂಬರ್ 27 ರಿಂದ ಮುಂದಿನ ಏಪ್ರಿಲ್ 4 ರವರೆಗೆ ಯಾವತ್ತಾದ್ರು ಮದುವೆ ಆಗಬಹುದು. ಆ ನಂತರ ನಾಲ್ಕು ವರ್ಷ ಲಗ್ನ ಇಲ್ಲ, ಹೇಳಿದ್ದು ಅರ್ಥವಾಯ್ತಾ?"

"ಅಂಗಾರೆ, ನಾಲ್ಕು ವರ್ಷ ಮದಿವಾಗಂಗಿಲ್ಲವ ಸಾರ್?"


"ಅದೆ ಹೇಳಿದನಲ್ರೀ. ನನ್ನ ಮಾತ ಮೀರಿ ಮದುವೆಯಾದ್ರೆ ಮುಂಡಾ ಮೋಚಿಗಂಡೋಯ್ತಿರಿ. ಸರ್ವನಾಶವಾಗ್ತಿರಿ."

"ಮದುವೆಯಾಗದೆ ಜೊತೆಲಿದ್ದು ನಾಲ್ಕು ವರ್ಷದ ನಂತರ ಆದ್ರೆ?"

"ಅದು ನಿಮ್ಮ ಕರ್ಮ. ಅಂಗೂ ಇರಬಹುದು. ಸಿರೋಧ್. ಕಾಂಡೋಮ್ ಇನ್ನ ಏನೇನೂ ಬಂದವೆ. ನಿಮ್ಮ ಕರ್ಮಕ್ಕೆ ಅವನ್ನೇ ಆಶ್ರಯಿಸಿ. ನಾಲ್ಕು ವರ್ಷದ ನಂತರ ಮದುವೆ ಆಗಿ, ಆಯ್ತಾ?"

"ಥೂ, ಥೂ, ಥೂತ್ತೇರಿ!!!" ■

ಹೊಣೆಗೇಡಿ ಶಾಸಕನಿಂದಾಗಿ ಅನಾಥವಾಗುತ್ತಿದೆ ಹೊನ್ನಾಳಿ !!!



ರೇಣುಕಾಚಾರ್ಯ

ಶಿವಮೊಗ್ಗ ಮತ್ತು ದಾವಣಗೆರೆಗಳ ನಡುವೆ ಸಮದೂರಕ್ಕೆ ಮೈ ಚಾಚಿಕೊಂಡಿರುವ ಹೊನ್ನಾಳಿ, ಇತ್ತ ಪಟ್ಟಣಕ್ಕೆ ಪಟ್ಟಣವೂ ಅಲ್ಲ, ಅತ್ತ ಹಳ್ಳಿಗೆ ಹಳ್ಳಿಯೂ ಅಲ್ಲ. ತುಂಗಭದ್ರಾ ನದಿ ಒಂದು ಸುತ್ತು ಮುತ್ತಿಟ್ಟು ಹೋಗುವ ಈ ಹೊನ್ನಾಳಿ ಕೆಲ ಐತಿಹ್ಯ ತಾಣಗಳಿಂದ ಕೊಂಚಮಟ್ಟಿಗೆ ಹೆಸರುಳಿಸಿಕೊಂಡಿತ್ತು. ಆದರೆ ಹೊನ್ನಾಳಿಗೆ ಅಪಖ್ಯಾತಿಯ ಮಸಿ ಅಂಟಿಸಿ ಅಲ್ಲಿನ ಜನ ರಾಜ್ಯದೆದುರು ಮುಖ ಮುಚ್ಚಿಕೊಳ್ಳುವಂತೆ ಮಾಡಿದ್ದು ಮಾಜಿ ಹೆಂಡದ ಮಂತ್ರಿ 'ಕಿಸ್ಸಿಂಗ್ ಕುಮಾರ' ರೇಣುಕಾಚಾರ್ಯ. ಅದೇ ಕಾರಣಕ್ಕೆ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೊನ್ನಾಳಿಯ ಜನ ರೇಣುಕನ 'ತೆಂಗಿನಕಾಯಿ'ಗಳನ್ನು ಒಡೆದು ಮನೆಗೆ ಗದುಮಿದ್ದರು. ಆದರೆ ಪಾಪ, ಈಗ ಹೊನ್ನಾಳಿ ಜನರ ಪರಿಸ್ಥಿತಿ ಬಾಣಲೆಯಿಂದ ಬೆಂಕಿಗೆ ನೆಗೆದಂತಾಗಿದೆ. ಯಾಕೆಂದರೆ ತ್ರಿಬಲ್ ಎಕ್ಸ್ ರೇಣುಕನನ್ನು ಮನೆಗೆ ಕಳಿಸುವ ಆತುರದಲ್ಲಿ ಅವರು ಶಾಸಕನನ್ನಾಗಿ ಆಯ್ದುಕೊಂಡದ್ದು ಶಾಂತನಗೌಡ ಎಂಬ ಅಂದಕಾಲತ್ತಿಲ್ ಪಾಳೆಗಾರ ವಂಶದ ವಾರುಸುದಾರನನ್ನು. ಈ ಮೊದಲೇ ಒಮ್ಮೆ ಗೆದ್ದು ಶಾಸಕನಾಗಿ ಆನಂತರ ಎರಡೆರಡು ಬಾರಿ ಇದೇ ರೇಣುಕನ ಎದುರು ಮುಗ್ಗರಿಸಿ ಬಿದ್ದಿದ್ದ ಶಾಂತನಗೌಡನ 'ಕಾರ್ಯ'ವೈಖರಿ ಗೊತ್ತಿದ್ದರೂ ಈಗ ಬದಲಾಗಿರಬಹುದೆಂದು ಜನ ಹಾಕಿದ ಓಟುಗಳೆಲ್ಲಾ ತುಂಗಭದ್ರಾ ನದಿಯಲ್ಲಿ ಕೊಚ್ಚಿಹೋಗುತ್ತಿವೆ. ಚುನಾವಣೆಯಲ್ಲಿ ರೇಣುಕನೆದುರು ಪ್ರಯಾಸದಿಂದ ಗೆದ್ದುಬಂದದ್ದೇ ತನ್ನ ಪೂರ್ವಜನ್ಮದ ಸುಕೃತವೆಂದು ಭಾವಿಸಿದ ಶಾಂತನಗೌಡ, ತನ್ನನ್ನು ಗೆಲ್ಲಿಸಿದ್ದು ಮತದಾರರೆನ್ನುವ ಕನಿಷ್ಠ ಕಾಳಜಿಯೂ ಇಲ್ಲದೆ ಬೆಂಗಳೂರಿನಲ್ಲಿ ಕೂತು ಟ್ರಾನ್ಸ್‌ಫರ್ ದಂಧೆಯಲ್ಲೇ ಮುಳುಗಿಹೋಗಿದ್ದಾನೆ. ತಿಂಗಳಲ್ಲಿ ನಾಲ್ಕುದಿನ ಕ್ಷೇತ್ರದಲ್ಲಿ ಈಯಪ್ಪನ ಮುಖ ಕಾಣಿಸಿದರೂ ಅದು ಪವಾಡವೇ ಸರಿ. ಆತ ಅಪರೂಪಕ್ಕೆಂಬಂತೆ ಕ್ಷೇತ್ರಕ್ಕೆ ವಿಸಿಟ್ ಕೊಟ್ಟಾಗ ಶಾಸಕನೆಂಬ ಕಾರಣಕ್ಕಾದರೂ ಅವನ ಬೆನ್ನಹಿಂದೆ ನಾಲ್ಕು ಜನ ಕಾಣಿಸುವುದಿಲ್ಲವೆಂದರೆ ಆತನ 'ಜನಪ್ರಿಯತೆ' ಬಗ್ಗೆ ಮತ್ತೇನೇಳುವುದಿದೆ? ಕ್ಷೇತ್ರದ ಜನ 'ನಮ್ಮ ಶಾಸಕ ಶಾಂತನಗೌಡ ಕಳೆದುಹೋಗಿದ್ದಾರೆ, ದಯವಿಟ್ಟು ಹುಡುಕಿಕೊಡಿ' ಅಂತ ಕರಪತ್ರ ಹಂಚುವುದೊಂದು ಬಾಕಿ ಇದೆ ಅಷ್ಟೆ! ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಸ್.ಎಸ್. ಮಲ್ಲಿಕಾರ್ಜುನ್‌ಗೆ ಹೊನ್ನಾಳಿಯಿಂದ ಕಡಿಮೆ ಮತ ಹರಿದುಹೋಗುವುದಕ್ಕೂ, ಜನರಿಗೆ ಶಾಂತನಗೌಡನ ಮೇಲಿರುವ ಈ ಬೇಸರವೇ ಕಾರಣ.

ಶಾಸಕನ ಈ ಹೊಣೆಗೇಡಿತನವನ್ನು ಅಚ್ಚುಕಟ್ಟಾಗಿ ಬಳಸಿಕೊಳ್ಳುತ್ತಿರೋದು ರೇಣುಕಾಚಾರ್ಯ. ಹೊನ್ನಾಳಿಯ ತುಂಬೆಲ್ಲಾ ಈ ಮಾಜಿ ಶಾಸಕನ ಆರ್ಭಟವೇ ಮುಗಿಲು ಮುಟ್ಟಿದೆ. ಅದು ಎದ್ದು ಕಾಣೋದು ತುಂಗಭದ್ರೆಯ ಒಡಲು ಬಸಿಯುವ ಮರಳು ದಂಧೆಯಲ್ಲಿ. ತುಂಗಭದ್ರಾ ನದಿಯ ದಂಡೆಯಲ್ಲಿರುವ ಬೇಲಿಮಲ್ಲೂರು, ಬೀರಗೊಂಡನಹಳ್ಳಿ, ರಾಂಪುರ, ಬಿದರಗಡ್ಡೆ, ಸಾಸ್ವೇಹಳ್ಳಿ, ಕೋಟೆಹಾಳ್ ಗ್ರಾಮಗಳಲ್ಲಿಂದ ಏನಿಲ್ಲವೆಂದರೂ ದಿನವೊಂದಕ್ಕೆ 300 ರಿಂದ 400 ಲೋಡು ಮರಳು ಖದೀಮರ ಪಾಲಾಗುತ್ತಿದೆ. ಹಾಗೆ ಕದ್ದಮರಳು ಶಿವಮೊಗ್ಗ, ಶಿಕಾರಿಪುರ, ಸಾಗರ, ಶಿರಸಿಗಳಲ್ಲಿ 15ರಿಂದ 20 ಸಾವಿರ ರೂ.ಗಳಿಗೆ ಮಾರಾಟವಾಗುತ್ತಿದೆ. ಪ್ರತಿ ಲೋಡಿಗೆ 900 ರೂಪಾಯಿ ರಾಯಲ್ಟಿ ಕಟ್ಟಬೇಕೆಂದು ಸರ್ಕಾರ ಶುಲ್ಕ ನಿಗದಿ ಮಾಡಿದೆ. ಆದರೆ 100 ಲೋಡಿನ ಲೆಕ್ಕ ಮಾತ್ರ ತೋರಿಸಲಾಗುತ್ತಿದೆ. ಇನ್ನುಳಿದ 300 ಲೋಡು ಕೃಷ್ಣನ ಲೆಕ್ಕದಲ್ಲಿ ಉಳ್ಳವರ ಅಕೌಂಟು ಸೇರುತ್ತಿದೆ. ಇಂತಹ ಬಹುಪಾಲು ಮರಳು ಗಳ್ಳರಿಗೆ ಮಾಜಿ ಮಂತ್ರಿ ರೇಣುಕನೇ 'ಗಾಡ್ ಫಾದರ್'. ಹಾಗಾಗಿಯೇ ಮರಳು ಸಾಗಾಣಿಕೆದಾರರನ್ನು ನಿರ್ಬಂಧಿಸಬೇಡಿ ಎಂದು ರೇಣುಕ ಬೀದಿಗಿಳಿದು ಪ್ರತಿಭಟಿಸುತ್ತಾನೆ. ಮರಳನ್ನು ಬಗಿಯುವುದರಿಂದ ನದಿ ಪಾತ್ರದ ಜಲಮಟ್ಟ ಕುಸಿದು ಅದನ್ನೇ ನಂಬಿದ ರೈತರು ಕಂಗಾಲಾಗಬೇಕಾಗುತ್ತೆ ಎಂಬ ಕನಿಷ್ಠ ಜ್ಞಾನವೂ ಇಲ್ಲದೆ ಮರಳು ಮಾಫಿಯಾಕ್ಕೆ ಅಭಯ ನೀಡುವುದನ್ನೇ ಕ್ಷೇತ್ರ ಕಾಳಜಿ ಅಂತ ಭ್ರಮಿಸಿದ ರೇಣುಕ 'ಪರ್ಮಿಟ್ ಚಳವಳಿ' ಯನ್ನೇ ಆರಂಭಿಸಿದ್ದಾನೆ. ಹಾಗಂತ ಈ ವಿಚಾರದಲ್ಲಿ ಹಾಲಿ ಶಾಸಕ ಶಾಂತನಗೌಡನನ್ನು ಬಲು ಸಭ್ಯಸ್ಥ ಎನ್ನಲಾಗದು, ಯಾಕೆಂದರೆ ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸುವ ಈತನ ಪಟಾಲಂ ಮರಳು ಮಾಫಿಯಾದಲ್ಲಿ ಭರ್ಜರಿಯಾಗಿ ಗೆಬರುತ್ತಿದೆ. ಶಾಂತನಗೌಡನ ಮಾಲೀಕತ್ವದ ಗುರುಕುಲ ವಿದ್ಯಾಸಂಸ್ಥೆ ಹೆಸರಲ್ಲೇ ಸಾವಿರಾರು ಲೋಡು ಮರಳು ಸಂಗ್ರಹವಾಗಿದೆ. ಈ ಒಂದು ಉದಾಹರಣೆ ಸಾಕು ಆತನ ಸ್ಯಾಂಡ್ ಸ್ಟೋರಿ ಬಿಚ್ಚಿಡಲು. ಅಲ್ಲದೇ ಶಾಂತನಗೌಡನ ಜಾತಿಪ್ರೀತಿಯಿಂದಾಗಿ ಸಿರಿಗೆರೆಯ ಬೃಹನ್ಮಠಕ್ಕೂ ಮರಳು ಎಗ್ಗಿಲ್ಲದೆ ಕೃಷ್ಣನ ಲೆಕ್ಕದಲ್ಲಿ ಸಾಗಾಣಿಕೆಯಾಗುತ್ತಿದೆ.

ಈ ಹಿಂದೆ ಹರಿಹರದ ಬಿಜೆಪಿ ಶಾಸಕನಾಗಿದ್ದ ಬಿ.ಪಿ.ಹರೀಶನೊಂದಿಗೆ ಹೊಂದಾಣಿಕೆ ಮಾಡಿಕೊಂಡು ಮರಳುದಂಧೆಗೆ ಕೈಜೋಡಿಸಿದ್ದ ತಹಸೀಲ್ದಾರ್ ರೇಶ್ಮಾಬಾನು ಎಂಬ ಗಿರಾಕಿಯೇ ಈಗ ಹೊನ್ನಾಳಿಯ ತುಂಗಭದ್ರಾ ನದಿ ಮರಳುದಂಧೆಗೂ 'ಗಾಡ್ ಮದರ್'. ಇಲ್ಲಿ ಸ್ಟೀಫನ್



ಹೊನ್ನಳ್ಳಿ ಪೊಲೀಸ್ ಠಾಣೆ



ಎನ್ನುವ ವಿಲೇಜ್ ಅಕೌಂಟೆಂಟ್ ರೇಣುಕಾಚಾರ್ಯನ ಬಂಟನಂತೆ ರೇಣುಕನ ತಮ್ಮಂದಿರಾದ ರಾಜ-ರಮೇಶರ ಮರಳುದಂಧೆಗೆ ಪೂರಕವಾಗಿದ್ದರೆ, ಮತ್ತೊಬ್ಬ ನೌಕರ ಸಂತೋಷ ಎಂಬಾತ ಹಾಲಿ ಶಾಸಕ ಶಾಂತನಗೌಡರ ಪಟಾಲಂನ ಮರಳು ದಂಧೆಗೆ ಸಾಥ್ ನೀಡುತ್ತಿದ್ದಾನೆ. ವಿಪರ್ಯಾಸವೆಂದರೆ, ಇಂತಹ ಮರಳು ಲಾರಿಗಳು ಸಾಗಿ ಹೋಗೋದು ಹೆದ್ದಾರಿಯಲ್ಲೇ ಇರುವ ಹೊನ್ನಾಳಿಯ ಪೊಲೀಸ್ ಠಾಣೆಯ ಮುಂದೆಯೇ! ಸಾಲದ್ದಕ್ಕೆ ಚೆಕ್‌ಪೋಸ್ಟ್ ಬೇರೆ ಇದೆ. ಆದರೆ ಕಣ್ಣಮುಂದೆಯೇ ನೂರಾರು ಲಾರಿಗಳು ಮರಳನ್ನು ಅಕ್ರಮವಾಗಿ ಹೊತ್ತೊಯ್ಯುತ್ತಿದ್ದರೂ ಪೊಲೀಸರಾಗಲಿ, ಅಧಿಕಾರಿಗಳಾಗಲಿ ಕ್ಯಾರೇ ಎನ್ನುತ್ತಿಲ್ಲ. ಯಾಕೆಂದರೆ ಸ್ಟೀಫನ್ ಮತ್ತು ಸಂತೋಷರ ಮೂಲಕ ಅಧಿಕಾರಿಗಳ ಕಿಸೆ ಭರ್ತಿಯಾಗುತ್ತಿದೆ!

ಸರ್ಕಾರಿ ಆಸ್ಪತ್ರೆಯಲ್ಲಿ ಹಗಲುದರೋಡೆ

ಇದಿಷ್ಟು ಮರಳು ಮಾಫಿಯಾದ ಕರ್ಮಕಾಂಡವಾದರೆ ಸರ್ಕಾರಿ ಆಸ್ಪತ್ರೆಯಲ್ಲೂ ಅವ್ಯವಹಾರ ಭರ್ಜರಿಯಾಗಿ ಬೇರೂರಿ ಕೂತಿದೆ. ಶಾಸಕನೇ ಕ್ಷೇತ್ರದ ಜನರ ಆಗು-ಹೋಗುಗಳಿಗೆ ಕ್ಯಾರೇ ಎನ್ನದಿರುವಾಗ ಆಸ್ಪತ್ರೆಯ ರೋಗವನ್ನು ಯಾರು ತಾನೇ ವಾಸಿ ಮಾಡಿಯಾರು. ಇದು ವೈದ್ಯ ಕೆಂಚಪ್ಪನಿಗೆ ಬಲು ನೀಟಾಗಿ ಅರ್ಥವಾಗಿದೆ. ಆದ್ದರಿಂದಲೇ ಮೂಗುದಾರ ಕಿತ್ತ ಹೋರಿಯಂತೆ ಇಡೀ ಆಸ್ಪತ್ರೆಯ ವಾತಾವರಣವನ್ನೇ ಎಕ್ಕುಟ್ಟಿಸಿದ್ದಾನೆ. ಈತ ತಿನ್ನುವುದು ಸರಕಾರಿ ಸಂಬಳವಾದರೂ ಸರಕಾರಕ್ಕಾಗಾಲಿ, ಬಡ ರೋಗಿಗಳಿಗಾಲಿ ಇವನಿಂದ ನಯಾಪೈಸೆಯ ಲಾಭವಿಲ್ಲ. ಶಿಕಾರಿಪುರ ರಸ್ತೆಯಲ್ಲಿ ತನ್ನದೇ ಆದ 'ಶ್ರೀದೇವಿ ಆಸ್ಪತ್ರೆ' ಖಾಸಗಿ ನರ್ಸಿಂಗ್ ಹೋಮ್ ತೆರೆದಿರುವ ಕೆಂಚಪ್ಪ ಸರಕಾರಿ ಆಸ್ಪತ್ರೆಗೆ ಬರುವ ಉಚಿತ ಔಷಧಗಳನ್ನೆಲ್ಲಾ ಅಲ್ಲಿಗೆ ತುಂಬಿಸಿಕೊಳ್ಳುತ್ತಿದ್ದಾನೆ. ಸರಕಾರಿ ಆಸ್ಪತ್ರೆಗೆ ಬರುವ ರೋಗಿಗಳು ಈತನ ಶ್ರೀದೇವಿ ಮೆಡಿಕಲ್ಸ್‌ನಲ್ಲಿ ಕಾಸುಕೊಟ್ಟು ಸರಕಾರ ಸರಬರಾಜು ಮಾಡುವ ಉಚಿತ ಔಷಧಗಳನ್ನು ಖರೀದಿಸಬೇಕು. ಕೆಂಚಪ್ಪನ ಈ ದಂಧೆಯೇನೂ ಕದ್ದುಮುಚ್ಚಿ ನಡೆಯುವಂತದ್ದಲ್ಲ, ಎಲ್ಲಾ ಖುಲ್ಲಂ-ಖುಲ್ಲ. ಸರ್ಕಾರಿ ಆಸ್ಪತ್ರೆಗೆ ಬರಬೇಕಾದ ಆಂಬುಲೆನ್ಸ್‌ಗಳು ರೋಗಿ ಸಮೇತ ಶ್ರೀದೇವಿ ಆಸ್ಪತ್ರೆಯ ಕಾಂಪೌಂಡು ಹೊಕ್ಕುತ್ತವೆ. ಸರ್ಕಾರಿ ಆಸ್ಪತ್ರೆಯ ಉಗ್ರಾಣದಲ್ಲಿ 'ನೋ ಸ್ಟಾಕ್' ಬೋರ್ಡು ಪರ್ಮನೆಂಟಾಗಿ ಹೋಗಿದೆ. ಬಡರೋಗಿಗಳೆಲ್ಲಾ ಕೆಂಚಪ್ಪನಿಗೆ ಹಿಡಿಶಾಪ ಹಾಕೋದು ಸರ್ಕಾರಿ ಆಸ್ಪತ್ರೆ ಆವರಣದ ಸಾಮಾನ್ಯ ದೃಶ್ಯ. ಅಂದಹಾಗೆ, ಈ ಶಾಪದಲ್ಲಿ ಹೊಣೆಗೇಡಿ ಶಾಸಕ ಶಾಂತನಗೌಡನಿಗೂ ಪಾಲಿದೆ ಎನ್ನುವುದನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ, ಏಕೆಂದರೆ ಆತ ಶಾಸಕನಾಗಿ ಕ್ಷೇತ್ರ ಹೊಕ್ಕ ನಂತರ ನಾಲ್ವರು ತಹಸೀಲ್ದಾರರು, ನಾಲ್ವರು ಸಬ್‌ಇನ್ಸ್‌ಪೆಕ್ಟರುಗಳು ಬಂದು ವರ್ಗವಾಗಿ ಹೋಗಿದ್ದಾರೆ. ತನಗೆ ಅಡ್ಜೆಸ್ಟ್ ಆಗದ ಅಧಿಕಾರಿಯನ್ನು ನೆಮ್ಮದಿಯಾಗಿ ನಾಲ್ಕು ದಿನ ಉಳಿಯಲು ಬಿಡದ ಶಾಂತನಗೌಡ ಡಾ. ಕೆಂಚಪ್ಪನ ಹಗಲುದರೋಡೆ ಯನ್ನು ಕಂಡೂ ಆತನನ್ನು 'ಹಚಾ..' ಎನ್ನುತ್ತಿಲ್ಲವೆಂದರೆ ಹಿಂದೆ ಭಾರೀ ಒಪ್ಪಂದವೇ ನಡೆದಿರಬೇಕು. ಇಲ್ಲದಿದ್ದರೆ ಕೆಂಚಪ್ಪ ಆಸ್ಪತ್ರೆಯ ಔಷಧಿಗಳಿಗೆ 'ಓಪನ್ ಸರ್ಜರಿ' ಮಾಡುತ್ತಿರಲಿಲ್ಲ.


ಅನಾಥವಾಗುತ್ತಿದೆ ಹೊನ್ನಾಳಿ

ಅತ್ತ ದರಿ ಇತ್ತ ಪುಲಿ ಎನ್ನುವ ಇಕ್ಕಟ್ಟಿಗೆ ಸಿಲುಕಿರುವ ಹೊನ್ನಾಳಿ ದಿನೇದಿನೇ ಅನಾಥವಾಗುತ್ತಿದೆ. ರಾಜ್ಯದಲ್ಲಿ ಅಧಿಕಾರದಲ್ಲಿರುವ ಆಡಳಿತ ಪಕ್ಷದ ಶಾಸಕನಿದ್ದೂ ಕ್ಷೇತ್ರ ಬಡವಾಗುತ್ತಿರೋದೆ ಇದಕ್ಕೆ ಸಾಕ್ಷಿ. ಹಾಲಿ ಶಾಸಕ ಕ್ಷೇತ್ರವನ್ನೇ ಮರೆತು ಬೆಂಗಳೂರಿನಲ್ಲಿ ಕೂತು ಟ್ರಾನ್ಸಫರ್ ದಂಧೆಯ ಕಮೀಷನ್ ಎಣಿಸುತ್ತಿದ್ದರೆ ಅಪಾಯಕಾರಿ ಹಿನ್ನೆಲೆಯ ಆಘಾತಕಾರಿ ಮುನ್ನಲೆಯ ಮಾಜಿ ಮಂತ್ರಿ ರೇಣುಕ ಮುಂಬರುವ ಎಲೆಕ್ಷನ್ ಗಮನದಲ್ಲಿಟ್ಟುಕೊಂಡು ತನಗೆ ಅನುಕೂಲವಾಗುವ 'ಹೋರಾಟ'ಗಳಲ್ಲಿ ಮಿಂಚುತ್ತಿದ್ದಾನೆ. ಅಂತಹ 'ಲಾಭ'ದಾಯಕ ಹೋರಾಟಗಳಲ್ಲಿ ಜನರ ಕಾಳಜಿ ಕಿಂಚಿತ್ತೂ ಇರುವುದಿಲ್ಲವೆಂಬುದು ನಗ್ನಸತ್ಯ, ಹಾಗಾಗಿ ಕ್ಷೇತ್ರದ ಜನರ ಗೋಳು ಕೇಳುವವರೇ ಇಲ್ಲದಂತಾಗಿದೆ. ಯಾವ ಇಲಾಖೆಯಲ್ಲೂ ಸಾರ್ವಜನಿಕರ ಕೆಲಸಗಳು ಸಲೀಸಾಗಿ ಆಗುತ್ತಿಲ್ಲ, ಅಧಿಕಾರಿಗಳು ಗೂಳಿಗಳ ಹಾಗೆ ಕೊಬ್ಬಿಹೋಗಿದ್ದಾರೆ. ಕ್ಷೇತ್ರದ ನೂರಾರು ಹಳ್ಳಿಗಳು ರಸ್ತೆಯಿಲ್ಲದೆ ಪರದಾಡುವಂತಾಗಿದೆ. ಹೊನ್ನಾಳಿಯಿಂದ 10 ಕಿಲೋಮೀಟರುಗಳ ದೂರದಿಂದ ವಿದ್ಯಾರ್ಥಿಗಳು ನಡೆದುಕೊಂಡೇ ಶಾಲಾ ಕಾಲೇಜುಗಳಿಗೆ ಹೋಗಿಬರಬೇಕಾಗಿದೆ. ಏಕೆಂದರೆ ಇಲ್ಲಿ ಗ್ರಾಮೀಣ ಸಾರಿಗೆ ಸಂಚಾರವನ್ನು ಸ್ಥಗಿತಗೊಳಿಸಲಾಗಿದೆ.


ಅಷ್ಟಕ್ಕೂ ಈ ಇಬ್ಬರು ದೊಣ್ಣೆ ನಾಯಕರನ್ನು ಬಿಟ್ಟರೆ ಹೊನ್ನಾಳಿ ಕ್ಷೇತ್ರದ ಜನರಿಗೆ ಮತ್ಯಾರೂ ಗತಿ ಇಲ್ಲ ಎನ್ನುವಂತಿಲ್ಲ, ಆದೊಂದು ಕಾಲಕ್ಕೆ ರಾಜಕೀಯದಲ್ಲಿ ಭರ್ಜರಿಯಾಗಿ ಮಿಂಚಿ, ಶಾಸಕರಾಗಿಯೂ ರುಚಿಕಂಡ ಇಬ್ಬ[…] ಮಾಜಿ ಶಾಸಕರೂ ಈಗಲೂ ಬದುಕುಳಿದಿದ್ದಾರೆ(!). ಒ[…] ಗಂಗಪ್ಪ ಮತ್ತೊಬ್ಬ ಕೃಷ್ಣಮೂರ್ತಿ. ಆದರೆ ಈ ಈರ್ವ[…] ಔಟ್‌ಡೇಟೆಡ್ ರಾಜಕಾರಣಿಗಳ ಬ್ಯಾಟರಿ ಸಂಪೂರ್ಣ[…] ವೀಕಾಗಿ ಹೋಗಿವೆ. ನಾವು ಯಾವ ಪಕ್ಷದಲ್ಲಿದ್ದೇವೆ[…] ವುದೇ ಅವರಿಬ್ಬರಿಗೆ ಭಾರೀ ಕನ್‌ಫ್ಯೂಶನ್ ವಿಷಯವಾಗಿ[…] ಸಮಯಸಾಧಕ ರಾಜಕಾರಣ ಮಾಡುವ ಇವರು ಹೊ[…] ಹೊರಬರದ ಪಕ್ಷಗಳಿಲ್ಲ. ಅಸಲಿಗೆ ಕೃಷ್ಣಮೂರ್ತಿ, […] ಭಾಗದ ಬಲಾಢ್ಯ ಸಮುದಾಯವಾದ ಕುರುಬ ಜಾತಿ[…] ಸೇರಿದವ. ಅಲ್ಲದೆ ಆತನ ತಂದೆಯೂ ಶಾಸಕನಾಗಿ ಭಾ[…] ಹೆಸರು ಮಾಡಿದ್ದಂತವರು. ಆದರೆ ಅವುಗಳ ಲಾ[…] ಪಡೆಯುವಲ್ಲಿ ಈತ ಸಂಪೂರ್ಣವಾಗಿ ನೆಲಕಚ್ಚಿದ್ದಾ[…] ಒಟ್ಟಿನಲ್ಲಿ ಜನ ಇವರಿಬ್ಬರ ಮೇಲೆ ಭರವಸೆ ಇಡುವು[…] ದುಬಾರಿ ಆಯ್ಕೆಯೇ ಸರಿ.

ಹಾಲಿ ಶಾಸಕ ಶಾಂತನಗೌಡನ ನಿರ್ಲಕ್ಷ್ಯ ಮತ್ತು ಮಾ[…] ಶಾಸಕ ರೇಣುಕನ ಉಪಟಳದ ನಡುವೆ ಇದ್ದುದರಲ್ಲಿ ಜ[…] ನಡುವೆ ಭರವಸೆ ಉಳಿಸಿಕೊಂಡಿರೋದು ಜಿಲ್ಲಾ ಪಂಚಾ[…] ಸದಸ್ಯೆ ಶೀಲಾ ಗದಿಗೇಶ್ ಮತ್ತು ಜಿ.ಪಂ ಮಾಜಿ ಅ[…] ಮಂಜಪ್ಪ ಮಾತ್ರ. ಕಷ್ಟಸುಖಗಳಿಗೆ ಜನ ಇವರನ್ನು ಎಡತ[…] ವಂತಾಗಿದೆ. ಅಂತೂಇಂತೂ ಹೊನ್ನಾಳಿಗೆ ಉಳಿದಿರೋ[…] ಹಾಳೂರಿಗೆ ಉಳಿದವನೇ 'ಗೌಡ' (ತಮಾಷೆಯ ಎಚ್ಚ[…] ಶಾಂತನಗೌಡ ಅಲ್ಲ!!) ಎನ್ನುವ ಅಲ್ಪತೃಪ್ತಿ ಮಾತ್ರ.

■ ಟಿ.ಎನ್.ಷಣ್ಮು[…]



ಶಾಂತನಗೌಡ


ಶಿವಶಂಕರ್ ರೆಡ್ಡಿ

ಗೌರಿಬಿದನೂರು:

ಹಕ್ಕಿಪಿಕ್ಕಿಗಳ ಮೇಲೆ ಗೊಲ್ಲರ ದೌರ್ಜನ್ಯ

...ಂಬಾಲಪಲ್ಲಿಯ ದಲಿತ ಹತ್ಯಾಕಾಂಡದ ಎಲ್ಲಾ ...ಪಿಗಳೂ ಹೈಕೋರ್ಟ್‌ನಲ್ಲೂ ಖುಲಾಸೆಯಾದ ದಿನಗಳಲ್ಲಿ, ಅದಕ್ಕಿಂತಲೂ ಹೆಚ್ಚು ದಮನಿತವಾದ ...ದಾಯವೊಂದರ ಮೇಲೆ ಅದೇ ಜಿಲ್ಲೆಯಲ್ಲಿ ...ಶಾಂತಿಕ ದೌರ್ಜನ್ಯ ನಡೆದಿದೆ. ನಾಲ್ಕು ಜನರಿಗೆ ಮುರಿದುಹೋಗಿದೆ, ಒಬ್ಬರು ಬೆನ್ನುಮೂಳೆಗೆ

ಹತ್ತನೇ ತರಗತಿ ತನಕವು ಓದಿಲ್ಲ, ಎಲ್ಲಾ ರೀತಿಯಲ್ಲೂ ಅಸಹಾಯಕರಾದ ಇವರು ರಾಜಕೀಯ ಪಕ್ಷಗಳಿಗೆ ಓಟುಗಳಾಗಿ ಮಾತ್ರ ಕಾಣುವುದು ಆಶ್ಚರ್ಯವೇನಲ್ಲ, ಇದಕ್ಕೆ ಯಾವ ರಾಜಕೀಯ ನಾಯಕರೂ ಹೊರತೇನಲ್ಲ, ಅಕ್ಕಪಕ್ಕದ ಹಳ್ಳಿಗಳ ವಿವಿಧ ಕೋಮುಗಳಿಗೆ ಸೇರಿದ ಸಾಮಾನ್ಯ ಜನರ ಜೊತೆ ಹೆಚ್ಚೇನೂ ತಕರಾರಿಲ್ಲ, ಆದರೆ ಪಕ್ಕದ ಹೊಸಕೋಟೆ ಮತ್ತು ಗುಂಡೇನಹಳ್ಳಿಯ ಗೊಲ್ಲ ಸಮುದಾಯಕ್ಕೆ ಸೇರಿದ ಕೆಲವರು ಇವರ ಮೇಲೆ ನಿರಂತರವಾಗಿ ದಬ್ಬಾಳಿಕೆ, ದೌರ್ಜನ್ಯ ಮಾಡುತ್ತಲೇ ಇದ್ದಾರೆ. ಗೊಲ್ಲರು ಈ ಹಳ್ಳಿಗಳಲ್ಲಿ ಶೇ 70ರಷ್ಟು ಇದ್ದು, ಎಲ್ಲರಿಗೂ ಸುಮಾರು 10-15 ಎಕರೆ ಭೂಮಿ ಇದ್ದು, ಇಲ್ಲಿ ಪ್ರಬಲ ಕೋಮಿಗೆ ಸೇರಿದವರಾಗಿದ್ದಾರೆ. ಹೇಗಾದರೂ ಮಾಡಿ ಹಕ್ಕಿ-ಪಿಕ್ಕಿಯವರು ಉಳುಮೆ ಮಾಡುತ್ತಿದ್ದ 60-70 ಎಕರೆ ಜಮೀನುಗಳನ್ನು


ಹಕ್ಕಿಪಿಕ್ಕಿಗಳಿಗೂ ಪದೇ ಪದೇ ಜಗಳವಾಗಿ ಪೊಲೀಸ್ ಠಾಣೆಯಲ್ಲಿ ಸಂಧಾನ ಮಾತುಗಳು ನಡೆಯುತ್ತಿದ್ದವು.

ಸೆಪ್ಟೆಂಬರ್ 10ರ ಬೆಳಗ್ಗೆ ಜ್ಯೋದಪುರಂ ತನ್ನ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಎರಡೂ ಹಳ್ಳಿಯ ಸುಮಾರು 50-60 ಗೊಲ್ಲರು ಟ್ರ್ಯಾಕ್ಟರ್‌ಗಳಲ್ಲಿ ಬಂದು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಎಲ್ಲಾ ಹಕ್ಕಿಪಿಕ್ಕಿಯವರ ಮೇಲೆ - ಮಹಿಳೆಯರು, ವೃದ್ಧರೆಂದು ನೋಡದೆ - ಹೊಡೆಯಲು ಬಡಿಯಲು ಶುರು ಮಾಡಿದರು. ಹಕ್ಕಿಪಿಕ್ಕಿಯವರು ತಪ್ಪಿಸಿಕೊಂಡು ಹಳ್ಳಿಗೆ ಬಂದರೂ ಬಿಡದೆ ಹಿಡಿದು ಥಳಿಸಿದರು.

ಹಕ್ಕಿಪಿಕ್ಕಿಗಳಿಗೆ ಪೊಲೀಸ್ ಠಾಣೆಯಲ್ಲೂ ನ್ಯಾಯ ಸಿಕ್ಕಿಲ್ಲ. ಹಲ್ಲೆ ಮಾಡಿದ ಗೊಲ್ಲ ಸಮುದಾಯದ 11 ಜನರ ಮೇಲೆ ಕೇಸು ಹಾಕಿದರೆ ಹಲ್ಲೆಗೆ ಒಳಗಾದ 15

ಮಾಡಬೇಕಾದ ಎಚ್ಚರಿಕೆ ವಹಿಸಿಲ್ಲವೆಂಬುದಕ್ಕೆ, ಆರೋಪಿಗಳು ಒಂದೇ ದಿನದಲ್ಲಿ ಜಾಮೀನು ಪಡೆದುಕೊಂಡಿರುವುದೇ ಸಾಕ್ಷಿ. ಪ್ರಸ್ತುತ ಹಕ್ಕಿಪಿಕ್ಕಿ ಕಾಲೋನಿಯಲ್ಲಿ ಭಯದ ವಾತಾವರಣ ಇದೆ. ಇವರು ಪಡಿತರ ಪದಾರ್ಥಗಳನ್ನು ಪಡೆಯಲು ಹೊಸಕೋಟೆ ಮತ್ತು ಗುಂಡೇನಹಳ್ಳಿ ಮೂಲಕವೇ ಹಾದುಹೋಗಬೇಕಿದೆ. ಯಾವ ಸಮಯದಲ್ಲೂ ಮತ್ತೆ ದಾಳಿ ಮಾಡಬಹುದಾದ ಸಾಧ್ಯತೆ ಇರುವುದರಿಂದ ಮತ್ತು ಹಕ್ಕಿಪಿಕ್ಕಿ ಜನರು ಬಹಳಷ್ಟು ಹೆದರಿರುವುದರಿಂದ ಸಂಘಟನೆಗಳ ಮುಖಂಡರು ಮಧ್ಯೆ ಪ್ರವೇಶಿಸಿ ತಹಸೀಲ್ದಾರ್‌ರೊಂದಿಗೆ ಮಾತಾಡಿ ಈ ತಿಂಗಳು ಮತ್ತು ಮುಂದಿನ ತಿಂಗಳು ಹಕ್ಕಿಪಿಕ್ಕಿ ಕಾಲೋನಿಗೆ ಬೇಕಾಗುವಷ್ಟು ಪಡಿತರವನ್ನು (ದಿನಸಿ) ಪಡಿತರ ಅಂಗಡಿಯಿಂದ ತಾಲ್ಲೂಕು ಆಡಳಿತ ಜವಾಬ್ದಾರಿಯಲ್ಲಿ ತಂದು ಪೂರೈಸುವ ತಾತ್ಕಾಲಿಕ ವ್ಯವಸ್ಥೆ ಮಾಡಲಾಗಿದೆ.

ಆದರೆ ಪೊಲೀಸ್ ಇಲಾಖೆ ತಾನೇ ಮುತುವರ್ಜಿಯಿಂದ ಇಲ್ಲಿ ನೊಂದ ಜನಕ್ಕೆ ನ್ಯಾಯ ಒದಗಿಸಲು ಮುತುವರ್ಜಿ ತೋರುತ್ತಿಲ್ಲ, ಇಷ್ಟರೊಳಗೆ, ಫಾರಂ ನಂ.53ರ ಪ್ರಕಾರ ಸಾಗುವಳಿ ಚೀಟಿ ನೀಡುವುದು, ತಪ್ಪಿತಸ್ಥರಾದ ಬಲಾಢ್ಯ ಸಮುದಾಯದ ಕೆಲವರ ಮೇಲೆ ಕಠಿಣ ಕ್ರಮ ಆಗುವಂತೆ ನೋಡಿಕೊಳ್ಳುವುದು ನಡೆಯಬೇಕಿತ್ತು, ಆದರೆ ಕನಿಷ್ಠ ಸಾಂತ್ವನದ ಮಾತುಗಳೂ ಆ ಕಡೆಯಿಂದ ಬಾರದೇ ಇರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಶಾಸಕರೂ ಸಹಾ ಭೂ ಮಂಜೂರಾತಿಗೆ ಗಮನ ಹರಿಸಿ, ಈ ಸಮಸ್ಯೆಯನ್ನು ಶಾಶ್ವತವಾಗಿ ಪರಿಹಾರ ಮಾಡುವ


ಮುನ್ನಾಬಾಯಿ


ಅಮ್ಮಾಬಾಯಿ


ನಂಜಮ್ಮ

...ಬಲವಾದ ಪೆಟ್ಟಿನಿಂದ ಕಳೆದುಕೊಂಡಿರುವ ...ವನ್ನು ಮತ್ತೆ ಪಡೆದುಕೊಳ್ಳುವುದು ಅನುಮಾನಾಸ್ಪದ. ಇಷ್ಟು ಭೀಕರವಾದ ಹಲ್ಲೆ ನಡೆದರೂ, ದೂರು ...ಕೊಳ್ಳಲೇ ಅನುಮಾನಿಸಿದ ಪೊಲೀಸರು, ನಂತರ ... ದುರ್ಬಲವಾದ ಎಫ್.ಐ.ಆರ್ ಹಾಕಿದ್ದರೆಂದರೆ ...ನನವೇ ಎಲ್ಲಾ ಆರೋಪಿಗಳಿಗೂ ಜಾಮೀನು ಸಿಕ್ಕಿದೆ. ...ಕ್ಕಿಪಿಕ್ಕಿ ಸಮುದಾಯದ ಮೇಲೆ ನಡೆದಿರುವ ...ಕೆಯನ್ನು ಅರಿಯುವ ಮುನ್ನ ಒಂದಷ್ಟು ಹಿನ್ನೆಲೆಯ ...ಯ ಅಗತ್ಯವಿದೆ. ಚಿಕ್ಕಬಳ್ಳಾಪುರ ಜಿಲ್ಲೆ ಗೌರಿಬಿನೂರು ...ಕಿನ ಹೊಸೂರು ಹೋಬಳಿಯಲ್ಲಿ ಸುಮಾರು 70 ...ಳ ಹಕ್ಕಿಪಿಕ್ಕಿ ಜನಾಂಗದ ಕಾಲೋನಿ ಇದೆ. ಇವರು ...ತಃ ಅಲೆಮಾರಿ ಜನಾಂಗವಾಗಿದ್ದು ಅವರ ಮೂಲ ...ಗ ಶಿಕಾರಿ; ಮೂಲತಃ ಮಧ್ಯಪ್ರದೇಶ, ಗುಜರಾತ್, ...ದವರಾಗಿದ್ದು, ನಂತರ ಶಿಕಾರಿ ಬಿಟ್ಟು ಅಲಂಕಾರಿಕ ... ವಸ್ತುಗಳ ವ್ಯಾಪಾರ ಮಾಡಲು ಶುರು ಮಾಡಿದರು. ...ಮಾರು 50 ವರ್ಷಗಳ ಹಿಂದೆ ಶಿಕಾರಿ ಮಾಡುತ್ತಲೇ ...ರಿಂದ ಇನ್ನೊಂದೂರಿಗೆ ಕಾಲ್ನಡಿಗೆಯಲ್ಲೇ ಇಲ್ಲಿಗೆ ... ನೆಲೆ ನಿಂತವರು. ಇವರಿಗೆ ಇವರದೇ ಆದ ... ಮತ್ತು ಸಂಸ್ಕೃತಿ, ವಿಭಿನ್ನವಾದ ಜೀವನಶೈಲಿ ಇದೆ. ... ಈ ಸಮುದಾಯ ಕರ್ನಾಟಕದ ನಾನಾ ಭಾಗಗಳಲ್ಲಿ ... ಗುಂಪುಗಳಾಗಿ ಹರಡಿಹೋಗಿದೆ. ಈಗಲೂ ಇವರ ...ಬಗಳಲ್ಲಿ ಕೆಲವರು ದೆಹಲಿ, ಕಲ್ಕತ್ತ, ಮುಂಬೈ, ಚೆನ್ನೈಗೆ ...ಕ್ಕೆ ಹೋಗುತ್ತಾರೆ.

...ಲ್ಲಿ ನೆಲೆಸಿದವರು ಕೃಷಿ ಕೂಲಿ ಕೆಲಸಕ್ಕೆ ಹೋಗಲು ...ಸಿದರು. ಇಲ್ಲೇ ಮನೆ ಕಟ್ಟಿಕೊಂಡು, ಸರ್ಕಾರದ ...ಪತ್ರಗಳನ್ನು ಪಡೆದುಕೊಂಡು (ಎಲೆಕ್ಷನ್ ಕಾರ್ಡ್, ... ಕಾರ್ಡ್) ಸಂಪೂರ್ಣವಾಗಿ ಸ್ಥಳೀಯರಾದರು. ...ಂದ ನಂತರ ಕೂಲಿ ಕೆಲಸಕ್ಕೆ ಹೋಗುತ್ತಿದ್ದವರು ...ಗಿ ಸುಮಾರು 60-70 ಎಕರೆ ಬಂಜರು ಖರಾಬು ...ನುಗಳನ್ನು ಹಂಗಡಿಸಿಕೊಂಡು ಸಾಗುವಳಿ ...ಂಡು ಬರುತ್ತಿದ್ದಾರೆ. ಬಗರ್‌ಹುಕುಂ ಸಾಗುವಳಿಗಾಗಿ ... 53ರಲ್ಲಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಆದರೆ ...ಗೂ ಸಾಗುವಳಿ ಪತ್ರ ನೀಡಿಲ್ಲ.

...ದಲೋ ಇಲ್ಲಿ ಬಂದು ನೆಲೆಸಿ ಕೃಷಿ ... ಇವರಿಗೆ ಯಾವ ಆರ್ಥಿಕ-ರಾಜಕೀಯ ...ತಿ ಬಲವೂ ಇಲ್ಲ, ಇವರದು ಒಂದು ದುರ್ಬಲ ...ದು, ಇವರ ಕುಟುಂಬಗಳಲ್ಲಿ ಇವತ್ತಿಗೂ ಯಾರೂ

ಕಿತ್ತುಕೊಳ್ಳಬೇಕೆಂದೇ ಈ ಸಮುದಾಯಕ್ಕೆ ನಿರಂತರ ದೌರ್ಜನ್ಯ ಕಿರುಕುಳ ನೀಡುತ್ತಿದ್ದಾರೆ.

ಇವರ ಕಿರುಕುಳ ಹಲವು ಬಾರಿ ಹಿಂಸಾರೂಪಕ್ಕೆ ತಿರುಗಿ, ಪೊಲೀಸ್ ಠಾಣೆಯ ಮೆಟ್ಟಿಲು ಏರಿದೆ. ಆದರೆ ಪೊಲೀಸರು ಹಲ್ಲೆಕೋರರೊಂದಿಗೆ ಶಾಮೀಲಾಗಿ ಹಲ್ಲೆಗೊಳಗಾದ ಇವರ ಮೇಲೆಯೆ ಕೇಸುಗಳನ್ನು ಹಾಕುತ್ತಿದ್ದರು.

ಇದೇ ಸೆಪ್ಟೆಂಬರ್ 10ರಂದು ಮತ್ತೊಮ್ಮೆ ಎರಡೂ ಹಳ್ಳಿಯ ಸುಮಾರು 50-60 ಜನರು ಸೇರಿಕೊಂಡು ಹಕ್ಕಿಪಿಕ್ಕಿಯವರನ್ನು ಭೀಕರವಾಗಿ ಹೊಡೆದಿದ್ದಾರೆ. ಹಕ್ಕಿಪಿಕ್ಕಿಯವರು ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಇವರ ದೌರ್ಜನ್ಯ ಎಷ್ಟರಮಟ್ಟಿಗೆ ಇದೆ ಎಂದರೆ, ಇವರ ಅಮಾನುಷ ಥಳಿತದಿಂದಾಗಿ ಕೆಲವರ ತಲೆಗಳಿಗೆ ವಿಪರೀತ ಪೆಟ್ಟು ಬಿದ್ದು ವಿಕ್ಟೋರಿಯಾ ಮತ್ತು ನಿಮ್ಹಾನ್ಸ್‌ಗೆ ಹೆಚ್ಚಿನ ಚಿಕಿತ್ಸೆಗೆ ದಾಖಲಿಸಲಾಗಿದೆ. ನಾಲ್ಕು ಜನರಿಗೆ ಮೂಳೆ ಮುರಿದಿದೆ. ಜ್ಯೋದ್‌ಪುರಂ ಎನ್ನುವ ವ್ಯಕ್ತಿಗೆ ಕೈಗೆ ರಾಡ್ ಹಾಕಲಾಗಿದೆ. ಆ ಮಟ್ಟಕ್ಕೆ ಥಳಿಸಿದ್ದಾರೆ.

ಜ್ಯೋದ್‌ಪುರಂ ಎನ್ನುವವರು (ಇವರು ಮಧ್ಯಪ್ರದೇಶದ ಜ್ಯೋದ್‌ಪುರಂ ಎಂಬ ಊರಿನಿಂದ ಬಂದವರು. ಹಕ್ಕಿಪಿಕ್ಕಿ ಜನಾಂಗದವರ ಹೆಸರುಗಳೇ ವಿಶಿಷ್ಟವಾದ ರೀತಿಯವು. ಹುಟ್ಟಿದ ಸಂದರ್ಭದಲ್ಲಿ ಆ ಕ್ಷಣದಲ್ಲಿ ಮನಸ್ಸಿಗೆ ಬಂದ ಹೆಸರನ್ನು ಇಡುವ ಪದ್ಧತಿ ಇವರಲ್ಲಿದೆ) ಸುಮರು 20 ವರ್ಷಗಳಿಂದ ಹೊಸಕೋಟೆಯ ಸರ್ವೆ ನಂ.73ರಲ್ಲಿ ನಾಲ್ಕು ಎಕರೆ ಸರ್ಕಾರಿ ಬಂಜರು ಭೂಮಿಯನ್ನು ಸ್ವಚ್ಛಮಾಡಿ ಉಳುಮೆ ಮಾಡುತ್ತಿದ್ದಾರೆ. ಎರಡು ವರ್ಷಗಳ ಹಿಂದೆ ಜ್ಯೋದ್‌ಪುರಂಗೆ ಜಮೀನಿನಲ್ಲಿ ವ್ಯವಸಾಯ ಮಾಡುವಾಗ ಎಡಗಣ್ಣಿಗೆ ಮರದ ಕಡ್ಡಿ ತಗಲಿ ಎಡಕಣ್ಣು ಸಂಪೂರ್ಣವಾಗಿ ಕುರುಡಾಯಿತು. ಆಗ ಜ್ಯೋದ್‌ಪುರಂ ಆರೋಗ್ಯ ಸರಿಯಿಲ್ಲದ ಕಾರಣ ಎರಡು ವರ್ಷ ಸದರಿ ಜಮೀನಿನಲ್ಲಿ ವ್ಯವಸಾಯ ಮಾಡಲು ಕಷ್ಟವಾಗಿತ್ತು.


ಜ್ಯೋದ್‌ಪುರಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಗ ಇಂಥ ಅವಕಾಶಗಳಿಗಾಗಿ ಕಾಯುತ್ತಿದ್ದ ಪಕ್ಕದ ಗುಂಡೇನಹಳ್ಳಿ ಗ್ರಾಮದ ಗೊಲ್ಲ ಸಮುದಾಯದ ಅಂಬರೀಷ ಕಳೆದ ವರ್ಷ ಅಕ್ರಮ ಸಾಗುವಳಿ ಮಾಡಲು ಪ್ರಯತ್ನಮಾಡಿದ್ದ. ಈ ವಿಚಾರ ತಿಳಿದ ಜ್ಯೋದ್‌ಪುರಂ ವಿರೋಧಿಸಿ ಪ್ರತಿಭಟಿಸಿದ್ದರು. ಈ ವರ್ಷ ಜ್ಯೋದ್‌ಪುರಂ ತಾನು ಉಳುಮೆ ಮಾಡಲು ಹೋದಾಗ ಗೊಲ್ಲರಿಗೂ

ಜನ ಹಕ್ಕಿಪಿಕ್ಕಿಯವರ ಮೇಲೆ ಕೇಸು ಹಾಕಲಾಗಿದೆ. ಘಟನೆ ನಡೆದ ಮೊದಲ ದಿನ ಇವರ ಕೇಸನ್ನು ತೆಗೆದುಕೊಳ್ಳಲು ಪೊಲೀಸರು ಸಿದ್ಧರಿರಲಿಲ್ಲ, ನಂತರ ವಿಷಯ ತಿಳಿದು ಅಲ್ಲಿಗೆ ಬಂದ ದಲಿತ ಸಂಘರ್ಷ ಸಮಿತಿಯ ಮಧ್ಯಪ್ರವೇಶದಿಂದ ಕೇಸು ದಾಖಲಿಸಿಕೊಂಡರು.

ಡಿವೈಎಸ್‌ಪಿ ಚಿನ್ನಪ್ಪ ಕೋರ್ಟ್ ಮೊಕದ್ದಮೆಯಲ್ಲಿ

ನಿಟ್ಟಿನಲ್ಲಿ ಮುಂದಾಗಬೇಕು. ಕೂಡಲೇ ಜಿಲ್ಲಾ ಎಸ್.ಪಿ., ಜಿಲ್ಲಾಧಿಕಾರಿ ಹಾಗೂ ಸರ್ಕಾರದ ಮಟ್ಟದಲ್ಲಿ ಮಧ್ಯಪ್ರವೇಶ ಆಗುವುದು ಅಗತ್ಯವಿದೆ. ಇಲ್ಲದಿದ್ದಲ್ಲಿ ಅಲೆಮಾರಿ ಸಮುದಾಯವೊಂದು ನೆಲೆ ಕಳೆದುಕೊಳ್ಳುವ ಅವಕಾಶದಿಂದ ವಂಚಿತವಾಗುವುದರಲ್ಲಿ ಅನುಮಾನವೇ ಇಲ್ಲ.

■ ಸಂಜಯ್ ಕುಮಾರ್



ಚಿನ್ನದ ಅದಿರು ರಾಶಿ..........

ಚಿನ್ನದ ಮಣ್ಣು ಬಿಡಿಗಾಸಿಗೆ ಮಾರಾಟ

ನಮ್ಮ ಕನ್ನಡನಾಡು - ಚಿನ್ನದ ಬೀಡು ಎಂದು ಇಂದಿಗೂ ಹಲವರು ಗಂಟಲು ಎತ್ತರಿಸಿ ಮಾತನಾಡುತ್ತಿರುತ್ತಾರೆ. ಅದಕ್ಕೆ ಕಾರಣ ಜಗದ್ವಿಖ್ಯಾತ ಕೋಲಾರದ ಚಿನ್ನದ ಗಣಿ. ಆ ಗಣಿ ಕೆಲಸ ನಿಲ್ಲಿಸಿದ ಮೇಲೆ ಈಗ ಭಾರತ ದೇಶದ ಏಕೈಕ ಕಾರ್ಯನಿರತ ಚಿನ್ನದ ಗಣಿಯೆನಿಸಿಕೊಂಡಿರುವ ರಾಯಚೂರು ಬಳಿಯ ಹಟ್ಟಿ ಚಿನ್ನದ ಗಣಿ ಕನ್ನಡನಾಡಿಗೆ ಚಿನ್ನದ ಬೀಡಿನ ಖ್ಯಾತಿಯನ್ನು ಉಳಿಸಿದೆ. ಆದರೆ ಚಿನ್ನದ ಬೀಡು ಎಂಬ ಖ್ಯಾತಿ ಪಡೆದಿದ್ದು ಬಿಟ್ಟರೆ ಕನ್ನಡ ನಾಡಿಗೆ ಈ ಗಣಿಗಳಿಂದ ಆದ ಲಾಭ ತೀರಾ ನಗಣ್ಯ. ಕೆಜಿಎಫ್‌ನಲ್ಲಿ ಸಿಕ್ಕ ಸಾವಿರಾರು ಟನ್ ಚಿನ್ನವನ್ನು ಬ್ರಿಟಿಷರ ಆಡಳಿತದಲ್ಲಿ 'ಜಾನ್ ಟೇಲರ್ ಅಂಡ್ ಕಂಪನಿ' ದೋಚಿತು. ನಂತರ ಸುಮಾರು ಐದು ದಶಕಗಳ ಕಾಲ ಅದರ ಲಾಭವೆಲ್ಲ ಭ್ರಷ್ಟ ಅಧಿಕಾರಿಗಳು ಮತ್ತು ಗುತ್ತಿಗೆದಾರರ ದುಷ್ಟಕೂಟದ ಪಾಲಾಯಿತು. ಈಗ ಹಟ್ಟಿ ಚಿನ್ನದ ಗಣಿ ಕೂಡ ಅದೇ ಹಾದಿಯಿಡಿದು ಚಿನ್ನಗಳ್ಳ ಅಧಿಕಾರಿ-ನಿರ್ದೇಶಕರ ಕೂಟಕ್ಕೆ ಬಲಿಯಾಗಿರುವುದು ಮಾತ್ರ ಕನ್ನಡನಾಡಿನ ಮತ್ತೊಂದು ದುರಂತ.

ಬಂಗಾರ ಉತ್ಪಾದನೆ ಮಾಡುತ್ತಿರುವ ಹಟ್ಟಿ ಗೋಲ್ಡ್‌ಮೈನ್ಸ್ ಲಿಮಿಟೆಡ್ (ಹೆಚ್‌ಜಿಎಮ್‌ಎಲ್) ಎಂಬ ಕರ್ನಾಟಕ ಸರ್ಕಾರದ ಉದ್ಯಮದ ಚುಕ್ಕಾಣಿ ಹಿಡಿದಿರುವ ಖದೀಮರು ನಡೆಸುತ್ತಿರುವ ಭ್ರಷ್ಟಾಚಾರ ಪ್ರಕರಣಗಳು ಆಗಿಂದಾಗ್ಗೆ ಹೊರಬೀಳುತ್ತಲೇ ಇವೆ. ಆ ಪಟ್ಟಿಗೆ ಈಗ ವಿಶಿಷ್ಟವಾದ ಪ್ರಕರಣವೊಂದು ಸೇರ್ಪಡೆಯಾಗಿದೆ. ಅದು ಗೋಲ್ಡ್ ಓರ್ ಟೇಲಿಂಗ್ಸ್ ಅಥವಾ ಸೈನೈಡ್ ಬೂದಿ ಮಾರಾಟದಲ್ಲಿ ನಡೆದ ಭಾರಿ ಅವ್ಯವಹಾರ.

ಬೂದಿಗೆ 210 ರೂ. ಚಿನ್ನಕ್ಕೆ 52 ರೂ!

ಇನ್ನೊಂದು ವಿಷಯವನ್ನಿಲ್ಲಿ ಗಮನಿಸಬೇಕು. ರಾಯಚೂರು ಥರ್ಮಲ್ ವಿದ್ಯುತ್ ಸ್ಥಾವರದ (ಆರ್‌ಟಿಪಿಎಸ್) ಎಂಟನೇ ಘಟಕದಿಂದ ಉತ್ಪಾದನೆಯಾದ ದೊಡ್ಡ ಪ್ರಮಾಣದ ಹಾರುಬೂದಿಯನ್ನು ಇತ್ತೀಚೆಗೆ ಪ್ರತೀ ಮೆಟ್ರಿಕ್ ಟನ್‌ಗೆ 210 ರೂಪಾಯಿಯಂತೆ ಮಾರಾಟ ಮಾಡಲಾಯಿತು. ಉದ್ಯಮಿಗಳು ಸಿಮೆಂಟ್ ತಯಾರಿಕೆಗೆ, ರೈತರು ತಮ್ಮ ಹೊಲಕ್ಕೆ ಗೊಬ್ಬರಕ್ಕಾಗಿ ಅದನ್ನು ಒಂದು ಮೆಟ್ರಿಕ್ ಟನ್‌ಗೆ 210 ರೂಪಾಯಿ ಕೊಟ್ಟು ಕೊಳ್ಳುತ್ತಾರೆ.

ಮಣ್ಣಾಗಿ, ಗೊಬ್ಬರವಾಗಿ ಬಳಸುವ ಹಾರುಬೂದಿಯನ್ನೇ 210 ರೂಪಾಯಿಗೆ ಟನ್ ಲೆಕ್ಕದಲ್ಲಿ ಮಾರಾಟ ಮಾಡಲಾಗಿದೆ ಎಂದರೆ ಚಿನ್ನಮಿಶ್ರಿತ ಸೈನೈಡ್ ಬೂದಿಯನ್ನು ಮೆಟ್ರಿಕ್ ಟನ್‌ಗೆ 52 ರೂಪಾಯಿಯಂತೆ, 39 ರೂಪಾಯಿಯಂತೆ ಮಾರಿದ್ದು ಯಾವ ನ್ಯಾಯ ಎಂಬುದು ನಾಡಿನ ಜನರ ಪ್ರಶ್ನೆ.

ಏನಿದು ಸೈನೈಡ್ ಬೂದಿ?

ಈ ಅವ್ಯವಹಾರದ ಆಳ, ಅಗಲಗಳನ್ನು ಅರಿಯುವ ಮೊದಲು ಗೋಲ್ಡ್ ಓರ್ ಟೇಲಿಂಗ್ಸ್ ಅಥವಾ ಸೈನೈಡ್ ಬೂದಿ ಎಂದರೇನು ಎಂಬುದನ್ನು ಮೊದಲು ಸ್ಥೂಲವಾಗಿ ತಿಳಿದುಕೊಳ್ಳೋಣ. ಹಟ್ಟಿಯಲ್ಲಿ ಸಿಗುವ ಪ್ರತೀ ಮೆಟ್ರಿಕ್ ಟನ್ ಅದಿರಿನಲ್ಲಿ 3.5 ಗ್ರಾಂ ನಿಂದ 4.5 ಗ್ರಾಂ ತನಕ ಬಂಗಾರವಿರುತ್ತದೆ. ಅಂದರೆ, ಮೂರೂವರೆ ಗ್ರಾಂನಷ್ಟು ಬಂಗಾರ ತೆಗೆಯಬೇಕಾದರೆ ಒಂದು ಮೆಟ್ರಿಕ್ ಟನ್ ಕಲ್ಲನ್ನು ನುಣ್ಣನೆಯ ಹಿಟ್ಟಿನಂತೆ ಪುಡಿಮಾಡಿ, ವಿವಿಧ ರೀತಿಯಲ್ಲಿ ಸಂಸ್ಕರಿಸಬೇಕಾಗುತ್ತದೆ. ಅಷ್ಟೆಲ್ಲಾ ಮಾಡಿದರೂ ಅದಿರು ಕಲ್ಲಿನಲ್ಲಿರುವ ಎಲ್ಲಾ ಬಂಗಾರವನ್ನು ಹೊರ ತೆಗೆಯುವುದಕ್ಕೆ ಆಗುವುದಿಲ್ಲ, ಒಂದಿಷ್ಟು ಪ್ರಮಾಣದ ಚಿನ್ನ ಉಳಿದಿರುತ್ತದೆ.

ಹೀಗೆ, ಬಂಗಾರವನ್ನು ತೆಗೆದ ನಂತರ ಉಳಿಯುವ ಕಲ್ಲಿನ ಪುಡಿಯನ್ನು ಗೋಲ್ಡ್ ಓರ್ ಟೇಲಿಂಗ್ಸ್ ಅಂತ ಕರೆಯುತ್ತಾರೆ. ಚಿನ್ನವನ್ನು ಬೇರ್ಪಡಿಸುವುದಕ್ಕಾಗಿ ಬಹಳಷ್ಟು ಪ್ರಮಾಣದಲ್ಲಿ ಸೈನೈಡ್ ಎಂಬ ವಿಷವನ್ನೂ ಬಳಸಿರುವುದರಿಂದ ಈ ಕಲ್ಲಿನ ಪುಡಿಯಲ್ಲಿ ದೊಡ್ಡ ಪ್ರಮಾಣದ ಸೈನೈಡ್ ಕೂಡ ಬೆರೆತಿರುತ್ತದೆ. ಹಾಗಾಗಿ ಅದನ್ನು ಸೈನೈಡ್ ಬೂದಿ ಎಂತಲೂ ಕರೆಯುವುದುಂಟು.

ಹಟ್ಟಿಯಲ್ಲಿ ಇಂತಹ ಸೈನೈಡ್ ಬೂದಿಯ ಎರಡು ರಾಶಿಗಳಿವೆ. ಒಂದು, ಹಳೆಯ ಡಂಪ್ ಮತ್ತೊಂದು ಹೊಸ ಡಂಪ್. ನೋಡುವುದಕ್ಕೆ ಅವು ಬೃಹತ್ ಪರ್ವತಗಳಂತೆ ಕಾಣುತ್ತವೆ. ಹಳೆಯ ಡಂಪ್‌ನಲ್ಲಿ 70,00,000 ಮೆಟ್ರಿಕ್ ಟನ್ ಹಾಗೂ ಹೊಸ ಡಂಪ್‌ನಲ್ಲಿ 40,00,000 ಮೆಟ್ರಿಕ್ ಟನ್ ಸೈನೈಡ್ ಬೂದಿಯು ಸಂಗ್ರಹವಿದೆ. ಇದೇ ಕಂಪನಿಯು ಚಿತ್ರದುರ್ಗ ಬಳಿಯ ಇಂಗದಾಳ ಎಂಬಲ್ಲಿಯೂ ಈ ಹಿಂದೆ ಚಿನ್ನದ ಗಣಿಗಾರಿಕೆ ಮಾಡಿದ್ದು ಅಲ್ಲಿಯೂ 7,50,000 ಮೆಟ್ರಿಕ್ ಟನ್ ಸೈನೈಡ್ ಬೂದಿ ರಾಶಿಯಿದೆ. ಹೀಗೆ ಒಟ್ಟು 1,17,50,000 ಮೆಟ್ರಿಕ್ ಟನ್ ಚಿನ್ನಮಿಶ್ರಿತ ಸೈನೈಡ್ ಬೂದಿ ಹಟ್ಟಿ ಗೋಲ್ಡ್‌ಮೈನ್ಸ್ ಲಿಮಿಟೆಡ್ ಕಂಪನಿಯ ದಾಸ್ತಾನಿನಲ್ಲಿದೆ.

ಗಣಿ ತ್ಯಾಜ್ಯ ಎಂಬಂತೆ ಪರಿಗಣಿಸಲಾಗಿರುವ ಈ ಡಂಪ್‌ಗಳಲ್ಲಿ ಭಾರೀ ಚಿನ್ನದ ನಿಕ್ಷೇಪ ಅಡಗಿದೆಯೆಂದರೆ ನಿಮಗೆ ಆಶ್ಚರ್ಯವೆನಿಸಿದರೂ ಅದು ಸತ್ಯ. ಏಕೆಂದರೆ, ಹಿಂದೆ ಉನ್ನತ ತಂತ್ರಜ್ಞಾನವಿಲ್ಲದ ಕಾಲದಲ್ಲಿ ಬಂಗಾರದ ಅದಿರಿನ ಕಲ್ಲಿನಿಂದ ಬಹಳ ಬಂಗಾರವನ್ನು ತೆಗೆಯಲಾಗುತ್ತಿರಲಿಲ್ಲ. ಸಿಕ್ಕಷ್ಟು ಬಂಗಾರ ತೆಗೆದುಕೊಂಡು ಉಳಿದ ಕಚ್ಚಾ ಪದಾರ್ಥವನ್ನು ಡಂಪ್ ಮಾಡಲಾಗಿದೆ. ಹೀಗಾಗಿ ಹಟ್ಟಿಯ ಹಳೆಯ ಡಂಪ್ ಮತ್ತು ಚಿತ್ರದುರ್ಗದ ಇಂಗಳದಾಳದಲ್ಲಿರುವ ಸೈನೈಡ್ ಡಂಪ್‌ಗಳಲ್ಲಿ ಬಂಗಾರದ ಪ್ರಮಾಣ ಯಥೇಚ್ಛವಾಗಿದೆ.

ಹೊಸ ಡಂಪ್‌ನಲ್ಲಿರುವ ಸೈನೈಡ್ ಬೂದಿಯಲ್ಲಿ ಮರು ಸಂಸ್ಕರಣೆ ನಡೆಸಿದರೆ ಲಾಭದಾಯಕವಾಗುವಷ್ಟು ಬಂಗಾರದ ಪ್ರಮಾಣ ಲಭ್ಯವಿಲ್ಲ ಎನ್ನಲಾಗುತ್ತಿದೆ. ಏಕೆಂದರೆ 2000 ದಿಂದೀಚೆಗೆ ಆಧುನಿಕ ತಂತ್ರಜ್ಞಾನ ಬಳಸಿ ಚಿನ್ನದ ಅದಿರಿನಿಂದ ಬಹುತೇಕ ಪ್ರಮಾಣದ ಬಂಗಾರವನ್ನು ತೆಗೆಯಲಾಗುತ್ತಿದೆ. ಆದರೆ ಹಳೆಯ ಡಂಪ್‌ಗಳ ಬೂದಿಯನ್ನು ಮರು ಸಂಸ್ಕರಣೆ ಮಾಡಿ ಸಾವಿರಾರು ಕೋಟಿ ಮೌಲ್ಯದ ಚಿನ್ನವನ್ನು ಪಡೆಯಬಹುದು ಎಂಬುದು ನಿರ್ವಿವಾದ.

ಸ್ವಾತಂತ್ರ್ಯಪೂರ್ವದಿಂದಲೂ ಇಲ್ಲಿ ಚಿನ್ನದ ಗಣಿಗಾರಿಕೆ ನಡೆಯುತ್ತಿದ್ದು ಒಮ್ಮೆಯೂ ಈ ಬೂದಿಯನ್ನು ವಿಲೇವಾರಿ ಮಾಡಿಲ್ಲ. ಕಂಪನಿ ಸಂಕಷ್ಟಕ್ಕೆ ಸಿಲುಕಿದಾಗ ಅಥವಾ ಭೂಗರ್ಭದಲ್ಲಿ ಬಂಗಾರದ ಪಟ್ಟಿಗಳು ಖಾಲಿಯಾದ ಮೇಲೆ ಈ ಬೂದಿಯಲ್ಲಿರುವ ಚಿನ್ನವನ್ನು ಮತ್ತೊಮ್ಮೆ ಸಂಸ್ಕರಿಸಿ ಹೊರ ತೆಗೆಯಬಹುದು ಎಂಬ ಲೆಕ್ಕಾಚಾರ ಇದುವರೆಗೆ ಚಾಲ್ತಿಯಲ್ಲಿತ್ತು.


ಸೈನೈಡ್ ಬೂದಿಯ ಮೇಲೆ ಕಳ್ಳರ ಕಣ್ಣು

ಕಳ್ಳರು ಎಂದಾಕ್ಷಣಕ್ಕೆ ಹೊರಗಿನಿಂದ ಬರುವ ಮುಸುಕುಧಾರಿ ಕಳ್ಳರು ಎಂದೇ ಅರ್ಥೈಸಿಕೊಳ್ಳಬೇಕಿಲ್ಲ. ಹಟ್ಟಿ ಗೋಲ್ಡ್‌ಮೈನ್ಸ್ ಲಿಮಿಟೆಡ್ ಕಂಪನಿಯ ಒಳಗೇ ಆಯಕಟ್ಟಿನ ಸ್ಥಳದಲ್ಲಿ, ಉನ್ನತ ಹುದ್ದೆಗಳಲ್ಲಿ ಕುಳಿತಿರುವ ಕಳ್ಳರ ಕಣ್ಣು ಈ ಸೈನೈಡ್ ಬೂದಿಯ ರಾಶಿಯ ಮೇಲೆ ಬಹಳ ಹಿಂದೆಯೇ ಬಿದ್ದಿತ್ತು. ಆದರೆ, ಜನರ ಮತ್ತು ಕಾರ್ಮಿಕರ ಪ್ರತಿರೋಧ ಹಾಗೂ ಕಂಪನಿಯಲ್ಲಿ ಈ ಹಿಂದೆ ಕೆಲಸ ಮಾಡುತ್ತಿದ್ದ ಪ್ರಾಮಾಣಿಕ ಅಧ್ಯಕ್ಷರುಗಳ ಕಾಳಜಿಯಿಂದಾಗಿ ಅದು ಇಲ್ಲಿಯತನಕ ಉಳಿದುಕೊಂಡಿತ್ತು. ಈಗ ಕಳ್ಳರ ಕೈಗೆ ಖಜಾನೆ ಕೊಟ್ಟರೆ ಏನಾಗುತ್ತೋ ಅದೇ ಆಗಿದೆ.

ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯ ಆಡ... ಮಂಡಳಿಯು ಇಡೀ 1,17,50,000 ಮೆಟ್ರಿಕ್ ... ಸೈನೈಡ್ ಬೂದಿಯನ್ನು ಚೆನ್ನೈ ಮೂಲದ ಸ್ಟಾರ್ ಟ... ಪ್ರೈವೇಟ್ ಲಿಮಿಟೆಡ್ ಎಂಬ ಕಂಪನಿಗೆ ಬಿಡಿಗ... ಮಾರಿಬಿಟ್ಟಿದೆ! ಎಷ್ಟು ಬೆಲೆಗೆ ಗೊತ್ತೆ? ಹಟ್ಟಿಯ ಹ... ಡಂಪ್‌ನಲ್ಲಿರುವ 70,00,000 ಮೆಟ್ರಿಕ್ ಟನ್ ಹಾ... ಚಿತ್ರದುರ್ಗದ ಇಂಗಳದಾಳದಲ್ಲಿರುವ 7,50,000 ಮೆ... ಟನ್ ಸೈನೈಡ್ ಬೂದಿಯನ್ನು ಪ್ರತೀ ಮೆಟ್ರಿಕ್ ಟ... 52 ರೂಪಾಯಿಯಂತೆ ಹಾಗೂ ಹಟ್ಟಿಯ ಹ... ಡಂಪ್‌ನಲ್ಲಿರುವ 40,00,000 ಮೆಟ್ರಿಕ್ ಟನ್ ಸೈನ... ಬೂದಿಯನ್ನು ಪ್ರತಿ ಮೆಟ್ರಿಕ್ ಟನ್‌ಗೆ ... ರೂಪಾಯಿಯಂತೆ ಮಾರಿಕೊಂಡಿದ್ದಾರೆ! ಅಂದರೆ ... ಮಾರಾಟದಿಂದ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಗೆ ದ... ಒಟ್ಟು ಹಣ ಕೇವಲ 59 ಕೋಟಿ ರೂಪಾಯಿ ಮ... ಆದರೆ, ಕೆಲವು ಕಾರ್ಮಿಕ ನಾಯಕರು ಹೇಳುವ ಹ... ಈ ಸೈನೈಡ್ ಬೂದಿಯಲ್ಲಿರುವ ಚಿನ್ನದ ಪ್ರಮಾಣ ಮ... ಕೋಟಿ ಗ್ರಾಂಗಳಿಗೂ ಹೆಚ್ಚಿದ್ದು ಅದರ ಮಾರುಕಟ್ಟೆ ಮೌಲ್ಯ 8ರಿಂದ 10 ಸಾವಿರ ಕೋಟಿ ರೂಪಾಯಿಂ... ದಾಟುತ್ತದೆ ಎಂಬುದು ಒಂದು ಅಂದಾಜು. ಸಂಸ್ಕರ... ಖರ್ಚುವೆಚ್ಚ ಗಳನ್ನೆಲ್ಲಾ ತೆಗೆದರೂ ಸಾವಿರಾರು ಕೋ... ರೂಪಾಯಿ ಲಾಭವಾಗುವುದಲ್ಲದೆ ಸ್ಥಳೀಯ ಆರ್ಥಿಕ ... ಅಭಿವೃದ್ಧಿಗೆ ಭಾರೀ ಕೊಡುಗೆ ನೀಡುತ್ತದೆ ಎಂಬ... ಅವರ ವಾದ.


ಆದರೆ, ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್ ಅ... ಮಾರಾಟ ಮಾಡಿದ್ದು ಕೇವಲ 59 ಕೋಟಿಗೆ! ... ಗೋಲ್ಡ್‌ಮೈನ್ಸ್ ಲಿಮಿಟೆಡ್ ಪರವಾಗಿ ಅದರ ಜ... ಮ್ಯಾನೇಜರ್ (ಸಮನ್ವಯ) ಎ.ಆರ್.ವಾಲ್ಮೀಕಿ ಹ... ಸ್ಟಾರ್ ಟ್ರೇಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯ ಪ... ಅದರ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇ... ಪಿ.ಆರ್.ಮಹೇಶ್ವರನ್ 2013ರ ಜುಲೈ 2ರಂದು ... ಹಾಕಿದ ಒಡಂಬಡಿಕೆಯ (ಮೆಮೋರಂಡಮ್ ... ಅಗ್ರಿಮೆಂಟ್) ಪ್ರತಿಯು 'ಲಂಕೇಶ್' ಬಳಿಯಿದ್ದು ... ಅವ್ಯವಹಾರಕ್ಕೆ ಕನ್ನಡಿ ಹಿಡಿದಿದೆ.

ಈ ಹಿಂದೆ 2005ರಲ್ಲೂ ... ಒಳಖದೀಮರ ಕಣ್ಣು ಈ ಸೈ... ಬೂದಿಯ ಮೇಲೆ ಬಿದ್ದಿತ್ತು. ಆಗ ಅ... ವಿ ಡೇವಿಡ್ ಎಂಬುವವರು ಹಟ್ಟಿ ಗೋ... ಮೈನ್ಸ್ ಲಿಮಿಟೆಡ್‌ನ ವ್ಯವ... ನಿರ್ದೇಶಕರಾಗಿದ್ದರು. ರಾಯಚ... ಮೂಲದ ಉದ್ಯಮಿ, ಕಾಂಗ್ರೆಸ್ ನ... ಪಾರಸ್ಮಲ್ ಸುಖಾಣಿ ಅದರ ಅಧ್ಯಕ್ಷರಾ... ಪ್ರತೀ ಮೆಟ್ರಿಕ್ ಟನ್‌ಗೆ ... ರೂಪಾಯಿಯಂತೆ ಬೆಂಗಳೂರು ಮ... ವಿಶಾಲ್ ಗ್ಲೋಬಲ್ ಸಲೂಷನ್ಸ್ ... ಕಂಪನಿಗೆ ಮಾರಾಟ ಮಾಡುವ ... ತಯಾರಿಯೂ ನಡೆದುಹೋಗಿತ್ತು. ... ಈ ಚಿನ್ನಮಿಶ್ರಿತ ಸೈನೈಡ್ ಬ... ಮೌಲ್ಯ ಅರಿತಿದ್ದ ಅಧ್ಯಕ್ಷ ಪಾ... ಸುಖಾಣಿ ಇಷ್ಟೊಂದು ಕಡಿಮೆ ಬೆಲೆ... ಮಾರಿರುವ ದರಕ್ಕೆ ಹೋಲಿಸಿ ... ಅದನ್ನು ಮಾರುವುದಕ್ಕೆ ಸು... ಸಿದ್ಧವಿರಲಿಲ್ಲ. ಹಾಗಾಗಿ, ಅ... ದುರ್ವ್ಯವಹಾರಕ್ಕೆ ಅವರು ಅ... ಕೊಡಲಿಲ್ಲ. ಅವರು ದೊಡ್ಡ ... ಪ್ರತಿರೋಧ ಒಡ್ಡಿದರಲ್ಲದೇ ಅಂದು ... ಮತ್ತು ವಾಣಿಜ್ಯ ಇಲಾ...



ಕರ್ನಾಟಕ ಸರ್ಕಾರ
Government of Karnataka
ನೋಂದಣಿ ಹಾಗೂ ಮುದ್ರಾಂಕ ಇಲಾಖೆ
Registration and Stamps Department


MEMORANDUM OF AGREEMENT FOR SALES OF GOLD ORE TAILINGS



ಕರ್ನಾಟಕ ಸರ್ಕಾರ
Government of Karnataka
ನೋಂದಣಿ ಹಾಗೂ ಮುದ್ರಾಂಕ ಇಲಾಖೆ
Registration and Stamps Department

P.R.Maheswaran
Chairman & Manging Director

ಮಾರಾಟದ ಕರಾರು ಪತ್ರ.......



...ದರ್ಶಿಯಾಗಿದ್ದ ಜಿ. ಲತಾ ಕೃಷ್ಣರಾವ್ ಅವರಿಗೆ ...ನ್ನೂ ಬರೆದಿದ್ದರು. ಕೊನೆಗೆ ಮುತುವರ್ಜಿ ವಹಿಸಿದ ಕೃಷ್ಣರಾವ್ ಇಡೀ ವ್ಯವಹಾರವನ್ನೇ ರದ್ದುಪಡಿಸಿದ್ದರು. ...ನಿರ್ದೇಶಕ ಮಂಡಳಿಯ ಸಭೆಯಲ್ಲಿ ವ್ಯವಸ್ಥಾಪಕ ...ಶಕರಾಗಿದ್ದ ಅಶೋಕ್ ವಿ ಡೇವಿಡ್ ಅವರನ್ನು ...ಗೆ ತೆಗೆದುಕೊಂಡರಲ್ಲದೇ ಅವರಿಗೆ ಅಧಿಕೃತವಾಗಿ ...ಸನ್ನೂ ಜಾರಿ ಮಾಡಿದ್ದರು.

...ದ್ದರಾಮಯ್ಯನವರ ಸರ್ಕಾರ ನಾನಾ ಆಂತರಿಕ ...ದಲಗಳಲ್ಲಿ ಸಿಲುಕಿರುವ ಸಂದರ್ಭವನ್ನು ...ಯೋಗ ಪಡಿಸಿಕೊಂಡು ಈ ಒಳಗಳ್ಳರು ಸದ್ದಿಲ್ಲದೇ ಹಗಲುದರೋಡೆಯ ಷಡ್ಯಂತ್ರ ಹೆಣೆದಿದ್ದಾರೆ. ...ರಲ್ಲಿ ಬಂಗಾರದ ಬೆಲೆ ಎಷ್ಟಿತ್ತು, ಈಗ ಎಷ್ಟಿದೆ? ... ಪ್ರತೀ ಮೆಟ್ರಿಕ್ ಟನ್‌ಗೆ 178 ರೂಪಾಯಿ ...ಅತ್ಯಂತ ಕಡಿಮೆ ಬೆಲೆ ಎಂದು ಅಂದಿನ ಅಧ್ಯಕ್ಷರು ...ಸಿ ಮಾರಾಟವನ್ನು ತಡೆದಿದ್ದರೆಂದ ಮೇಲೆ ಇವತ್ತು ... ಬೆಲೆ ಗಗನ ಮುಟ್ಟಿರುವ ಸಂದರ್ಭದಲ್ಲಿ ಈ ...ಯೂ ಜಾಸ್ತಿಯಾಗಬೇಕಲ್ಲವೆ? ಆದರೆ, 2005ರಲ್ಲಿ ...ಪಡಿಸಿದ ಬೆಲೆಯ ಮೂರನೇ ಒಂದರಷ್ಟು ಬೆಲೆಗೆ ...ದ್ದಾರೆಂದರೆ ಅದನ್ನು ಏನೆಂದು ...ಮಾಡಿಕೊಳ್ಳಬೇಕು?

... ಒಟ್ಟಾರೆ ವ್ಯವಹಾರದ ಬಗ್ಗೆ ಮಾರಾಟ ಒಪ್ಪಂದಕ್ಕೆ ...ಮಾಡಿದ ಜನರಲ್ ಮ್ಯಾನೇಜರ್ ಎ.ಆರ್.ವಾಲ್ಮೀಕಿ ... ಕೇಳಿದರೆ ಮೊದಮೊದಲು ಸ್ವಲ್ಪ ಗದರಿಕೆಯ ...ಲ್ಲಿ ಮಾತಾಡಿ ಪ್ರಶ್ನೆ ಕೇಳುವವರನ್ನೇ ಹೆದರಿಸಲು ...ತ್ನಿಸುತ್ತಾನೆ. ಆದರೂ ಪಟ್ಟು ಬಿಡದೆ ನಿಂತರೆ, ಅದೂ ... ಅಂತ ಸಬೂಬು ಹೇಳಿ ತಪ್ಪಿಸಿಕೊಳ್ಳಲು ...ತ್ನಿಸುತ್ತಾನೆ. ಕೊನೆಗೆ ಎಲ್ಲಿ ತನ್ನ ಬುಡಕ್ಕೇ ಬರುತ್ತೋ ...ತಾನೇ ಬೆದರಿ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿಯ ...ಶಕ ಮಂಡಳಿಯ ತೀರ್ಮಾನದಂತೆ ನಾನು ಒಪ್ಪಂದಕ್ಕೆ ...ಹಾಕಿದ್ದೇನೆ ಎಂದು ಜಾರಿಕೊಳ್ಳುತ್ತಾನೆ. ಹೋಗಲಿ, ... ಬೂದಿ ಮಾರಾಟ ಮಾಡುವುದಕ್ಕೆ ನಿಯಮದ ... ಟೆಂಡರ್ ಕರೆಯಲಾಗಿದೆಯೇ ಎಂದು ಕೇಳಿದರೆ, ...ಕರೆದಿದ್ದೇವೆ, ನಾಲ್ಕು ಕಂಪನಿಗಳು ಅರ್ಜಿ ಹಾಕಿದ್ದವು. ...ಳಲ್ಲಿ ಎರಡು ಅನರ್ಹಗೊಂಡವು. ಉಳಿದ ಎರಡು ...ಗಳಲ್ಲಿ ಅತಿಹೆಚ್ಚು ಬಿಡ್ ಮಾಡಿದ ಕಂಪನಿಗೆ ...ದೆವು" ಎಂದು ಹೇಳುತ್ತಾನೆ. ಆದರೆ, ಇಷ್ಟೊಂದು ... ಬೆಲೆಗೆ ಮಾರಾಟ ಮಾಡುವ ಅವಶ್ಯಕತೆಯೇನಿತ್ತು ... ಪ್ರಶ್ನೆಗೆ ಆತನ ಬಳಿ ಉತ್ತರವಿಲ್ಲ.

...ಕೊನೆಗೆ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ...ಮೊನ್ನಪ್ಪ ಕೇಳಿದ ಪ್ರಶ್ನೆಬಿಟ್ಟು ಉಳಿದದ್ದೆಲ್ಲವನ್ನೂ ...ಡುತ್ತಾನೆ. ಆತನ ಪ್ರಕಾರ ಸೈನೈಡ್ ಬೂದಿಯನ್ನು ... ಪ್ರಮುಖ ಕಾರಣಗಳಿಗಾಗಿ ಮಾರಾಟ ಮಾಡಲಾಗಿದೆ. ...ಯದು, ಹೊಸದಾಗಿ ಪ್ರತೀದಿನ ಉತ್ಪತ್ತಿಯಾಗುತ್ತಿರುವ 2000 ಮೆಟ್ರಿಕ್ ಟನ್ ಸೈನೈಡ್ ಬೂದಿಯನ್ನು ಡಂಪ್ ಮಾಡುವುದಕ್ಕೆ ಸ್ಥಳವಿಲ್ಲ. ಈಗಾಗಲೇ ಸೃಷ್ಟಿಯಾಗಿರುವ 1.10 ಕೋಟಿ ಮೆಟ್ರಿಕ್ ಟನ್ ಸೈನೈಡ್ ಬೂದಿಯು ಹಟ್ಟಿಯಲ್ಲಿರುವ ನೂರೈವತ್ತು ಎಕರೆ ಜಮೀನನ್ನು ಆಕ್ರಮಿಸಿಕೊಂಡಿದೆ. ಹೊಸದಾಗಿ ಸೃಷ್ಟಿಯಾಗುತ್ತಿರುವ ಬೂದಿ ಹಾಕುವುದಕ್ಕಾಗಿ ರೈತರಿಂದ ಜಮೀನು ಸ್ವಾಧೀನಪಡಿಸಿ ಕೊಳ್ಳುತ್ತಾ ಹೋಗುವುದಕ್ಕೆ ಆಗುವುದಿಲ್ಲ. ಈಗ ಭೂಸ್ವಾಧೀನ ಪ್ರಕ್ರಿಯೆಯೂ ಬಹಳ ಕಠಿಣವಾಗಿದೆ. ಹಾಗಾಗಿ, ಇರುವ ಜಮೀನಿನಲ್ಲಿ ಶೇಖರಣೆಗೊಂಡಿರುವ ಸೈನೈಡ್ ಬೂದಿಯನ್ನು ಮಾರಿ ಖಾಲಿ ಮಾಡಿದರೆ ಅದೇ ಜಾಗದಲ್ಲಿ ಹೊಸ ಬೂದಿಯನ್ನು ಹಾಕಬಹುದು.

ಆತ ಕೊಡುವ ಎರಡನೇ ಕಾರಣ ಎಂದರೆ, ಗಣಿಗಾರಿಕೆ ವಿಸ್ತರಣೆ ಮಾಡುವುದಕ್ಕೆ ಸೈನೈಡ್ ಬೂದಿಯ ರಾಶಿ ಅಡ್ಡಿಯಾಗಿದೆ ಎಂಬುದು. ಆತನ ಪ್ರಕಾರ ಯಾವ ನೂರೈವತ್ತು ಎಕರೆ ಜಾಗದಲ್ಲಿ ಬೃಹತ್ ಪ್ರಮಾಣದ ಸೈನೈಡ್ ಬೂದಿಯ ರಾಶಿ ಬಿದ್ದಿದ್ದೆಯೋ ಅದೇ ನೆಲದ ಕೆಳಗೆ, ಆಳ ಭೂಗರ್ಭದಲ್ಲಿ ಬಂಗಾರದ ಅದಿರಿನ ಪಟ್ಟಿಗಳು ಹಾದುಹೋಗಿವೆ. ಭೂಮಿ ಮೇಲ್ಮೈ ಭಾಗದಲ್ಲಿರುವ ಸೈನೈಡ್ ಬೂದಿಯ ರಾಶಿಯನ್ನು ತೆಗೆಯದ ಹೊರತು ಭೂಗರ್ಭದಡಿಯಲ್ಲಿರುವ ಈ ಚಿನ್ನವನ್ನು ತೆಗೆಯುವುದಕ್ಕೆ ಆಗುವುದಿಲ್ಲ. ಸುರಂಗ ಕೊರೆದರೆ ಭೂಮಿ ಕುಸಿಯುವ ಅಪಾಯವಿರುತ್ತದೆ ಎಂಬುದು ಆತನ ಇನ್ನೊಂದು ವಾದ. ಆದರೆ ಆಳ ಭೂಗರ್ಭದಲ್ಲಿ ಭೂಕುಸಿತದ ಪ್ರಶ್ನೆಯೇ ಬರುವುದಿಲ್ಲ. ಸಡಿಲ ಮಣ್ಣು ಭೂಮಿಯ ಮೇಲ್ಮೈಭಾಗದಲ್ಲಿ ಮಾತ್ರ ಇರುತ್ತದೆ. ಕೆಲವೇ ನೂರು ಅಡಿ ಆಳಕ್ಕೆ ಹೋದಂತೆ ಅಲ್ಲಿ ಕೇವಲ ಕಲ್ಲುಬಂಡೆಗಳಿಂದ ಕೂಡಿದ ಶಿಲಾಪದರವಷ್ಟೇ ಇರುತ್ತದೆ. ಹೀಗಾಗಿಯೇ ಅಲ್ಲಿ ಭೂಕುಸಿತದ ಪ್ರಶ್ನೆ ಎದುರಾಗುವುದಿಲ್ಲ. ಬೃಹತ್ ಕಲ್ಲು ಬಂಡೆಯಲ್ಲಿ ಒಂದು ತೂತು ಮಾಡಿದರೆ ಏನೂ ಸಮಸ್ಯೆಯಾಗುವುದಿಲ್ಲ. ದೊಡ್ಡ ದೊಡ್ಡ ನಗರಗಳ ಕೆಳಗೂ ಭೂಗರ್ಭದಲ್ಲಿ ಭೂಗತ ಗಣಿಗಾರಿಕೆ ನಡೆಯುತ್ತಿರುವ ಉದಾಹರಣೆಗಳು ವಿಶ್ವದಲ್ಲಿ ಬೇಕಾದಷ್ಟು ಸಿಗುತ್ತವೆ. ಅಲ್ಲದೇ, ಹಟ್ಟಿಯಲ್ಲೂ ಕೂಡ, ಭೂಮಿಯ ಮೇಲ್ಮೈ ಮೇಲೆ ಹಟ್ಟಿ ಹಳ್ಳಿಯಿದೆ, ಹಟ್ಟಿಯ ಗಣಿ ಕಾರ್ಮಿಕರು ವಾಸ ಮಾಡುವ ಹಟ್ಟಿ ಕಾರ್ಮಿಕರ ಕಾಲೋನಿ ಇದೆ, ಕ್ಲಬ್ಬುಗಳಿವೆ, ಬಾರುಗಳಿವೆ, ಗೆಸ್ಟ್ ಹೌಸ್‌ಗಳಿವೆ, ಅಧಿಕಾರಿಗಳ ಮನೆಗಳಿವೆ. ಒಳಗೆ ಭೂಗರ್ಭದಲ್ಲಿ ಗಣಿಗಾರಿಕೆ ನಡೆಯುತ್ತಿದೆ. ಇದು ಜನರನ್ನು ದಾರಿತಪ್ಪಿಸುವುದಕ್ಕೆ ಆತ ಮಾಡುತ್ತಿರುವ ಕುತರ್ಕವಲ್ಲದೆ ಮತ್ತೇನಲ್ಲ.

ಇನ್ನೂ ಮೂರನೇ ಕಾರಣ ಎಂದರೆ, ಇಂಡಿಯನ್ ಬ್ಯೂರೋ ಆಫ್ ಮೈನ್ಸ್ (ಐಬಿಎಂ) ಈ ಸೈನೈಡ್ ಬೂದಿಯ ರಾಶಿಯನ್ನು ಬೇಗನೇ ಖಾಲಿ ಮಾಡಿ ಎಂದು ಹಟ್ಟಿ ಗೋಲ್ಡ್ ಮೈನ್ಸ್‌ನವರಿಗೆ ತಾಕೀತು ಮಾಡಿದ್ದಾರಂತೆ. ಐಬಿಎಂ ಎಂಬುದು ಕೇಂದ್ರ ಸರ್ಕಾರದ ಅಧೀನದಲ್ಲಿರುವ ಒಂದು ಸಂಸ್ಥೆ. ಗಣಿಗಾರಿಕೆ ನಡೆಸುವುದಕ್ಕೆ ಸಂಬಂಧಿಸಿದ ಹಲವು ವಿಷಯಗಳ ಬಗ್ಗೆ ಅದರಿಂದ ಅನುಮತಿ ಪಡೆಯಬೇಕು. ಹಲವಾರು ದಶಕಗಳು ಸುಮ್ಮನಿದ್ದ ಐಬಿಎಂ ಈಗೇಕೆ ದಿಢೀರನೇ ಈ ಬೂದಿ ಖಾಲಿ ಮಾಡುವುದಕ್ಕೆ ಹೇಳಿತು ಎಂಬುದು ಎಲ್ಲರಲ್ಲೂ ಸಂಶಯ ಮೂಡಿಸುತ್ತಿದೆ. ಒಂದು ಮೂಲದ ಪ್ರಕಾರ ಹಟ್ಟಿ ಕಂಪನಿಯಲ್ಲಿರುವ ಹೆಗ್ಗಣಗಳು ಮತ್ತು ಫಲಾನುಭವಿ ಸ್ಟಾರ್ ಟ್ರೇಸ್ ಕಂಪನಿ ಐಬಿಎಂ ಮೇಲೆ ಪ್ರಭಾವ ಬೀರಿ ಅಂತಹ ಆದೇಶವೊಂದನ್ನು ತರಿಸಿಕೊಂಡಿವೆ!

ಇನ್ನು ಮೊನ್ನಪ್ಪನ ನಾಲ್ಕನೇ ಕಾರಣ ಏನೆಂದರೆ, ಎಸ್.ಸುದರ್ಶನ್ ಸಮಿತಿಯ ವರದಿಯ ಪ್ರಕಾರ ಈ ಸೈನೈಡ್ ಬೂದಿಯು ಸುತ್ತಮುತ್ತಲ ಪ್ರದೇಶದಲ್ಲಿ ಜಲಮಾಲಿನ್ಯಕ್ಕೆ ಕಾರಣವಾಗಿದೆ ಎಂದು ಬೊಟ್ಟು ಮಾಡಿ ತೋರಿಸಿದೆಯಂತೆ. ನಿಮಗೆ ಗೊತ್ತಿರಬಹುದು, ಈ ಎಸ್.ಸುದರ್ಶನ್ ಒಬ್ಬ ಪರಿಸರವಾದಿ. ಪ್ರತಿಷ್ಠಿತ ಮ್ಯಾಗ್ಸಸ್ಸೆ ಪ್ರಶಸ್ತಿ ಪುರಸ್ಕೃತ ವ್ಯಕ್ತಿ. ರಾಯಚೂರಿನ 44 ಹಳ್ಳಿಗಳಲ್ಲಿ ನೀರು ಆರ್ಸೆನಿಕ್ ಎಂಬ ವಿಷದಿಂದ ಕಲುಷಿತವಾಗಿದೆ ಎಂಬ ಅಂಶ ಹೊರಬಿದ್ದಾಗ ಕರ್ನಾಟಕ ಸರ್ಕಾರ ಇವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ಈ ಹಳ್ಳಿಗಳಿಗೆ ಕಳಿಸಿತ್ತು. ಆಗ ಒಂದು ದಿನ ಮಾತ್ರ ಭೇಟಿ ಕೊಟ್ಟ ಸುದರ್ಶನ್ ನೇತೃತ್ವದ ತಂಡ ಕಾಟಾಚಾರಕ್ಕೆ ಕೆಲವು ಹಳ್ಳಿಗಳಿಗೆ ಭೇಟಿ ನೀಡಿ, ಅವರಿವರು ಹೇಳಿದ ಅರೆಬೆಂದ ಮಾಹಿತಿಯನ್ನು ಕೇಳಿಸಿಕೊಂಡು ಒಂದು ಸರ್ಕಾರಕ್ಕೆ ಒಂದು ವರದಿಯನ್ನು ಸಲ್ಲಿಸುವ ಶಾಸ್ತ್ರ ಮಾಡಿ ಮುಗಿಸಿತ್ತು. ಜಾಳುಜಾಳಾದ ಈ ವರದಿಯಲ್ಲಿ ಹಟ್ಟಿ ಚಿನ್ನದ ಗಣಿಗಾರಿಕೆಯಿಂದಲೇ ಸುತ್ತಮುತ್ತಲು ಜಲಮಾಲಿನ್ಯ ಆಗುತ್ತಿದೆ ಎಂದು ಹೇಳಿತ್ತು. ಆಗ ಇದೇ ಹಟ್ಟಿ ಕಂಪನಿಯವರು ಸುದರ್ಶನ್ ವರದಿ ಅವೈಜ್ಞಾನಿಕ, ಜಲಮಾಲಿನ್ಯಕ್ಕೂ ಹಟ್ಟಿ ಕಂಪನಿಯ ಗಣಿಗಾರಿಕೆಗೂ ಯಾವುದೇ ಸಂಬಂಧ ಇಲ್ಲ ಎಂದು ಬೊಬ್ಬಿರಿದಿದ್ದರು. ಈಗ ಸೈನೈಡ್ ಬೂದಿ ಮಾರಾಟದ ಅವ್ಯವಹಾರ ತಮ್ಮ ಕುತ್ತಿಗೆಗೆ ಸುತ್ತಿಕೊಳ್ಳುತ್ತಿದೆ ಎಂಬುದು ಅರಿವಾಗುತ್ತಿದ್ದಂತೆಯೇ ಯಾವ ಸುದರ್ಶನ್ ವರದಿಯನ್ನು ಜರಿದಿದ್ದರೋ ಅದೇ ವರದಿಯನ್ನು ತಮ್ಮ ಅನುಕೂಲಕ್ಕೆ ಬಳಸಿಕೊಳ್ಳುತ್ತಿದ್ದಾರೆ.

ಅಂದಹಾಗೆ, ಮೊನ್ನಪ್ಪ ಬಹಳ ಜಾಣತನದಿಂದ ಸೈನೈಡ್ ಬೂದಿಯನ್ನು ಮಾರುವ ಅನಿವಾರ್ಯತೆ ಯಾಕೆ ಬಂತು ಎಂದು ಗಂಟೆಗಟ್ಟಲೇ ಮಾತಾಡುತ್ತಾನೆಯೇ ಹೊರತು ಅಷ್ಟೊಂದು ಕಡಿಮೆ ಬೆಲೆಗೆ ಯಾಕೆ ಮಾರಿದಿರಿ ಎಂದು ಕೇಳಿದರೆ ಗುಂಯ್, ಗುಂಯ್ ಅನ್ನುತ್ತಾ ನುಣುಚಿಕೊಳ್ಳಲು ಪ್ರಯತ್ನಿಸುತ್ತಾನೆ.

ಇನ್ನೊಂದು ವಿಷಯ ನೆನಪಿರಲಿ. ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್ ಕಂಪನಿಯ ನಿರ್ದೇಶಕ ಮಂಡಳಿಯಲ್ಲಿ ಯಾರೂ ಒಂದು ವರ್ಷಕ್ಕಿಂತ ಹೆಚ್ಚು ಕಾಲ ಇರುವುದಿಲ್ಲ. ಸರ್ಕಾರ ಅವರನ್ನು ಕೂಡಲೇ ಬದಲಿಸಿಬಿಡುತ್ತದೆ. ಆದರೆ, ಈ ಮೊನ್ನಪ್ಪ ಕಳೆದ ಮೂರು ವರ್ಷಗಳಿಂದ ತಳವೂರಿಕೊಂಡು ಕುಳಿತಿದ್ದಾನೆ. ಆತನೇ ಈ ಅವ್ಯವಹಾರದ ಹಿಂದಿನ ಚಾಲಕಶಕ್ತಿ ಎಂದು ಜನ ಅಂದುಕೊಳ್ಳುತ್ತಿರುವುದು ಸಂಪೂರ್ಣ ಸುಳ್ಳಾಗಿರಲಿಕ್ಕಿಲ್ಲ.

ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್ ಕಂಪನಿಯು ಕರ್ನಾಟಕ ಸರ್ಕಾರದ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಅಡಿಯಲ್ಲಿ ಕೆಲಸ ಮಾಡುತ್ತದೆ. ಆ ಇಲಾಖೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ನೋಡಿಕೊಳ್ಳುತ್ತಿದ್ದಾರೆ. ತುಷಾರ್ ಗಿರಿನಾಥ್ ಎಂಬ ಪ್ರಾಮಾಣಿಕ ಅಧಿಕಾರಿಯೊಬ್ಬರು ಅವರಿಗೆ ಈ ಇಲಾಖೆಯಲ್ಲಿ ಕಾರ್ಯದರ್ಶಿಯಾಗಿ ಸಿಕ್ಕಿದ್ದಾರೆ. ತುಷಾರ್ ಗಿರಿನಾಥ್ ಅವರು ಹಟ್ಟಿ ಗೋಲ್ಡ್ ಮೈನ್ಸ್ ಲಿಮಿಟೆಡ್‌ನ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ. ಈ ಸೈನೈಡ್ ಬೂದಿ ಮಾರಾಟದ ಗೋಲ್‌ಮಾಲ್ ಅವರ ಗಮನಕ್ಕೆ ಬಾರದೇ ನಡೆದಿರುವ ಸಾಧ್ಯತೆಯೇ ಹೆಚ್ಚು. ಗಮನಕ್ಕೆ ಬಂದಿದ್ದರೂ ಅವರನ್ನು ಹಾದಿತಪ್ಪಿಸುವ ಕೆಲಸವಂತೂ ಖಂಡಿತ ಆಗಿರುತ್ತದೆ. ತುಷಾರ್ ಗಿರಿನಾಥ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಇಬ್ಬರೂ ಇದರ ಕಡೆ ಒಂದಿಷ್ಟು ಗಮನ ಹರಿಸುವುದಕ್ಕೆ ಈಗಲೂ ಕಾಲ ಮಿಂಚಿಲ್ಲ.

ಏಕೆಂದರೆ, ಸೈನೈಡ್ ಬೂದಿಯನ್ನು ಮಾರಾಟ ಮಾಡುವ ಒಪ್ಪಂದಕ್ಕೆ ಸಹಿಬಿದ್ದಿದ್ದರೂ ಇನ್ನೂ ಅದನ್ನು ಸಾಗಿಸುವುದನ್ನು ಪ್ರಾರಂಭಿಸಿಲ್ಲ. ಯಾವ್ಯಾವ ಸೈನೈಡ್ ರಾಶಿಯ ಡಂಪ್‌ಗಳು ಹೇಗಿವೆಯೋ ಹಾಗೆಯೇ ಇವೆ. ಅಷ್ಟು ದೊಡ್ಡ ಪ್ರಮಾಣದ ಬೂದಿಯನ್ನು ಸಾಗಿಸುವುದಕ್ಕೆ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಅನುಮತಿ ಬೇಕಾಗುತ್ತದೆ. ಅದು ಅನುಮತಿ ನೀಡಬೇಕೆಂದರೆ ಬೂದಿಯಲ್ಲಿರುವ ರಾಸಾಯನಿಕ ವಸ್ತುಗಳ ಬಗ್ಗೆ ಪರೀಕ್ಷೆ ನಡೆಸಿ ಮಂಡಳಿಗೆ ಸಲ್ಲಿಸಬೇಕಾಗುತ್ತದೆ. ಈ ಪ್ರಕ್ರಿಯೆಯಲ್ಲಿ ಕೆಲವು ತಾಂತ್ರಿಕ ಅಡಚಣೆಗಳು ಉಂಟಾಗಿರುವುದರಿಂದ ಬೂದಿ ಸಾಗಾಣಿಕೆಗೆ ಇನ್ನೂ ಮಂಡಳಿ ಅನುಮತಿ ಕೊಟ್ಟಿಲ್ಲ.

ಈ ನಡುವೆ, ಪರೀಕ್ಷೆಗಾಗಿ ಬೂದಿ ಒಯ್ಯುತ್ತಿದ್ದೇವೆ ಎಂದು 300 ಟನ್ ಸೈನೈಡ್ ಬೂದಿಯನ್ನು ಸ್ಟಾರ್ ಟ್ರೇಸ್ ಕಂಪನಿಯವರು ಮೊನ್ನೆ ಸಾಗಿಸಿದ್ದಾರೆ. ಪರೀಕ್ಷೆಗೆ ಕೆಲವು ಕೆಜಿ, ಕೆಲವು ಕ್ವಿಂಟಲ್ ತೂಕದ ಮಾದರಿಗಳನ್ನು ಒಯ್ಯುವುದನ್ನು ಕೇಳಿದ್ದೇವೆ. ಮೂನ್ನೂರು ಟನ್‌ಗಟ್ಟಲೇ ಒಯ್ಯುತ್ತಾರೆಂದರೆ ಅದರಲ್ಲಿ ಏನೋ ಗೋಲ್‌ಮಾಲ್ ನಡೆಯುತ್ತಿದೆ ಎಂದೇ ಅರ್ಥ. ಈ ಮುನ್ನೂರು ಟನ್ ಸಾಗಿಸುವುದಕ್ಕಾದರೂ ಮಾಲಿನ್ಯ ನಿಯಂತ್ರಣ ಮಂಡಳಿ ಹೇಗೆ ಅನುಮತಿ ಕೊಟ್ಟಿತು ಎಂಬುದೂ ಇನ್ನೊಂದು ಪ್ರಶ್ನೆ.

• ದೊಡ್ಡಿಪಾಳ್ಯ ನರಸಿಂಹಮೂರ್ತಿ

ಗಣಿಯೆಂಬ ಭೂಗತ ಲೋಕ!

ಹಟ್ಟಿ ಚಿನ್ನದ ಗಣಿ ಒಂದು ಭೂಗತ ಗಣಿ. ಅಂದರೆ, ಬಳ್ಳಾರಿಯ ಕಬ್ಬಿಣದ ಅದಿರಿನ ಗಣಿಗಳಂತೆ ಜೆಸಿಬಿಗಳಿಂದ ಮಣ್ಣನ್ನು ಬಗೆದು, ಲಾರಿಗಳಿಗೆ ತುಂಬಿಸಿ ಕಳಿಸುವ ರೀತಿಯ ಓಪನ್ ಕಾಸ್ಟ್ ಮೈನಿಂಗ್ ಅಲ್ಲ. ಭೂಗರ್ಭದಲ್ಲಿ ಚಿನ್ನದ ಅದಿರಿನ ಪಟ್ಟಿಗಳು ಎಲ್ಲೆಲ್ಲಿ ಹಾದುಹೋಗಿವೆಯೋ ಅವುಗಳ ಜಾಡನ್ನು ಹಿಡಿದು ಸುರಂಗ ಕೊರೆಯುತ್ತಾ ಆ ಅದಿರನ್ನು ಭೂಗರ್ಭದ ಮೇಲ್ಭಾಗಕ್ಕೆ ತರುವ ಭೂಗತ ಗಣಿಗಾರಿಕೆ ಹಟ್ಟಿಯಲ್ಲಿ ನಡೆಯುತ್ತಿದೆ.

ಆಕಾಶಕ್ಕೆ ಮುತ್ತಿಡುವಂತಿರುವ ಒಂದು ಎತ್ತರದ ಕಟ್ಟಡದ ತುತ್ತತುದಿಯಿಂದ ಲಿಫ್ಟ್ ಮೂಲಕ ನೆಲ ಮಹಡಿಗೆ ಇಳಿಯುವ ಹಾಗೆ ಕಾರ್ಮಿಕರು ಶಾಫ್ಟ್ ಮೂಲಕ ಭೂಗರ್ಭಕ್ಕೆ ಇಳಿಯುತ್ತಾರೆ. ಪ್ರತೀ ನೂರು ಅಡಿ ಆಳದಲ್ಲಿ ಒಂದು ಲಿಫ್ಟ್ ನಿಲ್ಲುವುದಕ್ಕೆ ಜಾಗವಿರುತ್ತದೆ (ಲೆವೆಲ್). ಅಲ್ಲಿ ಇಳಿದರೆ ಎರಡು-ಮೂರು ದಿಕ್ಕಿನಲ್ಲಿ ಅಡ್ಡಡ್ಡವಾಗಿ ನಾಲ್ಕೈದು ಕಿ.ಮೀ. ದೂರದ ವರೆಗೆ ಇಲಿ ಬಿಲವನ್ನು ಕೊರೆದಂತೆ ಸುರಂಗ ಕೊರೆದು ಗಣಿಗಾರಿಕೆ ಮಾಡಲಾಗುತ್ತದೆ. ಲಿಫ್ಟಿನಿಂದ ಇನ್ನೂ ನೂರು ಅಡಿ ಕೆಳಗೆ ಇಳಿದರೆ ಮತ್ತೊಂದು ಲೆವೆಲ್ ಸಿಗುತ್ತದೆ. ಅಲ್ಲಿಯೂ ಮತ್ತೆ ಅಡ್ಡಡ್ಡಲಾಗಿ ನಾಲ್ಕೈದು ಕಿ.ಮೀ. ದೂರದ ವರೆಗೆ ಕೊರೆದ ಸುರಂಗಗಳು ಸಿಗುತ್ತವೆ. ಹಟ್ಟಿಯಲ್ಲಿ ಹೀಗೆ 2600 ಅಡಿ ಆಳದ ವರೆಗೆ ಸುಮಾರು ಇಪ್ಪತ್ತೈದಕ್ಕೂ ಹೆಚ್ಚು ಲೆವೆಲ್‌ಗಳಿದ್ದು ಒಂದೊಂದು ಲೆವೆಲ್‌ನಲ್ಲೂ ಅಡ್ಡಡ್ಡಲಾಗಿ ನಾಲ್ಕೈದು ಕಿ.ಮೀ. ತನಕ ಸುರಂಗ ಕೊರೆಯಲಾಗಿದೆ.

ಈಗ ಮೇಲ್ಭಾಗದ ಲೆವೆಲ್‌ಗಳಲ್ಲಿ ಚಿನ್ನದ ಅದಿರಿನ ಕೊರತೆಯ ಕಾರಣಕ್ಕೋ ಏನೋ ದೊಡ್ಡ ಪ್ರಮಾಣದ ಗಣಿಗಾರಿಕೆ ನಡೆಯುತ್ತಿಲ್ಲ. 1500 ಅಡಿಗಳಿಗಿಂತ ಕೆಳಗಿರುವ ಲೆವೆಲ್‌ಗಳಲ್ಲಿ ಮಾತ್ರ ಗಣಿಗಾರಿಕೆ ನಡೆಯುತ್ತದೆ. ಒಂದೊಂದು ಲೆವೆಲ್‌ನಲ್ಲೂ ಅಡ್ಡಲಾಗಿ ಕೊರೆದಿರುವ ಸುರಂಗಗಳ ತುದಿಯಲ್ಲಿ ಕಾರ್ಮಿಕರು ಬೆವರು ಹರಿಸಿ ಅದಿರಿನ ಬಂಡೆಗಳನ್ನು ಸ್ಫೋಟಿಸುತ್ತಾರೆ. ಅಲ್ಲಿಂದ ಪುಟ್ಟ ರೈಲಿನಂತಿರುವ ಯಂತ್ರದ ಮೂಲಕ ಬೇರೆಡೆ ಸಾಗಿಸಿ ಯಂತ್ರಗಳ ನೆರವಿನಿಂದ ಅವುಗಳನ್ನು ಸಣ್ಣಸಣ್ಣ ತುಂಡುಗಳಾಗಿ ಒಡೆಯುತ್ತಾರೆ. ಇದಕ್ಕಾಗಿಯೇ, ಈ ಶಾಫ್ಟ್ ಮೂಲಕವೇ ವಿವಿಧ ಲೆವೆಲ್‌ಗಳಿಗೆ ಬಿಡಿಭಾಗಗಳನ್ನು ಸಾಗಿಸಿ ಅಲ್ಲಿ ಅವುಗಳನ್ನು ಜೋಡಿಸಿ ದೊಡ್ಡ ದೊಡ್ಡ ಯಂತ್ರಗಳನ್ನು ರೂಪಿಸಿಕೊಂಡಿದ್ದಾರೆ. ಈ ಯಾವ ಯಂತ್ರಗಳೂ ಪೆಟ್ರೋಲಿಯಂ ಆಧಾರಿತ ಇಂಧನ ಬಳಸುವುದಿಲ್ಲ. ಏಕೆಂದರೆ, ಪೆಟ್ರೋಲ್ ಅಥವಾ ಡೀಸೆಲ್ ಬಳಸಿದರೆ ಅದರಿಂದ ಹೊರಬರುವ ಹೊಗೆಯು ಸುರಂಗವಾದ್ಯಂತ ತುಂಬಿ ಕಾರ್ಮಿಕರು ಕೆಲಸ ಮಾಡುವುದಕ್ಕೆ ಮಾತ್ರವಲ್ಲ ಉಸಿರಾಡುವುದಕ್ಕೂ ತೊಂದರೆಯಾಗಿ ಅಪಾಯ ಸಂಭವಿಸುತ್ತದೆ. ಹೀಗಾಗಿ, ಕೇವಲ ಗಾಳಿಯಾಧಾರಿತ ಅಥವಾ ವಿದ್ಯುಚ್ಛಕ್ತಿಯಾಧಾರಿತ ಯಂತ್ರಗಳನ್ನು ಮಾತ್ರ ಬಳಸಲಾಗುತ್ತದೆ. ಕೆಲಸ ಮಾಡುವ ಕಾರ್ಮಿಕರಿಗೆ ಆಮ್ಲಜನಕದ ಕೊರತೆಯಾಗದಂತೆ ಭೂಮಿಯ ಮೇಲ್ಮೈಯಿಂದ ಗಾಳಿಯನ್ನು ಪಂಪ್ ಮಾಡಲಾಗುತ್ತದೆ. ಆದರೂ, ಸುರಂಗಗಳ ತುದಿಯಲ್ಲಿ ಗಾಳಿಯ ಕೊರತೆಯನ್ನು ಕಾರ್ಮಿಕರು ಎದುರಿಸಲೇಬೇಕಾಗುತ್ತದೆ. ಹೀಗೆ, ಭೂಮಿಯ ಮೇಲ್ಮೈಯಲ್ಲಿ ರಸ್ತೆಗಳು, ಹೊಲಗದ್ದೆಗಳು, ಹಳ್ಳಿಗಳು, ವಾಹನ ಸಂಚಾರ ಎಲ್ಲವೂ ಮಾಮೂಲಿಯಂತೆ ಕಂಡರೂ ಆಳದ ಭೂಗರ್ಭದಲ್ಲಿ ಬಂಡೆಗಳು ಸಿಡಿಯುತ್ತಿರುತ್ತವೆ, ನೂರಾರು ಕಾರ್ಮಿಕರು ಬೆವರು ಹರಿಸಿ ದುಡಿಯುತ್ತಿರುತ್ತಾರೆ, ಪುಟ್ಟಪುಟ್ಟ ರೈಲುಗಾಡಿಗಳು ಹಳಿಗಳ ಮೇಲೆ ಓಡಾಡುತ್ತಿರುತ್ತವೆ, ಯಂತ್ರಗಳು ಕಲ್ಲುಗಳನ್ನು ಕುಟ್ಟುತ್ತಿರುತ್ತವೆ!

ಭೂಗರ್ಭದ ವಿವಿಧ ಲೆವೆಲ್‌ಗಳಲ್ಲಿ ಚಿನ್ನದ ಅದಿರಿನ ಬಂಡೆಗಳನ್ನು ಸಣ್ಣ ಸಣ್ಣ ಚೂರುಗಳನ್ನಾಗಿ ಒಡೆದ ಮೇಲೆ ಪ್ರತ್ಯೇಕವಾದ ಶಾಫ್ಟ್‌ಗಳ ಮೂಲಕ ಅದನ್ನು ಭೂಮಿಯ ಮೇಲ್ಮೈಗೆ ತರಲಾಗುತ್ತದೆ. ನಂತರ ಅದನ್ನು ವಿವಿಧ ಹಂತಗಳಲ್ಲಿ ನಯವಾದ ಹಿಟ್ಟಿನಂತೆ ಪುಡಿ ಮಾಡಿ, ನೀರು ಬೆರೆಸಿ ರಾಡಿಯನ್ನಾಗಿಸಿ ಅದನ್ನು ಪಾಪೆಗಳ ಮೂಲಕ ಹರಿಸಿ, ಸೈನೈಡ್ ಬೆರೆಸಿ ಸಂಸ್ಕರಿಸಿ ಕೊನೆಗೆ ಬಂಗಾರವನ್ನು ಅದಿರಿನಿಂದ ಬೇರ್ಪಡಿಸಲಾಗುತ್ತದೆ. ಒಂದು ಟನ್ ಕಲ್ಲನ್ನು ಪುಡಿಮಾಡಿದರೆ ಅದರಲ್ಲಿ 3.5 ಗ್ರಾಂ ನಿಂದ 4.5 ಗ್ರಾಂ ತನಕ ಬಂಗಾರ ಸಿಗುತ್ತದೆ. 4000 ಕಾರ್ಮಿಕರ ಅವಿರತ ಪರಿಶ್ರಮದ ಫಲವಾಗಿ ಇಂದು ಹಟ್ಟಿಯಲ್ಲಿ ಪ್ರತಿದಿನ 7 ಕೆ.ಜಿ. ಬಂಗಾರ ಉತ್ಪಾದನೆಯಾಗುತ್ತಿದೆ!

ಜೀವವನ್ನು ತೇದು ಬಂಗಾರ ಹೊರತೆಗೆದ ಕಾರ್ಮಿಕರು ಹೊಟ್ಟೆ ಬಟ್ಟೆಗೆ ಪರದಾಡುತ್ತಿದ್ದರೆ, ಎಸಿ ರೂಮಿನ ಅಧಿಕಾರಿಗಳು ಆಡಳಿತ ಮಂಡಳಿ ಸುಪ್ಪತ್ತಿಗೆಯಲ್ಲಿದ್ದಾರೆ.

...ಟಾರ್ ಟ್ರೇಸ್ ಕಂಪನಿಯ ನಿಗೂಢತೆ!

...ಸೈನೈಡ್ ಬೂದಿಯನ್ನು ಕೊಂಡುಕೊಂಡಿರುವ ಕಂಪನಿಯತ್ತ ಒಮ್ಮೆ ಕಣ್ಣು ಹಾಯಿಸಿದರೆ ಇನ್ನೊಂದು ಅಚ್ಚರಿ ...ಯಾಗುತ್ತದೆ. ಈ ಕಂಪನಿಯು ತನ್ನ ಇಡೀ ಚರಿತ್ರೆಯಲ್ಲಿ ಸೈನೈಡ್ ಬೂದಿಯನ್ನು ಸಂಸ್ಕರಿಸುವ ಅಥವಾ ಅದಕ್ಕೆ ...ಬಂಧಿಸಿದ ಯಾವುದೇ ಕೆಲಸದಲ್ಲಿ ತನ್ನನ್ನು ತೊಡಗಿಸಿಕೊಂಡಿಲ್ಲ. ಅದು ವಿವಿಧ ಬಗೆಯ ಮಷೀನ್‌ಗಳನ್ನು ...ರಿಸುವ ಒಂದು ಕಂಪನಿ. ಅಂದರೆ, ಕಾರ್ಖಾನೆಗಳಿಗಾಗಿ, ಮಿಲ್ಲುಗಳಿಗಾಗಿ ವಿವಿಧ ರೀತಿಯ ವೈಬ್ರೇಟರ್ ...ಗಳನ್ನು ಮತ್ತು ಮ್ಯಾಗ್ನೆಟಿಕ್ ಸಲಕರಣೆಗಳನ್ನು ತಯಾರಿಸುವ ಕಂಪನಿ ಅದು. ಅದು ಈ ಸೈನೈಡ್ ಬೂದಿಯನ್ನು ... ಖರೀದಿಸಿತು ಎಂಬುದೊಂದು ದೊಡ್ಡ ಪ್ರಶ್ನೆಯಾಗಿ ಉಳಿಯುತ್ತದೆ. ಹಟ್ಟಿ ಕಂಪನಿಯಲ್ಲಿರುವ ದೇಶದ್ರೋಹಿಗಳು ...ಕಂಪನಿಯನ್ನು ಮುಂದಿಟ್ಟುಕೊಂಡು ಈ ಅವ್ಯವಹಾರ ಮಾಡಿದ್ದಾರೆಂದೂ, ಬೂದಿ ಕೊಂಡುಕೊಂಡ ಕಂಪನಿಗೆ ...ಷನ್ ಕೊಟ್ಟು ಇವರೇ ಆ ಬೂದಿಯನ್ನು ಸಂಸ್ಕರಿಸಿ ಬಂಗಾರ ತೆಗೆದುಕೊಳ್ಳುತ್ತಾರೆಂದೂ ಕೆಲವು ಕಾರ್ಮಿಕ ...ರು ಮಾತಾಡಿಕೊಳ್ಳುತ್ತಿದ್ದಾರೆ.

... ಬಗ್ಗೆ ಜನರಲ್ ಮ್ಯಾನೇಜರ್ ವಾಲ್ಮೀಕಿಯನ್ನು ಪ್ರಶ್ನಿಸಿದರೆ 'ಅದಿರು ಮಣ್ಣು ಸಾಗಿಸಲಿಕ್ಕೆ ಯಾರಾದರೆ ಏನ್ರೀ? ... ಉನ್ನತ ತಂತ್ರಜ್ಞಾನ ಬೇಕಾಗಿಲ್ಲ' ಎನ್ನುತ್ತಾರೆ. ಚಿನ್ನದ ಸಂಸ್ಕರಣೆಗೆ ತಂತ್ರಜ್ಞಾನ ಅಗತ್ಯವಿಲ್ಲವೆ? ಎಂದು ... 'ಅದಿರಿನಿಂದ ಗೊಬ್ಬರ ತಯಾರಿಸುತ್ತಾರೆ' ಎಂಬ ಹೊಸರಾಗ ತೆಗೆಯುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ನಿಜ ...ವನ್ನು ನಿಷ್ಪಕ್ಷಪಾತ ತನಿಖೆ ಮಾತ್ರ ಬಯಲಿಗೆಳೆಯಬಲ್ಲದು. ಆದರೆ ತನಿಖೆ ನಡೆಸುವವರು ಯಾರು ಎಂಬುದಷ್ಟೆ ... ಪ್ರಶ್ನೆ.





ಬೆಂಗಳೂರು-ಹಾಸನ ಹೆದ್ದಾರಿಯ ಆದ್ಯ ಕಂಫರ್ಟ್ಸ್

ಕಾರ್ತಿಕ್ ಗೌಡನ ಕಳ್ಳ ಆಸ್ತಿ ಜಾಲ!



ಬೆಂಗಳೂರು-ಹಾಸನ ಹೆದ್ದಾರಿಯಲ್ಲಿ ಚನ್ನರಾಯ ಪಟ್ಟಣವನ್ನು ಪ್ರವೇಶಿಸುತ್ತಿದ್ದಂತೆಯೇ ಆ ಊರಿನ ಜಾಯ ಮಾನವನ್ನೂ ಮೀರಿದಂತೆ ಐಷಾರಾಮಿ ಹೋಟೆಲೊಂದು ಕಾಣಸಿಗುತ್ತದೆ. ಅದರ ಹೆಸರು ಆದ್ಯ ಕಂಫರ್ಟ್ಸ್!

ಅದನ್ನು ನಡೆಸುತ್ತಿರುವವನು ದೀಪಕ್ ಗೌಡ ಎಂಬ ಶೋಕಿಲಾಲ. ಈತ ಬೇರೆ ಯಾರೂ ಅಲ್ಲ ಸದ್ಯ ಪ್ರದೇಶ ಕಾಂಗ್ರೆಸ್ ಕಮಿಟಿಯ ಪ್ರಧಾನ ಕಾರ್ಯದರ್ಶಿಯಾಗಿರುವ ಮಾಜಿ ವಿಧಾನ ಪರಿಷತ್ ಸದಸ್ಯ ಎಸ್.ಎಂ. ಆನಂದ್‌ರ ಖಾಸಾ ಅಳಿಯ. ಇಲ್ಲಿಗೆ 6 ವರ್ಷದ ಹಿಂದೆ ಬಾಟಲು ಬಯರ್‌ಗೂ ಇಟ್ಟಾಡಿಕೊಂಡಿದ್ದ ದೀಪಕ್ ಗೌಡ ಇದ್ದಕ್ಕಿದ್ದಂತೆ ಹಾಸನದಂಥ ನಗರದಲ್ಲೊಂದು ಪೆಟ್ರೋಲ್ ಬಂಕು, ಚನ್ನರಾಯಪಟ್ಟಣದಲ್ಲಿ ಐಷಾರಾಮಿ ಹೋಟೆಲು ಮತ್ತು ಚನ್ನರಾಯಪಟ್ಟಣ-ಹಾಸನದ ನಡುವೆ ನಾಲ್ಕೆಕರೆಯ ವಿಶಾಲ ಬಂಗಲೆ ಇತ್ಯಾದಿಯನ್ನೆಲ್ಲ ಹೇಗೆ ಸಂಪಾದಿಸಿದನೆಂಬುದೇ ಚಿದಂಬರ ರಹಸ್ಯ.

ಮೊನ್ನೆ ಆಗಸ್ಟ್ 27 ರಂದು ತನ್ನ ಬರ್ತ್‌ಡೆ ಜೊತೆಗೆ ಮದುವೆ ನಿಶ್ಚಿತಾರ್ಥವನ್ನೂ ಮಾಡಿಕೊಂಡ ಕೇಂದ್ರ ರೈಲ್ವೇ ಮಂತ್ರಿ ಸದಾನಂದ ಗೌಡರ ಮಗ ಕಾರ್ತಿಕ್ ಗೌಡನಿಗೂ ಈ ದೀಪಕ್ ಗೌಡನಿಗೂ ಇರುವ ಸಂಬಂಧದ ಬಗ್ಗೆ ಕೇವಲ ಚನ್ನರಾಯಪಟ್ಟಣವಷ್ಟೇ ಅಲ್ಲ ಹಾಸನಕ್ಕೆ ಹಾಸನವೇ ಚಿತ್ರವಿಚಿತ್ರ ರಹಸ್ಯಗಳನ್ನು ಬಗೆದಿಡುತ್ತದೆ. ಅಂದಹಾಗೆ ಚನ್ನರಾಯಪಟ್ಟಣದ ಆದ್ಯ ಕಂಫರ್ಟ್ಸ್ ಎದುರಿಗೆ ಹೆದ್ದಾರಿ ಫಲಕವೆಂಬಂತೆ ಕೇಂದ್ರ ಮಂತ್ರಿ ಸದಾನಂದ ಗೌಡರ ಆಳೆತ್ತರದ ಕಟೌಟ್ ಕೂಡ ಕಾಣಿಸುತ್ತದೆ.

ಆದ್ಯ ಕಂಫರ್ಟ್ಸ್‌ನಲ್ಲಿ!

ಅದೇನು ವಿಪರ್ಯಾಸವೋ ಗೊತ್ತಿಲ್ಲ ಕಾರ್ತಿಕ್ ಗೌಡನ ವಿರುದ್ಧ ನಟಿ ಮೈತ್ರೇಯಿ ಗೌಡ ಆರ್.ಟಿ. ನಗರದ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸುತ್ತಿದ್ದಂತೆಯೇ ಇತ್ತ ಚನ್ನರಾಯಪಟ್ಟಣದ ಆದ್ಯ ಕಂಫರ್ಟ್ಸ್ ಎದುರಿಗಿದ್ದ ಸದಾನಂದ ಗೌಡರ ಕಟೌಟ್ ಕೂಡ ನಿಗೂಢವಾಗಿ ಮಾಯವಾಗುತ್ತದೆ!

ಹಾಗಾದರೆ ರಾತ್ರೋರಾತ್ರಿ ಕಟೌಟ್ ತೆಗೆದವರು ಯಾರು, ಏಕೆ? ಆದ್ಯ ಕಂಫರ್ಟ್ಸ್ ಎದುರಿಗೇ ಸದಾನಂದ ಗೌಡರ ಕಟೌಟ್ ಹಾಕಿದ್ದೇಕೆ? ಮೈತ್ರೇಯಿ ಪ್ರಕರಣಕ್ಕೂ ಈ ಹೊಟೇಲಿಗೂ, ಕಾಂಗ್ರೆಸ್ ನಾಯಕ ಆನಂದ್‌ರ ಅಳಿಯ ದೀಪಕ್ ಗೌಡನಿಗೂ ಏನು ಸಂಬಂಧ? ಇತ್ಯಾದಿ ಪ್ರಶ್ನೆಗಳಿಗೆಲ್ಲ ಒಂದೇ ಉತ್ತರವೆಂಬಂತೆ ಬೆಂಗಳೂರಿನಿಂದ ಪರಾರಿಯಾಗಿ ತಲೆ ಮರೆಸಿಕೊಂಡ ಕಾರ್ತಿಕ್ ಗೌಡನಿಗೆ ಕೋರ್ಟು ನಿರೀಕ್ಷಣಾ ಜಾಮೀನು ನೀಡುವತನಕ ಆತ ಬಚ್ಚಿಟ್ಟು ಕೊಂಡಿದ್ದು ಇದೇ ಹೊಟೇಲಿನಲ್ಲಿ. ಆಗಸ್ಟ್ 29ರಂದು ಬೆಂಗಳೂರಿನ ಸದಾನಂದಗೌಡರ ಮನೆಯಿಂದ ಇದ್ದಕ್ಕಿದ್ದಂತೆ ನಾಪತ್ತೆಯಾದ ಕಾರ್ತಿಕ್ ಗೌಡನಿಗಾಗಿ ಆರ್.ಟಿ. ನಗರ ಪೊಲೀಸರು ಹುಡುಕಾಡದ ತಾಣವಿಲ್ಲ, ಪುತ್ತೂರಿನ ತೋಟ, ಸದಾನಂದ ಗೌಡರ ಕಾಲೇಜು, ಮಂಗಳೂರಿನ ಅಪಾರ್ಟ್‌ಮೆಂಟ್, ಕಾಂಪ್ಲೆಕ್ಸ್, ಬಾಗಲೂರಿನ ಫಾರ್ಮ್ ಹೌಸ್- ಹೀಗೆ ಎಲ್ಲೆಂದರಲ್ಲಿ ಪೊಲೀಸರು ಕಾರ್ತಿಕ್ ಗೌಡನಿಗಾಗಿ ಹುಡುಕಾಡುತ್ತಿದ್ದರೆ ಆತ ಸದ್ದಿಲ್ಲದೆ ಚನ್ನರಾಯಪಟ್ಟಣದ ಆದ್ಯ ಕಂಫರ್ಟ್ಸ್‌ನಲ್ಲಿ ಅವಿತು ಕುಳಿತಿದ್ದ!

ಕಾರ್ತಿಕ್ ಗೌಡ ಬಚ್ಚಿಟ್ಟುಕೊಂಡಿದ್ದರಿಂದಲೇ ಹೊರಗಡೆ ರಸ್ತೆಯಲ್ಲಿ ನಿಲ್ಲಿಸಿದ್ದ ಸದಾನಂದಗೌಡರ ಕಟೌಟನ್ನು ರಾತ್ರೋರಾತ್ರಿ ನಾಪತ್ತೆ ಮಾಡಿದವನು ದೀಪಕ್ ಗೌಡ!

ಸದಾನಂದಗೌಡರು ರಾಜ್ಯ ಬಿಜೆಪಿ ಅಧ್ಯಕ್ಷರಾಗುತ್ತಿದ್ದಂತೆಯೇ ಇತ್ತ ಹಾಸನದಲ್ಲಿ ದೀಪಕ್ ಗೌಡನ ಅದೃಷ್ಟವೂ



ಖುಲಾಯಿಸಿತು. ಪದೇ ಪದೇ ಸದೂಗೌಡರ ಮಗ ಕಾರ್ತಿಕ್‌ಗೌಡನ ಜೊತೆ ಮಂಗಳೂರಿನಲ್ಲಿ ದೀಪಕ್ ಗೌಡ ಕಾಣಿಸಿಕೊಂಡಿದ್ದ. ರಾತ್ರಿ ಪಾರ್ಟಿಗಳೂ ಜೋರಾದವು. ಅದೇ ಹೊತ್ತಿಗೆ ಹಾಸನದ ಬೇಲೂರು ರಸ್ತೆಯಲ್ಲಿ ಪೆಟ್ರೋಲ್ ಬಂಕೊಂದನ್ನು ತೆರೆದ ದೀಪಕ್ ಗೌಡ ಅದಕ್ಕೆ ಆದ್ಯ ಪೆಟ್ರೋಲ್ ಬಂಕ್ ಎಂದೇ ಹೆಸರಿಟ್ಟಿದ್ದ. ಪಕ್ಕದಲ್ಲೇ ಆದ್ಯ ಮೋಟಾರ್ಸ್ ಎಂಬ ಐಷಾರಾಮೀ ಕಾರುಗಳ ಷೋ ರೂಮನ್ನೂ ಶುರುವಿಟ್ಟುಕೊಂಡ. ಇದರ ಉದ್ಘಾಟನೆಗೆಂದು ಖುದ್ದು ಕಾರ್ತಿಕ್ ಗೌಡನೇ ಹಾಸನದಲ್ಲಿ ಪ್ರತ್ಯಕ್ಷನಾಗಿದ್ದ. ಜೊತೆಗೆ ಸದಾನಂದಗೌಡರ ಎಲ್ಲಾ ವ್ಯವಹಾರಗಳು ಕೋರ್ಟು, ಡೀಲು ಇತ್ಯಾದಿಗಳನ್ನೆಲ್ಲ ನಿಭಾಯಿಸುವ ತಮ್ಮಣ್ಣ ಎಂಬ ಸದಾನಂದಗೌಡರ ಸಂಬಂಧಿ ಮತ್ತು ಬೇನಾಮಿಯೂ ಇದ್ದ.

ದೀಪಕ್ ಗೌಡನ ದೌಲತ್ತು

ಅಲ್ಲಿಗೆ ದೀಪಕ್ ಗೌಡ ಬೇರೆ ಯಾರೂ ಅಲ್ಲ ರಾಜ್ಯ ಬಿಜೆಪಿ ಅಧ್ಯಕ್ಷ ಸದಾನಂದಗೌಡರ ನಂಬಿಕಸ್ತ ಬೇನಾಮಿ ಎಂದೇ ಹಾಸನ ಮಾತಾಡಿಕೊಂಡಿತು. ಹಾಗೆ ಆದ್ಯ ಹೆಸರಲ್ಲಿ ಪೆಟ್ರೋಲ್ ಬಂಕ್ ಮತ್ತು ಕಾರು ಡೀಲರಿಕೆ ಶುರು ಹಚ್ಚಿಕೊಂಡ ದೀಪಕ್ ಗೌಡ ಸದಾನಂದ ಗೌಡರು ಮುಖ್ಯಮಂತ್ರಿಯಾಗುತ್ತಿದ್ದಂತೆಯೇ ಚನ್ನರಾಯಪಟ್ಟಣದಲ್ಲಿ ಆದ್ಯ ಕಂಫರ್ಟ್ಸ್ ಎಂಬ ಐಷಾರಾಮಿ ಹೊಟೇಲು ತೆರೆದಾಗ ಅದು ಸದಾನಂದಗೌಡರದ್ದೇ ಬೇನಾಮಿ ಸೊತ್ತೆಂಬ ಬಗ್ಗೆ ಯಾರಿಗೂ ಅನುಮಾನಗಳಿರಲಿಲ್ಲ.

ಏಕೆಂದರೆ ತಿಂಗಳಿಗೊಮ್ಮೆ ಅಲ್ಲಿಗೆ ಖುದ್ದು ಕಾರ್ತಿ ಗೌಡನೇ ಬಂದು ಲೆಕ್ಕ ನೋಡಿ ಹೋಗುತ್ತಿದ್ದ!

ಆದ್ಯ ಕಂಫರ್ಟ್ಸ್ ಹೊಟೇಲ್ ಒಂದು ಹಂ ಬರುತ್ತಿದ್ದಂತೆಯೇ ದೀಪಕ್ ಗೌಡ ಚನ್ನರಾಯಪಟ್ಟಣದಿ ಹಾಸನದ ದಿಕ್ಕಿಗೆ 12 ಕಿ.ಮೀ. ದೂರದಲ್ಲಿ ನಾಲ್ಕೆಕರೆ ಭರ್ಜರಿ ಆಸ್ತಿಯೊಂದನ್ನು ಖರೀದಿಸಿದ. ಅದರ ರಿಜಿಸ್ಟ್ರೇಷ ಖುದ್ದು ಸದಾನಂದಗೌಡರ ಸಂಬಂಧಿ ತಮ್ಮಣ್ಣ ಚನ್ನರಾಯಪಟ್ಟಣಕ್ಕೆ ಬಂದಿದ್ದ. ಮೊದಮೊದಲು ಈ ತಮ ಯಾರು, ಆತನಿಗೂ ಸದಾನಂದ ಗೌಡರಿಗೂ ಏನು ಸಂಬ ಎಂಬುದು ಯಾರಿಗೂ ಗೊತ್ತಿರಲಿಲ್ಲ. ಸದಾನಂದಗೌ ಸಮೀಪದ ಸಂಬಂಧಿಯೊಬ್ಬನ ಹೆಸರಲ್ಲಿ ನಾಲ್ಕೆಕರೆಯ ಖರೀದಿಸಿದ ದೀಪಕ್ ಗೌಡ ಇದಾಗಿ ಎರಡೇ ತಿಂಗ ಅಲ್ಲೊಂದು ಭವ್ಯ ಬಂಗಲೆಗೆ ಪಾಯ ಹಾ ಚನ್ನರಾಯಪಟ್ಟಣದಿಂದ 12 ಕಿ.ಮೀ ದೂ ಉದಯಪುರದ ಕಾಮತ್ ಪೆಟ್ರೋಲ್ ಬಂಕ್ ಎದು ತಲೆ ಎತ್ತಲಿದ್ದ ಮತ್ತೊಂದು ರೆಸಾರ್ಟ್, ಸ್ವಿಮ್ಮಿಂಗ್ ಪೂ ಐಷಾರಾಮೀ ರೆಸ್ಟೋರೆಂಟ್ ಇತ್ಯಾದಿಗಳೆಲ್ಲವೂ ಕಾರ್ತಿಕ್ ಗೌಡನಿಗೆಂದು ಸದಾನಂದ ಗೌಡರು ಮಾಡಿಕೆ ಭವಿಷ್ಯದ ಬುನಾದಿಯಾಗಿತ್ತು.

2014ರ ಲೋಕಸಭಾ ಚುನಾವಣೆಯಲ್ಲಿ ಬೆಂಗಳ ಉತ್ತರದಿಂದ ಸ್ಪರ್ಧಿಸಿದ್ದ ಸದಾನಂದಗೌಡರ ಆಸ್ತಿ ಘೋಷ ಪತ್ರವನ್ನು ತಡಕಾಡಿದವರಿಗೆ ಅಚ್ಚರಿಯೊಂದು ಕಾ ಅದು ಮಗ ಕಾರ್ತಿಕ್‌ಗೌಡನ ಆಸ್ತಿಪಾಸ್ತಿಗಳ ಪಟ್ ಕಣ್ಮರೆ!

ಕಾರ್ತಿಕ್‌ನ ಆಸ್ತಿ ಪಟ್ಟಿಯಲ್ಲಿ...!

ಅಂದರೆ ಪತ್ನಿ ಡಾಟಿ ಮತ್ತು ತನ್ನ ಆಸ್ತಿ ಪಾ ವಿವರಣೆಯನ್ನಷ್ಟೇ ಚುನಾವಣಾ ಆಯೋಗಕ್ಕೆ ಸ ಗೌಡ ಮಗ ಕಾರ್ತಿಕ್ ಗೌಡನನ್ನು independ ಎಂದು ತೋರಿಸಿದ್ದರು. ಇನ್ನೂ ಮದುವೆಯೇ ತನ್ನ ಮನೆಯಲ್ಲೇ ಜೊತೆಗಿರುವ ಒಬ್ಬನೇ ಒಬ್ಬ ಮಗ 'ಪ್ರತ್ಯೇಕ ವ್ಯಕ್ತಿ' ಎಂದು ದಾಖಲಿಸುವ ತುತಾ ಅನಿವಾರ್ಯತೆಯಾಗಲಿ ಗೌಡರಿಗಿರಲಿಲ್ಲ, ಆದರೆ ಮ ಬೇನಾಮೀ ದುಡ್ಡಿತ್ತಲ್ಲ; ಅದಕ್ಕೆಂದೇ ಮಗ ತಾಂತ್ರಿಕವಾಗಿಯಷ್ಟೇ ಹೊರಗಿಡಲಾಗಿತ್ತು.

ಆದರೆ 2011ರಲ್ಲಿ ವಿಧಾನ ಪರಿಷತ್ ಚುನಾವ ಗೌಡರು ಸ್ಪರ್ಧಿಸಿದಾಗಲೂ ಕಾರ್ತಿಕ್‌ಗೌಡನಿಗೆ ವ 18 ಮೀರಿತ್ತು, ಹಾಗಿದ್ದೂ ಮಗನನ್ನು ಅವಲಂಬ ದಾಖಲಿಸಿದ್ದ ಗೌಡರು ಆತನ ಅಷ್ಟಿಷ್ಟು ಆಸ್ತಿಗಳ ಪಟ್ಟಿ ಕೊಟ್ಟಿದ್ದರು. ಆ ಪ್ರಕಾರ 2011ರ ಡಿಸೆಂಬರ್ 11 ಚುನಾವಣಾಧಿಕಾರಿಗೆ ಸಲ್ಲಿಸಿದ್ದ ಕಾರ್ತಿಕ್ ಗೌಡನ

ಬಾಕಿ 25 ಲಕ್ಷಕ್ಕೆ ಡಾಟಿಗೆ ಗಂಟುಬಿದ್ದ ಲಡ್ಡು ನಾಗ

ನಟಿ ಮೈತ್ರೇಯಿ ವಿರುದ್ಧ ಸದಾನಂದಗೌಡರ ಕುಟುಂಬ ಮಾಡಿದ ಒಟ್ಟು ಖರ್ಚಿನ ಮೊತ್ತವೇ ಏಳು ಕೋಟಿಯಂತೆ!

ಆಕೆಯ ತೇಜೋವಧೆಗೆಂದು ಟೀವಿಗಳಿಗೆ ಕೊಟ್ಟ ದುಡ್ಡು, ಆಕೆಯನ್ನು ತಾನೂ ಮದುವೆಯಾಗಿದ್ದೆ ಎಂದು ಕತೆ ಕಟ್ಟಿದ ಲಫಂಗರಿಗೆಂದು, ಆಕೆ ಬಗ್ಗೆ ಕೆಟ್ಟದಾಗಿ ಮಾತಾಡಲೆಂದು ಸಿಕ್ಕಸಿಕ್ಕವರಿಗೆಲ್ಲಾ ಗೌಡರ ಗ್ಯಾಂಗ್ ದುಡ್ಡು ಸುರಿದದ್ದೇ ಸುರಿದದ್ದು. ಈ ಪೈಕಿ ಮಿಕ್ಕೆಲ್ಲರಿಗಿಂತಲೂ ಮಾನಗೆಟ್ಟು ಮುಂದೆ ಬಂದವನು ಸಿನಿಮಾ ವಂಚಕ ಲಡ್ಡು ನಾಗರಾಜ ಉರ್ಫ್ ರುಷಿ. ಲಡ್ಡು ನಾಗ ಎಂಬ ತನ್ನ ಅಸಹ್ಯದ ಹೆಸರನ್ನೇ ಮುಚ್ಚಿಟ್ಟು ರುಷಿ ಎಂಬ ಕಳ್ಳ ಹೆಸರಿಟ್ಟುಕೊಂಡು ಕೋರ್ಟಿನಲ್ಲಿ ಖೊಟ್ಟಿ ಕೇಸು ಹಾಕಿದ್ದಕ್ಕೆ ತನಗೆ ಬಂದದ್ದು ಕೇವಲ 25 ಲಕ್ಷ ಮಾತ್ರ. ಮೋಹನ್ ಎಂಬ ಸದಾನಂದಗೌಡರ ಪರಮಾಪ್ತರೊಬ್ಬರು ತನಗೆ 50 ಲಕ್ಷ ಕೊಡಿಸ್ತೀನಿ ಎಂದು ಮಾತು ಕೊಟ್ಟಿದ್ದರಿಂದಲೇ ತಾನು ಮೈತ್ರೇಯಿ ವಿರುದ್ಧ ಧೈರ್ಯ ಮಾಡಿದ್ದೆ, ಈಗ ನೋಡಿದರೆ ಬಾಕಿ 25 ಲಕ್ಷವನ್ನು ಕೊಡೋದೇ ಇಲ್ಲ ಎನ್ನುತ್ತಿದ್ದಾರೆ ಎಂದು ಲಡ್ಡು ನಾಗ ಗಾಂಧಿನಗರದುದ್ದಕ್ಕೂ ಬೊಬ್ಬೆ ಹಾಕುತ್ತಿದ್ದಾನೆ.

ಯಾರೇ ಸಿಕ್ಕರೂ "ನೀವೇ ಕೇಳಿ. ಹೇಗೆ ಮೋಹನ್‌ಗೆ ಆವಾಜು ಹಾಕ್ತೀನಿ"



ಡಾಟಿ



ಲಡ್ಡು ನಾಗ

ಎಂದು ಯಾರಿಗೋ ಫೋನ್ ಮಾಡಿ "ಅಲ್ರೀ ನಾನಿಲ್ಲ ಅಂದ್ರೆ ಆ ಕಾರ್ತಿಕ್ ಗೌಡನಿಗೆ ಜಾಮೀನು ಸಿಗ್ತಾ ಇತ್ತಾ? ಮೈತ್ರೇಯಿಳನ್ನು ಮದುವೆಯಾಗಿದ್ದೇನೆ ಎಂದು ನಾನು ತಲೆ ಒಡಿಸಿದ್ದಕ್ಕೆ ತಾನೇ ನಿಮಗೆ ಜಾಮೀನು ಸಿಕ್ಕಿದ್ದು? ನಾನಿಲ್ಲ ಅಂದ್ರೆ ಕಾರ್ತಿಕ್ ಗೌಡ ಜೈಲಿಗೆ ಹೋಗ್ತಿದ್ದ ಬಾಕಿ. 25 ಲಕ್ಷ ಬಿಸಾಕ್ರೀ...!" ಎಂದು ಅರೆಹುಚ್ಚನಂತೆ ಕೂಗಾಡುತ್ತಾನೆ ಲಡ್ಡು ನಾಗ.

ಸಿನಿಮಾ ಮಾಡ್ತೀನಿ ಎಂದು ನೂರಕ್ಕೂ ಅಧಿಕ ಮನೆಗಳನ್ನು ಮುಳುಗಿಸಿ ಹತ್ತಾರು ಹೆಣ್ಣು ಮಕ್ಕಳ ಮಾನ ಮುಕ್ಕಿದವನು ಲಡ್ಡು ನಾಗ. ಈಗ ಸದಾನಂದಗೌಡರ ಕಡೆಯಿಂದ ಬಾಕಿ ವಸೂಲಿಗೆ ನಿಂತು "ಮೋಹನ್ ಕಡೆಯ ಹುಡುಗರನ್ನು ಬಟ್ಟು ಹೊಡೆಸುತ್ತೀನಿ, ನನಗೆ ಇಡೀ ಬಿಜೆಪಿ ಸಪೋರ್ಟು ಇದೆ" ಎಂದು ಧಮಕಿ ಹಾಕುತ್ತಾನೆ. ಬಾಕಿ 25 ಲಕ್ಷ ಕೊಡದೇ ಹೋದ್ರೆ, ಸದಾನಂದ ಗೌಡರ ಮನೆ ಮುಂದೆ ಉಪವಾಸ ಕುತ್ಕೋತೀನಿ ಎಂದು ಡಾಟಿ ಸದಾನಂದಗೌಡರಿಗೂ ದುಂಬಾಲು ಬಿದ್ದಿದ್ದಾನಂತೆ. ಒಂದೆಡೆ ಮಗನ ಪಜೀತಿ ಮತ್ತೊಂದೆಡೆ ಮಗನನ್ನು ಬಚಾಯಿಸಲೆಂದು ತಾವೇ ಛೂಬಿಟ್ಟ ಖದೀಮರ ಬ್ಲ್ಯಾಕ್‌ಮೇಲ್. ಪಾಪ, ಸದಾನಂದಗೌಡರ ಹೊಟ್ಟೆ ಸಂಕಟ ಯಾರಿಗೆ ತಾನೇ ಅರ್ಥವಾದೀತು?



...ಯೇ ವಿಚಿತ್ರವಾಗಿತ್ತು, ಮೂರು ಸಾವಿರ ರೂಪಾಯಿ ... ಜೊತೆ ಮಂಗಳೂರಿನ ಫೆಡರಲ್ ಬ್ಯಾಂಕಿನಲ್ಲಿ ...ವಿರ ರೂಪಾಯಿ, PACL India Pvt. Ltd. ...ಯ 50 ಸಾವಿರ ರೂಪಾಯಿ ಮೌಲ್ಯದ ಷೇರುಗಳು, ...ಬ ಅಂಚೆ ಕಚೇರಿಯಲ್ಲಿ ಆರ್‌ಡಿ ಅಕೌಂಟ್ ನಂಬರ್ ...765ನಲ್ಲಿ 30 ಸಾವಿರ ರೂಪಾಯಿಯ ಬಾಂಡು, ...ದ ಎಲ್‌ಐಸಿ ವಿಮೆ, ಮತ್ತೊಂದು ಲಕ್ಷದ ಎಲ್‌ಐಸಿ ...ಜೊತೆಗೆ KA 21 M 9599 ನಂಬರಿನ 2010ರ ...ನ 6 ಲಕ್ಷ ರೂಪಾಯಿಯ ಸ್ಕೋಡಾ ಕಾರು ... ಕಾರ್ತಿಕ್‌ಗೌಡನ ಚರಾಸ್ತಿಗಳಾಗಿದ್ದವು.

...ದಲ್ಲದೆ ಮಂಗಳೂರಿನ ಮರೋಳಿಯ ಸ.ನಂ. 73/ ...ಳಾಸದಲ್ಲಿ 4, 16, 920 ರೂಪಾಯಿ ಮೌಲ್ಯದ ...ಮತ್ತು ಅತ್ತಾವರದ ಸ.ನಂ. 505/1 ರಲ್ಲಿ 3,01,167 ...ಯಿ ಮೌಲ್ಯದ ಅರ್ಧ ಎಕರೆ ಭೂಮಿ ಕೂಡ ...ನ ಸ್ಥಿರಾಸ್ತಿಯಾಗಿ ದಾಖಲಾಗಿತ್ತು. ಇದೆಲ್ಲವೂ ...ಬಂದ ಮಗನಿಗೆ ಪಿತ್ರಾರ್ಜಿತವಾಗಿ ಬಂದ ಸೊತ್ತೆಂದೇ ...ಕೊಂಡರೂ ಅದನ್ನು 2014ರ ಚುನಾವಣೆಯಲ್ಲಿ ...ಸುವ ಅಗತ್ಯವಿರಲಿಲ್ಲ. ಇನ್ನೂ ಮದುವೆಯಾಗದೆ ...ನೆಯಲ್ಲೇ ಇರುವ ಮಗನನ್ನು independent ಘೋಷಿಸಬೇಕಾಗಿರಲಿಲ್ಲ.

ಮಲೇಷಿಯಾ ಮೈನಿಂಗ್

...ರೀತಿ ಮಗನನ್ನು 'ಪ್ರತ್ಯೇಕ ವ್ಯಕ್ತಿ' ಎಂದು ...ಷಿಸಿದ್ದರ ಹಿಂದಿದ್ದದ್ದು 500 ಕೋಟಿಯ ಬೇನಾಮೀ ... ಮಂಗಳೂರು, ಉಡುಪಿ, ಹಾಸನ, ಚನ್ನರಾಯ... ಮೈಸೂರು, ಬೆಂಗಳೂರುಗಳಲ್ಲಷ್ಟೇ ಅಲ್ಲದೆ ದೂರದ ...ದಲ್ಲೂ ಆದ್ಯ ಗ್ರೂಪ್‌ನ ಹೊಟೇಲು, ರೆಸಾರ್ಟ್ಸ್, ...ಗಳು ಬಾರು-ರೆಸ್ಟೋರಂಟುಗಳು ಒಂದರ ...ಂದರಂತೆ ತಲೆ ಎತ್ತಿದ್ದವು. ಸದಾನಂದಗೌಡರು ...ಮಂತ್ರಿಯಾಗುತ್ತಿದ್ದಂತೆಯೇ ಅವರ ಕುಟುಂಬದ ...ಅಲ್ಲಿಂಘನವೆಂಬಂತೆ ಮಗ ಕಾರ್ತಿಕ್‌ಗೌಡ ಪದೇಪದೇ ...ಪುರ್ ಮತ್ತು ಮಲೇಷಿಯಾಕ್ಕೆ ಹೋಗಲಾರಂಭಿಸಿದ್ದ. ...ಗೆ ವಿದೇಶ ಯಾತ್ರೆಗೆ ಹೋಗಿದ್ದ ಕಾರ್ತಿಕ್ ಜೊತೆ ...ಸಂಗಾತಿಯಾಗಿರುತ್ತಿದ್ದದ್ದು ನಟಿ ಮೈತ್ರೇಯಿ ಗೌಡಳನ್ನು ...ಚಯಿಸಿಕೊಟ್ಟ ಕುಶಾಲ್‌ಗೌಡ. ಅದು ಮಲೇಷಿಯಾದಲ್ಲಿ ...ಗ್ ಭೂಮ್ ವಿಜೃಂಭಿಸುತ್ತಿದ್ದ ಕಾಲ. ತನ್ನ ...ಪತ್ತಿನ ಖನಿಜಗಳನ್ನು ವಿಶ್ವದ ರೊಕ್ಕಸ್ಥರಿಗೆಂದೇ ...ಮೈನಿಂಗ್‌ಗೆ ತೆರೆದಿಟ್ಟಿದ್ದ ಮಲೇಷಿಯಾ ಸರ್ಕಾರ ...ದಿರು ಗಣಿಗಳನ್ನು ಜಾಗತಿಕ ಟೆಂಡರ್‌ಗೆ ತೆರೆದಿಟ್ಟಿದ್ದರ ...ರ್ನಾಟಕದ ಮುಖ್ಯಮಂತ್ರಿ ಸದಾನಂದಗೌಡರಿಗೂ ... ಮಗ ಕಾರ್ತಿಕ್ ಮತ್ತು ಕುಶಾಲ್‌ಗೌಡನ ಜಂಟಿ ...ದಾರಿಕೆಯಲ್ಲಿ ಮನಿಲಾದಿಂದ ಮುನ್ನೂರು ಕಿ.ಮೀ. ... ಅದಿರು ಗಣಿಯನ್ನು ಐನೂರು ಕೋಟಿಗೆ ಗುತ್ತಿಗೆ ...ಲಾಯ್ತು. ಇದಕ್ಕೆಂದೇ ಸಿಂಗಾಪೂರ್‌ನಲ್ಲಿ ...ರೇಟ್ ಕಚೇರಿಯನ್ನು ತೆರೆದರು. ಎಲ್ಲಿ ತನ್ನ ...ಳ ಬಯಲಾಗುತ್ತೋ ಎಂದು ಮಗನನ್ನು ಪ್ರತ್ಯೇಕ ...ವಲಂಬಿಯಲ್ಲ ಎಂದು ದಾಖಲೆ ಸೃಷ್ಟಿಸುವುದೂ ...ಗಾಯಿತು.

...ದ ಅಪ್ಪನ ಕಾಳಧನ ಮತ್ತು ಕಳ್ಳದಂಧೆಯ ಹಪಹಪಿ ... ಮಗನೇ ಬಲಿಯಾಗಿದ್ದ. ಮಲೇಷಿಯಾ, ...ಪುರ್‌ಗಳ ರಾತ್ರಿ ಕ್ಲಬ್ಬುಗಳ ಮಾಡೆಲ್ ಬೆಡಗಿಯರು, ... ರಾತ್ರಿ ಪಾರ್ಟಿಗಳು ಇತ್ಯಾದಿಗಳೆಲ್ಲ ಆತನ ಬದುಕಿನ ... ಬದಲಾಯಿಸಿಬಿಟ್ಟವು. ಶೋಕಿಗೆ ತಕ್ಕಂತೆ ...ಯರ ಹಿಂದೇ ಜೊತೆಯಾಯಿತು. ಅದು ...ಗಾಗಿ ಕಾರ್ತಿಕ್‌ನನ್ನು ಆವರಿಸಿದ್ದು ನಟಿ ಮೈತ್ರೇಯಿ ... ಈಗ ಅಪ್ಪ ಸದಾನಂದಗೌಡರು ತನ್ನ ಮಗ ...ಗೆ ಬಂದಿದ್ದಾನೆ, ಅವನು ಅಂಥವನಲ್ಲ, ತನ್ನ ... ಹಾಗೇ ರೂಪಿಸಿಕೊಳ್ಳಬಲ್ಲ, ಆತನ ಘಜೀತಿಗೆ ...ಯಲ್ಲ ಎಂದು ಎಷ್ಟೇ ತಿಪ್ಪೆ ಸಾರಿಸಬಹುದು. ... ಮಗನ ಹೆಸರಲ್ಲಿ ಮಾಡಿದ ಬೇನಾಮಿ ..., ಆತನ ಶಾಸಕ, ಮಗನೂ ಹೊರತೇನಲ್ಲ.

■ ಡಾ. ಸೋಮನಾಥ್

ನಾವು 'ಮರೆತ' ನರಮೇಧ



ಸೆಪ್ಟೆಂಬರ್ 17ರಂದು ಬೀದರ್ ಜಿಲ್ಲೆಯ ಗೋರ್ಟಾ ಗ್ರಾಮದಲ್ಲಿ ಬಿಜೆಪಿಯ ರಾಷ್ಟ್ರಾಧ್ಯಕ್ಷ ಅಮಿತ್ ಶಾ 'ಹುತಾತ್ಮರ ಸ್ಮಾರಕ'ಕ್ಕೆ ಭೂಮಿ ಪೂಜೆ ಮಾಡಿರುವ ಹಿನ್ನೆಲೆಯಲ್ಲಿ 'ಹೈದರಾಬಾದ್ ಕರ್ನಾಟಕ ವಿಮೋಚನ ದಿನ'ದ ಸಂಭ್ರಮದಲ್ಲಿ ನಾಪತ್ತೆಯಾಗಿರುವ ಸತ್ಯವನ್ನು ಬಿಚ್ಚಿಡುವ ಲೇಖನ ಇಲ್ಲಿದೆ.

ನಮ್ಮ ಆಪ್ತರಿಗೆ ಆಗಬಾರದ್ದು ಏನೋ ಆದಾಗ "ಮನಸ್ಸಿಗೆ ಹಚ್ಚಿಕೊಳ್ಳಬೇಡಿ; ಮರೆತುಬಿಡಿ" ಎಂದು ಹೇಳುವುದು ವಾಡಿಕೆಯಲ್ಲಿರುವ ಒಂದು ಶಿಷ್ಟಾಚಾರ. ಆದರೆ ಆ ಮಾತಿನಲ್ಲೇ ಒಂದು ವಿರೋಧಾಭಾಸವಿದೆ. ಉದ್ದೇಶ ಪೂರ್ವಕವಾಗಿ, ಮೊದಲೇ ನಿರ್ಧರಿಸಿಕೊಂಡು ಏನನ್ನೂ ಮರೆಯಲಾಗುವುದಿಲ್ಲ. ಮರೆಯಬೇಕು ಅನ್ನಿಸುವ ನೋವು ಮತ್ತೆ ಮತ್ತೆ ನೆನಪಾಗಿ ನೋವಾಗಿ ಕಾಡುತ್ತದೆ. ಹಾಗಿರುತ್ತ ಘಾಸಿಗೊಂಡ ಸಮಾಜಕ್ಕೆ ಮರೆವು ಎನ್ನುವುದುಂಟೆ? ಸಮಾಜವೊಂದರ ನೆನಪು ಅದರ ಚರಿತ್ರೆಯಾದರೆ ಮರೆವು ಏನನ್ನು ಸೂಚಿಸುತ್ತದೆ? ಚರಿತ್ರೆಯೇ ಇಲ್ಲ ಎಂದೆ? ಅಥವಾ ಚರಿತ್ರೆಯನ್ನು ಅಳಿಸಲಾಗಿದೆ ಎಂದೆ? ಪ್ರತಿ ವರ್ಷದಂತೆ, ಈ ವರ್ಷವೂ ಸೆಪ್ಟೆಂಬರ್ 17ರಂದು ಹೈದರಾಬಾದ್ ಕರ್ನಾಟಕ ವಿಮೋಚನಾ ದಿನವನ್ನು ಆಚರಿಸುವ ಸಂದರ್ಭದಲ್ಲಿ ಈ ಪ್ರಶ್ನೆಯನ್ನು ನಾವು ಕೇಳಿಕೊಳ್ಳಲೇಬೇಕು. 1948ರ ಸೆಪ್ಟೆಂಬರ್ ತಿಂಗಳಲ್ಲಿ ಭಾರತದ ಸೇನೆ ಹೈದರಾಬಾದ್ ಸಂಸ್ಥಾನವನ್ನು ನಿಜಾಮನ ಆಳ್ವಿಕೆಯಿಂದ ಮುಕ್ತಗೊಳಿಸಿತು. ಅದಕ್ಕೂ ಮುನ್ನ 1947ರಲ್ಲಿ ಬ್ರಿಟಿಷ್ ವಸಾಹತು ಶಾಹಿಯಿಂದ ಕಳಚಿಕೊಂಡು ಭಾರತ ಸ್ವತಂತ್ರವಾದಾಗ ರಾಜ ಮಹಾರಾಜರು, ನಿಜಾಮರು, ನವಾಬರು ಮುಂತಾದ ದೇಶೀಯ ಸಂಸ್ಥಾನಗಳ ಮುಖ್ಯಸ್ಥರುಗಳು ಭಾರತ ಒಕ್ಕೂಟದಲ್ಲಿ ತಮ್ಮ ರಾಜ್ಯಗಳನ್ನು ವಿಲೀನಗೊಳಿಸಲು ಸಮ್ಮತಿಸಿದರು. ಆದರೆ ಜುನಾಗಢ, ತಿರುವಾಂಕೂರು ಮತ್ತು ಹೈದರಾಬಾದ್ ಸಂಸ್ಥಾನಗಳು ಮಾತ್ರ ಆ ಬಗ್ಗೆ ಚೌಕಾಸಿ ನಡೆಸತೊಡಗಿದವು. ಕೇಂದ್ರದ ನೂತನ ಗೃಹಮಂತ್ರಿ ಸರ್ದಾರ್ ವಲ್ಲಭಬಾಯಿ ಪಟೇಲ್ ಸಂಧಾನ ಒತ್ತಾಯ ಮತ್ತು ಬೆದರಿಕೆ ಗಳ ತಂತ್ರದಿಂದ ಜುನಾಗಢ ಹಾಗೂ ತಿರುವಾಂಕೂರು ಸಂಸ್ಥಾನಗಳನ್ನು ವಿಲೀನಕ್ಕೆ ಒಪ್ಪಿಸಿದರು. ಆದರೆ ಹೈದರಾ ಬಾದಿನ ನಿಜಾಮ ಮಾತ್ರ ಸ್ವತಂತ್ರ ರಾಷ್ಟ್ರವಾಗುವುದೋ ಅಥವಾ ಪಾಕಿಸ್ತಾನವನ್ನು ಸೇರುವುದೋ ಎಂಬ ಗೊಂದಲದಲ್ಲಿ ಇದ್ದ. ಭಾರತದೊಡನೆ ವಿಲೀನದ ಪ್ರಸ್ತಾಪವನ್ನು ಆತ ಮೊದಲೇ ತಿರಸ್ಕರಿಸಿದ್ದ.

ಈ ನಡುವೆ 1948 ಮೇ ತಿಂಗಳಿನಲ್ಲಿ ನಿಜಾಮನ ಮಂತ್ರಿಮಂಡಳದ ಒಬ್ಬ ಸದಸ್ಯ ಖಾಸಿಂ ರಿಜ್ವಿ ಎಂಬವ ಒಂದು ಖಾಸಗಿ ಪಡೆ ಕಟ್ಟಿಕೊಂಡು ಸಂಸ್ಥಾನದ ಹಿಂದೂಗಳ ಮೇಲೆ ಊರುಊರುಗಳಲ್ಲಿ ಹಿಂಸಾಕೃತ್ಯಗಳನ್ನು ನಡೆಸಲು ಪ್ರಾರಂಭಿಸಿದ. ರಜಾಕಾರರು ಎಂದು ಹೆಸರಾದ ಈ ಕೂಲಿ ಸೈನಿಕರ ಪಡೆ ಸಾಮಾನ್ಯ ಹಿಂದೂಗಳ ಮೇಲೆ ನಡೆಸದೆ ಇದ್ದ ಅನಾಚಾರವೇ ಇರಲಿಲ್ಲ. ಕೊಲೆ, ಲೂಟಿ, ಹೆಂಗಸರ ಮಾನಭಂಗ, ಮನೆಗಳಿಗೆ ಬೆಂಕಿ ಕೊಡುವುದು ಇವೇ ಮುಂತಾದ ಕೃತ್ಯಗಳು ಹಳ್ಳಿಪಟ್ಟಣ ಎಂಬ ಭೇದವಿಲ್ಲದೆ ನಡೆದವು. ಸಂಸ್ಥಾನದ ಹಿಂದೂ ಪ್ರಜೆಗಳ ಮೇಲೆ ದೌರ್ಜನ್ಯ ನಡೆಸುವುದು ನಿಜಾಮನ ಆಡಳಿತದ ಧೋರಣೆಯಾಗಿರಲಿಲ್ಲ. ಆದರೆ ರಜಾಕಾರರ ಸರಣಿ ಹಿಂಸೆಗೆ ಅವನು ಮೂಕ ಪ್ರೇಕ್ಷಕನಾಗಿದ್ದ. 1948ರ ಸೆಪ್ಟೆಂಬರ್‌ನಲ್ಲಿ ಭಾರತ ಸರಕಾರ, ವಿಲೀನಕ್ಕೆ ಒಲ್ಲೆ ಎಂದು ಹಠ ಹಿಡಿದಿದ್ದ ನಿಜಾಮನನ್ನು ಮಣಿಸಲು, ಸೇನೆಯನ್ನು ನಿಯೋಜಿಸಿತು. ನಿಜಾಮ, ಭಾರತ ಸೇನೆಗೆ ಯಾವ ಪ್ರತಿರೋಧವನ್ನೂ ಒಡ್ಡದೆ ಶರಣಾಗತನಾಗಲೇ ಬೇಕಾಯಿತು. ಅದರೊಂದಿಗೆ ರಜಾಕಾರರ ಹಿಂಸೆಯೂ ಕೊನೆಗೊಂಡಿತು. ಈ ಸಂದರ್ಭವನ್ನು ನೆನಪಿಸಿಕೊಳ್ಳುವುದೇ ಹೈದರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆಯ ಉದ್ದೇಶ. ಆದರೆ ವಿಮೋಚನೆ ಎಂಬ ಘನವಾದ ಹೆಸರು ಸೂಚಿಸುವಂತಹ ಜನಸಂಘರ್ಷವೇನೂ ಆ ಸಂದರ್ಭದಲ್ಲಿ ನಡೆದಿರಲಿಲ್ಲ. ಭಾರತ ಸರ್ಕಾರ ನಿಜಾಮನನ್ನು ಪದಚ್ಯುತಗೊಳಿಸಿದ್ದನ್ನು 'ಪೊಲೀಸು ಕಾರ್ಯಾಚರಣೆ' ಎಂದೇ ಕರೆಯಲಾಗುತ್ತಿದೆಯೇ ಹೊರತು ಯುದ್ಧವೆಂದಲ್ಲ.


ಈ 'ವಿಮೋಚನಾ ದಿನ'ದ ಸಂಭ್ರಮದಲ್ಲಿ ನಾಪತ್ತೆಯಾದ ಇನ್ನೊಂದು ಸತ್ಯವಿದೆ. ಹೈದರಾಬಾದ್ ಸಂಸ್ಥಾನವನ್ನು ಭಾರತದ ಸೇನೆ ವಶಪಡಿಸಿಕೊಂಡ ಬೆನ್ನಿಗೇ ಮುಸ್ಲಿಮ್ ಜನಸಾಮಾನ್ಯರ ಮೇಲೆ ಹಿಂದೂಗಳ ಪ್ರತೀಕಾರ ಹಿಂಸೆ ಶುರುವಿಟ್ಟುಕೊಂಡಿತು. ಕೆಲವು ಕಡೆ ಹಿಂದೂ ಮತೀಯ ವಾದಿ ಸಂಘಟನೆಗಳ ನೇತೃತ್ವದಲ್ಲಿ, ಇನ್ನು ಹಲವೆಡೆ ಸಾಮಾನ್ಯ ಹಿಂದೂಗಳೇ ಸ್ವಯಂಪ್ರೇರಿತರಾಗಿ, ಮುಸ್ಲಿಮರ ಮೇಲೆ ರಜಾಕಾರರ ಹಿಂಸೆಗಿಂತ ಹಲವು ಪಟ್ಟು ಭೀಕರವಾದ ಹಿಂಸಾಚಾರ ನಡೆಸಿ ಸೇಡು ತೀರಿಸಿಕೊಂಡರು. ಸಂಸ್ಥಾನದಲ್ಲಿ ಬೀಡು ಬಿಟ್ಟಿದ್ದ ಭಾರತದ ಸೇನೆ ಈ ಹಿಂಸೆಯನ್ನು ತಡೆಯಬಹುದಾಗಿತ್ತು; ಆದರೆ ಸೇನೆ ತಟಸ್ಥವಾಗಿತ್ತು; ಕೆಲವೆಡೆ ಸೈನಿಕರೇ ಮುಸ್ಲಿಮರ ಮೇಲೆ ಎರಗಿದ್ದೂ ಇದೆ. ಮಾರ್ಗ್ರಿಟ್ ಪೆರ್ನಾ ಎಂಬ ಜರ್ಮನ್ ಇತಿಹಾಸಜ್ಞೆಯ ಪ್ರಕಾರ ಹಿಂದೂಗಳು ನಡೆಸಿದ ಈ ಹಿಂಸಾಕಾಂಡದಲ್ಲಿ ಸಂಸ್ಥಾನದ ಶೇಕಡಾ 10ರಿಂದ 20ರಷ್ಟು ಮುಸ್ಲಿಮ್ ಗಂಡಸರು ಹತರಾದರು. ಕೊಲೆ, ಸುಲಿಗೆ, ಅತ್ಯಾಚಾರಗಳೂ ಅದೇ ಪ್ರಮಾಣದಲ್ಲಿ ನಡೆದವು. ಸಾವಿರಾರು ಮುಸ್ಲಿಮ್ ಕುಟುಂಬಗಳೂ ಮನೆ ಮಾರು ಕಳೆದುಕೊಂಡು ಬೀದಿಗೆ ಬಿದ್ದವು. ಪರಿಸ್ಥಿತಿಯ ಗಂಭೀರತೆಯನ್ನು ಮನಗಂಡ ಪ್ರಧಾನಿ ಜವಾಹರ್‌ಲಾಲ್ ನೆಹರೂ, ಹಿರಿಯ ಕಾಂಗ್ರೆಸ್ ನಾಯಕ ಪಂಡಿತ್ ಸುಂದರ್‌ಲಾಲ್ ಅವರ ನೇತೃತ್ವದಲ್ಲಿ ಸತ್ಯಶೋಧಕ ತಂಡವೊಂದನ್ನು ಸರಕಾರದ ಪರಿಯಿಂದ ಸಂಸ್ಥಾನಕ್ಕೆ ಕಳುಹಿಸಿದರು. ನೆಹರೂ, ಮುಸ್ಲಿಮರ ಮೇಲೆ ನಡೆದ ಹಿಂಸೆಯ ಜೊತೆಗೆ ಸಂಸ್ಥಾನದಲ್ಲಿ ಮುಸ್ಲಿಮ್ ಸಂಸ್ಕೃತಿಯನ್ನು ನಾಶಪಡಿಸಲು ವ್ಯವಸ್ಥಿತವಾಗಿ ನಡೆಯುತ್ತಿರುವ ಪ್ರಯತ್ನಗಳ ಬಗ್ಗೆ ಕೂಡ ಕಳವಳಗೊಂಡಿದ್ದರು. 1948ರ ನವೆಂಬರ್ 14ರಂದು ಗೃಹಮಂತ್ರಿ, ವಲ್ಲಭಭಾಯ್ ಪಟೇಲ್ ಅವರಿಗೆ ಬರೆದ ಪತ್ರದಲ್ಲಿ ನೆಹರೂ ಹೈದರಾಬಾದ್‌ನ ಸ್ಥಿತಿಗತಿ ಬಗ್ಗೆ ತನ್ನ ಆತಂಕವನ್ನು ಹೇಳಿಕೊಂಡಿದ್ದರು.

ಕೇಂದ್ರ ಸರಕಾರಕ್ಕೆ ಪಂಡಿತ್ ಸುಂದರ್‌ಲಾಲ್ ಸಮಿತಿ ಸಲ್ಲಿಸಿದ ವರದಿ ಪ್ರಕಾರ ಹೈದರಾಬಾದ್ ಸಂಸ್ಥಾನದ ಹದಿನಾರು ಜಿಲ್ಲೆಗಳ ಪೈಕಿ ಮೂರು ಜಿಲ್ಲೆಗಳು ಮಾತ್ರ ಹಿಂಸೆಯಿಂದ ಮುಕ್ತವಾಗಿದ್ದವು. ಮುಸ್ಲಿಮರ ಮೇಲೆ ಅತಿ ಹೆಚ್ಚು ಹಿಂಸೆ ನಡೆದಿದೆ ಎಂದು ಸಮಿತಿ ಗುರುತಿಸುವ ನಾಲ್ಕು ಜಿಲ್ಲೆಗಳಲ್ಲಿ ಈಗ ಕರ್ನಾಟಕದ ಭಾಗವಾಗಿರುವ ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳು ಸಹ ಸೇರಿವೆ. ರಜಾಕಾರರ ಹಿಂಸೆ ಅತಿ ಹೆಚ್ಚು ಪ್ರಮಾಣದಲ್ಲಿ ನಡೆದಿರುವುದು ಕೂಡ ಈ ನಾಲ್ಕು ಜಿಲ್ಲೆಗಳಲ್ಲೇ. (ಲಂಕೇಶ್ ಅವರ ಶ್ರೇಷ್ಠಕತೆಗಳಲ್ಲಿ ಒಂದಾಗಿರುವ 'ದಾಳಿ'ಗೆ ಈ ಹಿಂಸೆಯೇ ಹಿನ್ನೆಲೆ.) ಹೈದರಾಬಾದ್ ಕರ್ನಾಟಕ ಎಂದು ಕರೆಯಲಾಗುವ ಗುಲ್ಬರ್ಗ, ಬೀದರ್ ಜಿಲ್ಲೆಗಳಲ್ಲಿ ವಿಮೋಚನಾ ದಿನ ಕಾರ್ಯಕ್ರಮಗಳಲ್ಲಿ ರಜಾಕಾರರ ಹಿಂಸೆಯನ್ನು ನೆನಪಿಸಿಕೊಳ್ಳಲಾಗುತ್ತದೆ; ಅದು ಸಂದರ್ಭೋಚಿತವೂ ಹೌದು. ಆದರೆ ಆ ಹಿಂಸೆಗೆ ಪ್ರತೀಕಾರವಾಗಿ ಮುಸ್ಲಿಮರ ಮೇಲೆ ಹಿಂದೂಗಳು ನಡೆಸಿದ ಅಗಾಧ ಹಿಂಸೆಯನ್ನು ಯಾಕೆ ಯಾರೂ ನೆನಪಿಸಿಕೊಳ್ಳುವುದಿಲ್ಲ? ಸುಂದರ್ ಲಾಲ್ ಸಮಿತಿಯ ವರದಿ ಪ್ರಕಾರ, ಈ ಪ್ರತಿಹಿಂಸೆಯಲ್ಲಿ 27 ರಿಂದ 40 ಸಾವಿರದಷ್ಟು ಮುಸ್ಲಿಮರು ಸಾವಿಗೀಡಾದರು. ಬೀದರ್‌ನ ದಲಿತ ಚಿಂತಕ ಹಾಗೂ ಸಾಮಾಜಿಕ ಕಾರ್ಯಕರ್ತ ವೈಜನಾಥ್ ಸೂರ್ಯವಂಶಿ ಅವರ ಹೇಳಿಕೆ ಪ್ರಕಾರ, ಮುಸ್ಲಿಮರ ಜೊತೆಗೆ ದಲಿತರ ಮೇಲೂ ಆ ಸಂದರ್ಭದಲ್ಲಿ ವ್ಯಾಪಕ ಹಿಂಸೆ ನಡೆದಿತ್ತು. ಈ ವರ್ಷದ ಹೈದರಾಬಾದ್ ಕರ್ನಾಟಕ ವಿಮೋಚನಾ ದಿನಾಚರಣೆ ಕೂಡ ಪ್ರತಿ ವರ್ಷದಂತೆ ಮುಸ್ಲಿಮರ ಮೇಲೆ ಆ ದಿನಗಳಲ್ಲಿ ನಡೆದ ಭಾರೀ ಪ್ರಮಾಣದ ಹಿಂಸೆಯನ್ನು ಮರೆಮಾಚುತ್ತಿರುವುದನ್ನು ಪ್ರತಿಭಟಿಸಿ ಅವರು ಆ ಹೇಳಿಕೆ ನೀಡಿದ್ದರು.

ವೈಜನಾಥ್ ಪ್ರತಿಭಟಿಸಿದ ಹಿಂಸೆ ಕುರಿತ ಅವಜ್ಞೆ ಇವತ್ತು ನಿನ್ನೆಯ ವಿದ್ಯಮಾನವಲ್ಲ. ದೇಶ ವಿಭಜನೆಯ ಹಿಂಸೆಯಿಂದ ತೊಡಗಿ, ಆ ನಂತರ ಸಂಭವಿಸಿದ ಎಲ್ಲ ಪ್ರಕರಣಗಳ ಬಗೆಗೆ ಕೂಡ ಅಂತಹುದ್ದೇ ಸಂವೇದನ ಶೂನ್ಯತೆ ಕಾಣುತ್ತದೆ. ಹಾಗಾಗಿ ಪ್ರಧಾನಿ ನೆಹರೂ ಮುತುವರ್ಜಿ ವಹಿಸಿ ನೇಮಿಸಿದ ಸುಂದರ್‌ಲಾಲ್ ಸಮಿತಿಯ ವರದಿಯನ್ನು ಗೃಹಮಂತ್ರಿ ವಲ್ಲಭಬಾಯಿ ಪಟೇಲ್ ತಿರಸ್ಕರಿಸಿದ್ದರಲ್ಲಿ ಆಶ್ಚರ್ಯವಿಲ್ಲ. ಗೃಹಮಂತ್ರಿ ಆ ಸಮಿತಿಯ ಉದ್ದೇಶವನ್ನು ಸಹ ಪ್ರಶ್ನಿಸಿದರು. ಮುಸ್ಲಿಮರ ಮೇಲೆ ನಡೆದ ಹಿಂಸೆಯನ್ನು ಮಾತ್ರ ಸಮಿತಿ ಗಮನಿಸಿ, ರಜಾಕಾರರು ನಡೆಸಿದ ಹಿಂಸೆಯನ್ನು ಉಪೇಕ್ಷಿಸಿದ್ದು ಯಾಕೆ ಎಂದೂ ಅವರು ಸಮಿತಿಯನ್ನು ತರಾಟೆಗೆ ತೆಗೆದುಕೊಂಡರು. ಆದರೆ ಸುಂದರ್‌ಲಾಲ್ ಸಮಿತಿಗೆ ವಹಿಸಲಾಗಿದ್ದ ಸತ್ಯಶೋಧನೆಯ ವ್ಯಾಪ್ತಿ ರಜಾಕಾರರ ಹಿಂಸೆಯನ್ನು ಒಳಗೊಂಡಿರಲಿಲ್ಲ. ಆದಾಗ್ಯೂ ಸಂಸ್ಥಾನದೊಳಗೆ ಭಾರತದ ಸೇನೆ ಪ್ರವೇಶಿಸಿದ ನಂತರ ಮುಸ್ಲಿಮ್ ಪ್ರಜೆಗಳ ಮೇಲೆ ನಡೆದ ಹಿಂಸಾಚಾರಕ್ಕೆ ರಜಾಕಾರರ ಹಿಂಸೆ ಪ್ರಚೋದನೆ ನೀಡಿದೆ ಎಂಬ ವಾಸ್ತವವನ್ನು ಸಮಿತಿ ತನ್ನ ವರದಿಯಲ್ಲಿ ಕಾಣಿಸಿದೆ. ಹೈದರಾಬಾದ್‌ನ ಮುಸ್ಲಿಮ್ ಪ್ರಜೆಗಳಲ್ಲಿ ಹೆಚ್ಚಿನವರಿಗೆ ರಜಾಕಾರರ ಕುರಿತು ಒಲವು ಇತ್ತು ಎಂಬ ಸತ್ಯವನ್ನು ಸಹ ಅದು ಎತ್ತಿ ಹೇಳಿದೆ. ಹಾಗೆಂದು ಈ ಪ್ರಜೆಗಳ ಮೇಲೆ ಇನ್ನೊಂದು ಮತಕ್ಕೆ ಸೇರಿದ ಪ್ರಜೆಗಳು ಸಾಮೂಹಿಕ ಹಿಂಸೆ ನಡೆಸುವುದು ನ್ಯಾಯವೇ? ಕಾನೂನು ಸಮ್ಮತವೇ? ದೇಶದ ಗೃಹಮಂತ್ರಿಯನ್ನೇ ಈ ಪ್ರಶ್ನೆ ಬಾಧಿಸಲಿಲ್ಲ! ಅವರು ಈ ವರದಿಯನ್ನು ಅಂಗೀಕರಿಸಲಿಲ್ಲ ಮಾತ್ರವಲ್ಲ; ಅದರ ಪ್ರಕಟಣೆಯನ್ನೂ ತಡೆ ಹಿಡಿದರು; ಪಂಡಿತ್ ಸುಂದರ್‌ಲಾಲ್ ಸಮಿತಿಯ ವರದಿ ಈಗಲೂ ಅಧಿಕೃತವಾಗಿ ಒಂದು ರಹಸ್ಯ ದಾಖಲೆಯಾಗಿಯೇ ಉಳಿದಿದೆ. (ಆದರೆ ಅಂತರ್ಜಾಲದಲ್ಲಿ ಅದರ ಪೂರ್ಣ ಪಾಠ ಲಭ್ಯವಿದೆ.) ತನಗೆ ಇರಿಸುಮುರಿಸು ಉಂಟುಮಾಡುವ ವರದಿಯೊಂದನ್ನು ಸರಕಾರ ಗೋಪ್ಯವಾಗಿ ಇಡುವುದನ್ನು ಅರ್ಥಮಾಡಿಕೊಳ್ಳಬಹುದು. ಆದರೆ ಕೆಲವೇ ದಶಕಗಳ ಹಿಂದೆ ನಾಡಿನಲ್ಲಿ ನಡೆದ ಹಿಂಸಾಕಾಂಡವೊಂದರಲ್ಲಿ ನಾಯಕರಾದ 'ತಮ್ಮವರ' ಮೇಲೆ ನಡೆದ ಹಿಂಸೆಯನ್ನು ನೆನಪಿನಲ್ಲಿಟ್ಟುಕೊಂಡು, ಅಷ್ಟೇ ಅಮಾಯಕರಾದ ಇನ್ನೊಂದು ಮತದವರ ಮೇಲೆ ನಡೆದ ಹಿಂಸೆಯನ್ನು ಗುರುತಿಸಲು ಸಹ ನಿರಾಕರಿಸುವ ಜನರ 'ಮರೆವ'ನ್ನು ಹೇಗೆ ಅರ್ಥಮಾಡಿಕೊಳ್ಳುವುದು? ನಮ್ಮ ನೆನಪಿನ ಹಾಗೆ ನಮ್ಮ ಮರೆವು ಕೂಡ ಒಂದು ಸಾಮಾಜಿಕ ಉತ್ಪನ್ನವಾಗಿರುವುದೇ ಅದಕ್ಕೆ ಕಾರಣವಲವೆ?

■ ಜಿ. ರಾಜಶೇಖರ್

ರಂಗಶಿಕ್ಷಣ ಪದವೀಧರರ ನ್ಯಾಯಯುತ ಬೇಡಿಕೆಗಳು



ಕರ್ನಾಟಕದ ಈ ಕೆಳಗಿನ ರಂಗಶಿಕ್ಷಣ ಕೇಂದ್ರಗಳಲ್ಲಿ ವ್ಯವಸ್ಥಿತವಾಗಿ ರಂಗಶಿಕ್ಷಣ ನೀಡಲಾಗುತ್ತಿದೆ.

1) ನೀನಾಸಂ ರಂಗಶಿಕ್ಷಣ ಕೇಂದ್ರ, ಹೆಗ್ಗೋಡು, ಸಾಗರ
2) ರಂಗ ಅಧ್ಯಯನ ಕೇಂದ್ರ, ಭಂಡಾರ್‌ಕಾರ್ಸ್ ಕಾಲೇಜು, ಕುಂದಾಪುರ
3) ಶಿವಕುಮಾರ ರಂಗ ಪ್ರಯೋಗ ಶಾಲೆ-ಸಾಣೇಹಳ್ಳಿ
4) ಭಾರತೀಯ ರಂಗ ಶಾಲೆ-ಮೈಸೂರು (ರಂಗಾಯಣ)
5) ಡಿ.ವಿ.ಎಸ್. ರಂಗಶಿಕ್ಷಣ ಕೇಂದ್ರ, ಶಿವಮೊಗ್ಗ
6) ಎಂ.ಇ.ಎಸ್. ಕಾಲೇಜು, ಬೆಂಗಳೂರು

ಈ ರಂಗ ಶಿಕ್ಷಣ ಕೇಂದ್ರಗಳಲ್ಲಿ ನಾಟಕ ಕಲೆಗೆ ಸಂಬಂಧಪಟ್ಟ ಬೆಳಕಿನ ವಿನ್ಯಾಸ, ಪ್ರಸಾಧನ, ರಂಗಸಜ್ಜಿಕೆ, ವಸ್ತ್ರವಿನ್ಯಾಸ, ಸಾಹಿತ್ಯ ನಟನೆ, ಅಭಿನಯ ಸಿದ್ಧಾಂತ-ಇತ್ಯಾದಿಗಳನ್ನು ಕಲಿಸುತ್ತಿರುವುದಲ್ಲದೆ, ವರ್ಷಕ್ಕೆ 3 ಅಥವಾ 4 ಪೂರ್ಣ ಪ್ರಮಾಣದ ನಾಟಕಗಳನ್ನು ತಯಾರಿಸಿ ಪ್ರದರ್ಶಿಸಲಾಗುತ್ತಿದೆ. ಭರತನ ನಾಟ್ಯಶಾಸ್ತ್ರ ಸ್ಟಾನಿಲ್ಲಾವ್‌ಸ್ಕಿ, ಬ್ರೆಕ್ಟ್, ಜೆರ್ರಿ ಗ್ರೋಟೋವ್‌ಸ್ಕಿ ಮುಂತಾದವರ ಅಭಿನಯ ಸಿದ್ಧಾಂತಗಳ ಆಳವಾದ ಅಧ್ಯಯನ ನಡೆಯುತ್ತಿದೆ. ಪ್ರತಿವರ್ಷ ಸುಮಾರು 70 ರಿಂದ 75 ರಂಗಶಿಕ್ಷಣ ಪದವೀಧರರು ಈ ಕೇಂದ್ರಗಳಿಂದ ಶಿಕ್ಷಿತರಾಗಿ ಹೊರ ಬರುತ್ತಿದ್ದಾರೆ. ಈಗ ಎದ್ದಿರುವ ಸಮಸ್ಯೆ ಏನೆಂದರೆ ಹೀಗೆ ರಂಗಶಿಕ್ಷಣ ಕೇಂದ್ರಗಳಿಂದ ಶಿಕ್ಷಿತರಾಗಿ ಹೊರಬರುತ್ತಿರುವ ಪದವೀಧರರ ಬದುಕು ಹೇಗೆ ಸಾಗಬೇಕು? ಅವರಿಗೆ ಉದ್ಯೋಗಾವಕಾಶ ಎಲ್ಲಿದೆ?

ಸಾರ್ವಜನಿಕ ಇಲಾಖೆಯು 2008ರಲ್ಲಿ ಪ್ರೌಢಶಾಲೆಗಳಿಗೆ 44 ರಂಗಶಿಕ್ಷಕರನ್ನು ನೇಮಕ ಮಾಡಿಕೊಳ್ಳುವ ಮೂಲಕ ಶಿಕ್ಷಣದಲ್ಲಿ ರಂಗಭೂಮಿಯನ್ನು ಅಳವಡಿಸುವ ಪ್ರಕ್ರಿಯೆಗೆ ಚಾಲನೆ ನೀಡಿತು. ಆದರೆ ಸುಮಾರು 8226 ಶಾಲೆಗಳಿರುವ ನಮ್ಮ ಕರ್ನಾಟಕಕ್ಕೆ 44 ರಂಗಶಿಕ್ಷಕರ ನೇಮಕ ಏನೇನೂ ಸಾಲದು.

ಇಂದು ಮಕ್ಕಳ ಕ್ರಿಯಾಶೀಲತೆಯನ್ನು ಬೆಳೆಸುವಂತಹ ಯಾವುದೇ ಕಾರ್ಯಕ್ರಮಗಳು ಟಿ.ವಿ. ಚಾನೆಲ್‌ಗಳಲ್ಲಿ ಬರುವುದಿಲ್ಲ, ಶಾಲೆಗಳಲ್ಲಿ ನಡೆಯುತ್ತಿಲ್ಲ, ಶಾಲೆಗಳ ವಾರ್ಷಿಕೋತ್ಸವಗಳಲ್ಲಿ, ಟಿ.ವಿ. ವಾಹಿನಿಗಳಲ್ಲಿ ಮಕ್ಕಳ ಕಾರ್ಯಕ್ರಮಗಳಲ್ಲಿ ಮಕ್ಕಳನ್ನು ವಿವೇಚನೆ ಇಲ್ಲದ, ಕಲ್ಪನಾಹೀನ ಸ್ಪರ್ಧಾತ್ಮಕ ಚಟುವಟಿಕೆಗಳಲ್ಲಿ ತೊಡಗಿಸಲಾಗುತ್ತಿದೆ. ನಮ್ಮ ವರ್ತಮಾನದ, ಭವಿಷ್ಯದ ದುರಂತ ಬೀಜಗಳು ಇಲ್ಲೇ ಕಾಣುತ್ತವೆ. ಇಂದು ಎಲ್ಲೆಲ್ಲೂ ಸ್ಪರ್ಧೆಗಳೇ ಕಾಣುತ್ತಿದ್ದು, ಮಕ್ಕಳನ್ನು ನಾವು ಸ್ಪರ್ಧೆಗಳಿಗಾಗಿಯೇ ಇರುವ ಮಾಹಿತಿ ಕಣಜಗಳನ್ನಾಗಿ ತಯಾರು ಮಾಡುತ್ತಿದ್ದೇವೆ. ಈ ನಿಟ್ಟಿನಲ್ಲಿ ರಂಗಕಲೆಯನ್ನು ಅರಿಯುವ, ಅನುಭವಿಸುವ ಅನಿವಾರ್ಯತೆ ನಮ್ಮ ಮಕ್ಕಳಿಗೆ ಅಗತ್ಯವಾಗಿದೆ. ಆದ್ದರಿಂದಲೇ ಶಾಲೆಗಳಲ್ಲಿ ರಂಗಶಿಕ್ಷಕರ ನೇಮಕವು ಅತಿಮುಖ್ಯವೂ, ಸಾಂಸ್ಕೃತಿಕ ತುರ್ತಿನದೂ ಆಗಿದೆ. ಸತ್ವಯುತವಾದ ಸಾಮಾಜಿಕ-ಸಾಂಸ್ಕೃತಿಕ ಸಂವೇದನೆಯು ತಲೆಮಾರಿನಿಂದ ತಲೆಮಾರಿಗೆ ಕಡಿಮೆಯಾಗುತ್ತಿದೆ. ಹಾಗಾಗಿಯೇ ಇಂದು, ಸಾಮಾಜಿಕ ನ್ಯಾಯಕ್ಕಾಗಿ ನಡೆಯುತ್ತಿರುವ ಬಗೆಬಗೆಯ ಹೋರಾಟಗಳಲ್ಲಿ ಕಲ್ಪನೆ ಮತ್ತು ಬದ್ಧತೆಗಳ ಕೊರತೆ ಕಂಡುಬರುತ್ತಿದೆ. ಅದರ ಜಾಗದಲ್ಲಿ ಅಮಾನವೀಯ ಹಿಂಸೆ ವಿಜೃಂಭಿಸುತ್ತಿರುವುದು ಕಂಡುಬರುತ್ತಿದೆ. ಈಗ ನಡೆಯುತ್ತಿರುವ ಅತ್ಯಾಚಾರ, ಅನಾಚಾರಗಳಿಗೂ ಕೂಡ ಶಿಕ್ಷಣದಲ್ಲಿ ಸೂಕ್ತ ರಂಗ ಚಿಕಿತ್ಸೆ ದೊರೆಯದಿರುವುದೇ ಆಗಿದೆ.

ರಂಗಕ್ರಿಯೆಯಿಂದ ಹುಟ್ಟುವ ಸಮುದಾಯ ಪ್ರಜ್ಞೆ ಮತ್ತು ಅದು ಅರಳಿಸುವ ಸೃಜನಶೀಲತೆಯು ವಿಶಿಷ್ಟವಾದುದು. ಇದು ಆರೋಗ್ಯಕರ ಸಾಮಾಜಿಕ ಸ್ಥೈರ್ಯವನ್ನು ನೀಡುವ ಶಕ್ತಿಯುಳ್ಳದ್ದಾಗಿದೆ. ಅಂತಹ ಶಕ್ತಿಯುತ ರಂಗಶಿಕ್ಷಣವನ್ನು ನಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ಎಲ್ಲ ಹಂತಗಳಲ್ಲಿ ಅಳವಡಿಸುವುದು ಬಹಳ ತುರ್ತಿನ ಅಗತ್ಯದ ಕೆಲಸ.

ಕೇಂದ್ರ ಸರ್ಕಾರವು ತನ್ನ ಹೊಸ ಶಿಕ್ಷಣ ನೀತಿಯ ಪ್ರಕಾರ, ಶೈಕ್ಷಣಿಕ ರಂಗಭೂಮಿ ಕಾರ್ಯಕ್ರಮವನ್ನು ಈಗಾಗಲೇ ಜಾರಿಗೊಳಿಸಿದೆ. ಸಿ.ಬಿ.ಎಸ್.ಸಿ. ಪಠ್ಯಕ್ರಮವನ್ನು ಪಾಲಿಸುತ್ತಿರುವ ಶಾಲೆಗಳಲ್ಲಿ ಈಗಾಗಲೇ ರಂಗಭೂಮಿಯ ಒಂದು ಪಠ್ಯವನ್ನು ಅಳವಡಿಸಿ, ಮಕ್ಕಳಿಗೆ ಶಿಕ್ಷಣವನ್ನು ನೀಡಲಾಗುತ್ತದೆ.

ಕರ್ನಾಟಕ ರಾಜ್ಯದಾದ್ಯಂತ ಹಂಚಿಹೋಗಿರುವ ರಂಗಶಿಕ್ಷಣ ಪದವೀಧರರು ಈಗ ಸಂಘಟಿತರಾಗಿ 'ಕರ್ನಾಟಕ ರಾಜ್ಯ ರಂಗ ಪದವೀಧರರ ವೇದಿಕೆ' ಎನ್ನುವ ಸಂಘ ಕಟ್ಟಿಕೊಂಡು ತಮ್ಮ ನ್ಯಾಯಯುತ ಬೇಡಿಕೆಗಳ ಈಡೇರಿಕೆಗಾಗಿ ಸತ್ಯಾಗ್ರಹ ನಡೆಸುತ್ತಿದ್ದಾರೆ. ಅವರ ಬೇಡಿಕೆಗಳು ಹೀಗಿವೆ:

1. ಪ್ರಾಥಮಿಕ ಶಾಲೆಗಳಲ್ಲಿ ರಂಗಶಿಕ್ಷಕರ ನೇಮಕಾತಿಯ ಪ್ರಕ್ರಿಯೆ ಪ್ರಾರಂಭವಾಗಬೇಕು.

2. ಶೈಕ್ಷಣಿಕ ರಂಗಭೂಮಿ ಪಠ್ಯವನ್ನು ಸಿ.ಬಿ.ಎಸ್.ಸಿ. ಪಠ್ಯಕ್ರಮದ ಮಾದರಿಯಲ್ಲಿ ಸಿದ್ಧಗೊಳಿಸಿ, ಬೋಧಿಸುವ ವ್ಯವಸ್ಥೆ ಮಾಡಬೇಕು.

3. ಪ್ರೌಢಶಾಲೆಗಳಲ್ಲಿ ರಂಗ ಶಿಕ್ಷಕರ ನೇರ ನೇಮಕಾತಿ ನಡೆಯಬೇಕು.

4. ಮೊರಾರ್ಜಿ ಮತ್ತು ರಾಣಿ ಚೆನ್ನಮ್ಮ ವಸತಿಶಾಲೆಗಳಲ್ಲಿ ಹಾಗೂ ಅನುದಾನಿತ ಶಾಲೆಗಳಲ್ಲಿ ಶೈಕ್ಷಣಿಕ ರಂಗಭೂಮಿ ಕಾರ್ಯಕ್ರಮವನ್ನು ಅಳವಡಿಸಿಕೊಳ್ಳಬೇಕು.

ರಂಗಶಿಕ್ಷಣ ಪದವೀಧರರ ಈ ಬೇಡಿಕೆಗಳನ್ನು ಬೆಂಬಲಿಸಿ, ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು 05-09-2014ರಂದು ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣದ ಸಚಿವ ಶ್ರೀ ಕಿಮ್ಮನೆ ರತ್ನಾಕರ ಅವರಿಗೆ ಹೀಗೆಂದು ಪತ್ರ ಬರೆದಿದ್ದಾರೆ-

"ರಂಗಭೂಮಿ ಜನಜೀವನದ ಕನ್ನಡಿ. ಹಾಗಾಗಿ ಇತರ ಕಲೆಗಳಿಗೆ ಮೀರಿದ ಜೀವಂತಿಕೆ ರಂಗಕಲೆಗಿದೆ. ಇದೊಂದು ಸೃಜನಶೀಲ ಕಲೆ. ಇಂತಹ ಕಲೆಯನ್ನು ಶಾಲಾಪಠ್ಯದಲ್ಲಿ ಸೇರಿಸುವ ಅಗತ್ಯವನ್ನು ಈ ಹಿಂದೆ ಚಂದ್ರಶೇಖರ ಅವರು ಶಿಕ್ಷಣ ಸಚಿವರಾಗಿದ್ದಾಗ ಮನವರಿಕೆ ಮಾಡಿದ್ದೆವು. ಅವರು ರಂಗಶಿಕ್ಷಣವನ್ನು ಪಠ್ಯದಲ್ಲಿ ಸೇರಿಸುವ ಪ್ರಾಮಾಣಿಕ ಪ್ರಯತ್ನ ಮಾಡಿದ್ದರು. ಅಷ್ಟರಲ್ಲೇ ಅವರ ಅವಧಿ ಮುಗಿದಿದೆ.

ಮುಂದೆ ಬಂದ ಸರ್ಕಾರಗಳ ಮೇಲೂ ಒತ್ತಡ ತಂದ ಪರಿಣಾಮವಾಗಿ 2008ರಲ್ಲಿ ಪ್ರೌಢಶಾಲೆಗಳಿಗೆ 44 ಜನ ರಂಗಶಿಕ್ಷಕರ ನೇಮಕಾತಿ ಆಯಿತು. ಆ ಶಿಕ್ಷಕರು ಶಿಕ್ಷಣ ಗುಣಮಟ್ಟವನ್ನು ಸುಧಾರಿಸಲು ಮತ್ತು ವಿದ್ಯಾರ್ಥಿಗಳನ್ನು ಕ್ರಿಯಾಶೀಲರಾಗಿಸಲು ಯಶಸ್ವಿಯಾಗಿದ್ದಾರೆ. ಆದರೆ ಅಲ್ಲಿಂದ ಮುಂದೆ ಯಾವ ನೇಮಕಾತಿಯೂ ಆಗಿಲ್ಲ, ಪ್ರಾಥಮಿಕ, ಪ್ರೌಢ ಮತ್ತು ಪಿಯುಸಿ ಹಂತದಲ್ಲಿ ಕಲಿಯುವ ಎಲ್ಲ ವಿದ್ಯಾರ್ಥಿಗಳಿಗೂ ರಂಗಶಿಕ್ಷಣ ಕಡ್ಡಾಯವಾಗಬೇಕು. ಅದಕ್ಕಾಗಿ 8-10 ಸಾವಿರ ರಂಗಶಿಕ್ಷಕರ ನೇಮಕಾತಿ ಆಗಬೇಕು. ಅದರಿಂದ ಸರ್ಕಾರಕ್ಕೆ ತಾತ್ಕಾಲಿಕವಾಗಿ ಆರ್ಥಿಕ ಹೊರೆಯಾದರೂ ಅದು ಮುಂದೆ ಆಧಾರವಾಗಿ ಮಾರ್ಪಡುವುದು!"

ಈ ಬೇಡಿಕೆಗಳ ಹಿನ್ನೆಲೆಯಲ್ಲಿ ಎಲ್ಲಾ ರಂಗಶಾಲೆಯ ರಂಗಪದವೀಧರರು, ಹಿರಿಯ ರಂಗನಿರ್ದೇಶಕರು, ರಂಗಚಿಂತಕರು ಸಂಘಟಿತರಾಗಿ ದಿನಾಂಕ 07-09-2014ರಂದು ಭಾನುವಾರ ಬೆಂಗಳೂರಿನ 'ಟೌನ್‌ಹಾಲ್' ... ಹಕ್ಕೊತ್ತಾಯ ಧರಣಿ ಸತ್ಯಾಗ್ರಹ ನಡೆಸಿದರು.

ಈ ಹಕ್ಕೊತ್ತಾಯ ಧರಣಿ ಸತ್ಯಾಗ್ರಹದಲ್ಲಿ ಹಿರಿಯ ರಂಗನಿರ್ದೇ... ರಂಗತಜ್ಞರಾದ ಪ್ರಸನ್ನ ಹೆಗ್ಗೋಡು ಅವರು-


"ಇಂದು ನಾವು ಶೈಕ್ಷಣಿಕ ರಂಗಭೂಮಿಯ ಸಲುವಾಗಿ ಬೀದಿ... ನಿಂತು ಹೋರಾಟ ಮಾಡುತ್ತಾ ಇದ್ದೇವೆ. ಇದೊಂದು ಸಮಾಜದ ಕಾರ್ಯಕ್ರ... ಸಾಮಾಜಿಕ ಕಾರ್ಯಕ್ರಮ. ಇಂದಿನ ಜಾಗತೀಕರಣದಿಂದಾಗಿ ಕನ್ನಡ ನಾಶವಾ... ಇದೆ. ಸರಕಾರ ಎಲ್ಲಾ ರೀತಿಯ ಶಿಕ್ಷಕರನ್ನು ನೇಮಕ ಮಾಡ್ತಾ ಇದೆ; ಆ... ರಂಗ ಶಿಕ್ಷಕರನ್ನು ಮಾತ್ರ ನೇಮಕ ಮಾಡ್ತಾ ಇಲ್ಲ, ಶೈಕ್ಷಣಿಕ ರಂಗಭೂ... ಎನ್ನುವಂತಹದ್ದು ಮಗುವಿಗೆ ಬರೇ ಕಲಿಯುವ ಕಾರ್ಯಕ್ರಮ ಅಲ್ಲ, ಅ... ನಲಿಯುವ ಕಾರ್ಯಕ್ರಮ. ಸರಕಾರ ಇನ್ನಾದರೂ ಎಚ್ಚೆತ್ತುಕೊಳ್ಳಬೇಕಾ... ಕರ್ನಾಟಕದಲ್ಲಿ ರಂಗ ಚಟುವಟಿಕೆಗೆ ಶ್ರೀರಂಗರು, ಕೆ.ವಿ. ಸುಬ್ಬಣ್ಣನ... ಆದಿಯಾಗಿ ಬಲಕೊಟ್ಟಿದ್ದಾರೆ. ನಾಟಕ ಶಾಲೆಯಿಂದ ಪಾಸಾದ ಪ್ರತಿಭಾವಂ... ಟೆಲಿವಿಷನ್‌ಗಳಿಗೆ ಹೋಗ್ತಾ ಇದ್ದಾರೆ. ಅಂತಹ ಪ್ರತಿಭೆಗಳು ಟೆಲಿವಿಷ... ಹೋಗಬೇಕೋ? ಅಥವಾ ಅವರ ಪ್ರತಿಭೆ ಗ್ರಾಮೀಣ ಮಕ್ಕ... ಲಭ್ಯವಾಗಬೇಕೋ? ಮುಖ್ಯಮಂತ್ರಿಗಳೇ! ಟೆಲಿವಿಷನ್ ಚಾನೆಲ್‌ಗ... ಉಳಿಸೋಕೆ ಹೋಗಬೇಡಿ, ರಾಜ್ಯದ ಕನ್ನಡವನ್ನು ಉಳಿಸಿ. ಕನ್ನಡ ಮಕ್ಕ... ಅವರ ಸಂವಹನ ಶಕ್ತಿಯನ್ನು ಉಳಿಸಿ, ಬೆಳೆಸಬೇಕಾದರೆ ನಾಟಕ ಶಿಕ್ಷ... ಬೇಕು. ಗ್ರಾಮೀಣ ಮಕ್ಕಳ ಸಂವಹನ ಶಕ್ತಿಯನ್ನು, ಭಾಷೆಯನ್ನು ... ಮಾಡುವ ಶಿಕ್ಷಣ-ರಂಗಶಿಕ್ಷಣ. ಹಾಗಾಗಿ ಎಲ್ಲಾ ಶಾಲೆಗಳಲ್ಲಿ ರಂಗಶಿ... ನೇಮಕಾತಿ ಪ್ರಕ್ರಿಯೆಯನ್ನು ಮಾನ್ಯ ಸಿದ್ದರಾಮಯ್ಯನವರ ಸರ್ಕಾರ ಕೂ... ಪ್ರಾರಂಭಿಸಬೇಕು...."

ಈ ಧರಣಿ ಸತ್ಯಾಗ್ರಹದಲ್ಲಿ ನಟರಾಜ ಹೊನ್ನವಳ್ಳಿ, ಅಗ್ರಹಾರ ಕೃಷ್ಣಮೂ... ವೆಂಕಟ ರಾಜು ಚಾಮರಾಜಪೇಟೆ, ಶಶಿಧರ ಬಾರೀಘಾಟ್, ಸಂತೋ... ಚಳ್ಳಕೆರೆ, ಪ್ರಭುಲಿಂಗ ಕಿಣಗಿ, ವಿನಾಯಕ ಎಸ್.ಎಂ. ಕುಂದಾಪುರ ... ಸುಮಾರು 150 ರಂಗಪದವೀಧರರು ಭಾಗವಹಿಸಿ, ತಮ್ಮ ನಿಲುವುಗ... ತಿಳಿಸಿ, ಸರಕಾರದ ಮುಂದೆ ತಮ್ಮ ಹಕ್ಕೊತ್ತಾಯವನ್ನು ಮಂಡಿಸಿದರು.

ಪ್ರತಿಭಾವಂತ ರಂಗಶಿಕ್ಷಣ ಪದವೀಧರರ ಈ ನ್ಯಾಯಯುತ ಬೇಡಿಕೆ... ಮಾನ್ಯ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜನಪರ ಕಾಳಜಿಗಳುಳ್ಳ ಸ... ಕೂಡಲೇ ಸ್ಪಂದಿಸಲಿ ಎಂದು ಕರ್ನಾಟಕದ ಪ್ರಜ್ಞಾವಂತ ಪ್ರಜೆ... ಹೃತ್ಪೂರ್ವಕವಾಗಿ ಹಾರೈಸುತ್ತಿದ್ದಾರೆ.

■ ಡಾ.ಹಯವದನ ಮೂಡು...

ಕಂಪ್ಯೂಟರ್ ಸಂಸಾರ



ನಮ್ಮದು ಕಂಪ್ಯೂಟರ್ ಸಂಸಾರ !
ನಾನು ಹಾರ್ಡ್‌ವೇರ್, ನನ್ನ ಹೆಂಡತಿ ಸಾಫ್ಟ್‌ವೇರ್
ನಮಗೆಷ್ಟು ಮಕ್ಕಳು ನಮಗೇ ಗೊತ್ತಿಲ್ಲ ?

ಈ-ಮೇಲ್, ಟ್ವೀಟರ್, ಫೇಸ್‌ಬುಕ್, ಕ್ಯಾಬ.ರ್
ಸ್ಕೈಪ್, ವಿ-ಚಾಟ್, ವಾಟ್ಸ್ ಆಪ್, ಓ.ಎಲ್.ಎಕ್ಸ್,
ಕ್ವಿಕ್ಕರ್ ಇನ್ನೂ ಯಾರ್ಯಾರೋ?
ಇವರಾವ ಕೆಲಸ ಮಾಡುತ್ತಾರೋ? ಅದೂ ಗೊತ್ತಿಲ್ಲ.

ಕೆಲವರು ಹೇಳುತ್ತಾರೆ, ಒಬ್ಬ ನಿಮಗೆ
ಲಾಟರಿ ಬಂದಿದೆಯೆಂದು
ಕೆಲಸ ಕೊಡಿಸುತ್ತೇವೆಂದು
ಸಾಲ ಕೊಡಿಸುತ್ತೇವೆಂದು
ಮೋಸ ಮಾಡುತ್ತಾನಂತೆ

ಮತ್ತೊಬ್ಬ ಯಾರ್ಯಾರದ್ದೋ ಹೆಸರಿನಲ್ಲಿ
ಯಾರ್ಯಾರದ್ದೋ ಮಾನ ಮರ್ಯಾದೆ
ಹರಾಜು ಹಾಕುತ್ತಾನಂತೆ!
ಒಂದಿಬ್ಬರು ಓಎಲ್‌ಎಕ್ಸ್, ಕ್ವಿಕ್ಕರ್ ಅಂತಾ
ಆನ್‌ಲೈನ್ ವ್ಯಾಪಾರ ಮಾಡುತ್ತಾರಂತೆ

ಮತ್ತೊಬ್ಬನು ಯಾರ್ಯಾರಿಗೋ
[illegible] ಸಂದೇಶ
ಕಳಿಸುತಾ, ಕಪಿಯಾಗಿದ್ದಾನಂತೆ,

ಮತ್ತೊಬ್ಬ ದೂರದವರ ಜೊತೆ
ಮುಖಾಮುಖಿ ಮಾತನಾಡುತ್ತಾನಂತೆ
ಸಂದರ್ಶನ ನಡೆಸುತ್ತಾನಂತೆ,

ಮಗದೊಬ್ಬ ಭವಿಷ್ಯವನ್ನೂ
ಸದಾ ಹೇಳುತ್ತಾನಂತೆ,
ಏನು ಹೇಳಲಿ ನಾನಿವರ ಬಗ್ಗೆ
ಮುಂದೆ ಇವರು ನನಗೆ ಹೆಸರು
ತರುತ್ತಾರೋ ಅಥವಾ ನನ್ನ ಹೆಸರೇಳಿ
ಭಯೋತ್ಪಾದನೆ ಮಾಡಿ, ನನ್ನ ಸಂಸಾರದ
ವಿನಾಶಕ್ಕೂ ಕಾರಣರಾಗುತ್ತಾರೋ
ಯಾರಿಗೆ ಗೊತ್ತು ?

ನನ್ನದು ಕಂಪ್ಯೂಟರ್ ಸಂಸಾರ !



■ ಡಾ. ಡಿ.ಸಿ. ರಾಜಪ್ಪ ಐಪಿಎಸ್

ಮೂರು ದಿನಗಳ 'ಸಾಧನೆ'

ನವತ್ತು ಬುದ್ಧಿಜೀವಿಗಳ ಒಂದು ವರ್ಗ ಮತ್ತು ಮಗಳ ಒಂದು ವರ್ಗ ಯಾವೊಂದು ಮುಚ್ಚುಮರೆ ಇಲ್ಲದೆ ಮೋದಿ ಸರ್ಕಾರದ ಮುಖಸ್ತುತಿಯಲ್ಲಿ ಗಿವೆ. ಆ ಲೇಖನಗಳನ್ನು, ಆ ಸುದ್ದಿಗಳನ್ನು, ಆ ಕೆ ಬರುವಂಥ ಕೊಂಡಾಟವನ್ನು ನೋಡುವಾಗ ಇದೆಲ್ಲ 'ೇಜ್' ವ್ಯವಹಾರವಿರಬಹುದೆಂಬ ಸಂಶಯ ಮುತ್ತದೆ. ಬೆರಳೆಣಿಕೆಯಷ್ಟು ಪತ್ರಿಕೆಗಳು, ಟಿವಿ ಮಗಳು ಮತ್ತು ಕೆಲವು ಸಾಮಾಜಿಕ ಜಾಲತಾಣಗಳನ್ನು ಮಿಕ್ಕೆಲ್ಲೂ ಧನಾತ್ಮಕ ಟೀಕೆಗಳು, ವಿಮರ್ಶೆಗಳು ಬರುತ್ತಿಲ್ಲ. ಸಮಾಜದ ಕಾವಲುಗಾರರಂತೆ ಇರಬೇಕಾದ ಧ್ಯಮಗಳು ಸಾಮಾಜಿಕ ಜವಾಬ್ದಾರಿಯನ್ನು ಸದಿರುವುದಕ್ಕೆ ಏನು ಹೇಳಬೇಕೋ ತಿಳಿಯುತ್ತಿಲ್ಲ. ರೀತಿಯಲ್ಲಿ ಇದನ್ನು ಇತಿಹಾಸದ ಪುನರಾವರ್ತನೆ ಯು ಕರೆಯಲಡ್ಡಿಯಿಲ್ಲ, ಏಕೆಂದರೆ 80ರ ದಶಕದ ವ್ ಗಾಂಧಿ ಸರ್ಕಾರದ ಕಾಲದಲ್ಲೂ ಹೆಚ್ಚುಕಮ್ಮಿ ಪರಿಸ್ಥಿತಿ ಇತ್ತು. ಭಾರತ ಒಂದು ಬಲಿಷ್ಠ ಸ್ವತಂತ್ರ, ಬುಬಿ ದೇಶವಾಗಿ ವಿಶ್ವದ ಮುಂಚೂಣಿ ರಾಷ್ಟ್ರಗಳ ಲ್ಲಿರಬೇಕೆಂಬುದೆ ತನ್ನ ಕನಸು ಎಂದಿದ್ದ ರಾಜೀವ್ ಜನತೆಯ, ಕಾರ್ಪೊರೇಟುಗಳ, ಮಾಧ್ಯಮಗಳ ಯಾಗಿ ಹೊರಹೊಮ್ಮಿದ್ದರು. ಬೊಫೋರ್ಸ್ ಣದ ಬಳಿಕ ಎಲ್ಲವೂ ತಲೆಕೆಳಗಾಯಿತು.

ದೀಗ 2014ರ ಮೋದಿ ಸರ್ಕಾರದ ಸರದಿ. ನೂತನ ದಡಿ ಜನರಿಗೆ ಮಂಕುಬೂದಿ ಎರಚುವ ಕಾರ್ಯ ತವಾಗಿ ಮುಂದುವರಿದಿದೆ ಎಂದೇ ಹೇಳಬೇಕಾಗಿದೆ. ಶ ಸಪ್ತಾಹ, ಹಿಂದಿ ದಿವಸ್, ಪಠ್ಯಪುಸ್ತಕಗಳ ಕರಣದಂತಹ ಕೋಮುವಾದಿ ಕಾರ್ಯಕ್ರಮಗಳು ಂದಾಗಿ ಜಾರಿಯಾಗುತ್ತಿವೆ. ಪ್ರಮಾಣವಚನ ಸ್ವೀಕಾರ, ತ್ಯ ದಿನಾಚರಣೆ, ಶಿಕ್ಷಕರ ದಿನಾಚರಣೆಯಂತಹ ರ್ಭಗಳಲ್ಲಿ ಮೋದಿ ಬಿಗಿದಂಥಾ ಭಾಷಣಗಳ ಹಿಂದೆ ಎಚ್ಚರಿಕೆಯ ಪೂರ್ವಸಿದ್ಧತೆ ಇದೆ. 2002ರ ಾತಿನ, 2014ರ ಚುನಾವಣಾ ಕಾಲದ ಸಹಜ ಯ ಚಿತ್ರಣವನ್ನು ಸಂಪೂರ್ಣ ಬದಲಾಯಿಸಿ ರ್ವ ಮಹಾನ್ ಮುತ್ಸದ್ದಿ, ಸೌಮ್ಯವಾದಿ, ಯೆಂದು ಬಿಂಬಿಸುವ ವ್ಯವಸ್ಥಿತ ಯೋಜನೆ ಅಲ್ಲಿದೆ.

ಳೋದು ಶಾಸ್ತ್ರ ಇಕ್ಕೋದು ಗಾಳ!

ಾತಂತ್ರ್ಯ ದಿನಾಚರಣೆಯಂದು ದೋಷರಹಿತ, ಣಾಮರಹಿತ ಉತ್ಪಾದನೆಗೆ ಕರೆಕೊಟ್ಟಿರುವುದನ್ನು ಕೊಳ್ಳಿ. ಆದರೆ ನೆಲದ ವಾಸ್ತವ ಮಾತ್ರ ತೀರ ವಾಗಿದೆ. ಉದಾಹರಣೆಗೆ ಪರಿಸರದ ಮೇಲಾಗುವ ಣಾಮಗಳನ್ನು ಪರಿಗಣಿಸದೆ ಈಗಾಗಲೆ ಸುಮಾರು ಯೋಜನೆಗಳಿಗೆ ಹಸಿರುನಿಶಾನೆ ತೋರಿಸಲಾಗಿದೆ. ಕ ಮಾಲಿನ್ಯವಿರುವ ವಾಪಿ ಕೈಗಾರಿಕಾ ವಲಯದಲ್ಲಿ ಕಾರ್ಖಾನೆ ನಿರ್ಮಾಣಕ್ಕಿದ್ದ ನಿಷೇಧವನ್ನು ಗೆದುಕೊಳ್ಳಲಾಗಿದೆ. ಕಚ್ ಖಾರಿಯಲ್ಲಿ ಪರಿಸರ ಧಿ ಮುಂದ್ರಾ ವಿಶೇಷ ಆರ್ಥಿಕ ವಲಯಕ್ಕೆ ಅನುಮತಿ ಾಗಿದೆ.

ಪ್ರಧಾನಿಯ ಭಾಷಣದಲ್ಲಿ ಲಿಂಗ ಅನುಪಾತ, ಸ್ತ್ರೀ ಹತ್ಯೆ, ಮಕ್ಕಳ ಅಪೌಷ್ಟಿಕತೆ ಬಗ್ಗೆ ಭಾರಿ ಕಾಳಜಿ ಯಿತು. ಆದರೆ ಆತನ ಅಧಿಕಾರಾವಧಿಯಲ್ಲಿ ಾತಿಕ ಸಾಧನೆ ತೀರಾ ಕಳಪೆಯಾಗಿತ್ತೆಂಬ ಸತ್ಯ ರಿಗೆ ತಿಳಿಯದು. ಸ್ನೂಪ್‌ಗೇಟ್ ಹಗರಣವನ್ನು ಮುಚ್ಚಿಹಾಕಿದ ವ್ಯಕ್ತಿ ಇವತ್ತು ಮಹಿಳೆಯರ ಬಗ್ಗೆ ದನಾಶೀಲತೆ ಇರಬೇಕೆಂದು ಬೋಧಿಸುತ್ತಿದ್ದಾನೆ. ಲ್ಲಿ ದಿಟ್ಟವಾಗಿ ಪ್ರಶ್ನಿಸಿ ಜನತೆಯ ಮುಂದಿಡಬೇಕಾದ ಮಗಳು ಮೌನಕ್ಕೆ ಶರಣಾಗಿರುವುದು ದೊಡ್ಡ ತವೆ ಸರಿ.

ೋದಿ ತನ್ನ ಭಾಷಣದಲ್ಲಿ ಕೋಮು ಹಿಂಸಾಚಾರದ ತೋರಿದ ಕಾಳಜಿ ಎಂಥವರ ಕಣ್ಣಲ್ಲೂ ನೀರು ಸುತಿತ್ತು. ಆದರೆ ಕೋಮು ಹಿಂಸಾಚಾರದ ಆರೋಪಿ ತನ್ನ ಸಂಪುಟದಲ್ಲಿ ಸಚಿವರಾಗಿ ನೇಮಿಸಿದವನೂ ಅಲ್ಲವೇ? ಕೋಮು ದ್ವೇಷದ ಭಾಷಣ ಸೇರಿದಂತೆ ಸು ಕ್ರಿಮಿನಲ್ ಆರೋಪಗಳನ್ನು ಹೊತ್ತಿರುವ ಶಾನನ್ನು ಪಕ್ಷದ ಅಧ್ಯಕ್ಷನಾಗಿ ನೇಮಿಸಿದವರಾರು? ಲ್ಲಿ ಕೂಡ ಕೋಮು ವಿಷ ಕಕ್ಕಿದಂಥಾ ಯೋಗಿ ಥನನ್ನು ತಡೆಯಲೂ ಹೋಗದೆ, ಆತನ ಪರವಾಗಿ ಯನ್ನೂ ಕೋರದೆ ಆತನನ್ನು ಈಗ ಉತ್ತರ ಶದ ಉಪಚುನಾವಣೆಗಳ ಮುಖ್ಯಸ್ಥನನ್ನಾಗಿ ದುದರ ಅರ್ಥವೇನು? ಪ್ರಧಾನಿ ಕಚೇರಿಯ ಸುತಿಯಿಲ್ಲದೆ ಮಾಧ್ಯಮಗಳಿಗೆ ಹೇಳಿಕೆ ಬಾರದೆಂದು ತಾಕೀತು ಮಾಡಿರುವ ಹೊರತಾಗಿಯೂ ಪ ವಿವಿಧ ಪದಾಧಿಕಾರಿಗಳು, ಸಂಸದರು, ಕೋಮು ಭಾವನೆಗಳನ್ನು ಕೆರಳಿಸುವ ಕೊಡುತ್ತಲೇ ಇದ್ದಾರೆ. 'ಲವ್ ಜಿಹಾದ್', 'ಮದ್ರಸಗಳಲ್ಲಿ ಭಯೋತ್ಪಾದನೆಯ ಶಿಕ್ಷಣ', 'ಮಾಂಸ ರಫ್ತಿನ ಹಣ ಉಗ್ರಗಾಮಿ ಚಟುವಟಿಕೆಗಳಿಗೆ ಬಳಕೆ' ಮತ್ತಿತರ ಕೋಮು ಪ್ರಚೋದನಕಾರಿ ಹೇಳಿಕೆಗಳನ್ನು ನೀಡುತ್ತಿರುವ ಯೋಗಿ ಆದಿತ್ಯನಾಥ, ಉಷಾ ಠಾಕುರ್, ಸಾಕ್ಷಿ ಮಹಾರಾಜ್, ಮಾನೇಕಾ ಗಾಂಧಿ ಮುಂತಾದವರ ವಿರುದ್ಧ ಯಾಕೆ ಕ್ರಮ ಕೈಗೊಳ್ಳಲಾಗುತ್ತಿಲ್ಲ? ದೇಶದ ಗೃಹಸಚಿವರಾದ ರಾಜನಾಥ್ ಸಿಂಗ್ 'ಲವ್ ಜಿಹಾದ್' ಅಂದರೇನೆಂದು ಕೇಳಿದ್ದು ಶುದ್ಧ ನಟನೆಯೆಂದು ಸಣ್ಣ ಮಗು ಕೂಡ ಹೇಳಬಹುದಿತ್ತು. ವಾಸ್ತವ ಏನೆಂದರೆ ಇದೆಲ್ಲವೂ ಅಲ್ಪಸಂಖ್ಯಾತರನ್ನು ಎರಡನೆ ದರ್ಜೆಯ ಪ್ರಜೆಗಳಾಗಿಸುವ ಆರೆಸ್ಸೆಸ್ ಕಾರ್ಯಸೂಚಿಯ ಭಾಗವೇ ಆಗಿದೆ ಮತ್ತು ಇದಕ್ಕೆಲ್ಲ ಮೋದಿಯ ಪರೋಕ್ಷ ಸಮ್ಮತಿ ಇದ್ದೇ ಇದೆ. ಗೊತ್ತಲ್ಲ 'ಮೌನಂ ಸಮ್ಮತಿ ಲಕ್ಷಣಂ'. ಆಕ್ರಮಣಶೀಲತೆ ಮತ್ತು ಕೋಮು ವಿಭಜನೆಗಳ ಕಾರ್ಯವನ್ನು ಬಂಟರಿಗೆ ವಹಿಸಿರುವ ಮೋದಿ



ಪ್ರಜೆಗಳಿದುರು ತಾನೊಬ್ಬ ಮಹಾ ಸುಭಗನಂತೆ ಪೋಸು ಕೊಡುತ್ತಿದ್ದಾನೆ ಅಷ್ಟೇ.


ಮೋದಿಯ ಭಾಷಣದಲ್ಲಿ 'ಸ್ವಚ್ಛ ಭಾರತ' ನಿರ್ಮಾಣದ ಉಚ್ಚ ಮಾತುಗಳಿದ್ದವು. ಅದನ್ನು ಹಾಡಿಹೊಗಳಿದ ಭಾಲಬಡುಕ ಮಾಧ್ಯಮಗಳು ಗುಜರಾತಿನ 66 ಪ್ರತಿಶತ ಹಳ್ಳಿ ಮನೆಗಳಲ್ಲಿ ಇಂದಿಗೂ ಶೌಚಾಲಯ ಯಾಕಿಲ್ಲವೆಂದು ಪ್ರಶ್ನೆ ಮಾಡಿವೆಯೇ?

ಮೊನ್ನೆ ಶಿಕ್ಷಕರ ದಿನದಂದು ಮಾಡಿದ ಭಾಷಣದಲ್ಲಿ ಸಮರ್ಥ ಶಿಕ್ಷಕರ ಕೊರತೆ ಅಥವಾ ಶಿಕ್ಷಕರ ಸಮಸ್ಯೆ ಬಗ್ಗೆ ಒಂದಾದರೂ ಮಾತಿರಲಿಲ್ಲ, ಬದಲು ವಿದ್ಯಾರ್ಥಿಗಳನ್ನು ದ್ದೇಶಿಸಿ ಮಾತನಾಡಿ ಭವಿಷ್ಯದ ಮತಬ್ಯಾಂಕು ಸೃಷ್ಟಿಸುವ ಸ್ಪಷ್ಟ ಪ್ರಯತ್ನ ಮಾಡಿದ್ದಾನೆ. ದೇಶದ ಎಲ್ಲಾ ಮಕ್ಕಳು ಮೋದಿಯ ಭಾಷಣವನ್ನು ಕಡ್ಡಾಯವಾಗಿ ವೀಕ್ಷಿಸುವಂತೆ ಮಾಡಬೇಕೆಂಬ ಸೂಚನೆ ಕೂಡ ಹೊರಟಿತ್ತು. ಕೆಲವೆಡೆ ಯಾರೊ ಬರೆದುಕೊಟ್ಟಿರಬಹುದಾದ ಮಾತುಗಳನ್ನು ಮಕ್ಕಳು ಕಂಠಪಾಠ ಮಾಡಿಕೊಂಡು ಬಂದಿದ್ದರು. ಅದರಲ್ಲಿ ಹೊಗಳಿಕೆಯನ್ನೂ ಸೇರಿಸಲಾಗಿತ್ತು. ಒಬ್ಬ ವಿದ್ಯಾರ್ಥಿ ತನಗೂ ಪ್ರಧಾನಿ ಆಗಬೇಕೆಂದಿದೆ, ಏನು ಮಾಡಬೇಕೆಂದು ಪ್ರಶ್ನಿಸಿದಾಗ ಮೋದಿಯ ಉತ್ತರ: 2024ರ ಚುನಾವಣೆಗಳಿಗೆ ತಯಾರಿ ಮಾಡು, ಅಷ್ಟರ ತನಕ ನಾನು ಅಧಿಕಾರದಲ್ಲಿರುತ್ತೇನೆ.

'ಭಾರತದಲ್ಲಿ ಸ್ತ್ರೀಯರನ್ನು ದೇವತೆಗಳೆಂದು ಕಾಣಲಾಗುತ್ತದೆ'. ಇದು ಜಪಾನ್ ಪ್ರವಾಸದ ವೇಳೆ ಮೋದಿ ನೀಡಿದ ಹೇಳಿಕೆ. ಹಾಗಾದರೆ ಅದೇ ಭಾರತದಲ್ಲಿ ಯಾಕಿಷ್ಟು ಸಾಲು ಸಾಲು ಅತ್ಯಾಚಾರಗಳು ನಡೆಯುತ್ತಿವೆ? ಅತ್ಯಾಚಾರಕ್ಕೊಳಗಾದ ಮಹಿಳೆ "ಜೀವಚ್ಛವ"ವೆಂದು ಸುಷ್ಮಾ ಸ್ವರಾಜ್ ಬಣ್ಣಿಸಿದುದರ ಹಿಂದೆ ವಂಶೋದ್ಧಾರಕನನ್ನು ಹೆರುವ ಮಹಿಳೆ 'ಪರಿಶುದ್ಧ'ಳಾಗಿರಬೇಕೆಂಬ ಸಂಘ ಪರಿವಾರದ ತರ್ಕವಿದೆ. ಮುಸಲ್ಮಾನರು 'ಲವ್ ಜಿಹಾದ್' ಮೂಲಕ ಹಿಂದೂ ಸ್ತ್ರೀಯರ 'ಪರಿಶುದ್ಧತೆ'ಯನ್ನು ಕೆಡಿಸುತ್ತಿದ್ದಾರೆಂಬ ಅಪಪ್ರಚಾರಗಳೂ ಇದೇ ಹಿನ್ನೆಲೆಯಲ್ಲಿ ನಡೆಯುತ್ತಿವೆ. ಪಕ್ಷಪಾತೀಯ ಮಾಧ್ಯಮಗಳು, ಟಿವಿ ಆಂಕರ್‌ಗಳು ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡುತ್ತಿರುವುದು ತೀರ ದುರದೃಷ್ಟಕರ.

ಏಕವ್ಯಕ್ತಿ ಕೇಂದ್ರಿತ ಆಡಳಿತ

ಮೋದಿ ಸರ್ಕಾರದಲ್ಲಿ ಎಲ್ಲಾ ಅಧಿಕಾರ ಪ್ರಧಾನಿ ಕಚೇರಿಯಲ್ಲಿ ಕೇಂದ್ರೀಕೃತವಾಗಿದೆ. ಮಂತ್ರಿಗಳ ಕಾರ್ಯದರ್ಶಿಗಳು ಮಂತ್ರಿಗಳನ್ನು ಕಡೆಗಣಿಸಿ ನೇರವಾಗಿ ಪ್ರಧಾನಿಗೆ ವರದಿ ಮಾಡಬೇಕಾಗಿದೆ. ಹಿರಿಯ ಅಧಿಕಾರಿಗಳ ನೇಮಕಾತಿ, ವರ್ಗಾವಣೆಗಳನ್ನೆಲ್ಲ ನಿರ್ಧರಿಸುತ್ತಿದ್ದ ಸಚಿವಸಂಪುಟ ಸಮಿತಿಯನ್ನು ಬರ್ಖಾಸ್ತುಗೊಳಿಸಲಾಗಿದೆ. ಅದೆಲ್ಲವೂ ಈಗ ಮೋದಿ ಕೈಲಿದೆ. ಗೃಹಮಂತ್ರಿ ರಾಜನಾಥ ಸಿಂಗ್ ಕೆಲಸ ಫೈಲುಗಳಿಗೆ ಸಹಿ ಹಾಕುವುದಕ್ಕೆ ಸೀಮಿತವೆಂದಾಗಿದೆ. ಪ್ರಧಾನಿ ಅಧ್ಯಕ್ಷತೆಯಲ್ಲಿ ನಡೆಯುವ ಸಚಿವ ಸಂಪುಟ ಸಭೆಯ ವಿಷಯಪಟ್ಟಿ ಬಗ್ಗೆ ಯಾವ ಮಂತ್ರಿಗೂ ಪೂರ್ವಮಾಹಿತಿ ನೀಡಲಾಗುತ್ತಿಲ್ಲ. ಕೊನೆ ಕ್ಷಣದವರೆಗೂ ಎಲ್ಲವೂ ಗುಪ್ತ್ ಗುಪ್ತ್. ಮಂತ್ರಿಗಳ ಖಾಸಗಿ ಕಾರ್ಯದರ್ಶಿಗಳ ನೇಮಕದಿಂದ ಆರಂಭಿಸಿ ಏಷಿಯನ್ ಕ್ರೀಡಾಕೂಟಕ್ಕೆ ತೆರಳಲಿರುವ ತಂಡದಲ್ಲೆಷ್ಟು ಜನ ಇರಬೇಕೆಂದು ತೀರ್ಮಾನಿಸುವುದರವರೆಗೆ ಹಲವೆಂಟು ನಿರ್ಧಾರಗಳಾಗುತ್ತಿರುವುದು ಪ್ರಧಾನಿ ಕಚೇರಿಯಲ್ಲಿ, ಉದಾಹರಣೆಗೆ ಗಂಗಾ ಶುದ್ಧೀಕರಣ ಯೋಜನೆ, ತೈಲ ಹಾಗೂ ಅನಿಲ ಬ್ಲಾಕ್‌ಗಳಿಗೆ ಸಂಬಂಧಿಸಿದ ಕೇಲ್ಕರ್ ಸಮಿತಿಯ ಅವಧಿ ವಿಸ್ತರಣೆ, ಎಂಟಿಎನ್‌ಎಲ್-ಬಿಎಸ್‌ಎನ್‌ಎಲ್ ವಿಲೀನ, ಟೆಲಿಕಾಂ ತರಂಗಗುಚ್ಛಗಳ ಹರಾಜು, ರಾಷ್ಟ್ರೀಯ ಭದ್ರತೆ, ವಿದೇಶ ವ್ಯವಹಾರ, ಪ್ರಾಕೃತಿಕ ವಿಕೋಪಗಳ ನಿರ್ವಹಣೆ, ಮೂಲ ಸೌಕರ್ಯಗಳಿಗೆ ಸಂಬಂಧಿಸಿದ ಯೋಜನಾ ಸಭೆಗಳು, ಆಹಾರ ನಿಗಮದ ಸುಧಾರಣೆ, ಬೆಲೆ ಏರಿಕೆ ನಿಯಂತ್ರಣ ಇತ್ಯಾದಿ ಇತ್ಯಾದಿ. ಮೋದಿ ಸರ್ಕಾರದ ಮಾಧ್ಯಮ ನೀತಿಯಡಿ ಮಂತ್ರಿಗಳು, ಕಾರ್ಯದರ್ಶಿಗಳು ತಾವಾಗಿಯೇ ಮಾಧ್ಯಮಗಳಿಗೆ ಹೇಳಿಕೆ ನೀಡುವಂತಿಲ್ಲ, ಎಲ್ಲವನ್ನೂ ಪಿಎಂಓ ನಿರ್ಧರಿಸುತ್ತದೆ. ಮಂತ್ರಿಗಳೂ ಸೇರಿದಂತೆ ಎಲ್ಲರ ಮೇಲೂ ನಿಗಾ ಇರಿಸಲಾಗುತ್ತಿದೆ. ಇದಕ್ಕೆ ರಾಜನಾಥ್ ಸಿಂಗ್ ಪ್ರಕರಣವೇ ಸಾಕ್ಷಿ. ಆತ್ಮವೈಭವೀಕರಣದ ಗೀಳು ಹಿಡಿದಿರುವ ಏಕವ್ಯಕ್ತಿಯ ಆಡಳಿತದಲ್ಲಿ ಮಂತ್ರಿಗಳು ಹೆಸರಿಗೆ ಮಾತ್ರ ಎಂದಾಗಿದ್ದಾರೆ. ಇತ್ತೀಚಿನ ಜಪಾನ್ ಭೇಟಿಯ ವೇಳೆ ವಿದೇಶಾಂಗ ವ್ಯವಹಾರಗಳ ಸಚಿವೆಯನ್ನು ಕರೆದೊಯ್ಯದಿರುವುದನ್ನು ಆಕಸ್ಮಿಕ ಎನ್ನಲಾಗುವುದಿಲ್ಲ, ಏಕೆಂದರೆ ಬ್ರೆಜಿಲ್‌ನ ಬ್ರಿಕ್ಸ್



ಶೃಂಗಸಭೆಯ ವಿಷಯದಲ್ಲೂ ಹೀಗೇ ಆಗಿದೆ. ಅಂದು ಎಮರ್ಜೆನ್ಸಿಯನ್ನು ಟೀಕಿಸುತ್ತಿದ್ದವರು ಇಂದು ತಾವೇ ಅಂಥಾ ಪರಿಸ್ಥಿತಿ ನಿರ್ಮಾಣ ಮಾಡಿದ್ದಾರೆ! ಇದಕ್ಕಿಂತ ದೊಡ್ಡ ವಿಪರ್ಯಾಸ ಇನ್ನೊಂದಿದೆಯೇ!!

ಇದೆಂಥಾ ಅಭಿವೃದ್ಧಿ

ಕೋಮು ಗಲಭೆಗಳಿಂದಾಗಿ ಉತ್ತರ ಪ್ರದೇಶದ ಅಭಿವೃದ್ಧಿ ಕುಂಠಿತವಾಗಿ ಅಲ್ಲಿನ ಆರ್ಥಿಕತೆಗೆ ದೊಡ್ಡ ಪೆಟ್ಟು ಬಿದ್ದಿದೆ. ಮುಜಾಫರ್‌ನಗರ ದಂಗೆಗಳ ನಂತರ ಮುಸ್ಲಿಮರು ಒಂದೋ ನಿರಾಶ್ರಿತರ ಶಿಬಿರಗಳಲ್ಲಿದ್ದಾರೆ ಇಲ್ಲಾ ಊರು ಬಿಟ್ಟು ವಲಸೆ ಹೋಗಿದ್ದಾರೆ. ಪರಿಣಾಮವಾಗಿ ಜಾಟ್ ಮಾಲಕತ್ವದ ಹೊಲಗದ್ದೆಗಳಲ್ಲಿ ದುಡಿಯಲು ಮುಸ್ಲಿಂ ಕೂಲಿಯಾಳುಗಳ ಕೊರತೆ ಉಂಟಾಗಿದೆ.

ಕೋಮು ಗಲಭೆಯ ಪರಿಣಾಮವಾಗಿ ವರ್ಷಕ್ಕೆ ಸುಮಾರು 2500 ಕೋಟಿಗಳಷ್ಟು ವ್ಯವಹಾರವಿರುವ ಹಿತ್ತಾಳೆ ಸಾಮಗ್ರಿಗಳ ಉದ್ದಿಮೆಯ ಕೇಂದ್ರಬಿಂದು ಮೊರಾದಾಬಾದ್ ಸಂಪೂರ್ಣ ನಲುಗಿಹೋಗಿದೆ. ಕಾರಣವೇನೆಂದರೆ ಹಿತ್ತಾಳೆ ಉದ್ದಿಮೆಯಲ್ಲಿ ಬಹುತೇಕ ಮಾಲಿಕರು ಮುಸ್ಲಿಮೇತರರಾದರೆ ನೌಕರರು ಮುಸ್ಲಿಮರು. ದಂಗೆಗಳ ನಂತರ ಮುಸ್ಲಿಂ ನೌಕರರೀಗ ಕೆಲಸಕ್ಕೆ ಬರುತ್ತಿಲ್ಲವಾಗಿ ಉದ್ದಿಮೆ ಹೆಚ್ಚುಕಡಿಮೆ ನೆಲಕಚ್ಚಿದೆ.

ಸಹಾರಣ್‌ಪುರ ಮರದ ಪೀಠೋಪಕರಣಗಳಿಗೆ ಹೆಸರುವಾಸಿಯಾಗಿದೆ. ಅಲ್ಲಿನ ಕಾರ್ಖಾನೆ ಮತ್ತು ಅಂಗಡಿ ಮಾಲಕರಲ್ಲಿ ಹೆಚ್ಚಿನವರು ಹಿಂದೂಗಳು ಮತ್ತು ಸಿಖ್ಖರು. ಕುಶಲಕರ್ಮಿಗಳಲ್ಲಿ ಹೆಚ್ಚಿನವರು ಮುಸ್ಲಿಮರು. ಅಲ್ಲಿ ಗಲಭೆಗಳು ನಡೆದ 10 ದಿನಗಳಲ್ಲಿ 244 ಕೋಟಿ ರೂಪಾಯಿಗಳಷ್ಟು ನಷ್ಟವಾಗಿದೆ. ಇವತ್ತು ಇಡೀ ಉದ್ದಿಮೆ ಅಸ್ತವ್ಯಸ್ತಗೊಂಡಿದೆ.

ಭಾರತ ಪಾಕಿಸ್ತಾನ ಸಂಬಂಧಗಳು

ಆಗಸ್ಟ್ 25ಕ್ಕೆ ನಿಗದಿಯಾಗಿದ್ದ ಭಾರತ ಪಾಕ್ ವಿದೇಶಾಂಗ ವ್ಯವಹಾರಗಳ ಕಾರ್ಯದರ್ಶಿಗಳ ಸಭೆಯನ್ನು ಕ್ಷುಲ್ಲಕ ಕಾರಣಕ್ಕಾಗಿ ಏಕಾಏಕಿ ರದ್ದುಗೊಳಿಸಲಾಯಿತು. ಅದರ ನಂತರ ಇದ್ದಕ್ಕಿದ್ದಂತೆ ಉಭಯ ದೇಶಗಳ ನಡುವೆ ಗಡಿ ಉಲ್ಲಂಘನೆ ಪ್ರಕರಣಗಳ ಸಂಖ್ಯೆಯಲ್ಲೂ ಹೆಚ್ಚಳವಾಗಿದೆ. 100 ದಿನಗಳಲ್ಲಿ 50ಕ್ಕೂ ಅಧಿಕ ಭಾರತೀಯ ಯೋಧರು ಹತರಾಗಿದ್ದಾರೆ. ಇಲ್ಲಿ ಮೊದಲು ಕಲ್ಲು ಎಸೆದವರು ಯಾರೆನ್ನುವುದೇ ಯಕ್ಷಪ್ರಶ್ನೆ. ಗಡಿ ಸಂಘರ್ಷಗಳಲ್ಲಿ ಹೆಚ್ಚಳವಾಗಿರುವುದಕ್ಕೂ ನ್ಯೂಯಾರ್ಕಿನಲ್ಲಿ ಉಭಯ ದೇಶಗಳ ಪ್ರಧಾನಿಗಳ ಭೇಟಿಯನ್ನು ನಡೆಸಲು ಮನಸ್ಸಿರದಂತೆ ಕಾಣುತ್ತಿರುವುದಕ್ಕೂ ಸಂಬಂಧ ಇದೆಯಾ?

ಅಕಟಕಟಾ! ಹರಿಹರಿ!!

ಗೋವು ಯಾವುದು?! ಗೂಳಿ ಯಾವುದು?!

ವಿವೇಕಾನಂದ ಚೇತನಗಳೇ ಮನ್ನಿಸಿ, ಕಾವಿ ಕಾಷಾಯ ವಸ್ತ್ರಗಳು ವಾಕರಿಕೆ ತರಿಸುತ್ತಿವೆ ಎಂದು ಹೇಳಲೇಬೇಕಾಗಿದೆ.

ನಿತ್ಯಾನಂದ ಸ್ವಾಮಿಯ ಸಾಲುಸಾಲು ಹಗರಣಗಳು ಬಯಲಿಗೆ ಬಂದು ಬಿಡದಿ ಆಶ್ರಮ ರಾಸಲೀಲೆಯಿಂದ ಜಗದ್ವಿಖ್ಯಾತವಾಗಿದೆ. ಆಸಾರಾಮುಬಾಪು ಅಪ್ರಾಪ್ತ ವಯಸ್ಕರನ್ನು ಲೈಂಗಿಕ ತೃಷೆಗಾಗಿ ಬಳಸಿಕೊಂಡನೆಂದು ಬಂಧಿಸಲಾಗಿದೆ. ನಿತ್ಯಾನಂದನ ಪುರುಷತ್ವ ಪರೀಕ್ಷೆ ಮಾಧ್ಯಮದ ಗಮನ ಸೆಳೆಯುತ್ತಿರುವಾಗ ಶ್ರೀರಾಮನ ಅಪರಾವತಾರವೆಂದೇ ಬಣ್ಣಿಸಲ್ಪಟ್ಟ ಗೋಸ್ವಾಮಿ ರಾಘವೇಶ್ವರ ಭಾರತಿ ಅತ್ಯಾಚಾರ ಆರೋಪ ಎದುರಿಸುತ್ತಿರುವ ಘಟನೆ ನಮ್ಮೆದುರಿಗಿದೆ. ಇದೇನು ಸನ್ಯಾಸಿಯ ಚಾತುರ್ಮಾಸವೋ,



ರಾಜಮಹಾರಾಜರ ದಂಡಯಾತ್ರೆಯೋ ಎಂದು ಅನುಮಾನವಾಗುವ ಹಾಗೆ ಎಲ್ಲೆಲ್ಲೂ ನಸುನಗುವ ಕಾವಿಧಾರಿಗಳ ಫೋಟೋ ಹೊತ್ತ ಮಹಾನ್ ವ್ರತಾಚರಣೆಯ ಹೋರ್ಡಿಂಗುಗಳು ರಾರಾಜಿಸುತ್ತಿವೆ. 'ಧರ್ಮ'ದ ಗುತ್ತಿಗೆ ಹಿಡಿದವರು ಮಾಡುತ್ತಿರುವುದಾದರೂ ಏನು ಎಂದು ಜನಸಾಮಾನ್ಯ ಅಚ್ಚರಿಗೊಳ್ಳಲೂ ಪುರುಸೊತ್ತಿಲ್ಲದಷ್ಟು ವೇಗವಾಗಿ ಬೆಳವಣಿಗೆಗಳು ಸಂಭವಿಸುತ್ತಿರುವಾಗ ಕಾಷಾಯ ಧರಿಸಿದವರ ಕುರಿತು ಎದೆಯ ನಿಜವ ನುಡಿಯಬೇಕಾದ ಕಾಲ ಸನ್ನಿಹಿತವಾಗಿದೆ..

ರಾಜ್ಯಾದ್ಯಂತ ಅಜಮಾಸು ಆರು ಲಕ್ಷದಷ್ಟಿರುವ ಬ್ರಾಹ್ಮಣ ಉಪಜಾತಿಯಾದ ಹವ್ಯಕ ಸಮುದಾಯ ಆತ್ಮಗೌರವದ, ನೆಲ ಪ್ರೀತಿಯ ಕೃಷಿಕ ಸಮುದಾಯ. ಬನವಾಸಿಯ ಕದಂಬ ರಾಜ ಮಯೂರವರ್ಮ ಉತ್ತರದ ಅಹಿಚ್ಛತ್ರದಿಂದ ಯಜ್ಞಯಾಗಾದಿಗಳನ್ನು ನಡೆಸಲು 32 ಬ್ರಾಹ್ಮಣ ಕುಟುಂಬಗಳನ್ನು ಕರೆತಂದು ತನ್ನ ರಾಜ್ಯದಲ್ಲಿ ನೆಲೆಯಾಗಿಸಿದ; ಅವರೇ ಹವ್ಯಕರು ಎಂಬ ಪ್ರತೀತಿಯಿದೆ. ಹಾಗೆ ಬಂದವರು ಇಲ್ಲೇ ನೆಲೆಯಾಗಿ ವಿಶಿಷ್ಟ ಭಾಷೆ, ಸಂಸ್ಕೃತಿ ರೂಪುಗೊಂಡಿತು ಎನ್ನಲಾಗುತ್ತದೆ. ಉಳಿದ ಬ್ರಾಹ್ಮಣ ಉಪಜಾತಿಗಳಿಗೆ ಹೋಲಿಸಿದರೆ ಹವ್ಯಕರು ನೆಲವ ನಂಬಿದವರು. ಜೀವನೋಪಾಯಕ್ಕಾಗಿ ಪರಾನ್ನ ನೆಚ್ಚಿದ್ದು ಕಡಿಮೆ. ತಮ್ಮ ಅನ್ನ ತಾವೇ ಬೆಳೆದುಕೊಂಡವರು. ಅವರಿಗೆ ರಾಮಚಂದ್ರಾಪುರ ಮತ್ತು ಸ್ವರ್ಣವಲ್ಲಿ ಎಂಬ ಎರಡು ಪುರಾತನ ಮಠಗಳಿವೆಯೆಂದು ಹೇಳಲಾಗುತ್ತಿದ್ದರೂ ಭೂಮಿಯೇ ಅವರ ಗುರು ಮತ್ತು ದೇವರು. ಹೀಗೆ ಸ್ವಾಭಿಮಾನಿಗಳಾಗಿ ಘನತೆಯಿಂದ ಬದುಕುತ್ತಿದ್ದ ಸ್ನೇಹಪರ ಸಮುದಾಯಕ್ಕೆ ಗುರುಮಠಗಳ ರಾಜಕಾರಣ ಸುತ್ತಿಕೊಂಡಿದ್ದು ಈಚಿನ ದಶಕಗಳಲ್ಲಿ.

ಈಗ ಪ್ರೇಮಲತಾ ಅತ್ಯಾಚಾರ ಪ್ರಕರಣದಿಂದ ಸುದ್ದಿಯ ಕೇಂದ್ರವಾಗಿರುವ ರಾಮಚಂದ್ರಾಪುರ ಮಠ ಮೊದಲೂ ಯಾಗ, ಭೂಮಿ, ಗೋವು, ಗೋಕರ್ಣ, ಹುಂಡಿಕಳ್ಳತನ, ಅತ್ಯಾಚಾರ ಸೀಡಿ, ರಾಮಕತೆಯೆಂದು ನಾನಾ ಕಾರಣಗಳಿಗೆ ಸುದ್ದಿ ಮಾಧ್ಯಮಗಳಲ್ಲಿ ಸುಳಿದಾಡುತ್ತಿತ್ತು, ಹಸುವಿನ ಮಲಮೂತ್ರಾದಿಗಳಿಂದ ಹಿಡಿದು ಬೀಜ, ತಳಿಯವರೆಗೆ ಎಲ್ಲದರ ಬಗ್ಗೆಯೂ ಆ ಮಠ ಆಸಕ್ತ. ಗೋತಳಿ ರಕ್ಷಣೆಗೆಂದು ಸರ್ಕಾರಿ ಭೂಮಿ ಪಡೆದಿದ್ದು ಹಾಗೂ ಗೋಕರ್ಣ ದೇವಾಲಯವನ್ನು ಮಠಕ್ಕೆ ಹಸ್ತಾಂತರಿಸಬೇಕೆಂದು ವಾದ ಹೂಡಿ ಯಶಸ್ವಿಯಾಗಿದ್ದು ಭಾರೀ ವಿವಾದ ಸೃಷ್ಟಿಸಿತ್ತು, ನಂತರ ಮಠದ ಪೀಠಾಧಿಪತಿ ರಾಘವೇಶ್ವರ ಭಾರತಿ ಅವರ ಪರಿಕಲ್ಪನೆಯ ಹಾಡು ನರ್ತನಗಳ ರಾಮಕತೆ ಈಗ್ಗೆ ಕೆಲ ವರ್ಷಗಳಿಂದ ಜನಪ್ರಿಯವಾಗಿತ್ತು, ಊರುಕೇರಿಗಳ ಹೆಂಗಳೆಯರು ರಾಮಕಥೆ ಕೇಳಿ ಸೀತಾಮಾತೆಯ ದುಃಖಕ್ಕೆ ತಾವೂ ಕಣ್ಣೀರಾಗಿ ಅಕ್ಷತೆ ಹಿಡಿದು ಬರುತ್ತಿದ್ದರು.

ಆ ರಾಮಕತೆಯಲ್ಲಿ ಹಾಡುತ್ತಿದ್ದ ಕಲಾವಿದೆಯರಲ್ಲಿ ಪ್ರೇಮಲತಾ ಎಂಬ ಮಹಿಳೆ ಹಾಗೂ ಆಕೆಯ ಪತಿ ದಿವಾಕರ ಶಾಸ್ತ್ರಿ ಮಠಕ್ಕೆ ತುಂಬ ಹತ್ತಿರವಿದ್ದವರು. ಪತಿ ದಿವಾಕರ ಶಾಸ್ತ್ರಿ ಮಠದ ವ್ಯವಹಾರ ನೋಡಿಕೊಳ್ಳುತ್ತಿದ್ದರೆ ಪ್ರೇಮಲತಾ ಹಾಡು, ನರ್ತನಗಳಿಂದ ಖ್ಯಾತಳಾದ ಚೆಲುವೆ. ಹಣ, ಕೀರ್ತಿ, ಅನುಗ್ರಹ ಎಲ್ಲವೂ ದಿನಬೆಳಗಾಗುವುದರಲ್ಲಿ ಒದಗಿ ಶ್ರೀರಾಮನ ಪ್ರತಪ್ರಸಾದ ಆ ಕುಟುಂಬಕ್ಕೆ ದೊರೆತದ್ದು ಗುಟ್ಟೇನೂ ಆಗಿರಲಿಲ್ಲ.

ಆದರೆ ಅದೇ ಪ್ರೇಮಲತಾ ಈಗ ಬಂಧನದಲ್ಲಿದ್ದಾರೆ. ರಾಮಕಥೆಯ ಸಲುವಾಗಿ ಪ್ರವಾಸ ಮಾಡುವಾಗ ರಾಘವೇಶ್ವರರು ತನ್ನ ಮೇಲೆ ಅತ್ಯಾಚಾರ ಮಾಡಿದ್ದಾಗಿ ದೂರು ಕೊಟ್ಟಿದ್ದಾರೆ. ದೇವರ ಹೆಸರಲ್ಲಿ ಆಣೆಪ್ರಮಾಣ ಮಾಡಿಸಿ, ರಾಮಪ್ರಸಾದವೆಂದು ಅಮಲುಕಾರಕವಸ್ತು ತಿನಿಸಿ ಲೈಂಗಿಕವಾಗಿ ತನ್ನನ್ನು ಬಳಸಿಕೊಳ್ಳಲಾಯಿತು; ಹಲವು ಸಂದರ್ಭಗಳಲ್ಲಿ ತಾನು ನಿರಾಕರಿಸಿದಾಗಲೂ ಕೋಪಾವಿಷ್ಟರಾಗಿ ಬೆದರಿಸಿ ತನ್ನನ್ನು ಬಳಸಿಕೊಂಡರು; ಇದನ್ನು ಸಹಿಸಲಾಗದೇ, ಅದರಿಂದ ತಪ್ಪಿಸಿಕೊಳ್ಳಲೂ ಆಗದೇ ಮಾನಸಿಕ ಒತ್ತಡಕ್ಕೆ ಒಳಗಾಗಿ ಕೊನೆಗೆ ಗಂಡನ ಬಳಿ ಹೇಳಿದಾಗ ಅವರಿಗೂ ಶಾಕ್ ಆಗಿ ನಿಮ್ಹಾನ್ಸ್‌ನಲ್ಲಿ ಚಿಕಿತ್ಸೆ ಪಡೆದರು ಎಂದು ತಮ್ಮ ಲಿಖಿತ ದೂರಿನಲ್ಲಿ ತಿಳಿಸಿದ್ದಾರೆ.

ಆದರೆ ಆಕೆ ಅತ್ತ ಬೆಂಗಳೂರು ಪೊಲೀಸ್ ಠಾಣೆಯಲ್ಲಿ 36 ಪ್ಯಾರಾಗಳ ದೂರು ಬರೆಯುತ್ತಿರುವಾಗಲೇ ಇತ್ತ ಹೊನ್ನಾವರದಲ್ಲಿ ಅವರ ವಿರುದ್ಧ ಬ್ಲ್ಯಾಕ್‌ಮೇಲ್ ಆರೋಪ ಹೊರಿಸಿ ಮಠದ ಮ್ಯಾನೇಜರ್ ಚಂದ್ರಶೇಖರ್ ದೂರು ದಾಖಲಿಸಿದರು. ತಕ್ಷಣ ದಂಪತಿಗಳನ್ನು ಬಂಧಿಸಲಾಯ್ತು, ಅತ್ತ ಅವರ ಮಗಳು ಅಂಶುಮಾಲಿನಿ ತನ್ನ ತಾಯಿಯ ಮೇಲೆ ಮಠದವರು ಲೈಂಗಿಕ ದೌರ್ಜನ್ಯ ಎಸಗುತ್ತಿದ್ದರು ಹಾಗೂ ಈಗ ಅವರೇ ಜೀವಭಯ ಒಡ್ಡುತ್ತಿದ್ದಾರೆಂದು ಹೇಳಿ ರಕ್ಷಣೆ ಒದಗಿಸಬೇಕೆಂದು ಕೋರಿ ಪ್ರತ್ಯೇಕವಾಗಿ ಇನ್ನೊಂದು ದೂರು ನೀಡಿದಳು. ಎಫ್‌ಐಆರ್ ದಾಖಲಾಯಿತು.

ಈ ಸಿನಿಮೀಯ ಪ್ರಕರಣದಲ್ಲಿ ಮೇಲ್ನೋಟಕ್ಕೇ ಎದ್ದು ಕಾಣುವ ವಿಚಿತ್ರ ಸಂಗತಿಯೆಂದರೆ ಅತ್ಯಾಚಾರಕ್ಕೊಳಗಾದೆ ಎಂದು ದೂರು ಕೊಡಹೋದ ಪ್ರೇಮಲತಾ ಬಂಧಿತರಾಗಿ ಕಾರವಾರದಲ್ಲಿದ್ದರೆ; ಅತ್ಯಾಚಾರ ಆರೋಪ ಎದುರಿಸುತ್ತಿರುವ ರಾಘವೇಶ್ವರರ ಮೇಲೆ ಎಫ್‌ಐಆರ್. ದಾಖಲಾಗಿದ್ದರೂ ವಿಚಾರಣೆ, ಹೇಳಿಕೆ ಎಲ್ಲವನ್ನೂ ಸಾಕ್ಷಾತ್ ಹೈಕೋರ್ಟ್ ತಡೆಯುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯ ಕಾನೂನಿನೆದುರು ಯಾರು ಎಷ್ಟು ಸಮಾನರು ಎಂದು ಇನ್ನೊಮ್ಮೆ ಸಾಬೀತಾಗಿದೆ.

ಒಬ್ಬ ಹೆಂಗಸು ದೂರು ನೀಡಿದ ಕೂಡಲೇ ಅವಳು ಅಮಾಯಕಳೆಂದು ಪರಿಗಣಿಸಿ ಆರೋಪ ಹೊರಿಸಲಾದವರಿಗೆ ಶಿಕ್ಷೆ ಕೊಟ್ಟುಬಿಡಿ ಎಂದು ಯಾರೂ ಹೇಳುತ್ತಿಲ್ಲ, ಅದು ಪ್ರೇಮವೋ, ವಶೀಕರಣವೋ; ಒಪ್ಪಿಗೆಯಿದ್ದು ನಡೆಯಿತೋ, ನಡೆಯಲೇ ಇಲ್ಲವೋ; ಮಠದ ಹೆಸರು ಕೆಡಿಸಲು ನಡೆಸಿದ ಸಂಚೋ, ರಕ್ತಮಾಂಸಗಳುಳ್ಳ ನರಮನುಷ್ಯನ ದೇಹ ಕಾವಿ ಧರಿಸಿ ಪಟ್ಟ ಸಂಕಟವೋ; ಆ ದಂಪತಿಗಳು ಆರ್ಥಿಕ ಫಲಾನುಭವಿಗಳೋ ಅಲ್ಲವೋ - ಇವೆಲ್ಲ ತನಿಖೆ ನಡೆದು ಸತ್ಯ ಹೊರಬೀಳಲಿ. ಆದರೆ ಆಕೆ ಯಾರನ್ನು ಆಪಾದಿತ ಎಂದು ಹೇಳಿದಳೋ ಅವರನ್ನು ಸಾಕ್ಷಾತ್ ಹೈಕೋರ್ಟ್ ರಕ್ಷಿಸಹೊರಟಿರುವುದು ಪ್ರಜಾಪ್ರಭುತ್ವ ಹಾಗೂ ನ್ಯಾಯವ್ಯವಸ್ಥೆಯ ಅಣಕದಂತಿದೆ. ಧರ್ಮಪರಿಪಾಲನಾರ್ಥ ಚಾತುರ್ಮಾಸ ವ್ರತ ಹಿಡಿದ ವಿರಕ್ತ ರಾಘವೇಶ್ವರರು ಆಶೀರ್ವಚನ ನೀಡುತ್ತ 'ನಮಗೂ ಯುದ್ಧ ಮಾಡಲು ಗೊತ್ತಿದೆ, ತಿರುಗೇಟು ನೀಡಲು ಬರುತ್ತದೆ, ಆದರೆ ಅದು ತಮ್ಮ ಜಾಯಮಾನವಲ್ಲ ಎಂದೇ ಸುಮ್ಮನಿದ್ದೇವೆ' ಎಂದು ಸಾಕ್ಷಿಗಳನ್ನು ಹೆದರಿಸುವ, ನಾಶ ಮಾಡುವ ಹೇಳಿಕೆ ನೀಡುವುದು ಅವರ ಬಟ್ಟೆಗೂ, ಅದರ ಬಣ್ಣಕ್ಕೂ, ಪೀಠಕ್ಕೂ ಶೋಭೆ ತರುವ ಮಾತು ಅಲ್ಲವಾಗಿದೆ.

ನಾವೀಗ ಇರುವುದು ರಾಮರಾಜ್ಯದಲ್ಲೇ, ಅನುಮಾನವೇ ಇಲ್ಲ. ಏಕೆಂದರೆ ಮಹಿಳಾ ಸ್ನೇಹಿ, ಮಹಿಳಾಪರ, ಅತ್ಯಾಚಾರ ವಿರೋಧಿ ಬಿಗಿ ಕಾನೂನುಗಳನ್ನು ಹೊಂದಿರುವ ಭಾರತದಲ್ಲಿ ಒಬ್ಬ ನಡುವಯಸ್ಸಿನ ಹೆಣ್ಣು ಮಗಳು, ಒಳ್ಳೆಯ ಹಾಡುಗಾರ್ತಿ, ವಯಸ್ಸಿಗೆ ಬಂದ ಇಬ್ಬರು ಹೆಣ್ಣುಮಕ್ಕಳ ತಾಯಿ, ಅನುಕೂಲಸ್ಥೆ ತನ್ನ ಮೇಲೆ ದೇವಮಾನವನೊಬ್ಬ ದೌರ್ಜನ್ಯ ನಡೆಸಿದ್ದಾನೆಂದು ಹೇಳಿದಕೂಡಲೇ ಜೈಲಿಗೆ ಹೋಗುವುದೆಂದರೆ? ಆಕೆ ತಾನು ಎಲ್ಲೆಲ್ಲಿ ಯಾವಾಗ ಹೇಗೆ ಅತ್ಯಾಚಾರಕ್ಕೊಳಗಾದೆ ಎಂದು ವರುಷಗಟ್ಟಲೆಯ ವಿವರಗಳನ್ನು ದೂರಿನಲ್ಲಿ ಬರೆಯತೊಡಗಿದ ಕ್ಷಣದಲ್ಲಿ ಅವಳ ಮೇಲೇ ಆಪಾದನೆ ಹೊರಿಸಿ, ಬಂಧಿಸುವುದೆಂದರೆ? ಮೂರು ವಾರ ಕಳೆದರೂ ಬೇಲ್ ಸಿಗಲಾರದಷ್ಟು ಘನಘೋರ ತಪ್ಪೇ ಅವಳದು? ಕಟ್ಟಕಡೆಯ ಮನುಷ್ಯನಿಗೂ ನ್ಯಾಯ ಒದಗಿಸಬೇಕಾದ ನ್ಯಾಯವ್ಯವಸ್ಥೆ ಬಲಿತವರ ಪರ ಇಷ್ಟಬಂದಂತೆ ಮಣಿಯಬಹುದಾದರೆ ಈ ವ್ಯವಸ್ಥೆಯನ್ನು ಪ್ರಜಾಪ್ರಭುತ್ವ ಎಂದೇಕೆ ಕರೆಯಬೇಕು?

ಸಮುದಾಯವೊಂದನ್ನು ಅದರಲ್ಲೂ ಅದರಲ್ಲಿರುವ ಹೆಣ್ಣುಮಕ್ಕಳನ್ನು ಧರ್ಮ ಹೇಗೆ ಕುರುಡರನ್ನಾಗಿಯೂ, ಕಿವುಡರನ್ನಾಗಿಯೂ, ನ್ಯಾಯಸೂಕ್ಷ್ಮ ಕಳೆದುಕೊಳ್ಳುವಂತೆಯೂ ಮಾಡಬಹುದು ಎನ್ನುವುದಕ್ಕೆ ಈ ಪ್ರಕರಣಕ್ಕಿಂತ ಬೇರೆ ಉದಾಹರಣೆ ಬೇಡ. ಯಾರು ರಾಮಕಥೆ ಕೇಳಿ ಪುನೀತರಾಗಲೆಂದು ಪ್ರೇಮಲತಾ ಹಾಡಿದ್ದಳೋ ಆ ಸಮುದಾಯದ ಸಾವಿರಾರು ಹೆಣ್ಣುಮಕ್ಕಳು ಅವಳ ಕುರಿತಾಗಲೀ, ಪಾಲಕರು ಬಂಧನದಲ್ಲಿರುವಾಗ ಅವರ ಇಬ್ಬರು ಹೆಣ್ಮಕ್ಕಳ ತಲ್ಲಣದ ಕುರಿತಾಗಲೀ ಎಳ್ಳುಕಾಳಿನಷ್ಟೂ ಚಿಂತಿಸದೆ ದೇವಮಾನವನ ಪರ ತಮ್ಮ ಹೆಣ್ತನವನ್ನು ಒತ್ತೆಯಿಟ್ಟು ರಕ್ಷಣೆಗೆ ನಿಂತಿದ್ದಾರೆ. 'ಗುರುಗಳು ಹೆತ್ತ ತಾಯಿಗಿಂತ ಶುದ್ಧರು. ಇದು 'ಆ' ಮಠದವರ ಕಿತಾಪತಿ. ಅಕಸ್ಮಾತ್ ಪ್ರೇಮಲತಾ ಹೇಳಿದ್ದು ನಿಜವೇ ಆಗಿದ್ದರೆ ಮೂರು ವರ್ಷ ಅದೇಕೆ ಸುಮ್ಮನಿದ್ದಳು? ಹತ್ತುಸಲ ಒಪ್ಪಿ ಸುಮ್ಮನೆ ಮಲಗಿದ್ದವಳು ಹನ್ನೊಂದನೇ ಸಲ ಏಕೆ ದೂರು ಕೊಟ್ಟಳು?' ಎಂದು ಪ್ರೇಮಲತಾಳದ್ದೇ ಅಪರಾಧವೆಂಬಂತೆ ಅಭಿಪ್ರಾಯ ರೂಪಿಸಲಾಗಿದೆ.

ಮಠದ ಜೊತೆಗಿರುವವರ ಸಂಖ್ಯೆ, ಹಣ ಮತ್ತು ಅಧಿಕಾರ ಜನರನ್ನು ಹೇಗೆ ಕುಣಿಸಿ ಮಣಿಸುವುದೆಂದರೆ ಇಂಥ ಗಂಭೀರ ಆಪಾದನೆಯ ನಂತರವೂ ಜನಪ್ರತಿನಿಧಿಗಳು, ಅಧಿಕಾರಸ್ಥರು ಪೀಠದ ಭಕ್ತರಾಗಿ ಅದರ ಬೆನ್ನಿಗಿದ್ದಾರೆ. ಸಣ್ಣಪುಟ್ಟ ಪ್ರಕರಣಗಳಲ್ಲಿ ಕಣ್ಣೀರು ಹರಿಸುವವರೆದುರ ಮೈಕು ಹಿಡಿದ ಮಾಧ್ಯಮಗಳು ಮನಸ್ಸು ಮಾಡಿದರೆ ಇದೀ ಪ್ರಕರಣದ ಒಳಹೂರಣವನ್ನು, ಧರ್ಮದ ಸ್ಥ... ವಿವಿಧ ಮುಖಗಳ ಅವ್ಯವಹಾರವನ್ನು ಜನಸಾಮಾನ್ಯರೆದುರ ತೆರೆದಿಡಬಲ್ಲವು. ಆದರೆ ಯಾವ ಒತ್ತಡವೋ ಅವು ತಣ್ಣಗಿ... ಮಠದ ಮಾನ ಕಳೆಯಲು ನಡೆಸಿದ ಸಂಚು ಎಂದ... ಪ್ರೇಮಲತಾಳ ನಿಜವಾದ ನೋವು ಅಡಗಿಹೋಗು... ಸಂಭವವಿದೆ.

ಆಕೆಯ ಪರ ವಾದ ಮಾಡಲು ವಕೀಲರಿಗಾ... ಹುಡುಕಾಟ ನಡೆಸಬೇಕಾಯಿತು. ಈ ಪ್ರಕರಣ ಕುರಿತ... ಬರೆದರೆ, ಪ್ರತಿಭಟನೆ ನಡೆಸಿದರೆ ಎಲ್ಲಿ ತಮ್ಮ ಮೇ... ಬಲವಾನರು ತಿರುಗಿ ಬಿದ್ದಾರೋ ಎಂದು ಜನಸಾಮಾನ್ಯರು... ಪತ್ರಕರ್ತರು/ಬರಹಗಾರರು/ಕಾರ್ಯಕರ್ತರು ಅನಿಸಿದ್ದ... ಹೇಳಲೂ ಹಿಂಜರಿಯುತ್ತ ನುಂಗಿಕೊಳ್ಳುತ್ತಿದ್ದಾರೆ. 'ಏನಾದರು... ಬರೆದೀರಿ ಜೋಕೆ. ಬರೆದರೆ ನಿಮ್ಮ ಮೇಲೆ ಎರಡ... ಸುಳ್ಳು ಕೇಸು ಖಂಡಿತಾ ಸೃಷ್ಟಿಯಾಗುತ್ತವೆ, ಗೋಕರ್ಣದ... ನೋಡಿ, ಏನಾಗಿದೆ ಗೊತ್ತಲ್ಲ?' ಎಂದು ಒಂದು ಹೆ... ಇಡುವ ಮೊದಲೇ ಅಂಜಿಕೆ ಹುಟ್ಟಿಸಲಾಗುತ್ತಿದೆ. 'ಅವ... ಕುರಿತು ಅವಹೇಳನಕಾರಿಯಾಗಿ ಯಾರೂ ಮಾತನಾ... ಬಾರದು. ಕೋರ್ಟಿನ ಆಜ್ಞೆ ಇದೆ, ನ್ಯಾಯಾಂಗನಿಂದ... ಆಗುತ್ತದೆ' ಎಂದು ಹೇಳುತ್ತ ಮೌನ ಹಬ್ಬಿಸಲಾಗುತ್ತಿದೆ.

ಬಾಂಬು ಸ್ಫೋಟವಷ್ಟೇ ಭಯೋತ್ಪಾದನೆ ಅ... ಆಗಲಿರುವುದನ್ನು ಊಹಿಸಿ ಏನಾದೀತೋ ಎಂಬ ಊಹೆ... ಭಯಪಡುವಂತೆ ಮಾಡುವುದು - ಇದೇ ಅಲ್ಲ... ಭಯೋತ್ಪಾದನೆಯೆಂದರೆ?


*****

ಇಂಥ ಪ್ರಕರಣಗಳಿಂದ ಹಲವು ಚರ್ಚೆಗಳು ಮುನ್ನೆಲೆ... ಬರುತ್ತವೆ. ವೇಗದ ಆಧುನಿಕ ಕಾಲದ ತಲ್ಲಣಗಳಿ... ಬದಲಾಗುತ್ತಿರುವ ಮೌಲ್ಯ ವ್ಯವಸ್ಥೆಗೆ ಇಂದಿನ ತಲೆಮಾ... ಒಡ್ಡಿಕೊಳ್ಳುವಾಗ ಧರ್ಮ ಮತ್ತು ಗುರು-ಮಠಗಳ ಪಾ... ಏನಿರಬೇಕೆನ್ನುವುದು ಪ್ರಶ್ನಾರ್ಹವಾಗಿದೆ. ವೇಗಆವೇಗ... ನಡುವೆ ಬದುಕಿನ ಮೂಲತತ್ವಗಳಿಗೆ ಅನುಗುಣವಾ... ನಡೆಯಲು; ತನ್ನ ತಪ್ಪುಒಪ್ಪುಗಳ ಪ್ರಾಮಾಣಿಕವಾ... ಪರೀಕ್ಷಿಸಿಕೊಂಡು ಆತ್ಮಶುದ್ಧಿ ಹೊಂದಲು; ಮನುಷ... ಆಧ್ಯಾತ್ಮಿಕ ಅಗತ್ಯ ಅರಿತು ಅವನ ಚೇತನವನ್ನು ... ಸಂಕಲೆಗಳಿಂದ ಬಿಡಿಸಲು ಧಾರ್ಮಿಕತೆ ಸಹಾ... ಮಾಡಬೇಕು.

ಆದರೆ ಕಾಲದ ದುರಾದೃಷ್ಟವೆಂದರೆ ಧರ್ಮದ ಸ್ಥಗ... ಅಧರ್ಮದ ಕೂಪಗಳಾಗಿ, ಎಲ್ಲ ಪಾಪಕ್ಕೂ ಪ್ರಾಯಶ್ಚಿತ್ತ... ಎಂಬ ಅನುಕೂಲಸಿಂಧು ಆಧ್ಯಾತ್ಮ ಬೋಧಿಸುವ ದು... ಮಾದರಿಗಳಾಗಿ ಜನರ ಎದುರಿಗಿವೆ. ಯಾವುದೇ ಧರ್ಮ... ಜಾತಿಯ ಪೀಠವೂ ಇದರಿಂದ ಹೊರತಲ್ಲ - ಅ... ಪರಸ್ಪರ ಮೇಲ್ಮೆಯ ಪೈಪೋಟಿಗಿಳಿದು ಸಂಸಾರಿಗಳಿಗಿ... ಮಿಗಿಲಾದ ಲೌಕಿಕದ ಸಿರಿಸಂಪತ್ತು, ಕೀರ್ತಿಜನಪ್ರಿಯತೆ... ಪ್ರವಾಹದಲ್ಲಿ ಮುಳುಗಿಹೋಗಿವೆ. 80ರ ದಶಕದ... ಕುದುರೆಮೋತಿ ಸ್ವಾಮಿಯ ಅತ್ಯಾಚಾರ ಪ್ರಕರಣದ... ಈಗ ಅಂಥ ಹತ್ತಾರು ಪ್ರಕರಣ ಸಂಭವಿಸಿದರೂ ಜಾ... ಹೋರಾಟ ರೂಪುಗೊಳ್ಳದಿರುವುದು ಅದಕ್ಕೆ ಸಾಕ್ಷಿಯಾಗಿ...

ಧರ್ಮ, ಮಠ, ಸನ್ಯಾಸ, ಕೋರ್ಟು, ಕಾನೂನು ಎಲ್ಲ... ಪುರುಷ ನಿರ್ಮಿತಿಗಳು. ಪಡಬಾರದ ಕಷ್ಟ ಪಡುತ್ತ ಅ... ಕಷ್ಟ ಕೊಡುತ್ತ ತನ್ನನ್ನು ತಾನು ಶ್ರೇಷ್ಠ ಎಂ... ಬಿಂಬಿಸಿಕೊಳ್ಳಲು ಜಾತಿ/ಧರ್ಮ/ದೇಶ/ವ್ಯಕ್ತಿ ನಡೆಸ... ಬಲವಂತದ ಒದ್ದಾಟಗಳು ಅವು. ಭವಿಷ್ಯದಲ್ಲಿ ಇವು... ಪ್ರಸ್ತುತತೆ ಏನು, ಎಷ್ಟು ಎಂದು ಇವತ್ತಿನ ತಲೆಮಾ... ನಿರ್ಧರಿಸಬೇಕು. ರಾಜಕಾರಣಿಗಳ ಅಧಿಕಾರದ ಆಟ... ಶಾಮೀಲಾಗಿ ಜನರ ಕಣ್ಣಿಗೆ ಮಣ್ಣೆರಚುವ ಜಾತಿ... ಕಾವಿಧಾರಿಗಳ ಅಪಾಯವನ್ನು ಸಮಾಜಕ್ಕೆ ತೆರೆ... ತೋರಿಸಬೇಕು. ಧರ್ಮಗುರುಗಳು ಕ್ರಮಿಸುತ್ತಿರುವ ದಾ... ಅರಿವಿನ ಕ್ಷಿತಿಜದ ಕಡೆಗೆ ಕರೆದೊಯ್ಯು... ಸಾಧ್ಯತೆಯಿಲ್ಲದಿರುವಾಗ ಹುಸಿ ಪಾಂಡಿತ್ಯದ ಸೋ... ಅವರನ್ನು ತಂತಮ್ಮ ಮನೋಪೀಠಗಳಿಂದ ಮೊದ... ಕೆಳಗಿಳಿಸಬೇಕು. ಧರ್ಮದ ದಲ್ಲಾಳಿಗಳ ಒಳಸಂಚನ್ನು ಅ... ತನ್ನ ದಾರಿ ತಾನೇ ಕಂಡುಕೊಳ್ಳಬೇಕಾದ ಸವಾ... ಎದುರಿಸಬೇಕು.

ಡಿಜಿಟಲ್ಲೈಸ್ ಆಗ ಹೊರಟ ಡೆಮಾಕ್ರೆಟಿಕ್ ಭಾರತ... ಯಾವುದು ಜೀವದಾಯಕವೋ ಅದು ಜೀವಸಂಕಟ... ಆಗಬಹುದು. ಧರ್ಮ ಇದರಿಂದ ಹೊರತಲ್ಲ ಎ... ನೆನಪಿಡು. ಜಗತ್ತಿನ ಅತಿದೊಡ್ಡ ಪ್ರಜಾಪ್ರಭುತ್ವ ದೇ... ಪ್ರಜೆಯೇ 'ಶ್ರೇಷ್ಠರು. ಶ್ರೇಷ್ಠರು ಆದದ್ದು ಏಕೆ... ಅವರೆದುರು ನೀನು ಮೊಣಕಾಲೂರಿದ್ದೀಯೆ ಅ... ಎಂಬ ಮಾತನ್ನು ನೆನಪಿಡು. ಇನ್ನೂ ಅಬಲೆಯ...




ಬಣ್ಣಿಸಿಕೊಳ್ಳುವ ಹೆಣ್ಣೇ, ಯಾವ ಧ... ಕಾನೂನು/ ಪೀಠವೂ ಕುಳಿತಲ್ಲೇ ಬ... ನಿನ್ನ ಸಹಾಯಕ್ಕೆ ನಿಲ್ಲುವು... ಹರಾಂಬರಿಸು.

■ ಡಾ.ಎಚ್.ಎಸ್.ಅನುಪ...

ಅನುರಣನ

ಡಾ. ಟಿ.ಎಸ್. ಚನ್ನೇಶ್
channeshts@gmail.com

ಬದುಕು ಬದಲಿಸಿದ ಬೆಳೆಗಳು


ಕ್ರಿಸ್ಟೋಫರ್ ಕೊಲಂಬಸ್

ಹುಟ್ಟಿಸಿದ ದೇವರು ಹುಲ್ಲು ಮೇಯಿಸುವನೇ? ...ಗಾದೆ ಮಾತಿದೆ. ಹುಲ್ಲನ್ನು ಜೀವಿಗಳ ಆಹಾರಕ್ಕೆ ...ಸಿದ ಆಲೋಚನೆಗಳು ಬಹಳ ಹಿಂದಿನಿಂದಲೇ ... ನಿಜಕ್ಕೂ ಹುಲ್ಲು ಹೊಟ್ಟೆ ಹೊರೆಯುವ ಬಹು...ವಾದ ಸಸ್ಯವಾಗಿರುವುದಂತೂ ನಿಜವೆ. ಏಕೆಂದರೆ ...ಆಹಾರದ ಬೆಳೆಗಳಾದ ಗೋಧಿ, ಭತ್ತ, ಮೆಕ್ಕೆ ...ಜೋಳ ಹಾಗೂ ರಾಗಿ ಇವುಗಳು ಹುಲ್ಲಿನ ...ದ ಸಸ್ಯಗಳೇ! ಅಷ್ಟೇಕೆ ಕಬ್ಬು ಸಹ ಹುಲ್ಲಿನ ...ಬಯೆ. ಇವೆಲ್ಲವೂ ಸೇರಿಕೊಂಡು ನಮ್ಮ ಆಹಾರದ ...ನ್ನು ಒದಗಿಸುವ ಅತಿಮುಖ್ಯವಾದ ಬೆಳೆಗಳಾಗಿವೆ. ... ಹೊಟ್ಟೆ ತುಂಬಿಸುವ ಬೆಳೆಗಳು ಹುಲ್ಲೇ ...ವುದು ಗಾದೆಗೆ ಹೆಚ್ಚಿನ ಅರ್ಥ ಕೊಡುವಂತಿದೆ. ...ಲ್ಲದೇ ದನಕರುಗಳ ಹೊಟ್ಟೆ ತುಂಬಿಸುವ ಅನೇಕ ... ಬೆಳೆಗಳೂ ಇದೇ ಹುಲ್ಲಿನ ಜಾತಿಯವೇ ಆಗಿವೆ. ...ಮಾನವರು ಬಹಳ ಹಿಂದಿನಿಂದಲೂ ಸಸ್ಯಗಳನ್ನು ... ಪ್ರದೇಶದಿಂದ ಮತ್ತೊಂದೆಡೆಗೆ ಪರಿಚಯಿಸುವಲ್ಲಿ ...ಆಗಿದ್ದಾರೆ. ಹಾಗಾಗಿ ಜಗತ್ತಿನ ಬಹುಪಾಲು ...ದನೆಗಳಲ್ಲಿ ನೆಲದ ಹುಡುಕಾಟದಿಂದ ಆದ ಲಾಭದಲ್ಲಿ ...ಪರಿಚಯ ಪ್ರಮುಖವಾದುದು. ಒಂದು ದೇಶದಿಂದ ... ಖಂಡದಿಂದ ಮತ್ತೊಂದೆಡೆಗೆ ಸುಲಭವಾಗಿ ...ಂಡು ಜಾಗತೀಕರಣದ ಮೊದಲ ಬೇರನ್ನು ...ಗಳಲ್ಲಿ ಸಸ್ಯವರ್ಗದ ಪಾಲು ಬಹಳ ದೊಡ್ಡದು. ...ಇವೆಲ್ಲಾ ಸೇರಿ ಆಹಾರದ ಜಾಗತೀಕರಣ ಸೃಷ್ಟಿಸಿ ...ಬೇರನ್ನು ಹೊಟ್ಟೆಗಿಳಿಸಿ, ನಮ್ಮೆಲ್ಲರ ರಕ್ತ ಮಾಂಸದ ...ಗಿಸಿವೆ. ವಿವಿಧ ನಾವಿಕರು ನೆಲವನ್ನು ಹುಡುಕಾಟ ...ತ್ತಾ ಜಗತ್ತನ್ನು ಸುತ್ತುವ ಹಂತದಲ್ಲೇ ಸಸ್ಯಗಳೂ ...ಜತೆ ಹಡಗನ್ನೇರಿ ಎಲ್ಲಾ ಕಡೆಗೂ ತಲುಪಿವೆ. ...ಮುಖ್ಯವಾಗಿ ಕ್ರಿಸ್ಟೋಫರ್ ಕೊಲಂಬಸ್‌ನ ಯಾನದಿಂದ ... ಜಗತ್ತಿನ ಅನೇಕ ಗಿಡಮರಗಳು ಮೊದಲು ...ಜಪನ್ನು ಸೇರಿದವು. ಅಲ್ಲಿಂದ ಯೂರೋಪಿಯನ್ನರ ... ನಮ್ಮ-ನೆಲವನ್ನೂ ಸೇರಿ ನಮ್ಮವೇ ಆಗಿವೆ. ...ದನೇ ಶತಮಾನದಿಂದ ಇಪ್ಪತ್ತನೆಯ ...ನದವರೆಗೂ ವೈವಿಧ್ಯಮಯ ಸಾಗರಯಾನಗಳು ... ಕೆಲವು ಪ್ರಮುಖ ಯಾನಗಳು ಹೀಗಿವೆ:

...ಸ್ಟೋಫರ್ ಕೊಲಂಬಸ್ ಸ್ಪೈನ್ ದೇಶದ ...ಜನೆಯಿಂದ 1492 ಮತ್ತು 1503ರ ಮಧ್ಯೆ ... ಯಾತ್ರೆಗಳನ್ನು ಕೈಗೊಂಡನು. ಪರಿಣಾಮವಾಗಿ ...ಕಾ ಖಂಡಗಳು ಪರಿಚಯಗೊಂಡವು. ...ಗಲ್ಲಿನ ಮೆಗಲ್ಲನ್ ನೇತೃತ್ವದಲ್ಲಿ 1519ರಿಂದ ... ವರೆಗಿನ ಅಟ್ಲಾಂಟಿಕ್ ಮತ್ತು ಫೆಸಿಫಿಕ್ ...ಯಾನದ ಮೂಲಕ ಜಗತ್ತನ್ನು ಮೊದಲು ...ದರು. 1498ರಲ್ಲಿ ಭಾರತವನ್ನು ತಲುಪಿದ ...ಡಿಗಾಮ. ಅಲ್ಲದೆ 1831 ರಿಂದ 36 ವರೆಗಿನ ... ಯಾತ್ರೆಯಲ್ಲಿ ಚಾರ್ಲ್ಸ್ ಡಾರ್ವಿನ್ ಭಾಗವಹಿಸಿದ್ದ. ...ಂದಾಗಿ ಸುಮಾರು ನಾಲ್ಕೈದು ಶತಮಾನಗಳ ನೆಲದ ...ಟದಲ್ಲಿ ಅನೇಕ ಜೀವಿಗಳು ಪ್ರಮುಖವಾಗಿ ಸಸ್ಯಗಳು ... ಎಲ್ಲಿಗೋ ಪಯಣ ಬೆಳೆಸಿ ನೆಲೆಯನ್ನು ...ಂಡಿವೆ.

...ದ ಹುಡುಕಾಟವು ಅನೇಕ ಜೀವಿಗಳನ್ನು ಒಂದು ...ದ ಮತ್ತೊಂದೆಡೆಗೆ ಪರಿಚಯಿಸುವುದರ ಜತೆಗೆ ...ಜನಸಮುದಾಯದ ಬದುಕಿನ ಮೇಲೂ ಅತ್ಯಂತಿಕ ...ವನ್ನು ಬೀರಿದವು. ಹಾಗಾಗಿ ಜಾಗತೀಕರಣದ ... ಸುತ್ತಿನ ಕೆಲಸವು ನೆಲ ನೆಲೆಯ ಹುಡುಕಾಟ ... ಮೂಲಕ ನೆಲೆಗೊಂಡ ವಿವಿಧ ಸಸ್ಯವರ್ಗಗಳಿಂದ ...ಗೊಂಡಿದೆ. ಮುಖ್ಯವಾಗಿ ಹಸಿವಿನ ಪೂರೈಕೆಯಲ್ಲಿ ...ಗೊಂಡ ಸಸ್ಯಗಳಿಗಿಂತಲೂ ಆರ್ಥಿಕವಾಗಿ ...ಚಯಗೊಳಿಸಿದ ಬೆಳೆಗಳನ್ನು ಮುಖ್ಯವಾಗಿ ಐದಾರು ...ಗಳೆಂದು ಗುರುತಿಸಬಹುದು. ಅದರ ಜತೆಗೇ ...ಹಲವಾರು ಸಸ್ಯಗಳೂ ಸೇರಿಕೊಂಡು ಬದಲಾದ ... ಇತಿಹಾಸ ನಮ್ಮದಾಗಿದೆ. ಮಾನವ ಸಮಾಜದ ...ಯ ಮೇಲೆ ಪ್ರಭಾವ ಬೀರಿದ ಕೀರ್ತಿ ಆಲೂಗಡ್ಡೆ, ...ಬಾಕು, ಕಬ್ಬು ಮತ್ತು ಟೀ ಬೆಳೆಗಳಿಗೆ ಸೇರಿದೆ. ...ಈ ಬೆಳೆಗಳು ಒಟ್ಟಾರೆ ಆರ್ಥಿಕ ಪರಿಸರವನ್ನು ...ಮಾಡಿ, ಜತೆಗೆ ಕೆಲವು ಬೆಳೆಗಳೂ ಸೇರಿ ಮಾನವರ ...ನ್ನೇ ಬದಲಿಸಿವೆ.

...ಜನಪ್ರಿಯ ತರಕಾರಿ ಆಲೂಗಡ್ಡೆ

...ಲೂಗಡ್ಡೆಯು ಇಂದು ಜಗತ್ತಿನಾದ್ಯಂತ ಬೇಡಿಕೆಯ ...ಬೆಳೆ. ಐರೋಪ್ಯರಲ್ಲಂತೂ ಆಲೂಗಡ್ಡೆಯಿಲ್ಲದ ... ಇಲ್ಲ. ಅಷ್ಟರಮಟ್ಟಿಗೆ ದೈನಂದಿನ ಆಹಾರವಾಗಿ ... ಜಗತ್ತಿನ ಪ್ರತೀ ಪ್ರಜೆಯ ವಾರ್ಷಿಕ ಬಳಕೆಯು ... ಸುಮಾರು 35 ಕಿಗ್ರಾಂ, ಕೆಲವು ಯೂರೋಪ್ ... ಇದು ಸರಾಸರಿ 125 ಕಿಲೋ ಇದೆ. ... ಯೂರೋಪಿನ ಜನಪ್ರಿಯ ಬೆಳೆಯಾಗಿದ್ದ

ಆಲೂಗಡ್ಡೆಯು ನಂತರ ಚೀನಾ ಮತ್ತು ಭಾರತದಂತಹ ದೇಶಗಳಲ್ಲೂ ಜನಪ್ರಿಯ ತರಕಾರಿಯಾಯಿತು. ಈಗಂತೂ ವರ್ಷವಿಡೀ ಆಲೂ ವಹಿವಾಟು ನಡೆಯುತ್ತದೆ. ಒಟ್ಟಾರೆ ಪ್ರಮಾಣದ ದೃಷ್ಟಿಯಿಂದ ಇದು ಆರ್ಥಿಕವಾಗಿ ಬದಲಾವಣೆಯನ್ನು ತಂದ ಬೆಳೆಯೆಂದೇ ಪ್ರಸಿದ್ಧ.

ಕುಲಾಂತರಿಯಾದ ಹತ್ತಿ

ಹತ್ತಿಯು ಬೆಳೆಯಾಗಿ ಪ್ರಭಾವ ಬೀರುವ ಕಾರಣವು ಬೇರೆಯದೇ ಆಗಿದೆ. ಅದರ ಉತ್ಪಾದನೆ, ಬಳಕೆ ಇವೆರಡನ್ನೂ ಹೊರತಾದ ಕಾರಣವನ್ನು ಹೊಂದಿದೆ. ಹತ್ತಿಗೆ ಕಾಡುವ ಕೀಟಗಳು ಹೆಚ್ಚು. ಒಟ್ಟು ಕೀಟನಾಶಕಗಳಲ್ಲಿ ಸುಮಾರು ಕಾಲುಭಾಗ ಬಳಕೆಯು ಇರುವುದೇ ಹತ್ತಿ ಬೆಳೆಯಲ್ಲಿ. ಈ ಹಿನ್ನೆಲೆಯಲ್ಲಿ ಅತಿಹೆಚ್ಚು ಕೀಟನಾಶಕವನ್ನು ಬಳಕೆಗಾಗಿ ಪ್ರೇರೇಪಿಸಿದಂತಹ ಬೆಳೆಯಾಗಿ ಇದರ ಪ್ರಭಾವ ಮುಖ್ಯವಾಗಿದೆ. ಇದೇ ಕಾರಣಕ್ಕಾಗಿ ಹತ್ತಿಯಲ್ಲಿ ಮೊದಲ ಬಾರಿಗೆ ಮೈಯಲ್ಲೇ ವಿಷವುಳ್ಳ ಕುಲಾಂತರಿ ತಳಿಗಳ ಪರಿಚಯವಾಯಿತು. ಇಡೀ ಜಗತ್ತಿನ ಕೃಷಿ ನೆಲದಲ್ಲಿ ಹೆಚ್ಚೂಕಡಿಮೆ 100 ಕೋಟಿ ಎಕರೆಗಳಷ್ಟು ಪ್ರದೇಶದಲ್ಲಿ ಬಿಟಿ (ಕುಲಾಂತರಿ) ತಳಿಗಳನ್ನು ಈವರೆಗೆ ಬೆಳೆಯಲಾಗಿದೆ. ಕಳೆದ 1996ರಿಂದ ಪರಿಚಯಗೊಂಡು ಭಾರತದಲ್ಲಿ 2012ರಲ್ಲಿ ಪ್ರಚಾರಕ್ಕೆ ಬಂದ ಬಿಟಿ ಹತ್ತಿ ಇದರಲ್ಲಿ ಅಗ್ರಗಣ್ಯ ಸ್ಥಾನದಲ್ಲಿದೆ. ನಮ್ಮ ದೇಶದ ಬಹುಪಾಲು ಹತ್ತಿಯನ್ನು ಇಂದು ಕುಲಾಂತರಿಯಾಗಿಸಲಾಗಿದೆ. ಅಷ್ಟಾಗಿಯೂ ಸಮಸ್ಯೆಯಿಂದ ಹೊರಬರದೇ ರೈತರ ಆತ್ಮಹತ್ಯೆಯ ಪ್ರಮುಖ ಬೆಳೆಯಾಯಿತು.

ತಂಬಾಕೆಂಬ ಮಾದಕ ಬೆಳೆ

ತಂಬಾಕಿನ ಮೂಲ ತವರು ಅಮೆರಿಕಾ ಖಂಡಗಳು. ಅಲ್ಲಿಗೆ ಕೊಲಂಬಸ್ ಅಮೆರಿಕೆಗೆ ಕಾಲಿಟ್ಟು ತನ್ನ ಜನಗಳನ್ನು ಕ್ಯೂಬಕ್ಕೆ ಕಳಿಸಿಕೊಟ್ಟಾಗ ಅವರು ಅಲ್ಲಿನ ಮೂಲ ನಿವಾಸಿಗಳಲ್ಲಿ ಅಚ್ಚರಿಯನ್ನು ಕಂಡರು. ಅವರು ಒಂದು ತುದಿಯಲ್ಲಿ ಬೆಂಕಿಯನ್ನು ಹೊತ್ತಿಸಿದ ಕಟ್ಟಿಗೆ ತುಂಡನ್ನು ಕೈಯಲ್ಲಿ ಹಿಡಿದು ಅದರಲ್ಲಿ ಯಾವುದೋ ಎಲೆಗಳ ಉದುರಿಸಿ, ಅದರ ಹೊಗೆಯನ್ನು ತಮ್ಮ ಉಸಿರಿಗೆ ಸೇರಿಸಿ ಹೀರುತ್ತಾ ಏನೋ ಆನಂದವನ್ನು ಅನುಭವಿಸುತ್ತಿದ್ದರು. ಇದೇ ಯೂರೋಪಿಯನ್ನರಿಗೂ ಆಸೆ ತಂದಿಟ್ಟಿತು. 1518ರಲ್ಲಿ ಕೊಲಂಬಸ್ ತಂದ ಗಿಡ, ಯೂರೋಪನ್ನು ಆವರಿಸತೊಡಗಿ 1600 ವೇಳೆಗೆ ಎಲ್ಲೆಡೆ ಪಸರಿಸಿತ್ತು. ಕೇವಲ 150 ವರ್ಷಗಳಲ್ಲಿ ಜಗತ್ತನ್ನು ಆವರಿಸಿತು. ಪೋರ್ಚುಗೀಸರ ಮೂಲಕ ನಮ್ಮ ದೇಶಕ್ಕೂ ತಲುಪಿ ಅನೇಕರ ರಕ್ತನಾಳಗಳಲ್ಲಿ ಹರಿದಾಡುತ್ತಿದೆ.

ತಂಬಾಕಿಗೆ ಸಾಂಸ್ಥಿಕ ನೆರವನ್ನು 2020ರ ವೇಳೆಗೆ ಸಂಪೂರ್ಣವಾಗಿ ನಿಲ್ಲಿಸಬೇಕೆಂಬ ಚರ್ಚೆಗಳೀಗ ಹಳೆಯವು. ಒಮ್ಮೆಲೆ ನಿಲ್ಲಿಸಿದರೆ ಬೆಳೆವ ರೈತರನ್ನೂ ಮತ್ತು ಉದ್ಯಮವನ್ನೂ ಸಮಾಧಾನ ಮಾಡುವುದು ಹೇಗೆ? ಹಂತಹಂತವಾಗಿ ಇಂತಹ ಕ್ರಮಗಳ ಪ್ರೇರಣೆಗಳನ್ನು ಜಾರಿಮಾಡುವುದೊಂದೇ ಮಾರ್ಗ. ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ, ನಂತರ ಶಾಲಾಕಾಲೇಜುಗಳಿಂದ ಮಾರಾಟದ ಅಂಗಡಿಗಳ ದೂರ! ಇದೀಗ ಗುಟ್ಕಾದ ಉತ್ಪನ್ನ ಮತ್ತು ಮಾರಾಟದ ನಿಷೇಧ.

ಕೇವಲ ಒಂದೇ ಗಿಡ ಎಷ್ಟೊಂದು ಜನರ ಆರೋಗ್ಯದ ಮೇಲೆ ಪರಿಣಾಮ ಬೀರಿದ ಉದಾಹರಣೆ ಇನ್ನೊಂದಿಲ್ಲ. 1761ರಷ್ಟು ಮೊದಲೇ ತಂಬಾಕಿನಿಂದಾಗುವ ಆರೋಗ್ಯ ಪರಿಣಾಮಗಳ ವೈದ್ಯಕೀಯ ಅಧ್ಯಯನಗಳನ್ನು ಮಾಡಲಾಗಿತ್ತು, ತಂಬಾಕಿನ ದುಷ್ಪರಿಣಾಮಗಳು ಸುಮಾರು 6 ದಶಲಕ್ಷ ಜನರನ್ನು ಬಲಿತೆಗೆದುಕೊಳ್ಳುವುದೆಂದು ವಿಶ್ವ ಆರೋಗ್ಯ ಸಂಸ್ಥೆಯು ಅಂದಾಜು ಮಾಡಿದೆ. ಜಗತ್ತಿನ ಕೇವಲ 6% ಜನತೆ ಮಾತ್ರ ಸಂಪೂರ್ಣವಾಗಿ ಅದರಿಂದ ಮುಕ್ತಿ ಪಡೆದಿದ್ದಾರೆ, ಉಳಿದವರು ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ತಂಬಾಕಿನ ಪರಿಣಾಮಗಳಿಗೆ ಒಳಗಾಗುತ್ತಿದ್ದಾರೆ. ನಶ್ಯ, ಬೀಡಿ, ಅಗಿಯುವ ತಂಬಾಕು, ಸಿಗರೇಟು ಅಥವಾ ಪರೋಕ್ಷ ಧೂಮಪಾನ ಹೀಗೆ ಮುಂತಾದ ಕಾರಣಗಳು. ಪ್ರತೀ ವಯಸ್ಕರ ಹತ್ತು ಮರಣಗಳಲ್ಲಿ ಒಂದು ತಂಬಾಕಿನ ಪರಿಣಾಮದಿಂದಾಗಿಯೇ ಸಂಭವಿಸುತ್ತಿದೆ.

ತಂಬಾಕನ್ನು ಸಂಸ್ಕರಿಸಲು ಅಪಾರವಾದ ಕಟ್ಟಿಗೆ ಬೇಕು. ನಮ್ಮ ರಾಜ್ಯದ ಕಾಡುಗಳು ದಟ್ಟವಾಗಿರುವ ಪ್ರದೇಶಗಳಲ್ಲಿಯೇ ತಂಬಾಕನ್ನು ಪ್ರಚಾರ ಮಾಡಲಾಯಿತು. ಅದರ ಫಲವಾಗಿ ಶಿವಮೊಗ್ಗ ಮೈಸೂರು ಮತ್ತು ಬೆಳಗಾಂ ಜಿಲ್ಲೆಗಳ ಬಹುಪಾಲು ಕಾಡು ಸಂಸ್ಕರಣದಿಂದ ನಾಶವಾಯಿತು. ತಂಬಾಕಿನ ಪ್ರಚಾರದಿಂದಾಗಿ, ಕಾಡು ಕಡಿಯಲು ಬಿಡದ ಕಾನೂನೇ ಕಾಡು ಕಡಿಯಲೂ ಪ್ರೇರೇಪಿಸಿತ್ತು. ಇದರ ಅಭಿವೃದ್ಧಿಯ ಸಮಯದಲ್ಲಿ ಜಗತ್ತಿನಾದ್ಯಂತ ಪ್ರತೀವರ್ಷ ಕಡಿಮೆಯೆಂದರೂ 2,00,000 ಹೆಕ್ಟೇರ್ ಕಾಡು ತಂಬಾಕಿನ ಬಯಕೆಯಿಂದ ನೆಲಕಚ್ಚಿದವು. ಜಗತ್ತಿನ ಸುಮಾರು 10%ಗೂ ಹೆಚ್ಚು ತಂಬಾಕನ್ನು ಉತ್ಪಾದಿಸುವ ನಮ್ಮ ದೇಶದಲ್ಲಿ ಅಷ್ಟೇ ಕಾಡಿನ ನಾಶಕ್ಕೂ ಕಾರಣವಾಗಿವೆ. ಹೀಗೆ ಆರೋಗ್ಯ ಮತ್ತು ಪರಿಸರವನ್ನು ಒಟ್ಟಿಗೆ ಆಳುವ ಒಂದೇ ಗಿಡ ತಂಬಾಕು.

ಸಿಹಿ ಮತ್ತು ಅಮಲನ್ನು ಒಟ್ಟಿಗೇ ಆವರಿಸಿಕೊಂಡ ಕಬ್ಬು

ಕಬ್ಬು ಜಗತ್ತಿನ ಒಟ್ಟಾರೆ ಉತ್ಪನ್ನದ ದೃಷ್ಟಿಯಿಂದ ನಂಬರ್ ಒನ್ ಬೆಳೆ. ಸುಮಾರು 100 ದೇಶಗಳನ್ನು ಆವರಿಸಿಕೊಂಡು ಜಗತ್ತಿಗೆ ಸಿಹಿ ಮತ್ತು ಅಮಲು ಎರಡನ್ನೂ ಹಂಚುತ್ತಿರುವ ಬೆಳೆಯಾಗಿ ಅತ್ಯಂತ ಪ್ರಭಾವಿ. ನಮ್ಮಲ್ಲಂತೂ ಇದೊಂದೇ ಬೆಳೆ ಒಂದು ಸಚಿವಾಲಯವನ್ನು ಗಿಟ್ಟಿಸಿಕೊಂಡಿದೆ. ನಮ್ಮಲ್ಲಿ ಸಕ್ಕರೆ ಸಚಿವರಿಲ್ಲವೇ? ಭತ್ತ ತೆಂಗು ಜೋಳ ಯಾವುದಕ್ಕಿದೆ ಹೇಳಿ ಈ ಭಾಗ್ಯ! ಒಂದು ಕಾಲದಲ್ಲಿ ನಿಸರ್ಗದ ಸಿಹಿ ಎಂದರೆ ಜೇನುತುಪ್ಪ ಮಾತ್ರವೇ ಎನ್ನುವ ಕಾಲವಿತ್ತು. ದಾಸರ ಹಾಡಿನ "ಕಲ್ಲು ಸಕ್ಕರೆ ಕೊಳ್ಳಿರೋ......." ಜೇನು ಹರಳಾಗಿ ಕಲ್ಲುಸಕ್ಕರೆಯಾದ ಕುರಿತದ್ದು! ಅದು ಹೋಗಿ ಕಬ್ಬಿನ ಜಲ್ಲೆಗಳಿಗೆ ಜೇನುಹುಳುಗಳಿಲ್ಲದೆ ಸಿಹಿತುಪ್ಪವನ್ನು ಕೊಡಬಲ್ಲವೆಂದೇ ಕರೆಯಲಾಗಿದೆ. 18ನೇ ಶತಮಾನದಿಂದ ನಮ್ಮದೇಶದಲ್ಲಿ ಕಬ್ಬು ಜನಪ್ರಿಯತೆಯನ್ನು ಕಂಡುಕೊಂಡಿದೆ. ಅದಕ್ಕೆಂದೇ ಅನೇಕ ಸಮುದಾಯಗಳ ವಲಸೆಗೂ ಕಾರಣವಾಗಿದೆ. ಎಷ್ಟೆಂದರೂ ಅದರ ಸಿಹಿಗಿಂತ ಅದರಿಂದ ದೊರಕುವ ಮೊಲಾಸಸ್‌ನಿಂದ ತಯಾರಾಗುವ ರಮ್‌ನಿಂದಾಗಿ ಹಾಗೂ ಆಲ್ಕೋಹಾಲ್ ತಯಾರಿಯಿಂದಾಗಿ ಇದರ ಪ್ರಭಾವ ಪ್ರಮುಖವಾಯಿತು. ಅದಕ್ಕೊಂದು ಸಚಿವಾಲಯ.

ನೀರಿನ ನಂತರದ ಜನಪ್ರಿಯ ಪೇಯ ಚಹ

ಇದು ಅಚ್ಚರಿ ಎನಿಸುವಷ್ಟು ಸತ್ಯ. ಜಗತ್ತಿನಾದ್ಯಂತ ಕುಡಿಯುವ ದ್ರವದಲ್ಲಿ ನೀರು ಮೊದಲ ಸ್ಥಾನದಲ್ಲಿದ್ದರೆ, ನಂತರದ ಸ್ಥಾನ ಚಹ! ಇದರ ಒಟ್ಟು ಬಳಕೆ ಎಷ್ಟೆಂದರೆ, ಕಾಫಿ, ಸಾಫ್ಟ್ ಡ್ರಿಂಕ್ಸ್ ಮತ್ತು ಆಲ್ಕೋಹಾಲ್ ಅಷ್ಟೂ ಸೇರಿಸಿದರೂ ಚಹವನ್ನು ಸಮೀಕರಿಸುವುದಿಲ್ಲ. ಬಗೆಬಗೆಯ ಚಹಗಳಿವೆ. ಜಗತ್ತಿನ ಜನರ ಬದುಕನ್ನೇ ಆರಂಭಿಸುವ ದಿನದ ಆಗಮನವೇ ಚಹದ ಬಯಕೆಯಲ್ಲಿ ಸೇರಿಹೋಗಿದೆ. ಇದರ ವಹಿವಾಟು ದೇಶದೇಶಗಳ ಆರ್ಥಿಕತೆಯನ್ನೇ ನಿರ್ಧರಿಸಬಲ್ಲಷ್ಟು ಆಗಿರುವುದಂತೂ ನಿಜವೇ. ಟರ್ಕಿಯ ಕಾಫಿ ಜಗತ್ತಿನಾದ್ಯಂತ ಜನಪ್ರಿಯ ಆದರೆ ಅಲ್ಲಿನ ಜನರ ಪೇಯ ಚಹ. ಅತಿಹೆಚ್ಚು ಚಹ ಕುಡಿವ ಜನ ಟರ್ಕಿಯರು. ಅಲ್ಲಿ ಜನರ ಸರಾಸರಿ ಬಳಕೆ ಎರಡೂವರೆ ಕಿಲೋ, ನಮ್ಮ ದೇಶದ ಸರಾಸರಿ ಬಳಕೆ ಒಂದು ಕಿಲೋ. ವೈದ್ಯಕೀಯ ಬಳಕೆಯಿಂದ ಚೀನಾದಲ್ಲಿ ಹುಟ್ಟಿಕೊಂಡ ಚಹ ಪೋರ್ಚುಗೀಸ್ ಸಂತರಿಂದಾಗಿ ಯೂರೋಪ್ ತಲುಪಿ ಜಗತ್ತಿನಾದ್ಯಂತ ಆವರಿಸಿಕೊಂಡಿದೆ. ಆದರೆ ಚಹ ಬೆಳೆಯುವ ನೆಲದಲ್ಲಿ ಬೇರೇನೂ ಬೆಳೆಯದೇ ಏಕ ಬೆಳೆಯಾಗಿಸಿ ಇಕಾಲಜಿಯ ಮೇಲೆ ಪ್ರಭಾವವೂ ಅಧಿಕವಾಗಿರುತ್ತದೆ. ಭಾರತವೂ ಸೇರಿದಂತೆ, ಚೀನಾ, ಶ್ರೀಲಂಕಾ, ಬರ್ಮಾ ಮುಂತಾದ ದೇಶಗಳ ವ್ಯವಹಾರದಲ್ಲಿ ಚಹ ಪಾತ್ರ ಅಧಿಕ.

ಟೊಮ್ಯಾಟೊ ಇಲ್ಲದ ದಿನ ಉಂಟೇ?

ನಮ್ಮ ಊಟದಲ್ಲಿ ಟೊಮ್ಯಾಟೊ ಬಳಸದಿರುವ ದಿನಗಳನ್ನು ಎಣಿಸಿ ಹೇಳಬಹುದು. ಆದರೆ ಹದಿನೆಂಟನೆಯ ಶತಮಾನದ ವೈದ್ಯರು ಇದನ್ನು ತಿನ್ನಲು ನಿಬಂಧನೆ ಹೇರಿದ್ದರು ಎಂದರೆ ನಂಬುವುದು ಹೇಗೆ? ಹೌದು, ಆಗಿನ ನಂಬಿಕೆಯಂತೆ ಟೊಮ್ಯಾಟೊ ಹಣ್ಣಿನ ಬಣ್ಣವೇ ಅದರ ಭಯವನ್ನು ತಂದಿಟ್ಟಿತ್ತು, ಅದರ ಕೆಂಪು ಮಾದಕ ಬಣ್ಣ ಕಾಮಪ್ರಚೋದಕವೆಂದೂ, ಅದರ ಸಿಪ್ಪೆಯು ಹೊಟ್ಟೆಯ ಒಳಗೋಡೆಗೆ ಹತ್ತಿಕೊಂಡು ಅಲ್ಲೇ ಉಳಿದು ಕ್ಯಾನ್ಸರ್ ತರುವುದೆಂದೂ ಹೇಳಲಾಗುತ್ತಿತ್ತು, ಇದೂ ಸಹ ನಮ್ಮ ದೇಶಕ್ಕೆ ದಕ್ಷಿಣ ಅಮೆರಿಕಾದಿಂದ ಬಂದ ಬೆಳೆ. ಇಂದು ನಮ್ಮ ದೈನಂದಿನ ಬದುಕಿನ ಊಟವನ್ನೂ ಹೆಚ್ಚೂಕಡಿಮೆ ತರಕಾರಿಯಾಗಿ ಅತ್ಯಂತ ಜನಪ್ರಿಯತೆಯನ್ನೂ ಪಡೆದುಕೊಂಡು, ಅದರ ಬೆಲೆಯ ಏರುಪೇರಿನಿಂದಾಗಿ ಸುದ್ದಿಯಲ್ಲೂ ಹಿಂದೆ ಬೀಳದ ಬೆಳೆ.

ನಮ್ಮೂರ ಹೆಸರುಗಳ ಜತೆ ಮೆಣಸಿನಕಾಯಿಯ ತಳುಕು


ಬ್ಯಾಡಗಿ, ದ್ಯಾವನೂರು, ಗುಂಟೂರು, ಗೌರಿಬಿದನೂರು, ನ್ಯಾಮತಿ ಇವೆಲ್ಲಾ ಮೆಣಸಿನಕಾಯಿಯ ಜತೆಗೆ ಸೇರಿಕೊಂಡ ಕೆಲವೊಂದು ಊರುಗಳು. ಅಷ್ಟರ ಮಟ್ಟಿಗೆ ಮೆಣಸಿನಕಾಯಿ ನಮ್ಮದಾಗಿದೆ. ಇದೂ ಕೂಡ ನಮ್ಮೂರಿಗೆ ಬಂದು ಸುಮಾರು 500 ವರ್ಷಗಳಾಗಿವೆ ಅಷ್ಟೇ. ಇವತ್ತು ನಾವು ತಿನ್ನುವ ಮೆಣಸಿನಕಾಯಿಯ ಖಾರ ನೆನೆಸಿಕೊಂಡರೆ ತನ್ನ ಹುಟ್ಟೂರಲ್ಲೂ ಅದನ್ನು ಯಾರೂ ಅಷ್ಟು ಬಳಸುವುದಿಲ್ಲ. ಅಂದಹಾಗೆ ಇದರ ತವರೂರೂ ಸಹ ಟೊಮ್ಯಾಟೊ, ತಂಬಾಕಿನಂತೆ ದಕ್ಷಿಣ ಅಮೆರಿಕಾವೇ! ಅಲ್ಲಿಂದ ಇಲ್ಲಿಗೆ ಬಂದೂ ಇಲ್ಲಿಯದೇ ಆಗಿ ತನ್ನ ಬಣ್ಣ ಮತ್ತು ಪುಡಿಯ ಮೋಹದಿಂದ ಎಲ್ಲರ ನಾಲಿಗೆಯ ಮೇಲೆ ನೆಲೆ ಕಂಡಿದೆ.

ನಮ್ಮ ಆಹಾರ ದೈವ 'ಅನ್ನ'ಬ್ರಹ್ಮ

"ಹೊಟ್ಟೆಗೇನು ಅನ್ನ ತಿಂತಿಯೋ? ಏನು ತಿಂತಿಯ?" ಎಂಬುದೊಂದು ಸಾಮಾನ್ಯವಾದ ಬೈಗುಳವಿದೆ. ಹೊಟ್ಟೆಗೆ ತಿನ್ನೊದೇನಿದ್ದರೂ ಅನ್ನವನ್ನೇ ಎನ್ನುವ ಅರ್ಥದಲ್ಲಿ. ನಿಜ! ಅನ್ನ ನಮ್ಮ ಬಹುಪಾಲು ಜನರ ಆಹಾರವೇ? ಸುಮಾರು 9000 ವರ್ಷಗಳಿಗಿಂತಲೂ ಹಿಂದಿನಿಂದಲೇ ಕೃಷಿಗೆ ಒಳಗಾದ ಈ ಬೆಳೆ, ಹೆಚ್ಚೂಕಡಿಮೆ ಜಗತ್ತಿನ ಅರ್ಧದಷ್ಟು ಜನರ ಪ್ರಮುಖ ಆಹಾರ. ನಮಗಂತೂ "ಅನ್ನಬ್ರಹ್ಮ"! ಇತ್ತೀಚೆಗೆ ಆಧುನಿಕತೆಯ ಬಣ್ಣದ ಹಿಂದೆ ಬಿದ್ದು ಅಕ್ಕಿಯ ಮೈಯೆಲ್ಲಾ ಕೆರೆದು, ಕೆರೆದೂ, ಬಣ್ಣವನ್ನು ತೊಳೆದು ಬಿಳಿ ಮಾಡುತ್ತಾ ಅದನ್ನು ಸತ್ವಹೀನ ಮಾಡುತ್ತಾ ನಾವದನ್ನು ಉಣ್ಣುತ್ತಿದ್ದೇವೆ. ಅದಲ್ಲ ಹೊರತಾಗಿ ಒಂದೇ ನೆಲದಲ್ಲಿ ನೂರಾರು ವರ್ಷಗಳಿಂದ ನಿರಂತರವಾಗಿ ಬೆಳೆಯುತ್ತಿರುವ ಹಾಗೂ ಬೆಳೆಯಬಹುದಾದ ಏಕಮಾತ್ರ ಬೆಳೆ ಭತ್ತ. ಇದು ನಮ್ಮದೇ ಬೆಳೆ, ನಮ್ಮೂರೇ ಇದರ ತವರು. ನಮ್ಮದೆನ್ನುವುದರ ಬಗೆಗೆ ಇರುವ ತಾತ್ಸಾರದಿಂದ ಗೋಧಿಯ ಉತ್ಪನ್ನಗಳ ಜೊತೆಗೆ ಪೈಪೋಟಿಗಿಳಿದು ಪಾಲೀಷ್ ಮಾಡಿಸಿಕೊಂಡು ಬಣ್ಣ ಹೆಚ್ಚಿಸಿಕೊಳ್ಳುತ್ತಾ ಬಂದಿದೆ. ಹೊಟ್ಟೆ ತುಂಬಲು ಇರುವುದೆಂದರೆ ಅನ್ನವೇ? ಏಷಿಯಾ ಖಂಡದಲ್ಲಿರುವ ಜಗತ್ತಿನ ಶೇ 60ರಷ್ಟು ಜನ ಬತ್ತ ಬೆಳೆವ ಪ್ರತೀ ಎಕರೆಯಿಂದ 10ರಿಂದ 15 ಮಂದಿ ಹೊಟ್ಟೆ ತುಂಬಿಸಿಕೊಳ್ಳುತ್ತಿದ್ದಾರೆ. ಭತ್ತದ ವೈವಿಧ್ಯತೆ ಅಗಾಧವಾಗಿದೆ. ಒರಿಸ್ಸಾದ ಪುರಿಯ ಜಗನ್ನಾಥ ದೇವಾಲಯದಲ್ಲೊಂದು ಸಂಪ್ರದಾಯವಿದೆ. ಪ್ರತಿದಿನವೂ ಕೊಯ್ದ ಹೊಸಅಕ್ಕಿಯ ಅನ್ನವನ್ನೇ ನೈವೇದ್ಯಕ್ಕೆ ಬಳಸುತ್ತಾರೆ. ಪ್ರತೀ ದಿನವೂ ಕೊಯಿಲಿಗೆ ಬರುವ ತಳಿಗಳಿವೆ, ಎಂದಾಯ್ತು, ಅಷ್ಟೊಂದು ವೈವಿಧ್ಯಯುಳ್ಳ ಪ್ರಭೇದ ನಿಜಕ್ಕೂ ಅಪರೂಪ.

ನಾವು ಹೆಚ್ಚೂಕಡಿಮೆ ಸುಮಾರು 50,000 ಬಗೆಯ ಸಸ್ಯಗಳನ್ನು ತಿಂದು ಬದುಕಬಹುದು. ಆದರೆ ಸುಮಾರು 150 ಬಗೆಯ ಸಸ್ಯಗಳನ್ನು ನಾವು ಹೆಚ್ಚು ಬೆಳೆಯುತ್ತಿದ್ದೇವೆ. ಆದರೆ ಕೇವಲ ಅಕ್ಕಿ, ಗೋಧಿ ಮತ್ತು ಮುಸುಕಿನ ಜೋಳ –ಈ ಮೂರೇ ಬೆಳೆಗಳು ಜಗತ್ತಿನಾದ್ಯಂತ ಜನರ ದಿನನಿತ್ಯದ ಆಹಾರದ ಮೂರನೇ ಎರಡಷ್ಟು ಸ್ಥಾನವನ್ನು ಪಡೆದಿವೆ. ದಿನವೂ ನಮ್ಮ ಊಟದಲ್ಲಿ ಎರಡೇ ಮುಕ್ಕಾಲು ಭಾಗ ತುಂಬಿರುತ್ತವೆ. ನಮ್ಮ ಸಮುದಾಯಗಳ ನಿತ್ಯ ಬದುಕಿನ ನಿರಂತರವಾದ ಬದಲಾವಣೆಗಳನ್ನು ನಿರ್ದೇಶಿಸುತ್ತಾ ವಿಕಾಸದ ಭಾಗವಾಗಿ ಕೆಲವೇ ಬೆಳೆಗಳು ಸದಾ ಕಾದಿವೆ. ■

ಮತ್ತೊಂದು ನರಬಲಿ



ಕನ್ನಡಕ್ಕೆ ಸಂಗ್ರಹ ಅನುವಾದ: ನಡಹಳ್ಳಿ ವಸಂತ್

ನಾನು ಊಹಿಸಿಕೊಂಡಂತೆ ಪಟೇಲನಿಂದ ನನಗೆ ಯಾವುದೇ ಸಂದೇಶ ಬರಲಿಲ್ಲ, ಎರಡು ತಿಂಗಳ ನಂತರ ನಾನು ಪಟೇಲನಿಗೆ ಬರೆದ ಪತ್ರಕ್ಕೆ ಬಂದ ಉತ್ತರದಲ್ಲಿ ಚಿರತೆಯ ಬಗೆಗೆ ಏನೂ ಸಮಾಚಾರವಿಲ್ಲವೆಂದು ತಿಳಿಸಲಾಗಿತ್ತು. ಹಾಗಾಗಿ ಚಿರತೆ ಮನುಷ್ಯರನ್ನು ತಿನ್ನುವ ತನ್ನ ಅಭ್ಯಾಸವನ್ನು ಬಿಟ್ಟಿರಬೇಕು ಅಥವಾ ಹದಿನೈದು ಮೈಲು ದೂರವಿದ್ದ ಜಾವಡಿ ಬೆಟ್ಟಗಳಿಗೆ ಹೋಗಿರಬೇಕು ಎಂದು ನಾನು ಯೋಚಿಸಿದೆ. ಆದರೆ ಜಾವಡಿ ಬೆಟ್ಟಗಳಲ್ಲಿ ಕೂಡ ಯಾವುದೇ ನರಬಲಿಯಾದ ವರದಿಗಳು ಇರಲಿಲ್ಲ, ನಾನು ಸುಮ್ಮನೆ ಹೊಡೆದ ಗುಂಡು ಅದಕ್ಕೆ ತಗುಲಿ ಅದು ಯಾವುದೋ ದೂರದ ಪ್ರದೇಶಕ್ಕೆ ನುಸುಳಿ ಹೋಗಿ ಸತ್ತಿರುವ ಸಾಧ್ಯತೆಗಳಂತೂ ಇರಲೇ ಇಲ್ಲ. ಹಾಗಾಗಿ ಚಿರತೆ ತನ್ನ ಸ್ವಭಾವವನ್ನು ಬದಲಾಯಿಸಿರುವ ಸಾಧ್ಯತೆಗಳೇ ಹೆಚ್ಚು ಅನ್ನಿಸಿತು.

ಒಂಬತ್ತು ವಾರಗಳ ನಂತರ ಪಟೇಲನಿಂದ ಮತ್ತೊಂದು ತಂತಿ ಸಂದೇಶ ಬಂತು. ಚಿರತೆ ಮತ್ತೆ ಕಾಣಿಸಿಕೊಂಡು ಮನುಷ್ಯನೊಬ್ಬನನ್ನು ಕೊಂದಿರುವುದಾಗಿ ತಿಳಿಸುತ್ತಾ ತಕ್ಷಣ ಬರಬೇಕೆಂದು ನನ್ನನ್ನು ಕೇಳಿಕೊಂಡಿದ್ದರು. ಎರಡು ಗಂಟೆಯ ಅಂತರದಲ್ಲಿ ನಾನು ಸಿದ್ಧನಾಗಿ ರೈಲನ್ನು ಹತ್ತಿದೆ. ಆದರೆ ಅದು ನಿಧಾನವಾಗಿ ಚಲಿಸುತ್ತಿದ್ದುದರಿಂದ ರಾತ್ರಿ 8.30ಕ್ಕೆ ಜಾಲಾರ್‌ಪೇಟೆ ತಲುಪಿದೆ. ಅಷ್ಟು ಹೊತ್ತಿನಲ್ಲಿ ಬೆಟ್ಟವನ್ನೇರಿ ಹಳ್ಳಿಗೆ ಹೋಗುವುದರಲ್ಲಿ ಯಾವುದೇ ಪ್ರಯೋಜನವಿದೆ ಎಂದು ನನಗೆ ಅನ್ನಿಸಲಿಲ್ಲ. ಹಾಗಾಗಿ ರೈಲ್ವೆಯ ನಿರೀಕ್ಷಣಾ ಕೊಠಡಿಯಲ್ಲಿ ಕೆಲವು ಗಂಟೆ ನಿದ್ದೆ ಮಾಡಬೇಕೆಂದು ನಿರ್ಧರಿಸಿದೆ. ಆದರೆ ಆಗಾಗ ಬರುತ್ತಿದ್ದ ರೈಲುಗಳ ಸದ್ದು ಮತ್ತು ಸೊಳ್ಳೆ, ತಿಗಣೆಗಳ ಕಾಟದಿಂದಾಗಿ ನಾನು ರಾತ್ರಿಯೆಲ್ಲಾ ಪ್ಲಾಟ್‌ಫಾರ್ಮ್‌ನಲ್ಲಿ ಓಡಾಡುತ್ತಲೇ ಕಳೆಯಬೇಕಾಯಿತು. ಬೆಳಗಿನ ಜಾವ ಐದು ಗಂಟೆಗೆ ಯೆಲ್ಲಗಿರಿ ಬೆಟ್ಟಗಳನ್ನು ಹತ್ತತೊಡಗಿದೆ. 7.15ಕ್ಕೆ ನನ್ನ ಸ್ನೇಹಿತನಾಗಿದ್ದ ಪಟೇಲನ ಮನೆಗೆ ಹೋದೆ. ಚೊಂಬಿನ ತುಂಬಾ ದಪ್ಪ ಹಾಲಿನ ಕಾಫಿಯನ್ನು ಕೊಟ್ಟ ಪಟೇಲ ಚಿರತೆಯ ವಿಷಯವನ್ನು ಹೇಳತೊಡಗಿದ.

ಮೂರು ದಿನಗಳ ಹಿಂದೆ ಹೆಂಗಸೊಬ್ಬಳು ಬೆಳಗಿನ ಹೊತ್ತು ಪೆರಿಯಮಲೈನ ಬುಡದಲ್ಲಿ ಹರಿಯುತ್ತಿದ್ದ ತೊರೆಯೊಂದರಿಂದ ನೀರನ್ನು ತರಲು ಹೋದಾಗ ಚಿರತೆ ಆಕ್ರಮಣ ಮಾಡಿತ್ತು, ಅವಳಿದ್ದ ಹಳ್ಳಿಯ ಜನಗಳು ಸ್ವಲ್ಪ ಹೊತ್ತಿನಲ್ಲಿ ಅವಳನ್ನು ಹುಡುಕಿಕೊಂಡು ಹೋಗಿ, ಆಗ ದೊರೆತ ಶವದ ಅವಶೇಷಗಳನ್ನು ತಂದು ಸಂಸ್ಕಾರ ಮಾಡಿದ್ದರು. ಜನರ ಗಲಾಟೆಯಿಂದಾಗಿ ಚಿರತೆ ತನ್ನ ಬಲಿಯ ದೇಹದ ಸ್ವಲ್ಪವೇ ಭಾಗವನ್ನು ತಿನ್ನಲು ಸಾಧ್ಯವಾಗಿತ್ತು, ನನಗೆ ಕೇವಲ ನಾಲ್ಕು ದಿನಗಳ ಸಮಯವಿದ್ದುದರಿಂದ ನಾನು ಈ ಬಾರಿ ಒಂದು ಕುರಿಯನ್ನು ಬಲಿಯಾಗಿ ಕಟ್ಟಲು ನಿರ್ಧರಿಸಿದೆ. ಪಟೇಲ ಕುರಿಯನ್ನು ಕೊಡಿಸಲು ನನಗೆ ಸಹಾಯ ಮಾಡುವುದಾಗಿ ಹೇಳಿದ. ಅದರ ಬೆಲೆ ಸ್ವಲ್ಪ ಹೆಚ್ಚೇ ಅಂದರೆ ಇಪ್ಪತ್ತು ರೂಪಾಯಿಗಳಾಗಬಹುದು ಎಂದು ತಿಳಿಸಿದ. ನಾನು ಹಣ ನೀಡಿ ನನ್ನ ಜಮೀನನ್ನು ನೋಡಿ ಬರಲು ಹೊರಟೆ.

ನಾನು ಬೆಂಗಳೂರಿನಿಂದ ತಂದಿದ್ದ ತಂಗಳನ್ನು ತಿಂದು ಮಧ್ಯಾಹ್ನದ ಹೊತ್ತಿಗೆ ಹಳ್ಳಿಗೆ ಬಂದೆ. ಮಧ್ಯಾಹ್ನ ಎರಡಕ್ಕೆ ಕುರಿಯೇನೋ ಬಂದಿತು. ಆದರೆ ಅದು ಚಿರತೆಯನ್ನು ಆಕರ್ಷಿಸಲು ಸಾಧ್ಯವಾಗುವಂತೆ ಬಹಳ ಹೊತ್ತು ಕೂಗಲಾರದ ಮುದಿಯಾದ ಕುರಿಯಾಗಿತ್ತು, ಅದೂಅಲ್ಲದೆ ಅದು ಕಪ್ಪು ಬಣ್ಣದ್ದಾಗಿತ್ತು. ಕಪ್ಪು ಅಥವಾ ಬಿಳಿಯ ಬಲಿಪಶುಗಳು ಕೆಲವೊಮ್ಮೆ ಚಿರತೆಯಲ್ಲಿ ಸಂದೇಹವನ್ನು ಹುಟ್ಟಿಸುತ್ತವೆ. ಚಿರತೆಯ ಮಾಮೂಲಿನ ಆಹಾರವಾದ ಕಾಡುಪ್ರಾಣಿಗಳ ಬಣ್ಣ ಕಂದು, ಹಾಗಾಗಿ ಆ ಬಣ್ಣದ ಬಲಿಪಶು ಹೆಚ್ಚು ಉಪಯುಕ್ತವಾಗುತ್ತವೆ. ಆದರೆ ಈ ಕಪ್ಪು ಕುರಿಯನ್ನು ಬದಲಾಯಿಸಲು ಸಮಯವಿರಲಿಲ್ಲ, ಆದ್ದರಿಂದ ಅದರಲ್ಲೇ ನಾನು ಸಾಧ್ಯವಾದಷ್ಟು ಹೆಚ್ಚಿನ ಪ್ರಯೋಜನ ಪಡೆಯಬೇಕಾಗಿತ್ತು.

ಪಟೇಲ ಮತ್ತು ನಾಲ್ಕೈದು ಜನರೊಂದಿಗೆ ನಾವು ಬಲಿಯಾದ ಹೆಂಗಸಿನ ಊರಿಗೆ ಹೊರಟೆವು. ಜೊತೆಗೆ ಹಿಂದಿನ ಸಾರಿ ತೆಗೆದುಕೊಂಡಿದ್ದ ಮಂಚ ಮತ್ತು ಕತ್ತಿ, ಹಗ್ಗ ಎಲ್ಲವನ್ನೂ ತೆಗೆದುಕೊಂಡು ಹೋದೆವು. ಆ ಹಳ್ಳಿಯಿಂದ ಮುಕ್ಕಾಲು ಮೈಲು ದೂರವಿದ್ದ ಚಿರತೆ ಹೆಂಗಸನ್ನು ಕೊಂದಿದ್ದ ಸ್ಥಳವನ್ನು ತಲುಪಿದೆವು.

ಅಪಾಯಕಾರಿ ಯೋಜನೆ


ಮರಳು ತುಂಬಿದ್ದ ತೊರೆಯಲ್ಲಿ ಸ್ವಲ್ಪ ಮಾತ್ರ ನೀರು ಹರಿಯುತ್ತಿತ್ತು, ಸುತ್ತಲೂ ಲಂಟಾನ ಮತ್ತು ಮುಟ್ಟಿದರೆ ಮುನಿಯಂತಹ ಮುಳ್ಳುಗಿಡಗಳಿದ್ದವು. ಬೇಸಿಗೆಯಲ್ಲಿ ನೀರು ಸಂಗ್ರಹಿಸಲು ಹಳ್ಳಿಯವರು ತೊರೆಯ ಪಾತ್ರದಲ್ಲಿ ಒಂದು ಕಡೆ ಗುಂಡಿಯನ್ನು ತೋಡಿದ್ದರು. ಹತ್ತಿರದಲ್ಲಿದ್ದ ದಟ್ಟವಾದ ಲಂಟಾನಾದ ಪೊದೆಗಳ ಮರೆಯಲ್ಲಿ ಕಾದು ಚಿರತೆ ಮಹಿಳೆಯ ಮೇಲೆ ಆಕ್ರಮಣ ಮಾಡಿತ್ತು.

ಇಲ್ಲಿಯವರೆಗಿನ ಘಟನೆಗಳನ್ನು ನೋಡಿದರೆ ಈ ಚಿರತೆ ನರಭಕ್ಷಗಳಿಗೂ ಇಲ್ಲದ ವಿಚಿತ್ರ ಅಭ್ಯಾಸಗಳನ್ನು ಹೊಂದಿತ್ತು, ಅದು ಪದೇಪದೇ ಹಗಲುಹೊತ್ತಿನಲ್ಲಿ ಮನುಷ್ಯರ ಮೇಲೆ ಆಕ್ರಮಣ ಮಾಡಿತ್ತು, ಧೈರ್ಯವಂತ ಪ್ರಾಣಿಗಳಾದ ಹುಲಿಗಳು ಮಾತ್ರ ಹೀಗೆ ಮಾಡುತ್ತವೆ. ಬಹಳ ಪುಕ್ಕಲು ಪ್ರಾಣಿಗಳಾದ ನರಭಕ್ಷಕ ಚಿರತೆಗಳು ತಮ್ಮ ಕೆಲಸವನ್ನು ರಾತ್ರಿಗೆ ಸೀಮಿತಗೊಳಿಸಿಕೊಂಡಿರುತ್ತವೆ. ನನ್ನ ಊಹೆಯ ಪ್ರಕಾರ ಮಹಿಳೆ ಇಲ್ಲಿಗೆ ಬರುವ ಮೊದಲೇ ಚಿರತೆ ಪೊದೆಗಳಲ್ಲಿತ್ತು. ಮಹಿಳೆಯನ್ನು ನೋಡಿದ ಕೂಡಲೆ ಅದು ಅಷ್ಟು ಸುಲಭವಾಗಿ ತನಗೆ ದಕ್ಕಬಹುದಾಗಿದ್ದ ಆಹಾರದ ಆಸೆಯನ್ನು ಹತ್ತಿಕ್ಕಲಾಗದೆ ಆಕ್ರಮಣ ಮಾಡಿತ್ತು, ಇದನ್ನು ಮನಸ್ಸಿನಲ್ಲಿಟ್ಟುಕೊಂಡು ನಾನು ಸುತ್ತಲಿನ ಲಂಟಾನ ಪೊದೆ ಮತ್ತು ನೆಲವನ್ನು ಬಗ್ಗಿ ಮೊಳಕಾಲೂರಿ ಕುಳಿತು ಪರೀಕ್ಷೆ ಮಾಡತೊಡಗಿದೆ.

ಕೆಲವೇ ಕ್ಷಣಗಳಲ್ಲಿ ನನಗೆ ನನ್ನ ಊಹೆಗೆ ಪುಷ್ಟಿ ದೊರೆಯಿತು. ಒಂದು ಲಂಟಾನ ಪೊದೆಯ ಕೆಳಗೆ ಪ್ರಾಣಿಗಳಿಗೆ ಮಲಗಲು ಅನುಕೂಲವಾಗುವಂತೆ ಸಾಕಷ್ಟು ಜಾಗವಿತ್ತು, ಒಣಗಿದ ಎಲೆಗಳು ನೆಲದ ಮೇಲೆ ಚಾಪೆಯಂತೆ ಹರಡಿಕೊಂಡಿದ್ದವು. ಸುತ್ತಲೂ ಇದ್ದ ದಟ್ಟವಾದ ಲಂಟಾನ ಪೊದೆಗಳು ಹೊರಗಡೆಯಿಂದ ಕಾಣದಂತಹ ಮರೆಯನ್ನು ಒದಗಿಸುತ್ತಿತ್ತು. ನೆಲದಲ್ಲಿ ತೆಳುವಾಗಿ ಹರಡಿದ್ದ ಕಾಡುಪ್ರಾಣಿಯ ವಾಸನೆ ನನ್ನ ಊಹೆಗೆ ಇನ್ನೂ ಹೆಚ್ಚಿನ ಪುರಾವೆಯನ್ನು ಒದಗಿಸಿತ್ತು, ಚಿರತೆ ಇಲ್ಲಿ ಆಗಾಗ ವಿಶ್ರಮಿಸಿಕೊಂಡು ಹೊಂಡಕ್ಕೆ ನೀರು ಕುಡಿಯಲು ಬರುವ ಪ್ರಾಣಿಗಳನ್ನು ಬಲಿ ತೆಗೆದುಕೊಳ್ಳುತ್ತಿತ್ತು.

ಚಿರತೆ ಮೊದಲೇ ಉಪಯೋಗಿಸುತ್ತಿದ್ದ ಜಾಗವಾದ್ದರಿಂದ ಇಲ್ಲಿಗೆ ಅದು ಮತ್ತೆ ಭೇಟಿ ನೀಡುವ ಸಾಧ್ಯತೆಗಳಿವೆ ಎನ್ನುವ ಯೋಚನೆ ನನ್ನ ಉತ್ಸಾಹವನ್ನು ಹೆಚ್ಚಿಸಿತು. ಅದೂಅಲ್ಲದೆ ಅರ್ಧ ಮೈಲು ದೂರವಿದ್ದ ಪೆರಿಯಮಲೈನ ಬಂಡೆಗಳ ನಡುವೆ ಅಥವಾ ಗುಹೆಗಳಲ್ಲಿ ಚಿರತೆ ತನ್ನ ಕಾಯಂ ವಾಸಸ್ಥಾನ ಹೊಂದಿರಬೇಕು. ಹಾಗಾಗಿ ಈ ಲಂಟಾನ ಪೊದೆಗಳು ಅದಕ್ಕೆ ಆಹಾರಕ್ಕಾಗಿ ಕಾಯಲು ಪ್ರಶಸ್ತವಾದ ಸ್ಥಳವಾಗಿತ್ತು.

ಇದನ್ನೆಲ್ಲ ಅಭ್ಯಾಸ ಮಾಡುತ್ತಿದ್ದಂತೆ ನನಗೆ ಒಂದು ಯೋಜನೆ ಹೊಳೆಯಿತು. ಸಾಮಾನ್ಯವಾಗಿ ಚಿರತೆಯ ಕಣ್ಣಿಗೆ ಬೀಳುವಂತಹ ಒಂದು ದೃಶ್ಯವನ್ನು ನಾನು ಇಲ್ಲಿ ಸೃಷ್ಟಿಮಾಡಬೇಕು. ನೀರು ಕುಡಿಯಲು ಬಂದಿದೆ ಎನ್ನುವ ರೀತಿ ಕಾಣುವಂತೆ ಕುರಿಯನ್ನು ಹಳ್ಳದ ಹತ್ತಿರ ಕಟ್ಟಬೇಕು. ಮತ್ತು ನಾನು ಇದೇ ಲಂಟಾನ ಪೊದೆಗಳಡಿ ಕುಳಿತು ಚಿರತೆಯ ದಾರಿಗೆ ಅಡ್ಡವಾಗಬೇಕು. ಕುರಿಯ ಕೂಗನ್ನು



ಕೇಳಿದ ಅಥವಾ ಅದನ್ನು ಬೆಟ್ಟದ ಮೇಲಿಂದ ನೋಡಿದ ಚಿರತೆ ಅದರತ್ತ ಬರುವಾಗ ನನಗೆ ಮುಖಾಮುಖಿಯಾಗಬೇಕು.

ನಾನು ಈ ಯೋಜನೆಯನ್ನು ಅಲ್ಲಿದ್ದವರಿಗೆ ವಿವರಿಸಿದೆ. ಇದು ಬಹಳ ಚತುರವಾದ ಯೋಜನೆಯಾಗಿದ್ದರೂ ಅಪಾಯಕಾರಿಯಾಗಬಹುದು ಎಂಬ ಕಾರಣಕ್ಕಾಗಿ ಪಟೇಲ ಇದಕ್ಕೆ ಒಪ್ಪಲಿಲ್ಲ, ಇದರಲ್ಲಿ ಏನೂ ಅಪಾಯವಿಲ್ಲವೆಂದು ನಾನು ಅವನ ಮನವೊಲಿಸಿದೆ. ಲಂಟಾನ ಪೊದೆಗಳು ಬಹಳ ದಟ್ಟವಾಗಿದ್ದುದರಿಂದ ಚಿರತೆಗೆ ಯಾವುದೇ ದಿಕ್ಕಿನಿಂದ ನನ್ನತ್ತ ಬರಲು ಕಷ್ಟವಾಗುತ್ತಿತ್ತು, ಚಿರತೆ ನನ್ನತ್ತ ಬರಲು ಸಾಧ್ಯವಾಗುವುದು ಅದು ಮಾಡಿಕೊಂಡಿರುವ ವಿಶ್ರಮಿಸುವ ಸ್ಥಳವಿರುವ ದಿಕ್ಕಿನಿಂದ ಮಾತ್ರ. ಅದಕ್ಕೆ ನಾನು ಸಿದ್ಧವಾಗಿರುತ್ತೇನೆ. ಅದೂಅಲ್ಲದೆ ಚಿರತೆ ತನ್ನ ಬಲಿಯ ಕಡೆ ಗಮನವಿಟ್ಟು ಬರುತ್ತಿರುವಾಗ ಇಲ್ಲಿ ಬೇರೆಯವರು ಇರಬಹುದೆಂಬ ಅನುಮಾನ ಅದಕ್ಕೆ ಬರುವುದಿಲ್ಲ.

ಕುರಿ ನಾನೋ, ನೀನೋ?

ಯೋಜನೆಯನ್ನು ಕಾರ್ಯರೂಪಕ್ಕೆ ತರಲು ಸಿದ್ಧನಾದೆ. ನಾನು ಪೊದೆಗಳ ಮಧ್ಯೆ ನುಸುಳಿ ಸಾಧ್ಯವಿರುವಷ್ಟು ಆರಾಮಾಗಿ ಕುಳಿತುಕೊಂಡೆ. ನನ್ನ ಬಂದೂಕಿಗೆ ಟಾರ್ಚ್‌ನ್ನು ಅಳವಡಿಸಿ ಸಿದ್ಧಮಾಡಿಕೊಂಡೆ. ತೆಗೆದುಕೊಂಡು ಹೋಗಿದ್ದ ಟೀಯನ್ನು ಕುಡಿದು, ಅಲ್ಲಿದ್ದವರಿಗೆ ಕುರಿಯನ್ನು ತಂದು ಕಟ್ಟಲು ಹೇಳಿದೆ.

ಈ ತಯಾರಿಗಳು ನಡೆಯುವಾಗ ಕುರಿಯನ್ನು ದೂರದಲ್ಲಿ ಕಟ್ಟಿದ್ದೆವು. ಏಕೆಂದರೆ ನಾನು ಪೊದೆಗಳಲ್ಲಿ ಇರುವುದು ಅದಕ್ಕೆ ತಿಳಿದರೆ ಅದು ಜನರೆಲ್ಲಾ ಹೋದಮೇಲೆ ಕೂಗುವ ಸಾಧ್ಯತೆಗಳು ಕಡಿಮೆ. ತಾನು ಏಕಾಂಗಿ ಎಂದು ಅದಕ್ಕೆ ಅನ್ನಿಸಿದರೆ ಮಾತ್ರ ಅದು ನಿರಂತರವಾಗಿ ಕೂಗುತ್ತದೆ. ನನ್ನ ಆದೇಶದಂತೆ ಪಟೇಲ ಮತ್ತು ಅವನ ಜನಗಳು ಕುರಿಯನ್ನು ಕಟ್ಟಿಹಾಕಿ ಹೊರಟುಹೋದರು. ಮುಂದಾಗುವುದನ್ನು ಕಾಯುತ್ತಾ ನಾನೊಬ್ಬನೇ ಅಲ್ಲಿ ಕುಳಿತಿದ್ದೆ. ಸೂರ್ಯ ಮುಳುಗಲು ಇನ್ನೂ ಸಮಯವಿತ್ತು, ನಾನು ಕುಳಿತ ಕಡೆ ಬೆಳಕು ಇಲ್ಲದಿದ್ದರೂ ಬಹಳ ಸೆಖೆಯಿತ್ತು. ಮೊದಮೊದಲು ಸ್ವಲ್ಪ ಹೊತ್ತು ಕೂಗಿದ ಕುರಿ ನಂತರ ಸುಮ್ಮನಾಗಿತ್ತು. ಕತ್ತಲಾಗುತ್ತಿದ್ದಂತೆ ಇದು ಮತ್ತೆ ಕೂಗುತ್ತದೆ ಎಂದು ನಾನು ಆಶಿಸುತ್ತಿದ್ದೆ. ಕುರಿ ತನ್ನನ್ನು ಕಟ್ಟಿದ ಹಗ್ಗದಿಂದ ಬಿಡಿಸಿಕೊಳ್ಳಲು ಮಾಡುತ್ತಿದ್ದ ಸದ್ದು ಕೂಡ ನಿಧಾನವಾಗಿ ನಿಂತುಹೋಗಿತ್ತು, ಹಾಗಾಗಿ ಕುರಿ ನಿದ್ದೆ ಮಾಡಿರಬೇಕೆಂಬ ಅನಿವಾರ್ಯವಾದ ತೀರ್ಮಾನಕ್ಕೆ ನಾನು ಬಂದೆ.

ಆದರೆ ನಾನು ಕುರಿಯ ಗಾಢ ನಿದ್ದೆಯಲ್ಲಿ ಪಾಲುಗೊಳ್ಳುವಂತಿರಲಿಲ್ಲ, ರಾತ್ರಿಯಿಡೀ ನಿದ್ದೆ ಮಾಡದೆ ಸಂಪೂರ್ಣ ಎಚ್ಚರವಾಗಿರಬೇಕಾಗಿತ್ತು, ಈ ದರಿದ್ರದ ಕುರಿಯನ್ನು ನೋಡಿ ನನಗೆ ಹೊಟ್ಟೆಯುರಿಯಾಯಿತು!

ಸೊಳ್ಳೆಗಳು ನನ್ನನ್ನು ಕಾಡುತ್ತಿದ್ದವು. ಎಲ್ಲಾ ರೀತಿಯ ಕ್ರಿಮಿಕೀಟಗಳು ನನ್ನ ಮೈಮೇಲೆ ಹರಿದಾಡುತ್ತಿದ್ದವು. ಮಾಮೂಲಿನ ಊರಿನ ಇಲಿಗಳಿಗಿಂತ ಚಿಕ್ಕದಾದ ಪೊದೆಗಳಲ್ಲಿ ವಾಸಿಸುವ ಇಲಿಗಳು ಒಣಗಿದ ಎಲೆಗಳಲ್ಲಿ ಸದ್ದು ಮಾಡುತ್ತಾ ಓಡಿ ಲಂಟಾನಾದ ರೆಂಬೆಗಳನ್ನು ಏರುತ್ತಿದ್ದವು. ಒಮ್ಮೆ ಪೊದೆಯ ಹತ್ತಿರ ಎಲೆಗಳ ಮೂಲಕ ಯಾವುದೋ ಉದ್ದವಾದ ಮತ್ತು ಮೃದುವಾದ ಜೀವಿ ಹರಿದು ಹೋಯಿತು. ಅದೊಂದು ಹಾವು, ವಿಷಕಾರಿಯಾದದ್ದೋ ಅಥವಾ ಅಲ್ಲವೋ ನನಗೆ ಗೊತ್ತಿರಲಿಲ್ಲ, ಸೊಳ್ಳೆ, ಕ್ರಿಮಿಕೀಟಗಳನ್ನು ಸಹಿಸಿಕೊಂಡು ನಾನು ಸಂಪೂರ್ಣ ನಿಶಬ್ದವಾಗಿ ಕುಳಿತಿದ್ದೆ.

ಚಿರತೆ ಬರಲೇ ಇಲ್ಲ, ರಾತ್ರಿಯ ಹಕ್ಕಿಗಳ ಕೂಗು ಅಥವಾ ಇನ್ನಾವ ಸದ್ದೂ ಕೇಳಲಿಲ್ಲ, ಸಮಯ ನಿಧಾನವಾಗಿ ಬೇಸರದಿಂದ ಕಳೆಯುತ್ತಿತ್ತು, ನನಗೆ ತೂಕಡಿಸುವಂತೆ ಆಗುತ್ತಿದ್ದರೂ ಒಂದೇ ಒಂದು ಸೆಕೆಂಡ್ ಕೂಡ ಕಣ್ಣು ಮುಚ್ಚುವ ಆಸೆಗೆ ಬಲಿಯಾಗಲಿಲ್ಲ, ಚಿರತೆಯಿಂದ ಗಮನವನ್ನು ತಿರುಗಿಸಲು ಬೇರೆ ವಿಷಯಗಳತ್ತ ಯೋಚನೆಯನ್ನು ಹೊರಳಿಸಲು ಯತ್ನಿಸಿದೆ. ಆದರೆ ದರಿದ್ರ ಕುರಿಯನ್ನು ಬೈಯುವ ಯೋಚನೆ ಮಾತ್ರ ಮನಸ್ಸಿನಲ್ಲಿ ಬರುತ್ತಿ...

ಕಾಡುಕೋಳಿ ಅಥವಾ ಇತರ ಕಾಡಿನ ಹಕ್ಕಿಗಳು ಕೂಗುವ ಪೊದ... ಹೊಸದಿನದ ಬೆಳಕು ನಿಧಾನವಾಗಿ ಮೂಡುತ್ತಿತ್ತು, ಅವತ್ತು ಭಾರತದ... ಅತ್ಯಂತ ಬೇಸರಗೊಂಡಿದ್ದ ಮನುಷ್ಯನಾಗಿ ನಾನು ಪೊದೆಗಳಿಂದ ಹೊರಬಂ... ಮುದುರಿ ಮಲಗಿದ್ದ ಕುರಿ ಸೋಮಾರಿತನದಿಂದ ಎದ್ದು ಬಾಲವನ್ನು ಅಲ್ಲಾಡಿಸಿ... ಅದು ನನ್ನತ್ತ ನೋಡಿದ ಪ್ರಶ್ನಾರ್ಥಕ ದೃಷ್ಟಿ "ಈಗ ಹೇಳು ನಿಜವಾದ ... ನೀನೋ ನಾನೋ?" ಎಂದು ಕೇಳುವಂತಿತ್ತು. ಉತ್ತರ ತಿಳಿದಿದ್ದ ನಾ... ಬಾಯಿಬಿಟ್ಟು ತಪ್ಪೊಪ್ಪಿಕೊಳ್ಳಲಿಲ್ಲ!

ಬದಲಾಗಿ ಈ ದರಿದ್ರ ಕುರಿಗೆ ಕಟ್ಟಿದ್ದ ಹಗ್ಗವನ್ನು ಬಿಚ್ಚಿಕೊಂಡು ಪಟೇ... ಊರಿಗೆ ಹೋದೆ. ಅಷ್ಟು ಹೊತ್ತಿಗೆ ಹಿಂದಿನ ದಿನ ನನ್ನೊಡನೆ ಬಂದಿದ್ದ ... ನನ್ನನ್ನು ಹುಡುಕಿಕೊಂಡು ಹೊರಟಿದ್ದರು. ಎಲ್ಲಾ ಕಥೆಯನ್ನು ಅವರಿಗೆ ಹ... ಈ ಕುರಿಯನ್ನು ಹಿಂತಿರುಗಿಸಲು ಹೇಳಿದೆ. ಮಧ್ಯಾಹ್ನ ಬಂದು ನಾನೇ ಬ... ಕುರಿಯನ್ನು ಆರಿಸಿಕೊಳ್ಳುತ್ತೇನೆಂದು ಹೇಳಿದೆ.

ನಿಜವಾದ ಕುರಿಯ ಆಯ್ಕೆ

ನಂತರ ನನ್ನ ಗುಡಿಸಲಿಗೆ ಹೋಗಿ ಮಧ್ಯಾಹ್ನದವರೆಗೆ ನಿದ್ದೆ ಮಾಡಿ... ಬೆಂಗಳೂರಿನಿಂದ ತಂದಿದ್ದ ತಂಗಳನ್ನು ತಿಂದು ಟೀ ಕುಡಿದೆ. ರಾತ್ರಿಗೆ ಬೇ... ಸಾಮಾನುಗಳನ್ನು ಹೊಂದಿಸಿಕೊಂಡು ಮತ್ತೆ ಪಟೇಲನ ಹಳ್ಳಿಗೆ ಬಂದೆ. ಆವ... ಕುರಿಗಳಿದ್ದಲ್ಲಿಗೆ ಹೋಗಿ, ಚೌಕಾಸಿ ನಡೆಸಿ ಒಂದನ್ನು ಆರಿಸಿಕೊಂಡೆ. ... ಇನ್ನೂ ಮಧ್ಯವಯಸ್ಸಿನ ಕುರಿಯಾದ್ದರಿಂದ ರಾತ್ರಿಯೆಲ್ಲಾ ಕೂಗುವ ಸಾ... ಹೆಚ್ಚಾಗಿತ್ತು, ಸುಮಾರು ಐದು ಗಂಟೆಯ ಹೊತ್ತಿಗೆ ನಾನು ನಿನ್ನೆ ... ಕುಳಿತಿದ್ದ ಪೊದೆಗಳಡಿ ಮತ್ತೆ ಸೇರಿಕೊಂಡೆ. ಕುರಿಯನ್ನು ಹಗ್ಗದಿಂದ ಗೂ... ಕಟ್ಟಿದ ಜನ ಹಿಂತಿರುಗಿದರು. ಅವರು ಕಣ್ಮರೆಯಾಗಿ ಅವರ ಧ್ವನಿ... ಕೇಳದಿದ್ದಾಗ ಕುರಿ ಕೂಗಲು ಶುರುಮಾಡಿತು. ಅದು ನಿರಂತರವಾಗಿ ಕೂಗು... ಇದ್ದಾಗ ನನ್ನ ಆಯ್ಕೆಗಾಗಿ ನಾನೇ ಬೆನ್ನುತಟ್ಟಿಕೊಂಡೆ.

ಸಂಜೆಯಾಗುತ್ತಿದ್ದಂತೆ ಲಂಟಾನಾ ಪೊದೆಗಳಡಿ ಕತ್ತಲಾಯಿತು. ... ದೊಡ್ಡದಾಗಿ ಕೂಗುತ್ತಲೇ ಇತ್ತು, ನಾನು ಚಿರತೆಯ ನಿರೀಕ್ಷೆಯಲ್ಲಿ ಕಾಯು... ಸುಮಾರು ಒಂದು ಗಂಟೆ ಕಳೆಯಿತು. ಆಗ ಒಣ ಎಲೆಗಳ ಮೇಲೆ ... ಊರಿದ ಬಹಳ ಮೆದುವಾದ ಚರಪರ ಸದ್ದು ಕೇಳಿತು. ಚಿರತೆ ಬರುತ್ತಿರು... ನನಗೆ ಗೊತ್ತಾಯಿತು. ನಿರ್ಧಾರದ ಕ್ಷಣ ಇನ್ನೇನು ಬಂದೇ ಬಿಟ್ಟಿದೆ ಎಂದುಕೊ... ಈ ಸಾರಿ ಚಿರತೆ ಸಂಪೂರ್ಣವಾಗಿ ಕಣ್ಣಿಗೆ ಬೀಳುವವರೆಗೆ ನಾನು ಟಾರ್ಚ್... ಹೊತ್ತಿಸದೆ ಇರುವ ಎಚ್ಚರ ಇಟ್ಟುಕೊಳ್ಳಬೇಕು. ಸರಿಯಾದ ಸಮಯ... ಮೊದಲೇ ಟಾರ್ಚ್ ಹೊತ್ತಿಸಿದರೆ ಚಿರತೆ ಕಣ್ಮರೆಯಾಗಬಹುದಿತ್ತು, ಟಾ... ಬೆಳಗಿಸಲು ತಡ ಮಾಡಿದರೆ ಚಿರತೆಯೇ ನನ್ನನ್ನು ಮೊದಲು ನೋಡಿ ಆಕ್ರ... ಮಾಡಬಹುದಿತ್ತು ಅಥವಾ ಕಣ್ಮರೆಯಾಗಬಹುದಿತ್ತು.

ಬೇಟೆಯ ಅಂತಿಮ ಕ್ಷಣಗಳು

ನನ್ನ ಎಲ್ಲಾ ಗಮನವನ್ನು ಕೇಂದ್ರೀಕರಿಸಿಕೊಂಡು ಕಾಯತೊಡಗಿದೆ. ... ಅಥವಾ ಬೇರಾವುದೇ ಹೊಸ ಸದ್ದುಗಳು ಕೇಳಲಿಲ್ಲ, ಆಗ ನನಗೆ ... ಸಣ್ಣದಾಗಿ ಬುಸುಗುಡುವ ಸದ್ದು ಕೇಳಿಸಿತು. ಚಿರತೆ ನನ್ನನ್ನು ನೋ... ಅಥವಾ ನಾನು ಇರುವುದನ್ನು ಗ್ರಹಿಸಿದೆ ಎಂದು ತಕ್ಷಣ ನನಗೆ ತಿಳಿ... ಘರ್ಜನೆಗಾಗಿ ಅದು ತುಟಿಯನ್ನು ಸಿದ್ಧಗೊಳಿಸುವಾಗ ಈ ರೀತಿಯ ಬುಸುಗು... ಶಬ್ದ ಹೊರಬಂದಿತ್ತು, ಯಾವುದೇ ಕ್ಷಣದಲ್ಲಿ ಘರ್ಜನೆ ಮಾಡುವುದಕ್ಕೆ ... ತಯಾರಾಗಿತ್ತು, ಸರಿ, ಈಗ ಅಥವಾ ಯಾವಾಗಲೂ ಇಲ್ಲವೇ ಇಲ್ಲ ಎಂದುಕೊ... ನನ್ನ ಹೆಬ್ಬೆರಳಿನಿಂದ ಟಾರ್ಚ್‌ನ ಗುಂಡಿಯನ್ನು ಒತ್ತಿದೆ. ಹೊರಹೊ... ಬೆಳಕಿನ ಕಿರಣಗಳು ನೇರವಾಗಿ ಚಿರತೆಯ ಕೆಂಪು ಮಿಶ್ರಿತ ಬಿಳಿಯ ಕ... ಮೇಲೆ ಬಿತ್ತು, ಹತ್ತು ಅಡಿ ದೂರದಲ್ಲಿ ಚಿರತೆಯ ಮುಖ ಮತ್ತೆ ... ಭಾಗ ಸ್ಪಷ್ಟವಾಗಿ ಕಾಣುತ್ತಿತ್ತು, ತ್ವರಿತವಾಗಿ ಕುತ್ತಿಗೆಗೆ ಗುರಿಯಿಡುತ್ತಾ ಬಂದ... ಚಲಾಯಿಸಿದೆ. ಒಂದು ಹೆಜ್ಜೆ ಮುಂದೆ ಬಂದಂತೆ ಕಂಡ ಚಿರತೆ ಹಿಂಗಾ... ಆಧಾರದ ಮೇಲೆ ಹಾರಲು ಸಿದ್ಧವಾಯಿತು. ಅಷ್ಟರಲ್ಲೇ ನನ್ನ ಎರ... ಗುಂಡು ಅದರ ಎದೆಯನ್ನು ಹೊಕ್ಕಿತು. ಅದು ಹಿಂದಕ್ಕೆ ಹಾರಿ ಬಿದ್ದು... ಕಾಣದಾಯಿತು. ಕೆಲವು ಸೆಕೆಂಡುಗಳು ಪೊದೆಗಳಲ್ಲಿ ಹೊರಳಾಡಿದ ... ಕೇಳಿಸಿತು. ನಂತರ ಕೇಳಿದ್ದು-ಸಾಯುತ್ತಿರುವ ಪ್ರಾಣಿಯ ಗಂಟಲಿನಿಂದ ... ನಿಶ್ಚಿತವಾದ ಗೊರಗೊರ ಸದ್ದು ಮತ್ತು ಆಮೇಲಿನ ನಿಶಬ್ದ.

ನಾನು ಇನ್ನೊಂದು ಅರ್ಧ ಗಂಟೆ ಕಾದ ನಂತರ ಪೊದೆಗಳಿಂದ ಹೊರ... ನಿರ್ಧರಿಸಿದೆ. ಚಿರತೆ ಸತ್ತುಹೋಗಿರುವುದು ನನಗೆ ಖಾತ್ರಿಯಿರುವು... ಹೀಗೆ ಮಾಡುವುದರಲ್ಲಿ ನನಗೆ ಯಾವುದೇ ಅಪಾಯ ಕಾಣಲಿಲ್ಲ, ಬಂದ... ನನ್ನೆದುರು ಹಿಡಿದುಕೊಂಡೇ ಮರೆಯಿಂದ ಹೊರಬಂದು ಕುರಿಯ ... ನಿಂತುಕೊಂಡೆ. ಕುರಿಯನ್ನು ನನ್ನ ಜೊತೆ ಹಳ್ಳಿಗೆ ಕರೆದುಕೊಂಡು ಹೋಗ... ಮೊದಲು ಯೋಚಿಸಿದೆ. ಆಮೇಲೆ ಈ ಯೋಚನೆಯನ್ನು ಬದಲಾ... ನಾನು ಕೊಂದ ಚಿರತೆ ನರಭಕ್ಷಕನಾಗಿರದೆ ಬೇರೆ ಸಾಮಾನ್ಯ ಪ್ರಾಣಿಯಾ... ಸಾಧ್ಯತೆ ಇತ್ತು, ಆದ್ದರಿಂದ ನಾನು ಕತ್ತಲಲ್ಲಿ ಹಳ್ಳಿಗೆ ಹಿಂತಿರುಗುವಾಗ ಸಾಧ್... ಎಲ್ಲಾ ಎಚ್ಚರ ವಹಿಸಿಬೇಕಿತ್ತು, ಇಂತಹ ಸಂದರ್ಭದಲ್ಲಿ ನಾನು ಈ ಕುರಿ... ಕರೆದೊಯ್ಯುವಾಗ ನನ್ನ ಗಮನ ಬೇರೆ ಕಡೆ ಹೋಗುವುದು ಅಪಾಯಕಾ... ಬಹುದಿತ್ತು, ಹಾಗಾಗಿ ಕುರಿಯನ್ನು ಅಲ್ಲೇ ಬಿಟ್ಟು ನಾನು ಎಚ್ಚರಿಕ... ನಡೆಯುತ್ತಾ ಪಟೇಲನ ಮನೆಗೆ ಬಂದೆ. ಇನ್ನೂ ನಿದ್ದೆ ಮಾಡದೆ ಕಾ... ಜನಗಳಿಗೆ ಎಲ್ಲಾ ಕಥೆಯನ್ನೂ ಹೇಳಿ ನಾನು ನನ್ನ ಗುಡಿಸಲಿಗೆ ಹಿಂತಿ...

ಮರುದಿನ ಬೆಳಗ್ಗೆ ಸತ್ತು ಬಿದ್ದಿದ್ದ ಚಿರತೆಯನ್ನು ಪತ್ತೆ ಮಾಡಿದೆವು. ಅ...ದ ಬಡಕಲಾಗಿ ಬಣ್ಣ ಕಳೆದುಕೊಂಡಿರುವ ಗಂಡು ಚಿರತೆಯಾಗಿತ್ತು, ಮ... ದುರ್ಬಲವಾಗಿದ್ದ ಹಲ್ಲುಗಳು ಮತ್ತು ಮೊಂಡಾಗಿದ್ದ ಕಾಲಿನ ಉಗುರು... ಹೊಂದಿದ್ದ ಇದು ನರಭಕ್ಷಕನಾಗಿರುವ ಎಲ್ಲಾ ಸೂಚನೆಗಳೂ ಇದ್ದವು... ನಿಜವಾದ ಅಪರಾಧಿಯನ್ನು ನಾನು ಕೊಂದಿದ್ದೇನೆಯೋ ಇಲ್ಲವೋ ಎನ್ನು... ಕಾಲವೇ ಹೇಳಬಲ್ಲದು. ಮಧ್ಯಾಹ್ನದ ಹೊತ್ತಿಗೆ ನಾನು ಅದರ ಚರ್ಮದ... ಬೆಟ್ಟವನ್ನು ಇಳಿಯುತ್ತಿದ್ದೆ. ಈ ಘಟನೆಯಾಗಿ ಬಹಳ ವರ್ಷಗಳೇ ... ಆದರೆ ಜಾವಡಿ ಮತ್ತು ಯೆಲ್ಲಗಿರಿ ಬೆಟ್ಟಗಳಲ್ಲಿ ಇನ್ಯಾರೂ ವನ್ಯಮೃ... ಸಾವಿಗೀಡಾಗಿಲ್ಲ, ಹಾಗಾಗಿ ನಿಜವಾದ ನರಭಕ್ಷಕನನ್ನು ಕೊಂದಿದ್ದೇನೆಂ... ಪೂರ್ಣ ಭರವಸೆ ಇದೆ.

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಯಾದವ ಕೃಷ್ಣ ಗೀತಾಚಾರ್ಯ

ಯಾದವರ ಕೃಷ್ಣ ಆರ್ಯ ವಿರೋಧಿಯಾಗಿದ್ದು ...ವಲ್ಲದೇ ಸ್ಥಳೀಯ ಗಣಗಳ ಅಥವಾ ಬುಡಕಟ್ಟುಗಳ ...ಗೂ ಸಂಘರ್ಷವನ್ನು ಹೊಂದಿರುವುದು ಕಾಣುತ್ತದೆ.

ಕಾಳೀಯ

...ಳೀಯ ಮರ್ಧನದ ಕಥೆಯನ್ನು ಗಮನಿಸಿ. ಕಾಳಿಂದೀ ...ವಿಗೆ ಬರುತ್ತಿದ್ದ ಗೋವುಗಳನ್ನು ಕಚ್ಚಿ ಕೊಲ್ಲುತ್ತಿದ್ದ ...ಯ ಮತ್ತು ಅವನ ಪರಿವಾರದ ಉಪಟಳ ತಾಳದೇ ...ಪಾಲಕರು ಕೃಷ್ಣನಿಗೆ ಮೊರೆ ಹೊಕ್ಕು, ನಂತರ ಕೃಷ್ಣನು ... ಕಾಳೀಯನ ಹಿಡಿದು, ಬಡಿದು ಅದೆಷ್ಟೋ ಹೆಡೆಯ ... ಕಲಿತಿದ್ದ ನರ್ತನವನ್ನೆಲ್ಲಾ ಮಾಡಿ, ಕಾಳೀಯನ ...ರು ಬಂದು ನಮ್ಮ ಎಂದಿನ ಭಾರತೀಯ ನಾರಿಯ ...ಯಲ್ಲಿ ತಮ್ಮ ಗಂಡನ ಉಳಿಸಿಕೊಳ್ಳಲು ಕೇಳಿದ ...ಣೇವದಾನ ಮಾಡಿ ಅಲ್ಲಿಂದ ಜಾಗ ಖಾಲಿ ಮಾಡಲು ...ದ.

...ಂದರೆ, ತಾನೇ ನಾಗವೈರಿಯಾಗಿರುವ ಇಂದ್ರನು ...ನಾಗನಿಗೆ ಸಹಾಯ ಮಾಡುವುದಾಗಲಿ, ಕಶ್ಯಪ ಮತ್ತು ...ವನ ಮಗನಾದ ಸರ್ಪರಾಜನಾಗಿದ್ದು, ಗರುಡನು ...ಗಳನ್ನೆಲ್ಲಾ ಒಂದೇ ಸಾರಿ ನಾಶ ಮಾಡದಂತೆ ...ಕೊಂಡು ಒಂದೊಂದೇ ಸರ್ಪವನ್ನು ತಿನ್ನಲು ...ಸುವುದು, ಅರ್ಜುನನ ಮೊಮ್ಮಗ ಜನಮೇಜಯ ...ತಂದೆ ಪರೀಕ್ಷಿತನನ್ನು ತಕ್ಷಕನು ಕೊಂದದ್ದರಿಂದ ...ಯಾಗ ಮಾಡುವುದು ಇತ್ಯಾದಿ ಭಾರತದಲ್ಲಿ ...ಕವಾಗಿ ಹರಡಿದ್ದ ಪುರಾಣ ಮತ್ತು ಐತಿಹ್ಯಗಳಲ್ಲಿ ...ಗುವ ನಾಗರ ಬಗ್ಗೆಯ ಉಲ್ಲೇಖವನ್ನು ಗಮನಿಸಿದರೆ, ...ೀಯ ಸಂಸ್ಕೃತಿಯಲ್ಲಿ ನಾಗಾರಾಧನೆಯು ಇಷ್ಟು ...ಹೊಕ್ಕಾಗಿರುವುದು ಆಶ್ಚರ್ಯವೇನಲ್ಲ. ಜೊತೆಗೆ ...ಂದು ನಿತ್ಯ ಸಂಘರ್ಷ ಮತ್ತು ಜಯಾಪಜಯಗಳ ...ಷದಲ್ಲಿ ತೊಯ್ದಾಡುತ್ತಿದ್ದ ತನ್ನ ಅಸ್ತಿತ್ವಕ್ಕಾಗಿ ಹೋರಾಡು ...ಬಂದಿರುವ ಕುಲ ಅಥವಾ ಆ ನಾಗಲಾಂಛನವನ್ನು ...ದಿರುವ ಬುಡಕಟ್ಟು ಎಂದು ಅರ್ಥೈಸಿಕೊಳ್ಳಬಹುದು. ...ವದರೆ ನಾಗ ಬಣವು ಆರ್ಯರದಲ್ಲವೆಂದೂ ಇಲ್ಲಿಯ ...ಮ ಒಂದು ಬುಡಕಟ್ಟು ಅಥವಾ ಕಾಕತಾಳೀಯವಾಗಿ ...ಲಾಂಛನವನ್ನು ಹೊಂದಿದ್ದ ವಿವಿಧ ಪ್ರದೇಶಗಳಲ್ಲಿದ್ದ ... ಬುಡಕಟ್ಟುಗಳಿದ್ದಿರಬಹುದೆಂದೂ ತಿಳಿಯುತ್ತದೆ. ...ರಾಧನೆ ದಕ್ಷಿಣ ಭಾರತದಲ್ಲಿ ಅತಿಹೆಚ್ಚು ವ್ಯಾಪಕವಾಗಿರು ...ನ್ನು ಗಮನಿಸಿದರೆ ಅದು ದ್ರಾವಿಡ ಸಂಸ್ಕೃತಿಯದೇ ... ಸಾಧ್ಯವಿದೆ.

...ಲ್ಲರು ಯಾದವರು ಒಂದೇ ಅಲ್ಲ

...ರಲಿ, ಕೃಷ್ಣನೆಂಬ ಕರಿಯ ಬಣದವ, ಕಾಳೀಯನೆಂಬ ...ಂದು ಕರಿಯ ಬಣದವರೊಂದಿಗೆ ಹೋರಾಟಕ್ಕಿಳಿಯು ... ಸ್ಥಳೀಯ ಬಣಗಳು ತಮ್ಮತಮ್ಮಲ್ಲಿ ಸಂಘರ್ಷಗಳನ್ನು ...ದಿದ್ದವು ಎಂಬುದು ಸ್ಪಷ್ಟವಾಗುತ್ತದೆ. ಜೊತೆಗೆ ಎಲ್ಲಾ ...ಬಣದವರು ಒಂದೇ ನಾಗಕುಲದವರೂ ಆಗಿರಲಿಕ್ಕಿಲ್ಲ ...ತೆ, ಗೊಲ್ಲರೆಲ್ಲರೂ ಕೃಷ್ಣನ ಯಾದವ ಕುಲದೊಡನೆ ...ರಿಸಿಕೊಳ್ಳುವಷ್ಟೇನಿಲ್ಲ. ಕರ್ನಾಟಕದ ಗೊಲ್ಲರೂ ...ರು ಯಾದವ ಎಂಬ ಹೆಸರನ್ನು ತಮ್ಮ ಜೊತೆಗೆ ... ಹಾಕಿಕೊಳ್ಳುತ್ತಾರೆ. ಆದರೆ ಅವರು ನಂದಗೋಕುಲದ ... ಕುಲದ ಯಾದವರೇನಲ್ಲ, ಕರ್ನಾಟಕದ ಗೊಲ್ಲರಿಗೆ ...ಮೇ ಕುಲಹಿನ್ನೆಲೆ ಇದೆ ಎಂದು ಕನ್ನಡ ವಿಶ್ವವಿದ್ಯಾಲ... ಬುಡಕಟ್ಟು ಅಧ್ಯಯನದ ಡಾ. ಎ.ಎಸ್.ಪ್ರಭಾಕರ್ ...ಸ್ಥೆ ತಂದರು. ಮೈಸೂರು ಭಾಗದಲ್ಲಿರುವ ನಮ್ಮ ...ಗೊಲ್ಲರು ಆವೆಗಳನ್ನು ಕೂಡ ಪಳಗಿಸುತ್ತಾರೆ. ಅದನ್ನು ... ವೃತ್ತಿಯನ್ನಾಗಿಸಿಕೊಂಡಿದ್ದಾರೆ ಕೂಡ. ಯಾವುದು ...ಜನಪ್ರಿಯವೂ, ಜನಾಕರ್ಷಣೆಯೂ ಆಗಿರುವುದೋ ...ದೊಂದಿಗೆ ಸಮೀಕರಿಸಿಕೊಂಡುಬಿಡುವುದು ಒಂದು ...ಯ ಫ್ಯಾಷನ್.

...ಉತ್ತರಭಾರತದಲ್ಲಿ ಮತ್ತು ದಕ್ಷಿಣಭಾರತದಲ್ಲಿ ...ಯು ಏಕಪ್ರಕಾರವಾಗಿ ವಿಕಸಿತವೇನಾಗಿರಲಿಲ್ಲ ಮತ್ತು ...ಂತೆ ಯಾವುವೂ ಒಂದು ಸೀಮಿತ ಎಲ್ಲೆಯ ವ್ಯಾಪ್ತಿಗೆ ...ತ್ತರಲೂ ಇಲ್ಲ, ಉತ್ತರದ ಭಾಗದಲ್ಲಿ ಮೌರ್ಯರ ... ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ದಕ್ಷಿಣದಲ್ಲಿ ವಿಂಧ್ಯದಿಂದಿ ...ಇನ್ನೂ ಬೃಹತ್ ಶಿಲಾಯುಗ ಸಂಸ್ಕೃತಿಯೇ ಇತ್ತು. ...ಮೇ ಎಲ್ಲಾ ಕರಿಯ ನಾಯಕರೂ ಒಂದೇ ಕೃಷ್ಣನೇನಲ್ಲ, ... ಕೊಂದ ಕೃಷ್ಣನೇ ಒಬ್ಬನಾದರೆ, ಕಾಳೀಯನನ್ನು ...ಸಿದ ಕೃಷ್ಣನೇ ಬೇರಿದ್ದಿರಬಹುದು. ಇನ್ನು ಗೀತೆಯನ್ನು ...ಸಿದ ಕೃಷ್ಣನು ಮತ್ತೊಬ್ಬನಿರಬಹುದು.

...ನ್ನು ಈಗಿರುವ ಭಗವದ್ಗೀತೆಯಂತೂ ಪಂಡಿತ ಮೂಲ ಸ್ವರೂಪದಲ್ಲಿರುವುದೇನಲ್ಲ, ಅದೋ ಕಾಲದಿಂದ ಕಾಲಕ್ಕೆ ಅನೇಕ ಮಾರ್ಪಾಡುಗಳೊಂದಿಗೆ ಬದಲಾಗುತ್ತಲೇ ಬಂದಿದೆ. ಒಂದು ಮಹಾಕಾವ್ಯದಲ್ಲಿರುವ ಒಂದು ಸಣ್ಣ ಭಾಗವನ್ನು ಹಿಂದೂ ಧರ್ಮದ ಪವಿತ್ರಗ್ರಂಥವೆಂದು ಬಿಂಬಿಸುವುದು ಮೂರ್ಖತನದ ಪರಮಾವಧಿ. ಅದೋ ವೈರುಧ್ಯಗಳ ಒಂದು ಸಂಕೀರ್ಣ. ಬುದ್ಧನ ನಂತರದ ಕಾಲದಲ್ಲಿ ಅದಕ್ಕೆ ಬೌದ್ಧ ಸಿದ್ಧಾಂತದ ವಿಷಯಗಳನ್ನೂ ಸೇರಿಸಲಾಯಿತು. ಹಾಗಾಗಿ ವೈದಿಕ, ಅವೈದಿಕ ಮತ್ತು ಇನ್ನಿತರ ವಿಷಯಗಳಿಂದ ಸಂಕೀರ್ಣಗೊಂಡಿದೆ. ಭಗವದ್ಗೀತೆಯನ್ನು ತಮ್ಮ ಧೋರಣೆಗೆ ತಕ್ಕಂತೆ ಅರ್ಥೈಸಲಿಕ್ಕೂ ಇದೇ ಕಾರಣವಾಗಿರುವುದು.

ಗೀತಾದರ್ಶನ

ಅರ್ಜುನನ ವಿಷಾದಯೋಗದಲ್ಲಿ ನಾಟಕೀಯವಾಗಿ ಆರಂಭವಾಗುವ ಗೀತೆ ವಿಶ್ವರೂಪ ದರ್ಶನ ಎಂಬುವುದರಲ್ಲಿ ನಾಟಕೀಯತೆಯ ಉತ್ಪ್ರೇಕ್ಷೆ ತಾರಕಕ್ಕೇರುವುದು. ಏನೇ ಆದರೂ ನಾನಾಬಗೆಯ ಮಾನಸಿಕ ಸ್ಥಿತಿಗಳನ್ನು ಹೊಂದಿರುವ ನಾನಾ ವ್ಯಕ್ತಿಗಳಿಗೆ ನಾನಾಬಗೆಯಲ್ಲಿ ಈ ಗೀತೆಯು ಸಂವಾದಿಸುವುದು. ಅದೇ ಇದರ ಗುಣಲಕ್ಷಣ.

ಕರ್ಮಣ್ಯೇವ ಅಧಿಕಾರಸ್ತೇ ಮಾಫಲೇಷು ಕದಾಚನ





ನಿನ್ನ ಕರ್ಮವನ್ನು ನೀನು ಮಾಡು ಫಲಾಪೇಕ್ಷೆಯನ್ನು ಹೊಂದಬೇಡ ಎಂಬುದನ್ನು ಯಾರಿಗೆ ಹೇಳುವಿರಿ? ಒಬ್ಬ ಶ್ರಮಿಕನು, ಕೂಲಿ ಕಾರ್ಮಿಕನು, ಯಾರೋ ಒಬ್ಬ ನೌಕರನು ಮಾಡಿದ ಕೆಲಸ ಮಾಡಿದ ಮೇಲೆ ನೀನು ಕೆಲಸ ಮಾಡುವುದು ನಿನ್ನ ಕರ್ತವ್ಯ, ನಿನ್ನ ಶ್ರಮಕ್ಕೆ ತಕ್ಕ ಫಲ ಕೇಳಬೇಡ ಎಂದು ಹೇಳಲು ಸಾಧ್ಯವೇ? ಊಳಿಗಮಾನ್ಯ ಪದ್ಧತಿಯಲ್ಲಿ ಇದಾಗಬಹುದು.

ಅದೇ ಒಬ್ಬನು ವ್ಯಕ್ತಿಗತವಾಗಿ, ವೈರಾಗ್ಯದಿಂದಲೋ ಅಥವಾ ಹತಾಶೆಯಿಂದಲೋ ತನಗೆ ತಾನು ಹೇಳಿಕೊಳ್ಳಲು ಸಾಧ್ಯವಿದೆ. ಈಗಲೂ ನಾನು ಕೆಲಸ ಮಾಡುವುದಷ್ಟೇ ನಮ್ಮ ಕೆಲಸ ಫಲಾಫಲ ದೇವರಿಗೆ ಬಿಟ್ಟದ್ದು ಎಂದು ಹತಾಶೆಯ ಹಂತಕ್ಕೆ ಹೋದ ಮಾತುಗಳಲ್ಲಿ ಕೇಳುತ್ತೇವೆ.

ಈ ರೀತಿಯಾಗಿ ಭಗವದ್ಗೀತೆಯೆಂದು ಈ ಪವಿತ್ರ ಗ್ರಂಥವನ್ನು ಯಾರಿಗೆಂದು, ಯಾವ ವರ್ಗದವರಿಗೆಂದು ಸ್ವೀಕರಿಸುವುದೋ ಅರ್ಥವೇ ಆಗುವುದಿಲ್ಲ. ಚಾತುರ್ವರ್ಣವನ್ನು ಪ್ರತಿಪಾದಿಸುತ್ತಾ, ಪುರೋಹಿತ ವರ್ಗವನ್ನು ಪ್ರತಿನಿಧಿಸುತ್ತಾ, ಹೀರೋ ವರ್ಷಿಪ್‌ಗೆ ಸಾಕಷ್ಟು ಇಂಬುಕೊಡುತ್ತಾ, ಹತಾಶೆಯಿಂದ ಹುಟ್ಟಿದ ವೈರಾಗ್ಯದಿಂದ ರೊಚ್ಚಿಗೆದ್ದು ಯುದ್ಧ ಮಾಡು, ಉಳಿದಿದ್ದೆಲ್ಲಾ ನಾನು ನೋಡಿಕೊಳ್ಳೀನಿ, ನಿನಗೇನೂ ಆ ರಕ್ತಪಾತದ ಪಾಪ ತಟ್ಟದು, ಅದೆಲ್ಲವನ್ನೂ ನನ್ನ ಪಾಲಿಗೆ ಬಿಟ್ಟುಬಿಡು ಎನ್ನುವಂತೆ ಸುಂದರವಾಗಿ ಕೆಣಕುವ, ತಿಣುಕುವ ಈ ಗ್ರಂಥವನ್ನು ಅದರಲ್ಲಿರುವ ದ್ವಂದ್ವಗಳನ್ನು ಗಮನಿಸದೇ, ವಿಶ್ಲೇಷಿಸದೇ ಭಯಭಕ್ತಿಯಿಂದ ಪಾರಾಯಣ ಮಾಡುತ್ತಾರೆ. ಗುಲಾಮಗಿರಿಗೆ ಪ್ರೀತಿಯಿಂದ ಒಪ್ಪಿಸುವ ಸುಲಭ ಮಾರ್ಗವೇ ಇದಾಗಿ ನನಗೆ ಕಾಣುತ್ತದೆ.

ತಮ್ಮ ಸಿದ್ಧಾಂತಗಳ ಮತ್ತು ಪಂಥಗಳ ರೀತಿಯಲ್ಲಿ ಭಾಷ್ಯಗಳನ್ನು ಬರೆದ ಶಂಕರ, ರಾಮಾನುಜ, ಜ್ಞಾನೇಶ್ವರರ ಗೀತೆಯನ್ನು ವ್ಯಾಖ್ಯಾನ ಮಾಡಿದ ಗಾಂಧಿ, ತಿಲಕ ಮತ್ತು ವಿವೇಕಾನಂದರ ದೃಷ್ಟಿಗಳಲ್ಲೇ ಭೇದವಿದೆ. ಅರವಿಂದರು ಈ ಗೀತೆಯನ್ನು ಅಧ್ಯಯನ ಮಾಡಲು ಸ್ವಾತಂತ್ರ್ಯ ಸಂಗ್ರಾಮದಿಂದ ಹಿಂದಕ್ಕೆ ಸರಿದರು. ಡಿ.ಡಿ.ಕೋಸಾಂಬಿ ಮತ್ತು ಬಾಬಾಸಾಹೇಬ್ ಅಂಬೇಡ್ಕರ್ ಹಾಗೂ ಇತರ ವಸ್ತುನಿಷ್ಠ ವಿದ್ವಾಂಸರು ಮಾಡಿರುವ ಅಧ್ಯಯನಗಳಲ್ಲಿ ನಿಷ್ಠುರತೆ ಇದೆ. ಈಗ ನಮ್ಮ ಸಮಕಾಲೀನ ಚಿಂತಕರು ಭಗವದ್ಗೀತೆಯ ಮೇಲೆ ಏನೇ ಹೇಳಿದರೂ ಧರ್ಮದ್ರೋಹಿ, ರಾಷ್ಟ್ರದ್ರೋಹಿಗಳಾಗಬೇಕಾಗುತ್ತದೆ. ಏಕೆಂದರೆ ಭಾರತವೆಂದರೆ ಹಿಂದೂ ರಾಷ್ಟ್ರ ಹಾಗೂ ಭಗವದ್ಗೀತೆ ಎಂಬುದು ಹಿಂದೂಗಳ ಪವಿತ್ರಗ್ರಂಥವಂತೆ. ಈ ಭರಾಟೆಯಲ್ಲಿ ಒಂದು ವಿಷಯವನ್ನೇ ಮರೆಯುತ್ತಾರೆ. ಅದೇನೆಂದರೆ, ಪರಕೀಯರೇ ಪರಸ್ಥಳದ ಮೇಲೆ ತಮ್ಮ ಸ್ವಾಮಿತ್ವ ಸಾಧಿಸಲು ಆಗ್ರಹದಿಂದ ತಮ್ಮದು ತಮ್ಮದು ಎಂದು ಹೇಳುವುದು.

ಇರಲಿ, ವಿಷಯ ಅದಲ್ಲ.

ಕುರುಕ್ಷೇತ್ರ ಯುದ್ಧ

ಸೊನ್ನೆಗಳನ್ನು ಬೇಕಾಬಿಟ್ಟಿಯಾಗಿ ಬಳಸುವ ಉತ್ಪ್ರೇಕ್ಷಕರಿಗೆ ಡಿ.ಡಿ.ಕೋಸಾಂಬಿ ಒಂದು ವಿಚಾರವನ್ನು ಮಂಡಿಸುತ್ತಾರೆ.

ಅದು ಕುರುಕ್ಷೇತ್ರ ಯುದ್ಧದ ಬಗ್ಗೆ

ನಿಜವಾಗಿಯೂ ವರದಿಯಾಗಿರುವ ಪ್ರಮಾಣದಲ್ಲಿ ಮಹಾಭಾರತದ ಯುದ್ಧ ನಡೆದಿದ್ದೇ ಆಗಿದ್ದಲ್ಲಿ, ದೆಹಲಿ ಮತು ಥಾನೇಶ್ವರದ ನಡುವೆ 18 ದಿನಗಳ ಕಾಲ ನಡೆದ ಈ ಯುದ್ಧದಲ್ಲಿ ಸುಮಾರು 5 ಮಿಲಿಯನ್ ಜನ ಮರಣ ಹೊಂದಿರಬೇಕು. ಸುಮಾರು 1,30,000 ರಥಗಳು (ಜೊತೆಗೆ ಅವುಗಳ ಕುದುರೆಗಳು), ಅಷ್ಟೇ ಸಂಖ್ಯೆಯ ಆನೆಗಳು ಮತ್ತು ಅದರ ಮೂರರಷ್ಟು ಅಶ್ವದಳವು ಯುದ್ಧದಲ್ಲಿ ಪಾಲ್ಗೊಂಡಿರಬೇಕು ಮತ್ತು ಅಷ್ಟೇ ಸಂಖ್ಯೆಯಲ್ಲಿ ದಂಡನಾಯಕರೂ ಮತ್ತು ಯೋಧರು ಕೂಡ ಆ ಯುದ್ಧದಲ್ಲಿ ಪಾಲ್ಗೊಂಡಿರಬೇಕು. ಈ ಪ್ರಮಾಣದ ಸೈನ್ಯವನ್ನು ಕಲೆ ಹಾಕಬೇಕಾದರೆ ಒಟ್ಟು ಜನಸಂಖ್ಯೆ 200 ಮಿಲಿಯನ್ ಆದರೂ ಇದ್ದಿರಬೇಕು. ಆದರೆ ಬ್ರಿಟಿಷರು ಬರುವುದಕ್ಕೆ ಮೊದಲು ಭಾರತದಲ್ಲಿ ಈ ಪ್ರಮಾಣದ ಜನಸಂಖ್ಯೆ ಇರಲಿಲ್ಲ. ಈ ಪ್ರಮಾಣದ ಜನಸಂಖ್ಯೆ ಸಾಧ್ಯವಾಗಬೇಕಾದರೆ, ನೇಗಿಲು ಮತ್ತು ಇತರ ಕೃಷಿ ಸಲಕರಣೆಗಳ ತಯಾರಿಕೆಗೆ ಬೇಕಾದ ಕಬ್ಬಿಣ ಮತ್ತು ಉಕ್ಕು ಅಗ್ಗದ ದರದಲ್ಲಿ ಹೇರಳವಾಗಿ ದೊರೆಯಬೇಕು. ಕ್ರಿ.ಪೂ. 6ನೇ ಶತಮಾನಕ್ಕೆ ಮುಂಚೆ ಭಾರತದ ರೈತರಿಗೆ ಕಬ್ಬಿಣವೇ ಸಿಗುತ್ತಿರಲಿಲ್ಲ. ನಂಬಲರ್ಹವಾದ ವರದಿಯ ಪ್ರಕಾರ ಚಂದ್ರಗುಪ್ತ ಮೌರ್ಯನ ಕಾಲದ 4 ಲಕ್ಷ ಯೋಧರ ಸೈನ್ಯವೇ ಆ ಕಾಲದ ಅತಿದೊಡ್ಡ ಸೈನ್ಯವಾಗಿತ್ತು!!

ಚಂದ್ರಗುಪ್ತ ಮೌರ್ಯನು ಆಗಷ್ಟೇ ಅಭಿವೃದ್ಧಿಗೊಳ್ಳುತ್ತಿದ್ದ ಗಂಗಾ ಕಣಿವೆಯಲ್ಲಿ ಆಗುತ್ತಿದ್ದ ಎಲ್ಲಾ ಹೆಚ್ಚುವರಿ ಉತ್ಪಾದನೆಗೂ ಒಡೆಯನಾಗಿದ್ದ.

ಮಹಾಭಾರತದಲ್ಲಿ ಪಟ್ಟಿ, ಗುಲ್ಮ ಮುಂತಾದ ಪದಗಳನ್ನು ಯುದ್ಧತಂತ್ರದ ಘಟಕಗಳ ಸೂಚಿಯಾಗಿ ಬಳಸಲಾಗಿದೆ ನಿಜ. ಆದರೆ ಮೌರ್ಯರ ನಂತರದ ಕಾಲದವರೆಗೂ ಆ ಪದಗಳನ್ನು ಈ ಅರ್ಥದಲ್ಲಿ ಬಳಸುತ್ತಿರಲಿಲ್ಲ, ಆ ಮಹಾಕಾವ್ಯದ ನಾಯಕರು ಬಿಲ್ಲು ಬಾಣಗಳನ್ನು ಹಿಡಿದು ರಥಗಳಲ್ಲಿ ನಿಂತು ಯುದ್ಧ ಮಾಡುವುದನ್ನು ನೋಡಿದರೆ, ಮಹಾಕಾವ್ಯದ ಕಾಲದಲ್ಲಿ ಸಾಕಷ್ಟು ಅಶ್ವದಳ ಇರಲಿಲ್ಲ ಎನಿಸುತ್ತದೆ. ಅಶ್ವದಳದ ಬಳಕೆ ಭಾರತದಲ್ಲಿ ಸಾಕಷ್ಟು ತಡವಾಗಿ ಪ್ರಾರಂಭವಾಯಿತು. ಆದರೆ ಪ್ರಾಚೀನ ಭಾರತದ ಯುದ್ಧಗಳಲ್ಲಿ ಅಶ್ವದಳದ ಬಳಕೆ ವ್ಯಾಪಕವಾದಂತೆ ರಥವನ್ನು ಬಳಸುವ ರೂಢಿ ತಪ್ಪಿಹೋಯಿತು. ಅಲೆಗ್ಸಾಂಡರನು ಪಂಜಾಬಿನ ಮೇಲೆ ದಾಳಿ ಮಾಡಿದ ಸಂದರ್ಭವನ್ನು ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ.

ಗೀತೆ ಯಾರಿಗೆ ಬೇಕು?

ಇರಲಿ, ಗೀತೆಯೆಂಬುದು ಜನಸಾಮಾನ್ಯರದ್ದಾಗಿರಲಿಲ್ಲ, ಆಳುವ ವರ್ಗದವರ ಕೃಪಾಪೋಷಣೆಯಲ್ಲಿ ಬದುಕುತ್ತಿದ್ದ ಪುರೋಹಿತರ ಅಧೀನದಲ್ಲಿತ್ತು. ಅವರೇ ಇದನ್ನು ಪಠಿಸುತ್ತಿದ್ದವರು ಮತ್ತು ಅರ್ಥ ಹೇಳುತ್ತಿದ್ದವರು. ಜನಸಾಮಾನ್ಯರಿಗೆ ಆಗ ಇದು ತುಂಬಾ ಉನ್ನತವಾದ ಮತ್ತು ತಮಗೆ ನಿಲುಕದಂತಹ ವಿಷಯವೇ ಆಗಿತ್ತು, ಆಳುವವರ್ಗ, ಬಂಡವಾಳಶಾಹಿ ಮತ್ತು ಪುರೋಹಿತಶಾಹಿ ಒಟ್ಟುಗೂಡಿ ಆರಾಧಿಸುತ್ತಿದ್ದ ಗ್ರಂಥ ಈ ಗೀತೆಯಾಗಿದ್ದು, ಈಗಲೂ, ಜನಸಾಮಾನ್ಯರನ್ನು ತಲುಪಿದ ಮೇಲೂ, ಅದು ಯದ್ವಾತದ್ವ ಅರ್ಥೈಸುವಿಕೆ ಒಳಗಾಗುತ್ತಿದ್ದು, ಇದು ಸಾಕ್ಷಾತ್ ಭಗವಂತನದಾದ್ದರಿಂದ ಚಕಾರವಿಲ್ಲದೇ ಒಪ್ಪಿಕೊಳ್ಳುವ ಮುಗ್ಧ ಮತ್ತು ಮೂಢ ಜನರಿದ್ದು, ತಮ್ಮ ತಮ್ಮ ಧೋರಣೆಗಳಿಗೆ, ಸ್ವಭಾವ ಮತ್ತು ಕಾರ್ಯಕ್ಷೇತ್ರಗಳಿಗೆ ಒಗ್ಗುವಂತಹ ಶ್ಲೋಕಗಳನ್ನು ಉದ್ಧರಿಸಿಕೊಂಡಿರುತ್ತಾರೆ. ಒಂದು ಅಧ್ಯಾಯದಿಂದ ಮತ್ತೊಂದು ಅಧ್ಯಾಯಕ್ಕೆ ಅಥವಾ ಒಂದು ವಿಷಯದಿಂದ ಮತ್ತೊಂದು ವಿಷಯಕ್ಕೆ ಯಾವುದೇ ವಿಕಾಸಯುಕ್ತವಾದ, ವೈಚಾರಿಕವಾದ ಪ್ರಯಾಣವಿರದೇ, ಇನ್ನೂ ವಿರೋಧಾಭಾಸಗಳಿಂದಲೇ ಕೂಡಿದೆ.

ಈ ಭಗವದ್ಗೀತೆಯನ್ನು ಮೊದಲಿನಿಂದಲೂ ಓದಿಕೊಂಡು ಬಂದ ನಾನು ಅನೇಕಬಾರಿ ದ್ವಂದ್ವ ಹುಟ್ಟುಹಾಕುವಂತಹ ವಿಚಾರಗಳನ್ನು ನೋಡುತ್ತಾ ಅಚ್ಚರಿಪಡುತ್ತಿದ್ದೆ, ಆಮೇಲೆ ಸಮಯ ಸಂದರ್ಭಕ್ಕೆ ತಕ್ಕಂತೆ ಜರಡಿಯಾಡಿಕೊಂಡು ಬೇಕಾದ ಕಾಳುಗಳನ್ನು ಹೆಕ್ಕಿಕೊಂಡು ಉಪಯೋಗಿಸಿಕೊಳ್ಳುತ್ತಿದ್ದೆ. ಯಾವುದೇ ಪೂರ್ವಾಗ್ರಹವಿಲ್ಲದೇ ಬಾಬಾ ಸಾಹೇಬ್ ಅಂಬೇಡ್ಕರ್‌ರವರ ಚಿಂತನೆಯನ್ನು ಗಮನಿಸಬೇಕು. ಅವರು ಗೀತೆಯ ಮೇಲೆ ವ್ಯಾಖ್ಯಾನ ಮಾಡಿರುವ ಅನೇಕ ಪಂಡಿತರನ್ನು ಗಮನಿಸುತ್ತಾ, ಅವರ ವಿಚಾರಗಳನ್ನು ಉಲ್ಲೇಖಿಸುತ್ತಾ ತಮ್ಮ ಗ್ರಹಿಕೆಯನ್ನು ಪ್ರಸ್ತುತ ಪಡಿಸುತ್ತಾರೆ.

"ಭಗವದ್ಗೀತೆಯ ಬೋಧಿಸುವ ಸಂದೇಶ ಏನು ಎಂಬುದರ ಬಗ್ಗೆ ವೈವಿಧ್ಯಮಯವಾದ ಅಭಿಪ್ರಾಯ ಕಾಣುವುದು ದೊಡ್ಡ ಆಶ್ಚರ್ಯದ ಸಂಗತಿಯೇನಲ್ಲ. ವಿದ್ವಾಂಸರು ದಾರಿ ತಪ್ಪಿದ್ದಾರೆಂದೇ ಇದಕ್ಕೆ ನನ್ನ ಉತ್ತರ. ಖುರಾನ್, ಬೈಬಲ್, ಧಮ್ಮಪದದ ಹಾಗೆ ಗೀತೆಯೂ ಒಂದು ಸಂದೇಶವನ್ನು ಕೊಡುತ್ತದೆ ಎಂಬ ಭಾವನೆಯಿಂದ ಅವರು ಹೊರಟಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಈ ಭಾವನೆ ಸಂಪೂರ್ಣವಾಗಿ ತಪ್ಪು ಭಾವನೆಯಾಗಿದೆ. ಭಗವದ್ಗೀತೆ ದೇವವಾಣಿಯಲ್ಲ, ಆದ್ದರಿಂದ ಯಾವ ಸಂದೇಶವನ್ನೂ ಅದು ಕೊಡಲಾರದು. ಅದನ್ನು ಹುಡುಕುವುದು ವ್ಯರ್ಥ. ಭಗವದ್ಗೀತೆ ಧರ್ಮಗ್ರಂಥವೂ ಅಲ್ಲ, ದರ್ಶನ ಗ್ರಂಥವೂ ಅಲ್ಲ ಎಂಬುದೇ ನನ್ನ ಉತ್ತರ. ತಾತ್ವಿಕ ನೆಲೆಗಟ್ಟಿನ ಮೇಲೆ ಕೆಲವು ಧಾರ್ಮಿಕ ನಂಬಿಕೆಗಳನ್ನು ಸಮರ್ಥಿಸುವುದೇ ಭಗವದ್ಗೀತೆಯ ಉದ್ದೇಶ. ಧರ್ಮವನ್ನು ಸಮರ್ಥಿಸಲು ತತ್ವಜ್ಞಾನವನ್ನು ಬಳಸುತ್ತದೆ."

ಜಿಜ್ಞಾಸುವಾಗಿ ಭಗವದ್ಗೀತೆಯನ್ನು ಓದಿದವನಿಗೆ ಇದು ಅರ್ಥವಾಗುತ್ತದೆ ಕೂಡ. ■

ಹೊಗಳಿಕೆ ತೆಗಳಿಕೆ

ಹಿಂದೂಗಳಿಂದಲೇ ಅವರ ಧರ್ಮಕ್ಕೆ ಡ್ಯಾಮೇಜ್

ಕೆಕ್ಕಾರಿನ ಸ್ವಾಮೀಜಿ ಶ್ರೀರಾಮ ದೇವರ ಹೆಸರು ದುರುಪಯೋಗ ಮಾಡಿ ಮಹಿಳೆಯನ್ನು ಮೋಸದಿಂದ ಭೋಗಿಸಿದ್ದು ಹಿಂದೂ ಸಂಘಟನೆಯವರಿಗೆ ತಪ್ಪಾಗಿ ಕಾಣಿಸಲಿಲ್ಲ. ಆದರೆ ಗಣೇಶನ ಹುಟ್ಟು ಮತ್ತು ಆತನ ಶಿರಚ್ಛೇದನದ ಬಗ್ಗೆ ಕೆಲವು ಪ್ರಶ್ನೆಗಳನ್ನು ಬಾಲಿವುಡ್ ನಿರ್ದೇಶಕ ರಾಮ್ ಗೋಪಾಲ್ ವರ್ಮಾ ಟ್ವೀಟ್ ಮಾಡಿದ್ದು ಹಿಂದೂ ಸಂಘಟನೆಯವರಿಗೆ ಭಾರೀ ಧರ್ಮದ್ರೋಹವಾಗಿ ಕಾಣಿಸಿದ್ದು ಆಶ್ಚರ್ಯ.

ವರ್ಮಾ ಮುಗ್ಧವಾಗಿ ಕೇಳಿದ ಪ್ರಶ್ನೆಗಳಾದರೂ ಯಾವುವು ನೋಡಿ - ತನ್ನ ತಲೆಯನ್ನೇ ರಕ್ಷಿಸಿಕೊಳ್ಳದ ಗಣೇಶ ಇತರರ ತಲೆ ಕಾಯುವನೆ? ಚತುರ್ಥಿಯು ಗಣೇಶನ ಹುಟ್ಟಿದ ದಿನವೋ ಅಥವಾ ಆತನಿಗೆ ಆನೆ ತಲೆ ಜೋಡಿಸಿ ಪುನರ್ಜೀವಗೊಳಿಸಿದ ದಿನವೋ? ಯಾವ ತಂದೆಯಾದರೂ ತನ್ನ ತಾಯಿಯ ಮಾನ ರಕ್ಷಣೆಗೆ ಪಣ ತೊಟ್ಟವನ ತಲೆ ಕಡಿಯುವನೆ? ಗಣೇಶ ತಿನ್ನುವುದು ಸೊಂಡಿಲಿನಿಂದಲೋ ಅಥವಾ ಕೈಯಿಂದಲೋ? ಆತನಿಗೆ ಬೊಜ್ಜು ಬಂದದ್ದು ಆನೆ ತಲೆ ಕಸಿ ಮಾಡಿದ ಪರಿಣಾಮವೋ ಅಥವಾ ಅದಕ್ಕೂ ಮೊದಲೇ ಇತ್ತೋ? ಇತರ ದೇವರು ಟ್ರಿಮ್ ಮತ್ತು ಮಸ್ಕ್ಯೂಲರ್ ಇದ್ದರೆ ಗಣೇಶ ಏಕೆ ಡೊಣಪನಾಗಿದ್ದಾನೆ? ಗಣೇಶ ಇತರ ದೇವರಿಗಿಂತ ಹೆಚ್ಚು ತಿನ್ನುತ್ತಾನೆಯೇ? ಮಹಾರಾಷ್ಟ್ರದಲ್ಲಿ ಕಾರ್ತಿಕೇಯ ದೇವರೆನಿಸಿಕೊಳ್ಳಲಿಲ್ಲ ಆದರೆ ಗಣೇಶ ಅದ್ಯಾವ ಘನ ಕೆಲಸ ಮಾಡಿ ಮರಾಠಿಗರಿಗೆ ಇಷ್ಟು ದೊಡ್ಡ ದೇವರೆನಿಸಿಕೊಂಡ? ತಾಯಿಯ ಮೈಕೊಳೆಯಿಂದ ಮಾಡಲ್ಪಟ್ಟ ಗಣೇಶನ ಮೈವಾಸನೆ ಹೇಗಿರಬಹುದು? ಗಣಪತಿಯನ್ನು ಪೂಜೆ ಮಾಡುವಾಗ ಅವನನ್ನು ದೊಡ್ಡ ಹೊಟ್ಟೆಯವ, ಡೊಣಪ, ಕಪ್ಪು ವರ್ಣದವ, ಸೊಟ್ಟ ಮುಖದವ, ಬೀಸಣಿಗೆ ಕಿವಿಯವ, ಹಲ್ಲು ಮುರುಕ, ಆನೆಯ ಕಣ್ಣುಳ್ಳವ, ತಿಂಡಿಪೋತ (ಲಂಬೋದರ, ಮಹಾಕಾಯ, ಶ್ಯಾಮಲವರ್ಣ, ವಕ್ರತುಂಡ, ಚಾಮರ ಕರ್ಣ, ಏಕದಂತ, ಕರಿನೇತ್ರ, ಮೋದಕಪ್ರಿಯ) ಎಂದೆಲ್ಲಾ ಸಂಸ್ಕೃತದಲ್ಲಿ ಹೀಯಾಳಿಸುವುದು ಸರಿಯೇ? ಹೀಗೆ ರಾಮ್ ಗೋಪಾಲ್ ವರ್ಮ ಸರಣಿ ಟ್ವೀಟ್ ಮಾಡಿದ್ದರು. ಈ ಬಗ್ಗೆ ತನಗೆ ತಿಳಿವಿನ ಕೊರತೆಯಿದ್ದು ತಮ್ಮ ಪ್ರಶ್ನೆಗಳಿಗೆ ಉತ್ತರಿಸುವಂತೆ ತಜ್ಞರನ್ನು ಕೋರಿದ್ದರು. ಮೂಲದಲ್ಲಿ ವರ್ಮಾನ ಟ್ವೀಟ್‌ಅನ್ನು ಹೆಚ್ಚೆಂದರೆ ಒಂದು ಸಾವಿರ ಜನರು ಓದಿರಬಹುದು ಅಷ್ಟೇ (ನಾನೂ ಓದಿರಲಿಲ್ಲ). ಆದರೆ ಗೋವೆಯ ಹಿಂದೂ ಸಂಘಟನೆಯವರು ಪೊಲೀಸರಿಗೆ ದೂರುಕೊಟ್ಟ ಮೇಲೆ ಆ ಸುದ್ದಿ ಭಾರತದ ಎಲ್ಲ ಪತ್ರಿಕೆಗಳಲ್ಲಿ ಪ್ರಕಟವಾಗಿ ಕಡೆ ಪಕ್ಷ ಹತ್ತು ಕೋಟಿ ಜನರಿಗಾದರೂ ಈ ವಿಷಯ ಗೊತ್ತಾಗಿ ವರ್ಮಾನ ಪ್ರಶ್ನೆಗಳ ಬಗ್ಗೆ ಕೋಟ್ಯಾಂತರ ಜನರು ಆಲೋಚಿಸುವಂತೆ ಮಾಡಿದೆ. ಪೊಲೀಸರಿಗೆ ದೂರು ಕೊಡದೇ ಇದ್ದಿದ್ದರೆ ಕೇವಲ ಒಂದು ಸಾವಿರ ಜನ ಮೂಲ ಟ್ವೀಟ್ ಓದಿ ಮರೆತು ಬಿಡುತ್ತಿದ್ದರು. ಹಾಗಾಗಿ ಈಗ ಹಿಂದೂಗಳ ಭಾವನೆ ರಕ್ಷಿಸುವ ಭರದಲ್ಲಿ ಗೋವೆಯ ದೂರುದಾರರು ಹಿಂದೂ ಧರ್ಮಕ್ಕೆ ಅತಿ ದೊಡ್ಡ ಡ್ಯಾಮೇಜ್ ಮಾಡಿದ್ದಾರೆ.

ನನ್ನ ತಮ್ಮ ಅಮೆರಿಕದಲ್ಲಿ ಕಲಿಯುತ್ತಿದ್ದಾಗ ಅವನ ನೆರೆ-ಹೊರೆಯವರಲ್ಲಿ ಹಿಂದೂ ಧರ್ಮದ ಬಗ್ಗೆ ಆಸಕ್ತಿ ಹುಟ್ಟಲಿ ಎಂಬ ಘನ ಉದ್ದೇಶದಿಂದ ಅವನು ಅಲ್ಲಿಯ ಮಕ್ಕಳಿಗೆ ನಮ್ಮ ಪೌರಾಣಿಕ ಕಥೆ ಹೇಳುತ್ತಿದ್ದನಂತೆ. ಆದರೆ ವರ್ಮಾನಂತೆಯೇ ಅವರೂ ಮುಗ್ಧವಾಗಿ ಕೇಳುತ್ತಿದ್ದ ಮುಜುಗರ ಹುಟ್ಟಿಸುವ ಪ್ರಶ್ನೆಗಳಿಂದಾಗಿ ನನ್ನ ತಮ್ಮ ನಂತರ ಅಲ್ಲಿಯ ಮಕ್ಕಳಿಗೆ ನಮ್ಮ ಪೌರಾಣಿಕ ಕಥೆಗಳನ್ನು ಹೇಳುವುದನ್ನೇ ಬಿಟ್ಟನಂತೆ. ಯಾಕೆಂದರೆ ಅವರು ಕೇಳುತ್ತಿದ್ದ ಮುಗ್ಧ ಪ್ರಶ್ನೆಗಳು ಅಷ್ಟೊಂದು ತರ್ಕಬದ್ಧವಾಗಿ ಇರುತ್ತಿದ್ದವಂತೆ. ಭಸ್ಮಾಸುರ-ಮೋಹಿನಿ ಕಥೆಯಲ್ಲಿ ಕೊನೆಗೆ ಶಿವ ಮತ್ತು ಮೋಹಿನಿ ಒಂದಾಗುವ ಭಾಗ ಕೇಳಿದ ನಂತರ ಅಲ್ಲಿಯ ಹೆಂಗಸರು ಮುಜುಗರ ಪಟ್ಟುಕೊಂಡು ಹೇಳಿದರಂತೆ "ನಿಮ್ಮ ದೇವರೂ ಗ್ರೀಕ್-ಈಜಿಪ್ಷಿಯನ್ ದೇವರಂತೆಯೇ ವಿಕ್ಷಿಪ್ತ ರಸಿಕರು ಮತ್ತು ಅನೈಸರ್ಗಿಕ ವಾಂಛೆಯುಳ್ಳವರು" ಎಂದು.. ಅಮೆರಿಕನ್ನರಿಗೆ ಹಿಂದೂ ಧರ್ಮದಲ್ಲಿ ನಿಜವಾಗಿ ಆಸಕ್ತಿ ಇದ್ದರೂ ನಮ್ಮ ಪುರಾಣದ ಪಾತ್ರಗಳ ವಿಕ್ಷಿಪ್ತ ವರ್ತನೆಯ ತರ್ಕವಿಹೀನ ಕಥೆಗಳನ್ನು ಕೇಳಿದ ನಂತರ ಅವರ ಆಸಕ್ತಿಗೆ ತಣ್ಣೀರು ಎರಚಿದಂತೆ ಆಗುತ್ತದೆಯಂತೆ. ಭಾರತದಲ್ಲಿ ನಮ್ಮ ಮಕ್ಕಳೂ ಅಜ್ಜಿ ಹೇಳುವ ದೇವರ ಕಥೆಗಳ ಬಗ್ಗೆ ಇಂತಹದ್ದೇ ತರ್ಕಬದ್ಧ ಪ್ರಶ್ನೆ ಕೇಳುತ್ತವೆ. ಆದರೆ ನಮ್ಮ ಹಿರಿಯರು ಮಕ್ಕಳನ್ನು ಗದರಿಸಿ ಅವರ ಬಾಯಿ ಮುಚ್ಚಿಸಿ ಮಕ್ಕಳಲ್ಲಿ ಪಾಪಪ್ರಜ್ಞೆ ಹುಟ್ಟಿಸಿ, ದೇವರನ್ನು ಮೆಚ್ಚಿಸಿದ ಕೃತಾರ್ಥ ಭಾವನೆ ತಂದುಕೊಳ್ಳುತ್ತಾರೆ. ಆದರೆ ಇದರಿಂದ ಬೆಳೆಯುವ ಮಕ್ಕಳ ವಿಶ್ಲೇಷಣಾತ್ಮಕ ಪ್ರವೃತ್ತಿಗೆ ಅಪಾರ ಹಾನಿಯಾಗುವುದನ್ನು ಹಿರಿಯರು ಗಮನಿಸುವುದಿಲ್ಲ.

- ಅಭಿಷೇಕ್ ಎ ಪಡಿವಾಳ್, ಸುಳ್ಯ

ಕಾರ್ಪೊರೇಟ್ ಕಂಪನಿಗಳಿಗೆ ನೆರವಾಗುತ್ತಿರುವ ಬ್ಯಾಂಕ್ ಕಳ್ಳರು

ಪತ್ರಿಕೆಯ ಸೆಪ್ಟೆಂಬರ್ 24 ರ ಸಂಚಿಕೆಯಲ್ಲಿ ಬರೆದಿರುವಂತೆ ರಾಷ್ಟ್ರೀಕೃತ ಬ್ಯಾಂಕುಗಳ ಶತಭ್ರಷ್ಟ ಮೇಲಧಿಕಾರಿಗಳು 'ಮನೆಗೆ ಮಾರಿ ಪರರಿಗೆ ಉಪಕಾರಿ' ಎಂಬಂತೆ ತಮ್ಮ ಆಡಳಿತದ ಬ್ಯಾಂಕನ್ನು ಗುಡಿಸಿ ಗುಂಡಿಗೆ ಹಾಕಿ ಖಾಸಗಿ ಕಂಪನಿಗಳಿಗೆ ಕೋಟ್ಯಾಂತರ ಲಾಭ ಮಾಡಿಕೊಟ್ಟು ತಮ್ಮ ಜೇಬು ಸಹ ತುಂಬಿಕೊಳ್ಳುತ್ತಾರೆ. ಸಾಲ ಪುನರ್-ರಚನೆ ಅಥವಾ ಸಾಲ-ವಿಸ್ತರಣೆ (ಸಿಡಿಆರ್) ಎಂಬ ವಂಚನೆಯ ಮೂಲಕ ಬ್ಯಾಂಕುಗಳು ಕಳ್ಳ ಕಾರ್ಪೊರೇಟುಗಳಿಗೆ ದಂಡಿಯಾಗಿ ಲಾಭ ಮಾಡಿಕೊಟ್ಟು ತಮಗೆ ಅನ್ನ ಕೊಟ್ಟ ಬ್ಯಾಂಕನ್ನು ಮುಳುಗಿಸುತ್ತಿದ್ದಾರೆ.

ಕೇವಲ ಹಿಂದಿನ ಐದು ವರ್ಷಗಳಲ್ಲಿ ಮೂರು ಲಕ್ಷ ಕೋಟಿ ರೂಪಾಯಿ ಕಾರ್ಪೊರೇಟ್ ಸಾಲ ಸುಸ್ತಿಯಾಗಿದ್ದಕ್ಕೆ ಅದನ್ನು ಸಿಡಿಆರ್ ಆಗಿ ಪರಿವರ್ತಿಸಿ ಈ ಖಾಸಗಿ ಕಂಪನಿಗಳಿಗೆ ಇಪ್ಪತ್ತೈದು ಸಾವಿರ ಕೋಟಿ ಬಡ್ಡಿ ಮನ್ನಾ ಮಾಡಿ ಬ್ಯಾಂಕಿನ ಮೇಲಧಿಕಾರಿಗಳು ತಮ್ಮ 20% ಕಮಿಷನ್ ಅಂದರೆ ಕನಿಷ್ಠ 5000 ಕೋಟಿ ರೂಪಾಯಿ ತಮ್ಮ ಜೇಬಿಗಿಳಿಸಿದ್ದಾರೆ. ಇದು ಬ್ಯಾಂಕುಗಳ ಮೇಲು ಸ್ತರದಲ್ಲಿರುವ ಬ್ರಹ್ಮಾಂಡ ಭ್ರಷ್ಟಾಚಾರದ ಆಳ ಸೂಚಿಸುತ್ತದೆ. ಈಗ ಪ್ರತಿಯೊಂದು ರಾಷ್ಟ್ರೀಕೃತ ಬ್ಯಾಂಕಿನ ಮೇಲಧಿಕಾರಿಗಳು ಒಬ್ಬೊಬ್ಬರು ಕನಿಷ್ಠ 25 ಕೋಟಿ ತೂಗುತ್ತಾರೆ. ಸಿಂಡಿಕೇಟ್ ಬ್ಯಾಂಕಿನ ಮಾರ್ವಾಡಿ ಜೈನ ಅಧ್ಯಕ್ಷ ಲಂಚ ತೆಗೆದುಕೊಳ್ಳುವಾಗಲೇ ಸಿಕ್ಕಿ ಬಿದ್ದಿದ್ದು ಮಂಜುಗಡ್ಡೆಯ ಒಂದು ಚಿಕ್ಕ ತುದಿ ಅಷ್ಟೇ.

ಹೆಚ್ಚಿನ ಎಲ್ಲ ಬ್ಯಾಂಕುಗಳ ಮೇಲಧಿಕಾರಿಗಳು ಭ್ರಷ್ಟಾಚಾರ ನಡೆಸಿ ತಾವೂ ತಿಂದು ಮೇಲಿನವರಿಗೂ ಪಾಲು ತಲುಪಿಸದಿದ್ದರೆ ಅವನಿಗೆ ಬ್ಯಾಂಕಿನಲ್ಲಿ ಬದುಕಲು ಬಿಡುವುದಿಲ್ಲ. ಮೇಲಧಿಕಾರಿಗಳು ಎಂದರೆ ಬ್ಯಾಂಕಿನ ಅಧ್ಯಕ್ಷ, ಈ.ಡಿ, ಜನರಲ್ ಮ್ಯಾನೇಜರುಗಳು ಮತ್ತು ಡೈರೆಕ್ಟರುಗಳು.

ಆಶ್ಚರ್ಯದ ವಿಷಯವೆಂದರೆ ಏಜಿಎಮ್‌ಗಿಂತ ಮೇಲಿನ ಬ್ಯಾಂಕ್ ಅಧಿಕಾರಿಗಳು ಎಂತಹ ದೊಡ್ಡ ವಂಚನೆ ಮಾಡಿದರೂ ಅವರಿಗೆ ಶಿಕ್ಷೆ ಆಗುವುದೇ ಇಲ್ಲ. ಅವರು ಕೊಟ್ಟ ಸಾಲ ವಸೂಲಾಗದೇ ಸುಸ್ತಿಯಾದರೆ ಸಾಲಗಾರರ ವಿರುದ್ಧ ಕೇವಲ ಕೋರ್ಟಿನಲ್ಲಿ ಒಂದು ಕೇಸ್ ಹಾಕಿ ಸುಮ್ಮನಿರುತ್ತಾರೆ ಅಷ್ಟೇ. ಆದರೆ ಅದೇ ಕೆಳ ಹಂತದ ಬ್ರ್ಯಾಂಚ್ ಮ್ಯಾನೇಜರ್ ರೈತನಿಗೆ ಕೊಟ್ಟ ಒಂದು ಸಣ್ಣ ಕೃಷಿ ಸಾಲ ಸುಸ್ತಿಯಾದರೂ ಸಾಕು ಮೇಲಧಿಕಾರಿಗಳು ಆ ಶಾಖಾಧಿಕಾರಿಯ ಜೀವ ಹಿಂಡುತ್ತಾರೆ. ಸಾಲದ ಪೂರಾ ಹಣ ಅವನೇ ತಿಂದು ಬಿಟ್ಟಿರುವನೋ ಎಂಬ ರೀತಿಯಲ್ಲಿ ದಿನಾಲೂ ಫೋನ್ ಮಾಡಿ ಅವನನ್ನು ಅವಮಾನಿಸುತ್ತಾ ಇರುತ್ತಾರೆ. ಅದಕ್ಕಾಗಿ ಆ ಶಾಖಾಧಿಕಾರಿ ರೈತರ ಜೀವ ಹಿಂಡಿ ಆತ್ಮಹತ್ಯೆಗೆ ದೂಡುತ್ತಾನೆ.

ಕೆಳ ಹಂತದ ಅಧಿಕಾರಿಗಳು ಕೊಟ್ಟ ಸಣ್ಣ ಸಾಲ ವಸೂಲಾಗದಕ್ಕೆ ಹಿಂದಿನ ಹತ್ತು ವರ್ಷಗಳಲ್ಲಿ ಹದಿನೈದು ಸಾವಿರಕ್ಕೂ ಹೆಚ್ಚು ಶಾಖಾಧಿಕಾರಿಗಳು ಕೆಲಸ ಕಳೆದುಕೊಂಡು ಬೀದಿಗೆ ಬದ್ದಿದ್ದಾರೆ. ಜತೆಗೆ ಮೂವತ್ತು ಸಾವಿರಕ್ಕೂ ಹೆಚ್ಚು ಕೆಳಹಂತದ ಅಧಿಕಾರಿಗಳು ಪ್ರಮೋಷನ್ ಅಥವಾ ಇನ್‌ಕ್ರಿಮೆಂಟ್ ಕಳೆದುಕೊಂಡು ಅಪಾರ ಕಷ್ಟನಷ್ಟಕ್ಕೆ ಈಡಾಗಿದ್ದಾರೆ. ಆದರೆ ಭ್ರಷ್ಟ ಮೇಲಧಿಕಾರಿಗಳು ಇಡೀ ಬ್ಯಾಂಕನ್ನೇ ಕಳ್ಳ ಕಾರ್ಪೊರೇಟುಗಳಿಗೆ ಒತ್ತೆ ಇಟ್ಟು ಸರಕಾರಕ್ಕೆ ದೊಡ್ಡ ದೊಡ್ಡ ಬಾಂಬ್ ಇಟ್ಟರೂ ಯಾವುದೇ ಶಿಕ್ಷೆ ಇಲ್ಲ.

ಕಿಂಗ್‌ಫಿಶರ್, ಡೆಕ್ಕನ್ ಕ್ರಾನಿಕಲ್‌ಗಳಂತಹ ದೊಡ್ಡ ಕಂಪನಿಗಳು ಬ್ಯಾಂಕಿನ ಬೃಹತ್ ಸಾಲ ಮರುಪಾವತಿ ಮಾಡುವ ಬದಲು ಐಪಿಎಲ್-ಕ್ರಿಕೆಟ್ ಎಂಬ ಜುಗಾರಿಗೆ ಕೋಟ್ಯಾಂತರ ಹಣ ಸುರಿದು ಬ್ಯಾಂಕುಗಳಿಗೆ ಬತ್ತಿ ಇಟ್ಟರೂ ಬ್ಯಾಂಕಿನ ಮಹಾಭ್ರಷ್ಟ ಮೇಲಧಿಕಾರಿಗಳು ಅವರಿಗೇ ಸಹಕಾರ ಕೊಟ್ಟು ಸಿಡಿಆರ್ ಮೋಸದಲ್ಲಿ ತಾವೂ ಭಾಗಿಯಾಗಿ ಕೋಟ್ಯಾಂತರ ರೂಪಾಯಿ ಜೇಬಿಗಿಳಿಸುತ್ತಿದ್ದಾರೆ.

ಉತ್ತರ ಭಾರತೀಯರೇ ಉನ್ನತಾಧಿಕಾರಿಗಳಾಗಿರುವ ಬ್ಯಾಂಕುಗಳಲ್ಲಿ ಈ ಸಿಡಿಆರ್-ಬಡ್ಡಿ ಮನ್ನಾ ಎಂಬ ಮೋಸ ಅತಿ ಹೆಚ್ಚು. ನಾನು ಮುಂಬೈಯಲ್ಲಿ ನಮ್ಮ ಬ್ಯಾಂಕಿನ ಹೆಡ್-ಆಫೀಸಿನಲ್ಲಿ ಮೂರು ದಶಕ ಕೆಲಸ ಮಾಡಿ ನಿವೃತ್ತಿಯಾದವನು. ಹಾಗಾಗಿ ಸಿಡಿಆರ್ ಎಂಬ ಮೋಸ ಹಾಗೂ ಭ್ರಷ್ಟಾಚಾರವನ್ನು ಕಣ್ಣಾರೆ ಕಂಡಿದ್ದೇನೆ. ನಲವತ್ತು ವರ್ಷಗಳ ಹಿಂದೆ ನಾನು ಕೆಲಸಕ್ಕೆ ಸೇರಿದಾಗ ಪಾರ್ಸಿಗಳ ಆಡಳಿತದಲ್ಲಿ ನನ್ನ ಬ್ಯಾಂಕು ರಾಷ್ಟ್ರೀಕೃತ ಬ್ಯಾಂಕುಗಳಲ್ಲೇ ಒಂದನೆಯ ಸ್ಥಾನದಲ್ಲಿ ಇತ್ತು. ನಂತರ ಕ್ರಮೇಣ ಮಹಾಭ್ರಷ್ಟ ಉತ್ತರ ಭಾರತೀಯ ಅಧಿಕಾರಿಗಳು ಮೇಲುಸ್ತರದಲ್ಲಿ ಹೆಚ್ಚುತ್ತಾ ಹೋದಂತೆ ಭ್ರಷ್ಟಾಚಾರವೂ ಹೆಚ್ಚುತ್ತಾ ಹೋಗಿ, ಕೊನೆಗೆ ನಾನು ಎರಡು ವರ್ಷಗಳ ಹಿಂದೆ ನಿವೃತ್ತಿಯಾಗುವಾಗ ಈ ನನ್ನ ಘನ ಬ್ಯಾಂಕು ಕೆಳಗಿನ ಎಂಟನೆಯ ಸ್ಥಾನಕ್ಕೆ ಇಳಿದು ಈಗ ಶೋಚನೀಯ ಸ್ಥಿತಿ ತಲುಪಿ ಮುಳುಗುವ ಹಂತದಲ್ಲಿದೆ. ಇದು ಕಾರ್ಪೊರೇಟ್ ಕಳ್ಳರು ಕೊಟ್ಟಿರುವ ಕಾಣಿಕೆ.



- ಹರೀಶ್ ಎಂ ರಾವ್, ಬೆಂಗಳೂರು

ಹವ್ಯಕರ ಹೆಣ್ಣು ನಂಬಲಾಗದಷ್ಟು ನಡತೆಗೆಟ್ಟವಳೇ?

ಕಲೆ-ಸಾಂಸ್ಕೃತಿಕ ಹಿನ್ನೆಲೆಯ ಕಾರಣಕ್ಕಾಗಿ ಸ್ವಾಮೀಜಿಯೊಬ್ಬರೊಂದಿಗೆ ದೀರ್ಘಕಾಲದ ಒಡನಾಟವಿಟ್ಟುಕೊಂಡ ಕುಟುಂಬವೊಂದರ ಹೆಣ್ಣುಮಗಳೊಬ್ಬಳು 'ನನ್ನನ್ನು ದುರುಪಯೋಗಪಡಿಸಿಕೊಳ್ಳಲಾಗಿದೆ' ಎಂದು ಆರೋಪಿಸಿದ್ದೇನೋ ಹೌದು. ಇದು ಬರೀ ಆರೋಪವೋ, ನಿಜವಾಗಿಯೂ ಘಟಿಸಿದೆಯೋ ಎಂಬುದನ್ನು ತನಿಖೆಯಿಂದಷ್ಟೇ (ಅದು ಪ್ರಾಮಾಣಿಕವಾಗಿ ನಡೆದರೆ) ತಿಳಿಯಬೇಕಾಗಿದೆಯಾದರೂ ಈ ತನಿಖಾ ಹಂತದ ಕಾಲದಲ್ಲಿ ನಿರ್ಲಿಪ್ತರಾಗಬೇಕಿದ್ದ ಜನರು ಇದೀಗ ಸಾರಾಸಗಟಾಗಿ ಒಂದೇ ದಿಕ್ಕಿನೆಡೆಗೆ ಬೆಂಬಲಿಸುತ್ತಿರುವುದು ಒಂದು ಕೆಟ್ಟ ಬೆಳವಣಿಗೆಯೇ ಸೈ.

ಗೋಡೆಗಳ ಮಧ್ಯೆ ನಡೆದಿರುವ ಇಂತಹ ವಿಚಾರದ ಸತ್ಯಾಸತ್ಯತೆ ಸಂಬಂಧಿಸಿದವರನ್ನು ಬಿಟ್ಟು ಬೇರೆ ಯಾರಿಗೂ ತಿಳಿದಿರದ ಕಾರಣ ರಾಘವೇಶ್ವರರಿಂದ ಅಪರಾಧ ನಡೆದಿದೆಯೋ ಇಲ್ಲವೋ ಎಂಬುದನ್ನು ಸದ್ಯಕ್ಕೆ ಬದಿಗಿಡೋಣ. ಆದರೆ ತಮ್ಮ ಸಮುದಾಯದ ಗೌರವಾನ್ವಿತ ಕುಟುಂಬದ ಹಿನ್ನೆಲೆಯಿರುವ ಹೆಣ್ಣುಮಗಳೊಬ್ಬಳು ಲೈಂಗಿಕ ದೌರ್ಜನ್ಯಕ್ಕೊಳಗಾಗಿದ್ದೇನೆಂದು ಗೋಳಾಡುತ್ತಿರುವಾಗ ಆಕೆಯ ಪರವಾಗಿ ಯಾರೂ ಮಾತಾಡುವವರಿಲ್ಲವೇ? ಬದಲಿಗೆ ಸರಕಾರ ಹಾಗು ತನಿಖೆಯ ಮೇಲೆ ಪ್ರಭಾವ ಬೀರುವ ಸಾಮರ್ಥ್ಯವುಳ್ಳ ಆರೋಪಿಯ ಪರವಾಗಿಯೇ ಎಲ್ಲರೂ ನಿಲ್ಲುತ್ತಿರುವುದನ್ನು ನೋಡಿದರೆ ಇಲ್ಲಿ ಹವ್ಯಕರ ಹೆಣ್ಣಿನ ಮಾನ ಮತ್ತು ಮಾತುಗಳಿಗೆ ಬೆಲೆಯೇ ಇಲ್ಲವೆಂದಾಯ್ತಲ್ಲವೇ?

ಗಂಡ, ಮನೆ, ಮಕ್ಕಳುಗಳುಳ್ಳ ಯಾವುದೇ ಹೆಣ್ಣೊಬ್ಬಳು ಮರ್ಯಾದೆ ಬಿಟ್ಟು ತನ್ನ ಮೇಲೆ ಅತ್ಯಾಚಾರ ನಡೆದಿದೆ ಎಂದು ಸುಖಾಸುಮ್ಮನೆ ಸಾರ ಹೋಗುವುದಿಲ್ಲ. ಹಾಡುಗಾರಿಕೆಯಿಂದ ದೂರವಿಟ್ಟರು ಎಂಬ ಜುಜುಬಿ ಕಾರಣವನ್ನು ಮುಂದಿಟ್ಟುಕೊಂಡು ತನ್ನ ಮಾನ ದೋಚಲಾಯಿತು ಎಂದು ಇದ್ದ ಮಾನ ಕಳೆಕೊಳ್ಳಲು ಯಾವ ಮೂರ್ಖ ಹೆಣ್ಣೂ ಮುಂದಾಗುವುದಿಲ್ಲ. ಬೆಂಕಿಯಿಲ್ಲದೇ ಹೊಗೆಯಾಡದು ಎನ್ನುವಂತೆ ಇಲ್ಲಿ ಏನೋ ಘಟಿಸಿರುವ ಸಾಧ್ಯತೆಯೇ ಹೆಚ್ಚಿದೆ. ಅದನ್ನು ಸೂಕ್ತ ತನಿಖೆಯಿಂದಷ್ಟೇ ಹೊರಗೆಡಹಬೇಕೇ ವಿನಹ ತನಿಖೆಗೆ ಸಹಕರಿಸದಿರುವ ಅಥವಾ ಕುಂಟುನೆಪಗಳ ಮೂಲಕ ತಪ್ಪಿಸಿಕೊಳ್ಳುವುದರಿಂದಲ್ಲ.

ಆರೋಪಿಯ ಬೆಂಬಲಿಗರೂ ಹುಚ್ಚುಹುಚ್ಚ ವರ್ತಿಸುತ್ತಿದ್ದಾರೆ. ಪ್ರೇಮಲತಾರ ಸಂಬಂಧಿ ಕೆದಿಲ ಶ್ಯಾಮಶಾಸ್ತ್ರಿಯವರು ಸ್ವಾಮಿಯ ಬೆಂಬಲಿಗರ ಬೆದರಿ ನೊಂದು ಆತ್ಮಹತ್ಯೆ ಮಾಡಿಕೊಳ್ಳುವಷ್ಟರ ಮಟ್ಟಿಗೆ ಸ್ವಾ ಬೆಂಬಲಿಗರ ವರ್ತನೆ ಅತಿರೇಕಕ್ಕೆ ಹೋಗಿದೆ. ಕಾನೂನಿನ ಎಲ್ಲರೂ ಸಮಾನರು. ಆದರೆ, ಇವರಿಗೆ ಸರಕಾರದಿ ಸಿಗುವ ಕೋಟಿ ಕೋಟಿ ಮೌಲ್ಯದ ಬಿಟ್ಟಿ ಸವಲತ್ತುಗ ಮಾತ್ರ ಬೇಕು ಆದರೆ ಅದರ ವ್ಯಾಪ್ತಿಯಲ್ಲಿರು ಕಾನೂನುಗಳು ಮಾತ್ರ ಬೇಕಿಲ್ಲವಂತೆ. "ರಾಮಚಂದ್ರಾಪು ಮಠಕ್ಕೆ ಸಾವಿರ ವರ್ಷ ಇತಿಹಾಸವಿದೆ. 50-60 ವರ್ಷ ಪೊಲೀಸ್ ಇಲಾಖೆ ನನ್ನನ್ನೇನೂ ಮಾಡಲಾಗದು. ತಾಕತ್ತಿ ಬಂಧಿಸಲಿ ನೋಡುವ" ಎಂದು ಮುಂಬೈ ಡಾನ್ ಸ್ಟೈ ಈ ಸ್ವಾಮಿ ಹೇಳಿದ ಮಾತೇ ಈ ದೇಶದ ಸಂವಿಧಾ ಮಾಡಿದ ಬಹುದೊಡ್ಡ ಅಪಮಾನ.

ಜನರಿಗೆ ತತ್ವ ಪುರಾಣದ ಉಪಕತೆಗಳ ದೃಷ್ಟಾಂ ಮೂಲಕ ಉಪದೇಶ ಹೇಳುವ ಸ್ವಾಮಿಗೆ ಮಹಾಭಾರ ಈ ಕಥೆ ಗೊತ್ತಿರಬಹುದು: ಯುಧಿಷ್ಠಿರ ಒಂದೇ ಅಪರಾ ಮಾಡಿದ ಒಬ್ಬ ವಿದ್ವಾಂಸನಿಗೂ ಹಾಗು ಒಬ್ಬ ಪಾಮರನಿ ಒಟ್ಟಿಗೆ ಶಿಕ್ಷೆ ಪ್ರಕಟಿಸುವ ಪ್ರಸಂಗವಿದು. ಧರ್ಮ ಮೂರ್ತಿವೆತ್ತಂತಿದ್ದ ಯುದಿಷ್ಠಿರನ ನ್ಯಾಯ ಹೀಗಿ ಪಾಮರನಿಗೆ ಬರೀ ಎಚ್ಚರಿಕೆಯನ್ನು ನೀಡಿ ಕಳುಹಿಸಿ ಪಂಡಿತನಿಗೆ ನೂರು ಛಡಿಯೇಟಿನ ಶಿಕ್ಷೆ ವಿಧಿಸಲಾಯಿ ಯಾಕೆಂದರೆ, ಊರಿಗೇ ಬುದ್ಧಿ ಹೇ ಹಾಗು ಆದ್ಯಾತ್ಮ ತ ನ್ಯಾಯಾನ್ಯಾಯಗಳನ್ನೆಲ್ಲ ಅರಿತಿರುವ ಅಪರಾಧ ಅಜ್ಞಾನಿಯ ಅಪರಾಧ ಹತ್ತು ಪಟ್ಟು ಹೆಚ್ಚು ದೊಡ್ಡದು.

ಇದನ್ನು ಸ್ವಾಮಿ ಮೊದ ತಿಳಿದುಕೊಂಡು ದೂರುದಾರ ಬೆದರಿಸುತ್ತ ಕಾನೂನು ಪ್ರಕ್ರಿಯೆಗ ಅಡ್ಡಗಾಲು ಹಾಕುತ್ತಿರುವ ಬೆಂಬಲಿಗರಿಗೆ ಬುದ್ಧಿ ಹೇಳಿ ತನಿ ಸಹಕರಿಸಲಿ. ತನಿಖೆಯಿಂದ ಪ್ರೇಮ ರದ್ದೇ ಸುಳ್ಳು ದೂರೆಂದು ಸಾಭೀತಾ ಅದು ಅವರಿಗೇ ಜಯಸಿಕ್ಕಂತಲ್ಲ ಮತ್ತೇಕೆ ಈ ರಂಪಾಟ ಕಿತ್ತಾಟಗಳೆಲ್ಲ?

- ಅವಿನಾಶ್ ನೆಲ್ಲಿಕಾರ್, ಇ-ಮೇಲ್ ಮೂ

ಈ ವಾರದ ಪ್ರತಿಕ್ರಿಯೆಯಲ್ಲಿ ಸಿ. ಸೀತಾರಾ ಅವರ ಪತ್ರದ ಒಕ್ಕಣೆ ಅಷ್ಟು ಸಮಂಜಸವಾಗಿಲ್ಲ. ಬ್ರಾ ಎನ್ನುವ ಭೇದವೇ ಶೂದ್ರರನ್ನು ಸೃಷ್ಟಿಸುವ ಜಾತಿ ಪರಂ ಅಡಿಗಲ್ಲು. ಹೀಗಿರುವಾಗ ಸಮಾಜವಾದಿ ನಿಲ ಅನಂತಮೂರ್ತಿಯವರ ಅಂತ್ಯಕ್ರಿಯೆ ಮಾಧ್ವಮತ ಅನುಸರಿಸಿ ಆಯಿತೆನ್ನುವುದೇ ವಿರೋಧಾಭಾಸ. ಜ್ಞಾನ ಸಾಂಕೇತಿಕವಾಗಿ ಬ್ರಾಹ್ಮಣರಾದವರು ವರ್ಣಾಶ್ರಮದ ಭೇದವನ್ನು ನಿರ್ಮೂಲಗೊಳಿಸಲು ಪರಿಶ್ರಮ ವಹಿ ಮಾತ್ರ ಜಾತ್ಯತೀತ ಭಾರತದ ಕಲ್ಪನೆ ಸಾರ್ಥಕವೆನಿಸ

- ಜ್ಯೋತಿ ಗುರುಪ್ರಸಾದ್, ಕಾ

ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾದ 'ಅಪ್ಪ ಗೋವ ಮಗ ಕಾಮುಕ!' ಎಂಬ ಲೇಖನದಲ್ಲಿ ಮೈತ್ರೀಯಿ ಎಂಬ ಹೆಣ್ಣು ಮಗಳಿಗೆ ಮಾಜಿ ಮುಖ್ಯ ಸದಾನಂದಗೌಡರ ಮಗ ಕಾರ್ತಿಕ್‌ಗೌಡ ಮಾಡಿ ಅನ್ಯಾಯವನ್ನು ಚೆನ್ನಾಗಿ ವಿವರಿಸಿದ್ದಿರಿ. ಕಾರ್ತಿಕ್ ಗೌ ಪೊಲೀಸರು ಬಂಧಿಸದೇ ಕೋರ್ಟಿನಿಂದ ಜಾಮೀ ಪಡೆಯಲು ಅನುಕೂಲ ಮಾಡಿಕೊಟ್ಟಿರುತ್ತಾರೆ. ಅತ್ಯಾ ಪ್ರಕರಣದಲ್ಲಿ ಬೇರೆಯವರನ್ನು ಕ್ಷಣಮಾತ್ರದಲ್ಲಿ ಬಂಧಿ ಪೊಲೀಸರು ಈ ಪ್ರಕರಣದಲ್ಲಿ ಕಾರ್ತಿಕ್ ಗೌ ಅನುಕೂಲವಾಗುವಂತೆ ನಡೆದುಕೊಂಡರು. ಇದ ಜನಸಾಮಾನ್ಯರಿಗೊಂದು ಕಾನೂನು ಮತ್ತು ಶ್ರೀಮಂ ಗೊಂದು ಕಾನೂನು ಎಂಬಂತೆ ಭಾಸವಾಯಿತು ಪ್ರಕರಣದಲ್ಲಿ ಕಾರ್ತಿಕ್ ಗೌಡನಿಗೆ ಸಿಕ್ಕ ಜಾಮೀ ಬಿಜೆಪಿಯಲ್ಲೇ ಆಶ್ಚರ್ಯ ಉಂಟಾಯಿತು. ದೇಶ ಟಿವಿ ಚಾಲನ್ Times Now ಆ್ಯಂಕರ್ ಬಿಜೆ ಕಟ್ಟಾ ಬೆಂಬಲಿಗ ಅರ್ನಾಬ್ ಗೋಸ್ವಾಮಿಯೇ ಅ ಮತ್ತು ಆಕ್ಷೇಪ ವ್ಯಕ್ತಪಡಿಸುತ್ತಿದ್ದರು. ಸಿದ್ದರಾಮಯ್ಯ ನೇತೃತ್ವದ ಸರಕಾರದಲ್ಲಿ ಹಿರಿಯ ಅಧಿಕಾರಿಗಳೇ ತ ಬಂದಂತೆ ಸರಕಾರ ನಡೆಸುತ್ತಿದ್ದಾರೆಂಬುದು ಮ ಸಾಬೀತಾಯಿತು.

- ಹೆಚ್.ಕೆ. ಈರಪ್ಪ, ಯಶವಂ

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
lankesh70@rediffmail.com
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದ
ಪ್ರತಿಕ್ರಿಯೆಗಳನ್ನು 9980331427 ನಂಬ
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿಸ




ಗ್ರೆಗೊರಿ, ಗ್ರೇಟಾ ಮತ್ತು ವೆರೋನಿಕಾ

ಈ ಬಾರಿ ಒಬ್ಬ ನಟನ ಬದುಕನ್ನು ಕುರಿತು ...ಶಿಸುವ ಹೊತ್ತು; ಆತನದು ವಿಶಿಷ್ಟ ಚರಿತ್ರೆ. ...ಫೋರ್ನಿಯಾದ ಸ್ಯಾನ್ ದಿಯಾಗೋದಲ್ಲಿ ಹುಟ್ಟಿದವನು ... ಅಲಾಸ್ಕ ಮತ್ತು ಟೆಕ್ಸಾಸ್ ನಂತರ ಅಮೆರಿಕಾದಲ್ಲಿಯೇ ...ದೊಡ್ಡ ವಿಸ್ತೀರ್ಣವುಳ್ಳ ಮೂರನೇ ರಾಜ್ಯ ಕ್ಯಾಲಿ...ರ್ನಿಯ. ಒಂದು ತುದಿಯಲ್ಲಿ ಪೆಸಿಫಿಕ್ ಸರೋವರ ...ನ್ನ, ಮತ್ತೊಂದು ತುದಿಯಲ್ಲಿ ಸಿಯೆರ ನೇವಡಾ ಪರ್ವತ ...ಯನ್ನೂ ಹೊಂದಿರುವ ಈ ರಾಜ್ಯ ಈತನ ಪ್ರೇಮಕತೆ, ...ಪತ್ಯ ಬದುಕು, ಸಿನಿಮಾ ಬಗ್ಗೆ ಸ್ವಲ್ಪ ಚರ್ಚಿಸಬೇಕು.

...ದ್ವಿತೀಯ ಮಹಾಯುದ್ಧದ ಸಂದರ್ಭದಲ್ಲಿ ಜರ್ಮನಿಯ ... ಏಕಾಏಕಿ ಪ್ಯಾರಿಸ್ ಪ್ರವೇಶಿಸಿ ಫ್ರೆಂಚ್ ಪೊಲೀಸರಿಂದ ...ದಾರು ಹದಿಮೂರು ಸಾವಿರದಷ್ಟು ಯಹೂದಿಯರನ್ನು ...ಬಸಿದಾಗ ಹತ್ತು ವರ್ಷದವಳಾಗಿದ್ದಳು ಈ ಪ್ಯಾರಿಸ್ ...ಹುಗಿ. ಹೆಸರು ವೆರೋನಿಕ. ಈಕೆಯ ತಾಯಿ ಕಲಾವಿದೆ, ...ಹಗಾರ್ತಿ. ತಂದೆ ವಾಸ್ತುಶಿಲ್ಪಿ, ಈಕೆ ಹುಟ್ಟಿದ ಫ್ರಾನ್ಸ್ ...ಯು ವಿಚಿತ್ರ ದೇಶ. ಒಂದು ಕಡೆ ಶಿಕ್ಷಣ, ಆರೋಗ್ಯ ...ತಿ ವಿಷಯದಲ್ಲಿ ಅಪಾರ ಹಿರಿಮೆ ಸಾಧಿಸಿರುವ ಈ ... ಇನ್ನೊಂದು ಕಡೆ ವಿಶ್ವದಲ್ಲಿಯೇ ಮೂರನೇ ಅತಿಹೆಚ್ಚು ...ಣು ಶಸ್ತ್ರಾಸ್ತ್ರ ಹೊಂದಿರುವ ದೇಶವೆಂಬುದು ಶಾಕ್ ...ಬವಂಥದ್ದು. ಮಾನವನ ಆಳದ ವ್ಯಥೆ, ಸಂವೇದನೆಯನ್ನು ...ಇಲ್ ಡಿ ಮಾಂಟೇನ್, ಪೀಟರ್ ಅಬೆರಾಲ್ಡ್, ರೆನೆ ...ರ್ಟ್, ಆಗಸ್ಟ್ ಕೋಂತ್, ಹೆನ್ರಿ ಬರ್ಗ್‌ಸನ್‌ರ ಮೂಲಕ ... ಜನರಿಗೆ ಒಟ್ಟಿಗೇ ನೀಡಿತೆಂದ ಮೇಲೆ ಫ್ರಾನ್ಸಿನ ...ತ ಮಿಡಿತವನ್ನು, ಬೆಳಸನ್ನು ಗ್ರಹಿಸಬಹುದು. ವೆರೋನಿಕ ...ಕರ್ತೆಯಾಗಿ 'ಫ್ರಾನ್ಸ್ ಸಾಯಿರ್' ಪತ್ರಿಕೆಯಲ್ಲಿ ...ಕೊಳ್ಳುತ್ತಿದ್ದುದ್ದನ್ನು ಗಮನಿಸಿದ ಕೆಲವರು ಆಕೆಯ ... ಅಸೂಯೆ ಪಟ್ಟಿದ್ದೂ ಉಂಟು. ಅವಳ ...ರ್ಣವೈಖರಿಯೂ ಅಷ್ಟೇ ಪರಿಣಾಮಕಾರಿಯಾಗಿತ್ತು. ...ವಾದ ಮೈಕಟ್ಟಿನ, ನೀಲಿಕಂಗಳ ಈ ಹೆಣ್ಣು ತನ್ನ ...ಜತೆ, ಜನಪರ ಕೆಲಸಗಳಿಂದ ಎಲ್ಲರೂ ...ಬ್ಬುವಂಥವಳಾಗಿದ್ದಳು. ತನ್ನ ಚುರುಕುತನದಿಂದ, ಆಳವಾದ ...ದಿಂದ ನಿರ್ಭಿಡೆಯಾಗಿ ಪ್ರಸಿದ್ಧ ಕಲಾವಿದರನ್ನು, ...ಕಾರಣಿಗಳನ್ನು, ಸಾಧಕರನ್ನು ...ರ್ಶಿಸುತ್ತಿದ್ದಳು. ಕಾದಂಬರಿಕಾರ್ತಿ ಕೊಲೆಟ್, ...ರಿಕಾದ ಮಾಜಿ ಅಧ್ಯಕ್ಷ ಡೇವೈಟ್ ...ಹೊವರ್, ಚಿತ್ರನಿರ್ಮಾಪಕ ಸ್ಯಾಮ್ಯುಯಲ್ ...ಲ್ಡ್‌ವಿನ್ ಇವಳು ಸಂದರ್ಶಿಸಿದವರ ಪೈಕಿ ...ಖರು.


...ಹೀಗಿರುವಾಗ ಒಂದು ದಿನ ಪತ್ರಕರ್ತೆ ...ರೋನಿಕ ಒಬ್ಬ ಪ್ರಖ್ಯಾತ ನಟನನ್ನು ...ರ್ಶಿಸಿದಳು. ಆ ನಟ ತನ್ನದೊಂದು ಚಿತ್ರದ ...ಕರಣಕ್ಕಾಗಿ ಜರ್ಮನಿಗೆ ಹೋಗಿ ಆರು ...ಳ ನಂತರ ಪ್ಯಾರಿಸ್ಸಿಗೆ ವಾಪಸಾದ. ...ತ್ತಿದ್ದಂತೆಯೇ ಆಕೆಯ ಪತ್ರಿಕೆಯ ಕಚೇರಿಗೆ ...ನ್ ಮಾಡಿದ. ವೆರೋನಿಕ ಫೋನ್ ಅಟೆಂಡ್ ...ಡುತ್ತಿದ್ದಂತೆಯೇ "ಹಾಯ್, ನಾನು... ...ಮ್ಮೆ ನನ್ನ ಸಂದರ್ಶನ ಮಾಡಿದ್ರಿ, ನೆನಪಿದೆ ...? ನಾನು ನಿಮ್ಮ ಹತ್ತಿರ ಸ್ವಲ್ಪ ...ಾಡಬೇಕಿತ್ತು" ಎಂದ. ಆಕೆ ಕನಲಿ "ಹ್ಞಾ... ...ಯ್ಯು... ಮಾತಾಡಿ" ಎಂದು ಉತ್ತರಿಸಿದಳು. ...ಮನಸನ್ನು ಹಿಡಿತಕ್ಕೆ ತಂದುಕೊಂಡು "ನಿಮಗೆ ...ಬ್ ಫ್ರೆಂಡ್ ಇದ್ದಾರಾ?" ಎಂದು ಕೇಳಿದಾಗ ಆಕೆ ..." ಎಂದಳು. ನಿಟ್ಟುಸಿರು ಬಿಟ್ಟ ಆತ "ಹಾಗಾದರೆ ...ತ್ತಿ ಮಧ್ಯಾಹ್ನ ಲೆಫ್ಟ್ ಬ್ಯಾಂಕ್ ರೆಸ್ಟೋರೆಂಟ್‌ನಲ್ಲಿ ...ಗೆ ಊಟ ಮಾಡಬಹುದಾ?" ಎಂದು ಆಹ್ವಾನಿಸಿದ. ...ದರೆಗೆ ಹಿಂದೇಟು ಹಾಕಿದ ವೆರೋನಿಕಾ "ಆಗಲಿ" ... ಒಪ್ಪಿಗೆ ನೀಡಿ ತಳಮಳಕ್ಕೊಳಗಾದಳು.

...ಇಬ್ಬರೂ ಭೇಟಿಯಾದರು. ಎಂತೆಂಥ ಘಟಾನುಘಟಿ ...ಗಳ್ಳಾ ಸಂದರ್ಶಿಸಿದ್ದ ಆಕೆ ಆತನೆದುರು ಕೂತಾಗ ...ಹೀಚ, ಆತಂಕ ಇತ್ಯಾದಿಗಳ ನಡುವೆಯೇ ಕರಗಿ ...ದಳು. "actually ನಿಮ್ಮನ್ನು ಸಂದರ್ಶಿಸಿದ ದಿನ ... ವೈದ್ಯ, ತತ್ವಜ್ಞಾನಿ ನೊಬೆಲ್ ಪ್ರಶಸ್ತಿ ವಿಜೇತ ...ರ್ಟ್ ಶ್ವೈಟ್ಜರ್ ಅವರನ್ನು ಸಂದರ್ಶಿಸಬೇಕಿತ್ತು, ಆಕಸ್ಮಾತ್ ... ಸಂದರ್ಶನ ಮಾಡಬೇಕಾಗಿ ಬಂತು" ಎಂದಾಗ ... ಚಕಿತವಾಗಿ "ಒಳ್ಳೆದೇ ಆಯಿತು!" ಎಂದು ...ರಪೆತ್ತಿದ. ಆಕೆಯೂ ಅಷ್ಟೇ... ತಲೆ ತಗ್ಗಿಸಿಕೊಂಡು ...ತ್ತ ಆಗಾಗ ಒರೆನೋಟ ಬೀರುತ್ತಲೇ ಮುಜುಗರದಿಂದ ... ಮಾಡಿದಳು. ಕ್ಷಣಕಾಲದ ಮೌನವನ್ನು ಸೀಳಿಹಾಕುವ ...ದಲ್ಲಿ ಈತ ಧೈರ್ಯವಾಡಿ "ನನ್ನನ್ನು ...ವೆಯಾಗ್ತೀರಾ?" ಅಂದಾಗ ಆಕೆಗೆ ಗಲಿಬಿಲಿ. ಮತ್ತೆ ...ಮೌನ ಇಬ್ಬರನ್ನೂ ಕವಿಯಿತು. ಕಣ್ಣುಗಳು ...ಮಾಡಿದವು. ಹವಾದಂತೆಂಬಂತೆ ಒಂದು ಶುಭದಿನ ... ಮದುವೆಯಾದರು. ಆ ಪ್ರಖ್ಯಾತ ನಟ ವೆರೋನಿಕಾ ಎಂಬ ಪ್ರಖ್ಯಾತ ಪತ್ರಕರ್ತೆಯ ಗಂಡನಾದ.



ಆತ ಬೇರಾರೂ ಅಲ್ಲ, ಗ್ರೆಗೊರಿ ಪೆಕ್- ಅಮೆರಿಕಾದ ಪ್ರತಿಭಾವಂತ ಸ್ಟಾರ್. ಈ ಮದುವೆಯಾದ ಕಾಲದಲ್ಲಿ ಅಂದರೆ 1955ರಲ್ಲಿ ಗ್ರೆಗೊರಿ ಪೆಕ್ ಮೂವತ್ತೊಂಭತ್ತು ವರ್ಷದವನಾಗಿದ್ದರೆ ವೆರೋನಿಕ ಕೇವಲ ಇಪ್ಪತ್ಮೂರು ವರ್ಷದ ತರುಣಿ. ಆ ಹೊತ್ತಿಗಾಗಲೇ ಗ್ರೆಗೊರಿ 'ರೋಮನ್ ಹಾಲಿಡೇ', 'ದಿ ಯಿಯರ್ಲಿಂಗ್', 'ಜೆಂಟಲ್‌ಮ್ಯಾನ್ಸ್ ಅಗ್ರೀಮೆಂಟ್', 'ಟ್ವೆಲ್ ಓ ಕ್ಲಾಕ್ ಹೈ' ತರಹದ ಚಿತ್ರಗಳಲ್ಲಿ ಮಿಂಚಿ ಪ್ರಸಿದ್ಧಿ ಪಡೆದಿದ್ದ. ಜೊತೆಗೆ ನಾಲ್ಕು ಬಾರಿ ಆಸ್ಕರ್ ಅವಾರ್ಡಿಗೆ ನಾಮಿನೇಟ್ ಕೂಡ ಆಗಿದ್ದ ಆತ ಹೋದಲ್ಲೆಲ್ಲಾ ಅಭಿಮಾನಿಗಳು ಮುತ್ತಿಕೊಳ್ಳುವಷ್ಟು ಸೆಲೆಬ್ರಿಟಿಯಾಗಿದ್ದ.

ಆತ ವೇರೋನಿಕಾಳನ್ನು ಕಟ್ಟಿಕೊಂಡ ನಂತರ ಸಿನಿಮಾರಂಗದಲ್ಲಿ ಮತ್ತಷ್ಟು ಪ್ರಖ್ಯಾತನಾಗುವುದರ ಜೊತೆಗೆ ಆಕೆಯೊಡಗೂಡಿ ಒಂದಿಷ್ಟು ಸಮಾಜಪರ, ಜೀವಪರ ಚಟುವಟಿಕೆಗಳಲ್ಲಿ ಪಾಲುಗೊಂಡ. ಆ ಪೈಕಿ 'ಅಮೆರಿಕನ್ ಕ್ಯಾನ್ಸರ್ ಸೊಸೈಟಿ'ಗಾಗಿ ಸುಮಾರು ಐವತ್ತು ಮಿಲಿಯನ್



ಎರಡನೆ ಹೆಂಡತಿ ವೇರೋನಿಕಾ ಜೊತೆ



ಮೊದಲನೆ ಹೆಂಡತಿ ಗ್ರೇಟಾ ಮತ್ತು ಮಕ್ಕಳೊಂದಿಗೆ

ಡಾಲರ್‌ನಷ್ಟು ಹಣವನ್ನು ಸಂಗ್ರಹಿಸಿ ಕೊಟ್ಟ. ಹಾಗೆಯೇ 'ಇನ್ನರ್ ಸಿಟಿ ಕಲ್ಚರಲ್ ಸೆಂಟರ್', 'ಲಾಸ್ ಎಂಜಲೀಸ್ ಮ್ಯೂಸಿಕ್ ಸೆಂಟರ್' ಹಾಗೂ ರಂಗಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ. ಒಂದಿಷ್ಟು ಜನರಿಗೆ ಸಹಾಯ ಮಾಡುತ್ತಿದ್ದ. ಈ ಎಲ್ಲಾ ಕೆಲಸಗಳಲ್ಲೂ ವೆರೋನಿಕಾಳ ಸಹಕಾರ, ಪಾಲ್ಗೊಳ್ಳುವಿಕೆ ಇದ್ದೇ ಇರುತ್ತಿತ್ತು. ಆಕೆ ಹೀಗೆಲ್ಲಾ ನಿಸ್ವಾರ್ಥದಿಂದ ಪಾಲ್ಗೊಳ್ಳುವುದನ್ನು ಕಂಡ 'ಲಾಸ್ ಎಂಜಲೀಸ್ ಟೈಮ್ಸ್' ಪತ್ರಿಕೆಯು 1967ರಲ್ಲಿ ಆಕೆಯನ್ನು 'ವರ್ಷದ ಮಹಿಳೆ' ಎಂದು ಘೋಷಿಸಿತು.

ಇಷ್ಟಕ್ಕೂ ವೇರೋನಿಕಾಳನ್ನು ಅಷ್ಟೊಂದು ಪ್ರೀತಿಸುತ್ತಿದ್ದ ಹಚ್ಚಿಕೊಂಡಿದ್ದ ಗ್ರೆಗೊರಿ ಪೆಕ್‌ಗೆ ತನ್ನ ಮೊದಲ ಮಡದಿ ಗ್ರೇಟಾ ಕುಕ್ಕುನೇನ್‌ಳ ನಂಟು, ಬಾಂಧವ್ಯ ಸಾಮೀಪ್ಯಗಳು ಕೇವಲ ಹನ್ನೆರಡು ವರ್ಷಗಳಿಗೇ ಸಾಕೆನಿಸಿ ವಿಚ್ಛೇದನ ನೀಡಿದ್ದಾದರೂ ಏಕೆ? ಎಂಬ ಪ್ರಶ್ನೆ ಸಹಜವಾಗಿ ಕಾಡುತ್ತದೆ. ಈ ಬಗ್ಗೆ ಅಂದರೆ ಗ್ರೆಗೊರಿ ಮತ್ತವನ ಒಡನಾಟದ, ನೆನಪುಗಳ ಬಗ್ಗೆ ವಿಚಾರಿಸಿದಾಗ ಗ್ರೆಗೋರಿಯ ಮೊದಲ ಹೆಂಡತಿ ಗ್ರೇಟಾ ಹೇಳಿದ್ದಿಷ್ಟು: "ನನಗೂ ಗ್ರೆಗೊರಿಗೂ ನಿಶ್ಚಿತಾರ್ಥವಾದಾಗ ಆತ ಆಗಷ್ಟೇ ಕ್ಯಾಲಿಫೋರ್ನಿಯ ಯೂನಿವರ್ಸಿಟಿಯಲ್ಲಿ ಪದವಿ ಪಡೆದಿದ್ದ. ಅಷ್ಟರಲ್ಲಾಗಲೇ ಗ್ರೆಗೊರಿ ನಟಿಸಿದ್ದ 'ಡಾಕ್ಟರ್ಸ್ ಡಿಲಿಮಿಯ' ಎಂಬ ನಾಟಕದ ಸಂದರ್ಭದಲ್ಲಿ ನಮ್ಮಿಬ್ಬರ ಪರಿಚಯವಾಗಿ, ಪರಿಚಯ ಪ್ರೇಮವಾಗಿ ಮಾರ್ಪಟ್ಟಿತ್ತು. ಗ್ರೆಗೊರಿ ಒಬ್ಬ ಆರ್ಡಿನರಿ, ಸ್ಟ್ರೈಟ್ ಮತ್ತು ಸೀರಿಯಸ್ ಮನುಷ್ಯ. ಆಗೆಲ್ಲ ಗ್ರೆಗೊರಿಗೆ ಇರಲು ಸರಿಯಾಗಿ ನೆಲೆ ಇರಲಿಲ್ಲ, ಆತ ಎಷ್ಟೋ ಸಲ ಸೆಂಟ್ರಲ್ ಪಾರ್ಕಿನ ಬೆಂಚಿನ ಮೇಲೆ ಕಾಲ ಕಳೆಯುತ್ತಿದ್ದುದ್ದುಂಟು. ನನ್ನ ತವರುಮನೆ ಎರಡು ಬೆಡ್‌ರೂಂ ಮನೆಯಾಗಿದ್ದರಿಂದ ಅಲ್ಲೇ ಇರಲು ವಿನಂತಿಸಿಕೊಂಡಿದ್ದೆವು. ಅಷ್ಟರಲ್ಲಿ ಗ್ರೆಗೊರಿಗೆ ಹಾಲಿವುಡ್ಡಿನ ಆರ್.ಕೆ.ಓ. ಸ್ಟುಡಿಯೋದಲ್ಲಿ ಕೆಲಸ ಸಿಕ್ಕಿತು; ಮದುವೆಯಾಗೋಣ ಅಂದ. 1942ರ ಅಕ್ಟೋಬರ್ 4ರ ಆ ದಿನ ಕೆಲವೇ ಕೆಲವು ಜನರ ಸಮ್ಮುಖದಲ್ಲಿ ಮನ್‌ಹಾಟನ್ನಿನ ಚರ್ಚೊಂದರಲ್ಲಿ ನಾವಿಬ್ಬರು ದಂಪತಿಗಳಾದೆವು. ನನಗಾಗ ಮೂವತ್ತೊಂದು ವರ್ಷ, ಗ್ರೆಗೊರಿಗೆ ಬರೀ ಇಪ್ಪತ್ತಾರು. ಆಮೇಲೆ ನ್ಯೂಯಾರ್ಕ್ ಬಿಟ್ಟು ಲಾಸ್ ಏಂಜಲೀಸ್‌ಗೆ ಬಂದೆವು. ಮುಂದೇನು? ಎಂಬುದರ ಸ್ಪಷ್ಟತೆಯೇ ಇಲ್ಲದ ಆ ದಿನಗಳಲ್ಲಿ ಲಾಸ್ ಏಂಜಲೀಸ್ ನಮ್ಮ ಪಾಲಿಗೆ ಖಾಲಿಖಾಲಿ ಮರುಭೂಮಿಯಂತೆ ಕಂಡಿದ್ದು ಸುಳ್ಳಲ್ಲ. ಅಲ್ಲಿಯ ಸನ್‌ಸೆಟ್ ಬೂಲೆವಾರ್ಡ್‌ನಲ್ಲಿ ಪುಟ್ಟ ಮನೆಯೊಂದನ್ನು ಬಾಡಿಗೆಗೆ ಪಡೆದು ಜೀವಿಸಲಾರಂಭಿಸಿದೆವು. ಆ ಕಾಲಕ್ಕೆ ಗ್ರೆಗೋರಿಯ ಸಂಬಳ ವಾರಕ್ಕೆ ಒಂದು ಸಾವಿರ ಡಾಲರ್. ಹಾಗೆಯೇ ದ್ವಿತೀಯ ವರ್ಲ್ಡ್ ವಾರ್ ಹೊತ್ತಿ ಉರಿಯುತ್ತಿದ್ದ ಆ ಕಾಲದಲ್ಲಿ ಹಾಲಿವುಡ್ಡಿನ ಖ್ಯಾತನಾಮ ನಟರೆಲ್ಲ ಆ ಕುರಿತು ತಮ್ಮ ನಿಲುವುಗಳನ್ನು ವ್ಯಕ್ತಪಡಿಸುವ, ಘರ್ಷಣೆಯಲ್ಲಿ ಭಾಗವಹಿಸುವ ವಿಷಯವಾಗಿ ಧ್ಯಾನಿಸುತ್ತಿದ್ದರು, ಬ್ಯುಸಿ ಇರುತ್ತಿದ್ದರು. ಆದ್ದರಿಂದ ಸಿನಿಮಾ ತಯಾರಕರಿಗೆ ನಟರ ಕೊರತೆಯುಂಟಾಗಿತ್ತು, ಗ್ರೆಗೊರಿಗೆ ಅದೇ ಸುಗ್ಗಿಕಾಲವಾಗಿ ಪರಿಣಮಿಸಿ ಒಂದರ ಮೇಲೆ ಒಂದರಂತೆ ಸಿನಿಮಾಗಳಲ್ಲಿ ನಟಿಸತೊಡಗಿದ. ಆಲ್‌ಫ್ರೆಡ್ ಹಿಚ್‌ಕಾಕ್ ತರಹದ ಪ್ರಖ್ಯಾತ ನಿರ್ದೇಶಕ ಕೂಡ ತನ್ನ ನಿರ್ದೇಶನದ ಚಿತ್ರದಲ್ಲಿ ಇನ್‌ಗ್ರಿಡ್ ಬರ್ಗ್‌ಮನ್ ತರಹದ ಪ್ರಸಿದ್ಧ ನಟಿಯೊಂದಿಗೆ ಸ್ಕ್ರೀನ್ ಹಂಚಿಕೊಳ್ಳಲು ಗ್ರೆಗೊರಿಗೆ ಆಫರ್ ಕೊಟ್ಟ. ಹಿಚ್‌ಕಾಕ್ ಎಷ್ಟು ಪರಿಚಯವಾದನೆಂದರೆ ನಾನು ಮತ್ತು ಗ್ರೆಗೊರಿ ಆತನ ಮನೆಗೆ ಊಟಕ್ಕೆ ಹೋಗುವಷ್ಟು, ಆತ ತನ್ನ ಮಡದಿಯೊಂದಿಗೆ ನಮ್ಮ ಮನೆಗೆ ಬರುವಷ್ಟು; ಇನ್‌ಗ್ರಿಡ್ ಕೂಡ ನಮ್ಮ ಕುಟುಂಬಕ್ಕೆ ಹತ್ತಿರದವಳಾದದ್ದು ಬೇರೆ ಮಾತು. ಅಷ್ಟರಲ್ಲಿ ನಮ್ಮ ಹಿರಿಮಗ ಜೋನಾಥನ್, ಹುಟ್ಟಿದ್ದ. ಆಮೇಲೆ ಸ್ಟೀಫನ್ ಮತ್ತೆ ಕ್ಯಾರಿ ಹುಟ್ಟಿದರು; ಅಲ್ಲಿಗೆ ನಮ್ಮದು ತುಂಬು ಕುಟುಂಬ. ಅಷ್ಟರಲ್ಲಿ ಗ್ರೆಗೊರಿ ಬೇಡಿಕೆಯ ಸ್ಟಾರ್ ನಟ ಆಗಿದ್ದ, ನಾವು ಹೊಸ ಮನೆಗೆ ಹೋದೆವು. ಮೂರೂವರೆ ಎಕರೆ ಜಾಗದ ನಡುವೆ ನೆಲೆಸಿದ್ದ ಆ ಮನೆ ಸ್ವಿಮ್ಮಿಂಗ್ ಪೂಲ್, ಟೆನಿಸ್ ಕೋರ್ಟ್ ಹಾಗೂ ಗೆಸ್ಟ್‌ಹೌಸ್ ಹೊಂದಿತ್ತು, ನಾವು ಒಬ್ಬ ಅಡುಗೆ ಭಟ್ಟ ಹಾಗೂ ಒಬ್ಬಳು ದಾದಿಯನ್ನು ನೇಮಿಸಿಕೊಂಡಿದ್ದೆವು. ನಮ್ಮ ಬಡತನ ದೂರವಾಗಿತ್ತು, ನಾವು ಸುಂದರ ಬದುಕು ಕಟ್ಟಿಕೊಂಡಿದ್ದೆವು. ಯಾವುದಕ್ಕೂ ಕೊರತೆ ಇರಲಿಲ್ಲ, ಅಷ್ಟರಲ್ಲಿ ಗ್ರೆಗೊರಿ ಬಗ್ಗೆ ಕೆಲವು ಗಾಸಿಪ್‌ಗಳು ಕೇಳಿಬಂದವು. ಆತ ಇನ್‌ಗ್ರಿಡ್ ಬರ್ಗ್‌ಮನ್, ಏವಾ ಗಾರ್ಡ್‌ನರ್ ಹಾಗೂ ಆಡ್ರಿ ಹೆಪ್‌ಬರ್ನ್ ಜೊತೆ ಕ್ಲೋಸಾಗಿ ಮೂವ್ ಆಗುತ್ತಿದ್ದಾನೆ ಅಂತ ಕೇಳಿ ಬಂತು. ನಾನು ಅಂತಹ ಗಾಸಿಪ್‌ಗಳ ಬಗ್ಗೆ ತಲೆ ಕೆಡಿಸಿಕೊಳ್ಳಲಿಲ್ಲ. ಆದರೂ ನಾವಿಬ್ಬರು ಬೇರೆಬೇರೆಯಾಗುವುದರ ಬಗ್ಗೆ ಯೋಚಿಸಿದೆವು, ಪರಸ್ಪರ ಮಾತಾಡಿಕೊಂಡೆವು. 1955ರ ಪವಿತ್ರ ಕ್ರಿಸ್‌ಮಸ್‌ಗೂ ಮುಂಚೆ ಇಬ್ಬರೂ ಒಪ್ಪಿ ಡೈವೋರ್ಸ್ ಪಡೆದೆವು. ಗ್ರೆಗೋರಿಯ ಸಂದರ್ಶನ ಮಾಡಿದ್ದ ವೆರೋನಿಕಾಳ ಬಗ್ಗೆಯೂ ಕೇಳಿಪಟ್ಟಿದ್ದೆ. ಆದರೆ ನಮ್ಮಿಬ್ಬರ ಈ ವಿಚ್ಛೇದನದ ಹಿಂದೆ ಯಾವುದೇ ಹೆಣ್ಣು ಕಾರಣಳಲ್ಲ ಎಂಬುದಂತೂ ಸ್ಪಷ್ಟ. ಗ್ರೆಗೊರಿ ನನ್ನಿಂದ ವಿಚ್ಛೇದನ ಪಡೆದ ಕೆಲವೇ ತಿಂಗಳೊಳಗೆ ವೇರೋನಿಕಾಳನ್ನು ಮದುವೆಯಾದ. ಈ ವಿಚ್ಛೇದನದ ನಂತರ ಸುಮಾರು ನಾಲ್ಕು ವರ್ಷಗಳ ಹಿಂದಿನಿಂದ ನನಗೆ ಪರಿಚಯವಿದ್ದ ರಿಯಲ್ ಎಸ್ಟೇಟ್ ಬಿಸಿನೆಸ್‌ಮನ್ ಒಬ್ಬನನ್ನು ಮದುವೆಯಾಗೋಣ ಅಂದುಕೊಂಡಿದ್ದೆ. ಆದರೆ ಆತ ಹೃದಯಾಘಾತದಿಂದ ತೀರಿಕೊಂಡಿದ್ದರಿಂದ ನನ್ನ ಮದುವೆಯ ಆಸೆ ಅಲ್ಲಿಗೇ ಕೊನೆಯಾಗಿ ಜೀವನದುದ್ದಕ್ಕೂ ನನ್ನ ಮಕ್ಕಳೊಂದಿಗೆ, ಒಬ್ಬಳೇ ಕಾಲ ಕಳೆದುಬಿಟ್ಟೆ. ಹಾಗಂತ ಗ್ರೆಗೊರಿ ನನ್ನ ಬದುಕಿನಿಂದ ಪೂರ್ತಿ ದೂರವಾದ ಅಂತೇನೂ ಇಲ್ಲ, ತನ್ನ ಎರಡನೇ ಹೆಂಡತಿ ವೆರೋನಿಕಾ ಜೊತೆ ನನ್ನ ಮನೆಗೆ ಬರುತ್ತಿದ್ದ, ನನ್ನ ಮಕ್ಕಳೊಂದಿಗೆ ಕಾಲ ಕಳೆಯುತ್ತಿದ್ದ. ಆ ಖುಷಿಯ ಘಳಿಗೆಯಲ್ಲಿ ಗ್ರೆಗೊರಿ-ವೆರೋನಿಕಾಳ ಮಕ್ಕಳೂ ಇರುತ್ತಿದ್ದವು. ನಾನು ಹೊಸ ಮನೆ ಖರೀದಿಸಲು ಸಹಾಯ ಮಾಡಿದ್ದ. ಅದೇಕೋ ಕಾಲಕಳೆದಂತೆ ಗ್ರೆಗೊರಿ ನನ್ನ ಮನೆಗೆ ಬರುವುದು ವೆರೋನಿಕಾಳಿಗೆ ಇಷ್ಟವಾಗಲಿಲ್ಲ. ನಾನು ಕೂಡ ಗ್ರೆಗೊರಿಯನ್ನು ಮನೆಗೆ ಬರುವಂತೆ ಒತ್ತಾಯಿಸಲು ಹೋಗಲಿಲ್ಲ. ಅಲ್ಲಿಂದಾಚೆಗೆ ನಾವು ಸಭೆ ಸಮಾರಂಭಗಳಲ್ಲಿ ಮಾತ್ರ ಭೇಟಿಯಾಗುತ್ತಿದ್ದೆವು. ಕೊನೆಯಬಾರಿ ನಾವಿಬ್ಬರು ಮೀಟ್ ಮಾಡಿದ್ದು ನಮ್ಮಿಬ್ಬರ ಮೊಮ್ಮಗ ಎಥನ್ ಫುಟ್‌ಬಾಲ್ ಆಡುವುದನ್ನು ನೋಡಲು ಹೋಗಿದ್ದಾಗ. ಅದೂ ಗ್ರೆಗೊರಿ ಸಾವನ್ನಪ್ಪುವ ಕೆಲವೇ ಕೆಲವು ತಿಂಗಳುಗಳ ಹಿಂದೆ."

ಗ್ರೇಟಾಳ ಮಾತುಗಳನ್ನು ಕೇಳಿಸಿಕೊಂಡ ನಂತರ ಖುಷಿ, ನೋವು, ತಪನೆ, ಮನಸ್ತಾಪ, ಕ್ಷಮೆ ಇತ್ಯಾದಿಗಳಿಂದ ತುಂಬಿಕೊಂಡಿರುವ ಈ ಬದುಕು ಎಷ್ಟು ವಿಚಿತ್ರ ಹಾಗೂ ಎಷ್ಟು ನಿಲುಕದ ಸತ್ಯವೆಂದು ಗೊತ್ತಾಗುತ್ತದೆ. ಏನನ್ನೋ ಹುಡುಕಿಕೊಳ್ಳುವ ಯತ್ನದಲ್ಲಿ ಇನ್ನೇನನ್ನೋ ಕಳೆದುಕೊಳ್ಳುವ ಈ ಗೊಂದಲಮಯ ಜೀವನ ತನ್ನೊಳಗೆ ಅನೇಕ ರಹಸ್ಯಗಳನ್ನು ಅಡಗಿಸಿಕೊಂಡಿರುವ ಪ್ರಶ್ನಾಕೋಶ ಅನ್ನಿಸಿಬಿಡುತ್ತದೆ. ಹಣ, ಕೀರ್ತಿ, ಹೆಸರು, ಯಶಸ್ಸು ಎಲ್ಲವೂ ಇದ್ದು ಅರೆಪಾವಿನಷ್ಟು ನೆಮ್ಮದಿಗಾಗಿ, ಬೊಗಸೆ ಪ್ರೀತಿಗಾಗಿ ಹಂಬಲಿಸುವ, ಹಾತೊರೆಯುವ ಮನುಷ್ಯ ಇಂತಹ ಸಂದರ್ಭಗಳಲ್ಲಿಯೇ ಅಸಹಾಯಕನಂತೆ ಕಾಣುವುದು, ತಬ್ಬಲಿಯಂತೆ ಅನ್ನಿಸುವುದು.

ತೀರ ತಳಮಟ್ಟದಿಂದ ಪುಟಿದು ಆಕಾಶದೆತ್ತರಕ್ಕೆ ಜಿಗಿದು, ಸಿನಿಮಾವನ್ನೇ ಉಸಿರಾಡುತ್ತಾ ಬದುಕಿನುದ್ದಕ್ಕೂ ಡೆಮಾಕ್ರಟಿಕ್ ಪಾರ್ಟಿಯನ್ನು ಬೆಂಬಲಿಸುತ್ತಾ ರಾಜಕೀಯವಾಗಿಯೂ ತನ್ನ ನಿಲುವುಗಳನ್ನು ವ್ಯಕ್ತಪಡಿಸುತ್ತಾ ಎಂಭತ್ತೇಳು ವರ್ಷಗಳ ತುಂಬು ಬದುಕನ್ನು ಬದುಕಿ, 'ಟು ಕಿಲ್ ಅ ಮಾಕಿಂಗ್ ಬರ್ಡ್' ಚಿತ್ರದಲ್ಲಿನ ನಟನೆಗೆ ಆಸ್ಕರ್ ಪ್ರಶಸ್ತಿ ಗಳಿಸಿ ತನ್ನ ಬದುಕಿನ ಸಿನಿಮಾಗೆ ತೆರೆ ಎಳೆದು ನಿರ್ಗಮಿಸಿದ ಒಬ್ಬ ಗ್ರೆಗೊರಿ; ತನ್ನ ಏಕಾಂತದ ದಿನಗಳಲ್ಲಿ ಗ್ರೆಗೊರಿಯನ್ನು ಜಪಿಸುತ್ತ ಮಕ್ಕಳ ಪ್ರೀತಿಯಲ್ಲಿ ಬದುಕನ್ನು ತುಂಬಿಕೊಳ್ಳುತ್ತ ಬರೋಬ್ಬರಿ ತೊಂಭತ್ತಾರು ವರ್ಷ ಬದುಕಿ ತೆರಳಿದ ಒಬ್ಬ ಗ್ರೇಟಾ; ಆಕಸ್ಮಿಕವಾಗಿ ಪರಿಚಯವಾದ ವ್ಯಕ್ತಿಯನ್ನು ಮದುವೆಯಾಗಿ ಆತನ ವೃತ್ತಿಗೆ, ಅಭಿರುಚಿಗೆ ಸ್ಪಂದಿಸುತ್ತಾ ಬೆನ್ನೆಲುಬಾಗಿ ನಿಲ್ಲುವುದರ ಜೊತೆಗೆ ತನ್ನತನವನ್ನೂ ಉಳಿಸಿಕೊಂಡು ಒಂದಿಷ್ಟು ಸಮಾಜಸೇವೆಯನ್ನು ಮಾಡಿ, ಗ್ರೆಗೊರಿ ತನ್ನ ಬದುಕಿನ ಕೊನೆಯ ಸೆಕೆಂಡುಗಳಲ್ಲಿ ತನ್ನ ಕೈ ಹಿಡಿದುಕೊಂಡು ತಣ್ಣಗೆ ಕೊನೆಯುಸಿರು ಬಿಟ್ಟಿದ್ದಕ್ಕೆ ಸಾಕ್ಷಿಯಾಗಿ ಕಳೆದ ಎರಡು ವರ್ಷಗಳ ಹಿಂದೆಯಷ್ಟೇ ತನ್ನ ಎಂಭತ್ತನೆಯ ವಯಸ್ಸಿನಲ್ಲಿ ಪ್ರಾಣಬಿಟ್ಟ ಒಬ್ಬ ವೆರೋನಿಕಾ- ಇವರು ಬದುಕಿನ ವಿವಿಧ ಮುಖಗಳ ದರ್ಶನ ಮಾಡಿಸುವ ಸಂಕೇತಗಳಾಗಿ ನನ್ನನ್ನು ಕಾಡುವುದು ನಿಜಕ್ಕೂ ಚೋದ್ಯ.

■ ಹೃದಯಶಿವ

Registered No.RNP/KA/BGS/2036/2014-16 Posted at : GPO, Bangalore-01, Friday R B P LANKESH, Kannada Weekly Price Rs. 15/- 01-10-2014 RNI No. KAR



'ಸಹೋದರರ ಸವಾಲ್' ಮತ್ತೆ ತೆರೆಗೆ

ರಜನಿಕಾಂತ್ ಇವತ್ತು ಭಾರತೀಯ ಚಿತ್ರರಂಗದಲ್ಲಿ ದೊಡ್ಡ ಹೆಸರು. ಹಾಗೆಯೇ ವಿಷ್ಣುವರ್ಧನ್ ಕೂಡ ಕರ್ನಾಟಕದ ಮಟ್ಟಿಗೆ ಎಂದೂ ಮರೆಯಲಾರದ ಹೆಸರು. ಈ ಇಬ್ಬರೂ ಒಟ್ಟಿಗೆ ನಟಿಸಿದ್ದ ಚಿತ್ರವೊಂದು 1977ರಲ್ಲಿ ಬಿಡುಗಡೆಯಾಗಿತ್ತು, 'ಸಹೋದರರ ಸವಾಲ್' ಆ ಚಿತ್ರದ ಹೆಸರು. ಆ ಕಾಲಕ್ಕೆ ದೊಡ್ಡ ಹೆಸರು ಮಾಡಿದ್ದ ಆ ಚಿತ್ರ ಇದೀಗ ಮತ್ತೆ ಬೆಳ್ಳಿತೆರೆಯ ಮೇಲೆ ಬರುತ್ತಿದೆ ಎಂದರೆ ನಿಮಗೆ ಆಶ್ಚರ್ಯವಾಗಬಹುದು. ಹೌದು, 'ಸಹೋದರರ ಸವಾಲ್' ಇದೇ ಸೆಪ್ಟೆಂಬರ್ 19ರಂದು ತೆರೆಯ ಮೇಲೆ ಬರುತ್ತಿದೆ. ಕೆ.ಎಸ್.ಆರ್.ದಾಸ್ ನಿರ್ದೇಶನದ ಈ ಚಿತ್ರಕ್ಕೆ ಆಗಿನ ಕಾಲಕ್ಕೆ ಬರೋಬ್ಬರಿ ಹದಿನೈದು ಲಕ್ಷ ರೂಪಾಯಿಗಳಷ್ಟು ಬಂಡವಾಳ ಹಾಕಿ ಹೈ ಬಜೆಟ್ಟಿನ ಚಿತ್ರವನ್ನು ನಿರ್ಮಿಸಿದ್ದು ಎ.ಆರ್.ರಾಜು. ಈಗ ಮತ್ತೆ ಚಿತ್ರವನ್ನು ಬಿಡುಗಡೆ ಮಾಡಲು ಎ.ಆರ್.ರಾಜು ಅವರು ನಿರ್ಧರಿಸಿದ್ದು ವಿಷ್ಣುವರ್ಧನ್ ಜನ್ಮದಿನದ ಮಾರನೆ ದಿನವೇ ಆ ಸಾಹಸಕ್ಕೆ ಕೈ ಹಾಕಿದ್ದಾರೆ. ಈ ಸಾಹಸದಿಂದ ಸಾಹಸ ಸಿಂಹ ವಿಷ್ಣುವರ್ಧನ್ ಹಾಗೂ ರಜನಿಕಾಂತ್ ಅಭಿಮಾನಿಗಳಿಗೆ ಖುಷಿಯಂತೂ ಆಗಲಿದೆ ಅಲ್ಲವೇ?

ಯತಿರಾಜ್ ಸೆಂಚುರಿ ಬಾರಿಸಿದಾಗ

ಅಪಾರ ಸ್ಪರ್ಧೆಯಿರುವ ಚಿತ್ರರಂಗದಲ್ಲಿ ಒಬ್ಬ ಕಲಾವಿದ ನೂರು ಚಿತ್ರಗಳಲ್ಲಿ ಅಥವಾ ನೂರಾರು ಎಪಿಸೋಡ್ ಧಾರಾವಾಹಿಗಳಲ್ಲಿ ನಟಿಸುವುದು ಇವತ್ತಿನ ದಿನದಲ್ಲಿ ತಮಾಷೆಯ ಮಾತಲ್ಲ. ಎಷ್ಟೇ ಪ್ರತಿಭೆಯಿದ್ದರೂ ಎಲ್ಲರಿಗೂ ಹೊಂದಿಕೊಂಡು ಹಂತಹಂತವಾಗಿ ಹೆಜ್ಜೆ ಹಾಕುವುದು ನಿಜಕ್ಕೂ ಕಷ್ಟ. ಇಷ್ಟೆಲ್ಲಾ ಯಾಕೆ ಹೇಳಬೇಕಾಯಿತು ಎಂದರೆ ಯತಿರಾಜ್ ನೂರರ ಗಡಿ ದಾಟಿದ್ದಾರೆ. ಅಂದರೆ ಅವರು ಈವರೆಗೆ ನೂರಕ್ಕೂ ಹೆಚ್ಚು ಬಾರಿ ಬಣ್ಣ ಹಚ್ಚಿದ್ದಾರೆ. ಇದರಲ್ಲಿ ಹಿರಿತೆರೆ ಹಾಗೂ ಕಿರುತೆರೆ ಎರಡೂ ಸೇರಿಕೊಂಡಿವೆ. ಯತಿರಾಜ್



ಪತ್ರಕರ್ತರಾಗಿ ಕೂಡ ಕೆಲಸ ಮಾಡಿದವರು. ಡಾ.ರಾಜ್‌ಕುಮಾರ್ ಕುರಿತಾಗಿ ಒಂದು ಪುಸ್ತಕವನ್ನೂ ಬರೆದಿದ್ದಾರೆ. ಒಂದಿಷ್ಟು ಕಾಲ ಸುದೀಪ್ ತಮ್ಮ ಚಿತ್ರಗಳಲ್ಲಿ ಇವರಿಗೆ ಪಾತ್ರಗಳನ್ನೂ ಕೊಟ್ಟಿದ್ದುಂಟು. ಆಮೇಲೆ ಹೀರೋ ಕೂಡ ಆಗಲು ಇವರು ಪ್ರಯತ್ನಿಸಿದ್ದರು. ಒಂದೆರಡು ಚಿತ್ರಗಲ್ಲಿ ಸೆಕೆಂಡ್ ಹೀರೋ ಕೂಡ ಆದರು. ಇಂತಹ ಯತಿರಾಜ್ ಪ್ರತಿಭಾವಂತ ಅನ್ನುವುದರ ಜೊತೆಗೆ ನೇರನುಡಿಯ ಮನುಷ್ಯ. ಎಷ್ಟೋ ಬಾರಿ ಇವರ ನೇರಮಾತು ಕೆಲವರಿಗೆ ಆ ಕ್ಷಣಕ್ಕೆ ಕೋಪ ಬರಿಸಿದರೂ ಯತಿರಾಜ್ ಯಾವತ್ತಿಗೂ ಪೂರ್ವಾಗ್ರಹ ಹೊಂದಿರುವ ವ್ಯಕ್ತಿಯಲ್ಲ ಎಂಬುದು ಅವರಿಗೆ ಗೊತ್ತಿರುತ್ತದೆ. ಈ ನೂರರ ಖುಷಿಯನ್ನು ಹಂಚಿಕೊಳ್ಳಲು ಇತ್ತೀಚೆಗಷ್ಟೇ ಯತಿರಾಜ್ ಅವರ ಕೆಲವು ಮಿತ್ರರು ಸೇರಿ ಒಂದು ಸಂತೋಷಕೂಟ ಏರ್ಪಡಿಸಿದ್ದರು. ಅಲ್ಲಿ ಯತಿರಾಜ್ ಕೇಕ್ ಕಟ್ ಮಾಡಿದರು. ಇಂದ್ರಜಿತ್ ಲಂಕೇಶ್ ಯತಿರಾಜ್ ಅವರ ವೆಬ್‌ಸೈಟನ್ನು ಅನಾವರಣಗೊಳಿಸಿದರು. ಈ ಸಂದರ್ಭದಲ್ಲಿ ಒಂದಿಷ್ಟು ಹಿರಿಯ ಪತ್ರಕರ್ತರನ್ನು, ಯತಿರಾಜರಿಗೆ ಪಾಠ ಮಾಡಿದವರನ್ನು ಸನ್ಮಾನಿಸಲಾಯಿತು. ನಟನೆ, ಜರ್ನಲಿಸಂ ಜೊತೆಗೆ ಬರೆಯುವುದರಲ್ಲಿಯೂ ಆಸಕ್ತಿ ಹೊಂದಿರುವ ಈ ವ್ಯಕ್ತಿ ಇನ್ನೂ ಎತ್ತರಕ್ಕೆ ಏರಿದರೆ ಯಾರಿಗೆ ತಾನೇ ಸಂತೋಷವಾಗುವುದಿಲ್ಲ ಹೇಳಿ?

ಸೂಪರೋ ರಂಗ

ಗಾಂಧಿನಗರದಲ್ಲಿ ನಿಂತು ಕನ್ನಡದ ನಂಬರ್ ಒನ್ ಕೀ ಬೋರ್ಡ್ ಪ್ಲೇಯರ್, ನಂಬರ್ ಒನ್ ಹಿನ್ನೆಲೆ ಸಂಗೀತಗಾರ ಯಾರು ಅಂತ ಕೇಳಿದರೆ ತಕ್ಷಣ ಕನಿಷ್ಠ ಏನಿಲ್ಲ ಎಂದರೂ ನಾಲ್ಕೈದು ಕಡೆಯಿಂದಲಾದರೂ 'ಸಾಧುಕೋಕಿಲ' ಎಂಬ ಹೆಸರು ಗಾಳಿಯಲ್ಲಿ ತೇಲಿ ಬರುತ್ತದೆ. ಅಂತಹ ಪ್ರತಿಭಾವಂತ ಕೀ ಬೋರ್ಡ್ ಪ್ಲೇಯರ್ ಈತ. ತಮ್ಮ ಮೊದಲ ಸಿನಿಮಾ 'ಶ್'ನಿಂದ ಹಿಡಿದು ಅವರು ಅನೇಕ ಸಿನಿಮಾಗಳಿಗೆ ಸಂಗೀತ ನೀಡಿದ್ದಾರೆ. 'ಎಚ್2ಒ', 'ಮೆಜೆಸ್ಟಿಕ್', 'ಕಾವ್ಯ', 'ಲಾಲಿ ಹಾಡು', 'ದಾಸ', 'ರಕ್ತ ಕಣ್ಣೀರು' ತಕ್ಷಣಕ್ಕೆ ನೆನಪಾಗುವ ಅವರ ಒಂದಿಷ್ಟು ಸಿನಿಮಾಗಳು. ಇಂತಹ ಸಾಧು ಕೋಕಿಲ 'ರಕ್ತ ಕಣ್ಣೀರು' ಎಂಬ ಹಿಟ್ ಚಿತ್ರದ ಮೂಲಕ ನಿರ್ದೇಶಕರಾಗಿ ಭಡ್ತಿ ಪಡೆದು ಆನಂತರ ಒಂದಿಷ್ಟು ಚಿತ್ರಗಳನ್ನು ನಿರ್ದೇಶಿಸಿದರೂ ಒಬ್ಬ ನಿರ್ದೇಶಕನಾಗಿ ತಮ್ಮದೇ ಛಾಪು ಮೂಡಿಸುವಲ್ಲಿ ಅಷ್ಟೇನೂ ಸಫಲರಾಗಲಿಲ್ಲವೆಂದೇ ಹೇಳಬಹುದು. ಈಗ ಅದೇ ಉಪೇ ಅಭಿನಯದಲ್ಲಿ 'ಸೂಪರ್ ರಂಗ' ಎಂಬುದೊಂದು ಚಿತ್ರವನ್ನು ಸ ನಿರ್ದೇಶಿಸಿದ್ದಾರೆ. ಈ ಚಿತ್ರದ ಮತ್ತೊಂದು ವಿಶೇಷತೆಯೆಂದರೆ ಉಪೇ ಸಂಭಾಷಣೆ ಬರೆದಿರುವುದು. ತಮ್ಮ ಸಂಭಾಷಣೆಯಲ್ಲಿ ಹುರ ಇಲ್ಲವಾಗಿಸಿಕೊಂಡಿರುವ ಉಪೇಂದ್ರ 'ಸೂಪರ್ ರಂಗ'ದಲ್ಲಿ ಯಾವ ಬ ಡೈಲಾಗ್ಸ್ ಬರೆದಿದ್ದಾರೆ ಅನ್ನೋದು ಇನ್ನೂ ಪ್ರಶ್ನೆ. ಕೆ.ಮ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ನಿರ್ದೇಶಕ ಸಾಧು ಕೊ ಅವರ ಸಂಗೀತ ಇರುವುದಿಲ್ಲ ಅನ್ನುವುದು ಮತ್ತೊ ವಿಶೇಷ ಸಂಗತಿ.





ಹಿಂದು ಅತ್ತೆಯ ಹೊಸ ಧಾರಾವಾಹಿ

ಹಿಟ್ ಸಿನಿಮಾದ ಹೆಸರು ಇಟ್ಟುಕೊ ಜನರನ್ನು ಆಕರ್ಷಿಸುವ ವಿದ್ಯಮಾನ ಮೊ ನಿಂದಲೂ ಕಿರುತೆರೆಯಲ್ಲಿ ಚಾಲ್ತಿಯಲ್ಲಿರುವಂ ಈಗ ಅಂತಹ ಪಟ್ಟಿಗೆ ಹೊಸದಾಗಿ ಸೇ ಯಾಗಿರುವ ಧಾರಾವಾಹಿಯ ಹೆಸರು 'ಶ್ರೀ



ಶುಭಮಸ್ತು' ಅಂತ. ಸೋಮವಾರದಿಂದ ಶುಕ್ರವಾರದವರೆಗೆ ಪ್ರಸಾರಗೊ ಈ ಧಾರಾವಾಹಿ ಮರಾಠಿ ಧಾರಾವಾಹಿಯೊಂದರ ಯಥಾರೂಪ. ಇ ಶ್ರುತಿ ನಾಯ್ಡು ಎಂಬಾಕೆ ನಿರ್ದೇಶಿಸಿದ್ದು ರಮೇಶ್ ಚಂದ್ರ ಅವರ ಸಂಭ ಇರುತ್ತದೆಯಂತೆ. ಈ ಧಾರಾವಾಹಿಯಲ್ಲಿ ಒಟ್ಟು ಆರು ಅತ್ತೆಯ ಇರುತ್ತಾರಂತೆ. ಒಬ್ಬಳೇ ಅತ್ತೆ ಒಬ್ಬಳೇ ಸೊಸೆ ಇದ್ದುಕೊಂಡು ಇಡೀ ಉ ಹಾಳುಮಾಡುವಷ್ಟು ತಂತ್ರ, ಕುತಂತ್ರಗಳನ್ನು ಎಸಗುವ ಪ್ರತಿ ದಿನದ, ಚಾನೆಲ್ಲಿನ ಅದದೇ ಬೋರಿಂಗ್ ಅತ್ತೆ-ಸೊಸೆಯರನ್ನು ಸಹಿಸಿಕೊಳ್ಳಲು ಒದ ಕನ್ನಡ ಪ್ರೇಕ್ಷಕ ಈ ಆರು ಅತ್ತೆಯಂದಿರನ್ನು ಹೇಗೆ ಸ್ವೀಕರಿಸುತ್ತಾನೆ ಅನ ಇಲ್ಲಿಯ ಮಜಾ..

ರವಿಮೊಗ ಅರಳಿದಾಗ

'ಪರಮಶಿವ' ಚೆನ್ನಾಗಿ ಓಡುತ್ತಿದೆಯಂತೆ. ಈ ಮೂಲಕ ರವಿಚ ಮುಖದಲ್ಲಿ ನಗೆ ತುಂಬಿದೆಯಂತೆ. ರಾಜ್ಯಾದ್ಯಂತ ಒಟ್ಟು ನೂ ಥಿಯೇಟರುಗಳಲ್ಲಿ ಬಿಡುಗಡೆಯಾದ ಈ ಚಿತ್ರವು ಬರೀ ಮೂರೇ ದಿ ಬರೋಬ್ಬರಿ ಎರಡೂವರೆ ಕೋಟಿ ದಾಟಿದೆಯಂತೆ. ಇದರ ಜ ತುಂಬಾ ಹಿಂದೆಯೇ 'ಪರಮಶಿವ'ನಿಗೆ ಸ್ಯಾಟಲೈಟ್ ಮೂಲಕ ಒಂದು ಕೋಟಿ ಅರವತ್ತು ಲಕ್ಷದಷ್ಟು ದೊರಕಿದೆಯಂತೆ. ಅಷ್ಟೇನೂ ಸಮರ್ಪಕವಾದ ಪಬ್ಲಿಸಿಟಿ ಮಾಡದೆಯೂ ಚಿತ್ರ ಈ ಮಟ್ಟಿಗೆ ಓಡುತ್ತಿರುವುದು, ಹಣವನ್ನು ಬಾಚುತ್ತಿರುವುದು ನಿರ್ಮಾಪಕ ಅಣಜಿ ನಾಗರಾಜ್ ಅವರಿಗೆ ಖುಷಿ ತಂದುಕೊಟ್ಟಿದೆಯಂತೆ. 'ಆಕಾಶ್', 'ಅರಸು', 'ಮೆರವಣಿಗೆ', 'ಚಿರು', 'ಪರಮೇಶಿ ಪಾನ್ ವಾಲಾ' ತರಹದ ಸಿನಿಮಾಗಳನ್ನು ಮಾಡಿರುವ ನಿರ್ದೇಶಕ ಮಹೇಶ್ ಬಾಬು ಅವರಿಗೆ ಚಿತ್ರ ಗೆದ್ದರೂ ನಿರ್ದೇ ಯಾರು ಅಂತ ಜನರಿಗೆ ಗೊತ್ತೇ ಆಗದಂತಹ ಇನ್ನೊಂದಿಷ್ಟು ಚಿತ್ರಗಳನ್ನು ನಿರ್ದೇಶಿಸುವ ಅವಕಾಶ ಒದಗಿ ಬಂದರೆ ಅಚ್ಚರಿ



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail